Digitized by Arya Samaj Foundation Chennai and eGangotri

ಶ್ರೀ ವಿಷ್ಣುರಹಸ್ಯ

(ಮೂಲಸಹಿತ ಕನ್ನಡ ಅರ್ಥಾನುವಾದ)

ಸಂಪುಟ ೧

ನ ಮಾಧವ ಸಮೋ ದೇವೋ ನ ಚ ಮಧ್ವಸಮೋ ಗುರುಃ |
ನ ತದ್ವಾಕ್ಯ ಸಮಂ ಶಾಸ್ತ್ರಂ ನ ಚ ತಸ್ಯ ಸಮಃ ಪುಮಾನ್ ||

ಅನುವಾದಕರು :
ಬಿ. ಭೀಮರಾವ್
ದಾವಣಗೆರೆ

...ಚಾರ್ಯ ಸೇವಾ ಸಂಘ
ದಾವಣಗೆರೆ

PRESENTED BY THE MINISTRY OF EDUCATION
& SOCIAL WELFARE, GOVERNMENT OF INDIA.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल कांगड़ी विश्वविद्यालय
कृपया पुस्तक के ऊपर कोई निशान आदि
न लगायें।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

पुस्तकालय

गुरुकुल कांगडी विश्वविद्यालय

हरिद्वार

वर्ग संख्या ——— आगत संख्या ——

पुस्तक - वितरण की तिथि नीचे अंकित है इस तिथि सहित 30वें दिन तक यह पुस्तक पुस्तकालय में वापिस आ जानी चाहिए । अन्यथा 10 पैसे प्रति दिन के हिसाब से विलम्ब - दण्ड लगेगा ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल कांगड़ी विश्वविद्यालय
कृपया पुस्तक के ऊपर कोई निशान आदि
न लगायें।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ವಿಷ್ಣುರಹಸ್ಯ

(ಮೂಲಸಹಿತ ಕನ್ನಡ ಅರ್ಥಾನುವಾದ)

ಸಂಪುಟ ೧

ನ ಮಾಧವ ಸಮೋ ದೇವೋ ನ ಚ ಮಧ್ವಸಮೋ ಗುರುಃ |
ನ ತದ್ವಾಕ್ಯ ಸಮಂ ಶಾಸ್ತ್ರಂ ನ ಚ ತಸ್ಯ ಸಮಃ ಪುಮಾನ್ ||

ಅನುವಾದಕರು :
ಬಿ. ಭೀಮರಾವ್
ದಾವಣಗೆರೆ

ಶ್ರೀ ಸರ್ವಜ್ಞಾಚಾರ್ಯ ಸೇವಾ ಸಂಘ
ದಾವಣಗೆರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಥಮ ಮುದ್ರಣ : ಜುಲೈ 1975

ಹಕ್ಕುಗಳು ಪ್ರಕಾಶಕರಿಗೆ ಕಾದಿರಿಸಲ್ಪಟ್ಟಿವೆ.

ಬೆಲೆ : ರೂ. 5-00

ಸಂಘದ ಪುಸ್ತಕಗಳು ದೊರೆಯುವ ಸ್ಥಳಗಳು :—

(೧) ಗಾ॥ ಕಾರ್ಯದರ್ಶಿ, ಶ್ರೀ ಸರ್ವಜ್ಞಾಚಾರ್ಯ ಸೇವಾ ಸಂಘ, ಶಿವಾಜಿ ರಸ್ತೆ, ದಾವಣಗೆರೆ-2.

(೨) ವೇ॥ ನವರತ್ನದ ಗೋಪಾಲಾಚಾರ್ಯ, C/o ಶ್ರೀ ಮಾಧ್ವ ಸಂಘ, 8ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು-3

(೩) ವೇದಾಂತ ಹೌಸ್, ಉಮಾ ಟಾಕೀಸ್ ಬಳಿ, ಚಾಮರಾಜಪೇಟೆ, ಬೆಂಗಳೂರು-18.

(೪) ಗೀತಾ ಬುಕ್ ಹೌಸ್, ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು

(೫) ಎಸ್. ಎಮ್. ಎಸ್. ಗ್ರಂಥಾಲಯ, ಪೋಸ್ಟ್ ಬಾಕ್ಸ್ ನಂ. 16, ಉಡುಪಿ (ದ.ಕ.)

(೬) ಶ್ರೀ ಕೃಷ್ಣ ಬುಕ್ ಡಿಪೋ, ಧಾರವಾಡ.

ಮುದ್ರಕರು :
ಪ್ರಭಾ ಮುದ್ರಣಾಲಯ
ಬಸವನಗುಡಿ, ಬೆಂಗಳೂರು-4

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರ ನುಡಿ

ಶ್ರೀ ಮಧ್ವಾಚಾರ್ಯರ ಅನುಗ್ರಹದಿಂದ ನಮ್ಮ ಸಂಘವು ಶ್ರೀಮನ್ಮಧ್ವಾಚಾರ್ಯರ ವೇದಾಂತ ತತ್ವಗಳ ಪ್ರಚಾರವನ್ನೆ ಗುರಿಯಾಗಿಟ್ಟುಕೊಂಡು ಈಗ ನಲವತ್ತು ವರ್ಷಗಳಿಗೂ ಮಿಕ್ಕು ತತ್ವಪ್ರಚಾರಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಇದೆ. ಸ್ಥಳದ ಮತ್ತು ಪರಸ್ಥಳದ ಪಂಡಿತರುಗಳನ್ನು ಆಗಿಂದಾಗ್ಗೆ ಕರೆಸಿಕೊಂಡು ಅವರಿಂದ ಸಚ್ಛಾಸ್ತ್ರ ಪಾಠ ಪ್ರವಚನಗಳನ್ನು ನಡೆಸುತ್ತಿದ್ದೇವೆ. ನಮ್ಮಲ್ಲಿಗೆ ಆಹ್ವಾನಿತರಾಗಿ ಬಂದು ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಎಲ್ಲಾ ಪಂಡಿತರುಗಳಿಗೂ ನಮ್ಮ ಕೃತಜ್ಞತೆಯು ಸಲ್ಲತಕ್ಕದ್ದಿದೆ. ಅಲ್ಲದೆ ಸಂಘವು ದೊಡ್ಡದಾದ ಪುಸ್ತಕಭಂಡಾರವನ್ನು ಸಹ ಹೊಂದಿದೆ. ನಮ್ಮಲ್ಲಿ ಪ್ರಕಾಶಿತವಾದ ಗ್ರಂಥಗಳಿಗೆ ತಾವೆಲ್ಲರೂ ಕೊಟ್ಟಿರುವ ಪ್ರೋತ್ಸಾಹದಿಂದ ಈಗ "ಶ್ರೀ ವಿಷ್ಣುರಹಸ್ಯ" ಪುರಾಣದ ಪ್ರಕಾಶನವನ್ನು ತೆಗೆದುಕೊಂಡಿದ್ದೇವೆ.

ಪರಮಪ್ರಮಾಣವೆಂದು ಸರ್ವಜ್ಞಾನಿಗಳಿಂದ ಮಾನ್ಯವಾದ 'ಶ್ರೀ ವಿಷ್ಣುರಹಸ್ಯ'ವು ಹಯಗ್ರೀವರೂಪಿ ಶ್ರೀವಿಷ್ಣುವಿನಿಂದ ಚತುರ್ಮುಖ ಬ್ರಹ್ಮನಿಗೆ ಉಪದೇಶಿಸಲ್ಪಟ್ಟ ಪ್ರಸಿದ್ಧ ಹಯಗ್ರೀವ ವಿದ್ಯೆಯ ಸಾರವನ್ನೂ ವೇದಾದಿ ಸಚ್ಛಾಸ್ತ್ರ ನಿರ್ಣಯಗಳನ್ನೂ ಸಯುಕ್ತಿಕವಾಗಿ ನಿರೂಪಿಸುತ್ತ, ಸತ್ಸಿದ್ಧಾಂತ ಮಹಾರಹಸ್ಯಗಳನ್ನು ಪ್ರತಿಪಾದಿಸುತ್ತದೆ. ಈ ಗ್ರಂಥವು ಸುಮಾರು ೩೬೦೦ ಶ್ಲೋಕಗಳನ್ನು ಒಳಗೊಂಡಿದ್ದು ೨೦೦–೨೫೦ ಪುಟಗಳುಳ್ಳ ೮ ಸಂಪುಟಗಳಷ್ಟಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಇದರಲ್ಲಿ ಮೊದಲನೆಯ ಸಂಪುಟವನ್ನು ಗ್ರಾಹಕರ ಮುಂದಿಟ್ಟಿದ್ದೇವೆ. ಎಂದಿನಂತೆ ಜ್ಞಾನೇಚ್ಛುಗಳಾದ ಸಜ್ಜನರು ಪ್ರೋತ್ಸಾಹಕೊಟ್ಟು ಶ್ರೀಮದಾಚಾರ್ಯರ ಸೇವೆಯನ್ನು ನಡೆಸಿಕೊಂಡು ಹೋಗಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಗ್ರಾಹಕರಲ್ಲಿ ಸವಿನಯ ಬಿನ್ನಹ.

ಇಲ್ಲಿ ಗ್ರಂಥಕರ್ತೃಗಳ ವಿಚಾರವಾಗಿ ಎರಡು ಮಾತುಗಳನ್ನು ಹೇಳದಿದ್ದರೆ ನಮ್ಮ ಕರ್ತವ್ಯ ಲೋಪವಾದೀತು. ಧಾವಣಗೆರೆಯ 'ಮಾಧ್ವಭೂಷಣ'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ಬಿ. ಭೀಮರಾಯರು ಅಖಿಲ ಮಾಧ್ವವೃಂದಕ್ಕೆ ಈಗಾಗಲೇ ಪರಿಚಿತ ರಾಗಿದ್ದಾರೆ. ಅವರಿಂದಲೆ ಸ್ಥಾಪಿತವಾದ ನಮ್ಮ ಸಂಘದ ಮೇಲೆ ಅವರಿಗಿರುವ ಅಭಿಮಾನ ಅವರ್ಣನೀಯ. ಸಂಘದವರ ಪ್ರಾರ್ಥನೆಯನ್ನು ಮನ್ನಿಸಿ ಈ ಗ್ರಂಥಕ್ಕೆ ಮೂಲಶ್ಲೋಕ, ಪ್ರತಿಪದಾರ್ಥ, ತಾತ್ಪರ್ಯ ಮತ್ತು ಟಿಪ್ಪಣಿ ಗಳನ್ನು ತಮ್ಮದೇ ಆದ ಸುಲಭ ಶೈಲಿಯಲ್ಲಿ ಬರೆದುಕೊಡಲು ಒಪ್ಪಿ ಸಂಘಕ್ಕೆ ಮಹದುಪಕಾರಮಾಡಿದ್ದಾರೆ. ಈ ಪುಸ್ತಕವು ಗ್ರಾಹಕರಿಗೆ ಪ್ರಿಯವಾಗು ವುದರಲ್ಲಿ ಯಾವ ಸಂದೇಹವು ಇಲ್ಲ. ಶ್ರೀಹರಿಯು ಪೂಜ್ಯರಾದ ಶ್ರೀ ಭೀಮ ರಾಯರಿಗೆ ಆಯುರಾರೋಗ್ಯಗಳನ್ನು ಕೊಟ್ಟು ಅವರಿಂದ ಇತೋಽಪ್ಯತಿಶಯ ವಾದ ಕಾರ್ಯವನ್ನು ಮಾಡಿಸುವ ಅನುಗ್ರಹವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಈ ಗ್ರಂಥಕ್ಕೆ ನಮ್ಮ ಪ್ರಾರ್ಥನೆಯ ಮೇಲೆ ಸ್ವಯಂ ಮಹಾಪಂಡಿತರೂ ಸಿದ್ಧಾಂತಪ್ರಚಾರಪ್ರೋತ್ಸಾಹಕರೂ ಮಾಧ್ವಯುವಕರಿಗೆ ಆದರ್ಶಪ್ರಾಯರೂ ಆದ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಮುನ್ನುಡಿಯನ್ನು ಬರೆದುಕೊಟ್ಟಿದ್ದಕ್ಕಾಗಿ ಅವರಿಗೆ ನಮ್ಮ ನಮಸ್ಕಾರಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಬೆಂಗಳೂರಿನ ಪ್ರಭಾ ಮುದ್ರಣಾಲಯದ ಮಾಲೀಕರಾದ ಶ್ರೀ ಡಿ. ಎಸ್. ಕೃಷ್ಣಾಚಾರ್ಯರು ನಮ್ಮ ಸಂಘದ ಮೇಲೆ ಅಭಿಮಾನವಿಟ್ಟು ತಮ್ಮ ಅನೇಕ ಕಾರ್ಯಗಳೊಂದಿಗೆ ನಮ್ಮ ಕಾರ್ಯಕ್ಕೆ ಅವಕಾಶ ಮಾಡಿಕೊಂಡು ವಿಶೇಷ ಸವಲತ್ತುಗಳನ್ನು ಕಲ್ಪಿಸಿಕೊಟ್ಟು ಸಕಾಲಕ್ಕೆ ಮುದ್ರಣ ಕಾರ್ಯವನ್ನು ಮುಗಿಸಿ ಸಂಘದ ವಂದನೆಗೆ ಪಾತ್ರರಾಗಿದ್ದಾರೆ. ಇನ್ನು ಮುಂದೆ ಬರಲಿರುವ ಈ ಗ್ರಂಥದ ಉಳಿದ ಸಂಪುಟಗಳನ್ನು ಸಕಾಲಕ್ಕೆ ಮುಗಿಸಿಕೊಡುವಂತೆ ಪರಮಾತ್ಮನು ಅವರಿಗೆ ಆಯುರಾರೋಗ್ಯಾದಿಗಳನ್ನು ಕೊಟ್ಟು ಅನುಗ್ರಹಿಸ ಲೆಂದು ಪ್ರಾರ್ಥಿಸುತ್ತೇವೆ.

ಕೆ. ಪ್ರಹ್ಲಾದರಾವ್
ಕೆ. ಮುಕುಂದಾಚಾರ್
ಕಾರ್ಯದರ್ಶಿಗಳು

ಎನ್. ಆರ್. ಸುಬ್ಬರಾವ್
ಅಧ್ಯಕ್ಷರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಾಧ್ವಭೂಷಣ

ಶ್ರೀ ಬಿ. ಭೀಮರಾವ್, ದಾವಣಗೆರೆ

ಜನನ 1903

ಇವರು 1925 ರಲ್ಲಿ ದಾವಣಗೆರೆಯಲ್ಲಿ ವಕೀಲಿವೃತ್ತಿಯನ್ನು ಆರಂಭಿಸಿ, ಕೆಲವೇ ವರ್ಷಗಳಲ್ಲಿ ಪ್ರಸಿದ್ಧ ವಕೀಲರೆನಿಸಿದರು. 1931 ರಲ್ಲಿಯೇ ಉಡುಪಿಯ ಶ್ರೀ ಪುತ್ತಿಗೆ ಮಠಾಧೀಶ ಕೀರ್ತಿಶೇಷ ಶತಾಯುಷಿ ಶ್ರೀ ಸುಧೀಂದ್ರತೀರ್ಥರಲ್ಲಿ 'ಶಾಂತಿ'ಪೂರ್ವಕ ಶ್ರೀಮಧ್ವಶಾಸ್ತ್ರಾಧ್ಯಯನವನ್ನು ಆರಂಭಿಸಿದರು. 1934 ರಲ್ಲಿ ನಮ್ಮ ಸಂಘವನ್ನು ಆಗಿನ ಪ್ರಮುಖ ಹರಿಭಕ್ತರನ್ನು ಸೇರಿಸಿಕೊಂಡು, ಸ್ಥಾಪಿಸಿದರು. ಅಲ್ಲಿಂದ ಈವರೆಗೆ ಸಂಘದ ಮುಖ್ಯ ಗುರಿಯಾದ ಜ್ಞಾನಪ್ರಚಾರಕಾರ್ಯದಲ್ಲಿ ಭಾಗವಹಿಸುತ್ತಿರುವರು. ಅನೇಕ ಶ್ರೇಷ್ಠ ಪಂಡಿತರನ್ನು ಕರೆಸಿಕೊಂಡು ಶ್ರೀಮಧ್ವಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿದ್ದಾರೆ. ೨೦ ವರ್ಷಗಳಗಿಂತ ಹೆಚ್ಚುಕಾಲ, ಸಂಘದಲ್ಲಿ ನಿತ್ಯವೂ ತಪ್ಪದೇ, ತಮ್ಮ ಬಿಡುವಿಲ್ಲದ ಲೌಕಿಕ ಕಾರ್ಯಗಳೊಂದಿಗೆ, ಶಾಸ್ತ್ರಪ್ರವಚನಾದಿಗಳನ್ನು ನಡೆಸಿದ್ದಾರೆ. ಈ ಅವಧಿಯಲ್ಲಿ ಅವರು ಹೇಳಿ ಮುಗಿಸದ ಪುರಾಣಗಳಿಲ್ಲ—ಪ್ರವಚನ ಮಾಡದ ಶ್ರೀಮಧ್ವಶಾಸ್ತ್ರ ಗ್ರಂಥಗಳಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಸಚ್ಛಾಸ್ತ್ರ ವಿಷಯಕವಾದ ೨೦ಕ್ಕೂ ಮಿಕ್ಕಿದ ಉತ್ತಮ ಗ್ರಂಥಗಳನ್ನು ರಚಿಸಿ, ಸಂಘದ ದ್ವಾರಾ ಪ್ರಕಾಶಗೊಳಿಸಿರುವರು. ಇವರ ಸರಳ ಕನ್ನಡ ಶೈಲಿ, ವಿಷಯನಿರೂಪಣ ವೈಶಿಷ್ಟ್ಯಗಳು ಮಾಧ್ವವೃಂದದ ಅಶೇಷ ಜಿಜ್ಞಾಸುಗಳಿಗೆ ತಿಳಿದಿವೆ. ಈ ವೃದ್ಧಾಪ್ಯದಲ್ಲಿ ಸಹ ಇವರ ಲೇಖಣಿಗೆ ವಿಶ್ರಾಂತಿಯಿಲ್ಲ. ಭಗವಂತನು ಇವರನ್ನು ಚಿರಕಾಲ ಉಳಿಸಿಕೊಡಲಿ.

ಶ್ರೀ [illegible]—ದಾವಣಗೆರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

|| ಶ್ರೀಃ ||

ಅನುವಾದಕರ ಪ್ರಸ್ತಾವ

ಆಚಾರ್ಯಃ ಪವನೋಽಸ್ಮಾಕಂ ಆಚಾರ್ಯಾಣೀ ಚ ಭಾರತೀ ।
ದೇವೋ ನಾರಾಯಣಃ ಶ್ರೀಶಃ ದೇವೀ ಮಂಗಲದೇವತಾ ॥

ಅಭ್ರಮಂ ಭಂಗರಹಿತಂ ಅಜಡಂ ವಿಮಲಂ ಸದಾ ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಂ ॥

ಶ್ರೀ ವಿಷ್ಣುರಹಸ್ಯ ಪುರಾಣವು ಶ್ರೀ ಬಾದರಾಯಣಕೃತ ಇತರ ಪುರಾಣಗಳಂತೆ ಸೂತಶೌನಕಾದಿ ಸಂವಾದರೂಪದಿಂದಿದೆ. ಶ್ರೀ ಬಾದರಾಯಣ ವಿರಚಿತ ಪುರಾಣಗಳ ಮತ್ತು ಉಪಪುರಾಣಗಳ ನಿರೂಪಣೆಯು, ವಿವಿಧ ಪುರಾಣಗಳಲ್ಲಿ ವಿವಿಧವಾಗಿರುವುದು ಕಂಡುಬರುತ್ತದೆ. ಈ ಪುರಾಣವೂ ಶ್ರೀ ವೇದವ್ಯಾಸ ವಿರಚಿತವೇ ಎಂಬ ಜ್ಞಾನಿ ಸಂಪ್ರದಾಯಪ್ರಾಪ್ತ ಅಭಿಪ್ರಾಯವನ್ನು ಶಂಕಿಸಲು ಯಾವ ಕಾರಣವೂ ಇರುವುದಿಲ್ಲ. ಇದನ್ನು ಸಾತ್ವಿಕ ಉಪಪುರಾಣಗಳಲ್ಲಿ ಒಂದೆಂದು ಭಾವಿಸಲೂಬಹುದು. ಶ್ರೀಕೃಷ್ಣನು ರಥಾಗ್ರ ಭಾಗದಲ್ಲಿ ಕುಳಿತು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಉಪದೇಶಿಸಿದ ಗೀತೆಯನ್ನು ಶ್ರೀ ವೇದವ್ಯಾಸರು ಶ್ಲೋಕಗಳ ರೂಪದಿಂದ ರಚಿಸಿ, ಶ್ರೀ ಮಹಾಭಾರತದಲ್ಲಿ ಅಡಕಮಾಡಿರುವಂತೆ, ಹಯಗ್ರೀವರೂಪದಿಂದ, ಶ್ರೀವಿಷ್ಣುವು, ಪುರುಷನಾಮಕ ಬ್ರಹ್ಮದೇವನಿಗೆ ಉಪದೇಶಿಸಿದುದನ್ನೇ ಶ್ರೀ ಬಾದರಾಯಣರು ಶ್ಲೋಕರೂಪದಿಂದ ಗ್ರಥನಮಾಡಿದರೆಂದು ಭಾವಿಸುವಲ್ಲಿ ಯಾವ ಅನುಪಪತ್ತಿಯೂ ತೋರುವುದಿಲ್ಲ. ಜೀವೋತ್ತಮನಾದ ಬ್ರಹ್ಮದೇವನಿಗೆ ಸಕಲ ವಿದ್ಯಾಪ್ರವರ್ತಕನೂ, ಪ್ರತಿಪಾದ್ಯನೂ ಆದ ಶ್ರೀ ಹಯಗ್ರೀವದೇವನು ಸ್ವಯಂ ಮಾಡಿದ ಉಪದೇಶವು ಮೊದಲಿನ ೧೯ ಅಧ್ಯಾಯಗಳಲ್ಲಿ ಅಡಕವಾಗಿದೆ. ಅವಶಿಷ್ಟಗ್ರಂಥಭಾಗವು, ಶ್ರೀವಿಷ್ಣುವು ತನ್ನ ನಾಭಿಕಮಲದಿಂದ ಉತ್ಪಾದಿಸಲ್ಪಟ್ಟ ಚತುರ್ಮುಖಬ್ರಹ್ಮನಿಗೆ ಆದರದಿಂದ ಮಾಡಿದ, ಉಪದೇಶವನ್ನು ವಿಶೇಷವಾಗಿ ಸೂತಶೌನಕಾದಿಗಳ ಸಂವಾದರೂಪದಿಂದ ವಿಸ್ತರಿಸುತ್ತದೆ.

ವಿಷ್ಣುಭಕ್ತರಿಗೆ (ಮುಕ್ತಿಯೋಗ್ಯಸ್ವರೂಪದ ಸಜ್ಜನರಿಗೆ), ಮೋಕ್ಷಸಾಧನೆಗೆ ಅವಶ್ಯಕವಾದ ಆಚಾರ ಅನುಷ್ಠಾನಗಳ ವಿಷಯದಲ್ಲಿ ಪಂಚರಾತ್ರಾಗಮವು ಪರಮಪ್ರಮಾಣವಾಗಿದೆ. ಪಂಚರಾತ್ರಾಗಮವು ಕನ್ನಡಕ್ಕೆ ಈವರೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಂತರಿಸಲ್ಪಟ್ಟಿರುವುದಿಲ್ಲ—ಅಥವಾ ಬೇರಾವ ಭಾಷೆಗಳಲ್ಲಿ ವ್ಯಾಖ್ಯಾತವಾದಂತೆಯೂ ಕಂಡುಬರುವುದಿಲ್ಲ. ಆಗಮದ ಮೂಲಗ್ರಂಥಗಳು ಸಹ ಉಪಲಬ್ಧವಿಲ್ಲ. ರಾಮಾನುಜೀಯರು ಮುದ್ರಿಸಿ ಪ್ರಕಾಶಗೊಳಿಸುವರೆಂಬ ವದಂತಿ ಮಾತ್ರ ಕೇಳಿಬರುತ್ತಿದೆ. ಶ್ರೀ ವಿಷ್ಣುರಹಸ್ಯ ಪುರಾಣವು ಪಂಚರಾತ್ರದ ಸಾರವನ್ನೇ ಸಂಗ್ರಹಿಸಿ ನಿರೂಪಿಸುತ್ತದೆ. 'ಸಮಸ್ತ ಪಂಚರಾತ್ರದ ವಕ್ತಾರನು ನಾನೇ' ಎಂದು ಶ್ರೀ ಹಯಗ್ರೀವನು ಹೇಳಿಕೊಂಡಿರುತ್ತಾನೆ—ಹೀಗೆಂದು ಈ ಪುರಾಣದಲ್ಲಿಯೂ ಉಕ್ತವಾಗಿದೆ. ಅದನ್ನೇ, ಬ್ರಹ್ಮದೇವನಿಗೆ, ಸೃಷ್ಟ್ಯರ್ಥವಾಗಿ ಅತ್ಯವಶ್ಯಕವಾದ ಸರ್ವಜ್ಞತ್ವವನ್ನು ಸಾಧಿಸಿಕೊಡಲು, ಶ್ರೀ ಹಯಗ್ರೀವನೂ, ತದಭಿನ್ನನಾದ ಶ್ರೀವಿಷ್ಣುವೂ ಈ ಪುರಾಣದಲ್ಲಿ ಉಪದೇಶಿಸಿರುತ್ತಾನೆ. ಹೀಗೆ ಈ ಪುರಾಣವು ಪಂಚರಾತ್ರಾಗಮದ ಪ್ರಧಾನ ಪ್ರಮೇಯಗಳನ್ನು, ಸರಹಸ್ಯವಾಗಿ ವಿಸ್ತರಿಸುವುದರಿಂದ, ವಿಷ್ಣುಭಕ್ತರಿಗೆ, ಅತ್ಯುಪಯುಕ್ತವಾದುದೆಂದು ಸಿದ್ಧವಾಗುತ್ತದೆ.

ಶ್ರೀವಿಷ್ಣು ಸರ್ವೋತ್ತಮತ್ವಾದಿ ಮಧ್ವಸಿದ್ಧಾಂತ ತತ್ವಗಳ ನಿಶ್ಚಯಜ್ಞಾನವಿಲ್ಲದೇ ಮೋಕ್ಷವು ದೊರೆಯದು ; ಶ್ರೀಹರಿಯು ಸರ್ವವೇದ ಪ್ರತಿಪಾದ್ಯನಾದ ಅನಂತಗುಣಪರಿಪೂರ್ಣನಾದರೂ, ಆತನ (ಸ್ವಯೋಗ್ಯ) ಗುಣಪೂರ್ವತ್ವ ಜ್ಞಾನನಿಶ್ಚಯವು, ಅಧಿಕಾರಿಜೀವನಿಗೆ, ಕೇವಲ ವೇದಗಳಿಂದ ದೊರೆಯುವುದಿಲ್ಲ—ತಂತ್ರಜ್ಞಾನವು ಅತ್ಯವಶ್ಯಕವೆಂಬುದನ್ನು ಬ್ರಹ್ಮದೇವನ ಸ್ವಾನುಭವಸಿದ್ಧನುಡಿಗಳಿಂದ, ಇಲ್ಲಿ ನಿದರ್ಶನಮಾಡಲಾಗಿದೆ. ವೇದಭಿನ್ನ ಸ್ಮೃತಿಗಳೂ, ಇತಿಹಾಸ, ಪುರಾಣಗಳೂ, ಆಗಮಗಳೂ 'ತಂತ್ರ'ಭಾಗದಲ್ಲಿ ಸೇರುತ್ತವೆ; ತಂತ್ರಗಳಲ್ಲಿ ಪಂಚರಾತ್ರವು (ಆಗಮವು) ಶ್ರೀವಿಷ್ಣು ಪ್ರಸನ್ನತೆಯನ್ನು ದೊರಕಿಸುವುದರಲ್ಲಿ ಅತ್ಯುತ್ತಮ ಸಾಧನವಾಗಿದೆ—ಅದು ಸ್ವಯಂ ಶ್ರೀವಿಷ್ಣುಮುಖೋದ್ಗತವಾದುದು. ಅದರ ಸಾರವೇ, ವಿವಿಧ ರಹಸ್ಯಗಳ ವಿವರಣಪೂರ್ವಕ ಪ್ರತಿಪಾದಿಸಲ್ಪಟ್ಟಿರುತ್ತದೆ—ಈ ಪುರಾಣದಲ್ಲಿ.

ಇಲ್ಲಿ ಪ್ರತಿಪಾದಿತವಾದ ರಹಸ್ಯಗಳು—ಗೋಪ್ಯವಾಗಿಟ್ಟು ರಕ್ಷಿಸಿಕೊಳ್ಳಲರ್ಹವಾದವುಗಳು ; ಹಾಗೂ ಅನಧಿಕಾರಿಗಳಾದ ಅಭಕ್ತರಿಗೆ ದೊರೆಯದಂತೆ ರಕ್ಷಿಸಬೇಕಾದುದು ಸಹ ಅಷ್ಟೇ ಅವಶ್ಯಕ. ಹೀಗಿದ್ದರೂ ಸಜ್ಜನರಿಗೆ ಇವುಗಳ ಲಾಭವನ್ನು ದೊರಕಿಸುವ ಸದುದ್ದೇಶ್ಯದಿಂದ ಈ ಗ್ರಂಥದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡಾನುವಾದದಲ್ಲಿ, ಉತ್ತಮ ಜ್ಞಾನಿಗಳ ಅಭಿಪ್ರಾಯಾನುಸಾರ ಪ್ರವೃತ್ತ ನಾಗಿದ್ದೇನೆ. ದುರ್ಜನರ ತೆಗಳುವಿಕೆಯಿಂದ, ಪಾಪ ತಗಲದಂತೆ ನನ್ನನ್ನು ಶ್ರೀಹರಿಯು ರಕ್ಷಿಸುವನೆಂಬ ಆಶ್ವಾಸನವೂ ದೊರೆತಿದೆ. ಆ ಬಗ್ಗೆ ನಾನಾದರೂ ಶ್ರೀಹರಿವಾಯುಗಳನ್ನು ಪ್ರಾರ್ಥಿಸುತ್ತೇನೆ.

ಶ್ರೀಮದಾನಂದತೀರ್ಥಭಗವತ್ಪಾದರ ಸಿದ್ಧಾಂತಗಳಿಗೆ ಅವಿರುದ್ಧವಾದ ಪ್ರಮೇಯಗಳನ್ನು ನಿರೂಪಿಸುವ ಮತ್ತು ಯುಕ್ತಿಯುಕ್ತವಾಗಿ, ಅನುಭವಸಿದ್ಧ ದೃಷ್ಟಾಂತಗಳಿಂದ, ಸಾಧಿಸುವ ಶ್ರೇಷ್ಠ ಪ್ರಮೇಯ ಗ್ರಂಥವಿದು ; ಸತ್ಯಾನ್ವೇಷಿ ಗಳಾದ ವಿವೇಕಿಗಳಿಗೆ, ಹೆಜ್ಜೆ ಹೆಜ್ಜೆಗೆ ತಲೆದೋರುವ ವಿವಿಧ ಸಂಶಯಗಳನ್ನೇ ಸರ್ವಜ್ಞನೂ, ಜೀವೋತ್ತಮನೂ ಆದ ಬ್ರಹ್ಮದೇವನು ಮುಂದೆಮಾಡಿ, ಶ್ರೀವಿಷ್ಣುವನ್ನು ಪ್ರಶ್ನಿಸಿ, ಉತ್ತರಗಳನ್ನು ಪಡೆದುದರ ನಿರೂಪಣೆಯನ್ನು ಇಲ್ಲಿ ಕಾಣುತ್ತೇವೆ. ಈ ಪುರಾಣದ ಶ್ರವಣ, ಪಾರಾಯಣ, ಅಧ್ಯಯನ, ಪ್ರವಚನಾದಿಗಳಿಂದ, ಜಿಜ್ಞಾಸುಗಳ ಸರ್ವಪ್ರಕಾರದ ಸಂಶಯಗಳ ಪರಿಹಾರ ವಾಗಿ, ತತ್ವಜ್ಞಾನನಿಶ್ಚಯವುಂಟಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ವಿಶ್ವಸೃಷ್ಟಿಯ ವೈಚಿತ್ರ್ಯ, ಬಾಹ್ಯಾಂತರ ಸೃಷ್ಟಿಭೇದಗಳು, ಬ್ರಹ್ಮಾಂಡದ ಸೃಷ್ಟಿ, ವಿವಿಧ ಸೃಷ್ಟಿಯ ನಾನಾ ಹಂತಗಳಲ್ಲಿ ಸಂಭವಿಸುವ, ಅಚಿಂತ್ಯವೂ, ಅದ್ಭುತವೂ ಆದ ವಿವಿಧ ಚರಿತ್ರೆಗಳು, ಕರ್ಮಫಲವೈವಿಧ್ಯನಿರೂಪಣೆಯಿಂದ ಜಗದ್ವೈಚಿತ್ರ್ಯದ ಸಮರ್ಪಕ ನಿರ್ವಹಣೆ, ಶ್ರೀಹರಿಯ ಸರ್ವದೋಷದೂರತ್ವ ಸ್ಥಾಪನೆ, ಜೀವಕರ್ತೃತ್ವ, ದತ್ತಸ್ವಾತಂತ್ರ್ಯ, ಅನಾದಿಕರ್ಮ, ಲಿಂಗದೇಹ ಕಾರ್ಯ, ಬಿಂಬಪ್ರತಿಬಿಂಬಭಾವ, ಮುಕ್ತಭೋಗ, ಮೊದಲಾದ ಬಹು ತೊಡಕಿನ (ಕ್ಲಿಷ್ಟತಮ) ಪ್ರಕ್ರಿಯೆಗಳನ್ನು, ಬಿಡಿಸಿ ವಿವರಿಸಿ, ತತ್ಸಂಬಂಧ ವಾದ ನಿರ್ಣಯಗಳನ್ನು ಸಾಧಿಸಿ, ಬುದ್ಧಿಸ್ಥವಾಗುವಂತೆ ಮಾಡುವುದು, ಈ ಪುರಾಣದ ವೈಶಿಷ್ಟ್ಯ. ಈ ದೃಷ್ಟಿಯಿಂದ, ಈ ಗ್ರಂಥವು ಶಾಸ್ತ್ರ ಪ್ರಪಂಚ ದಲ್ಲಿ ಅನ್ಯಾದೃಶವಾದುದು. ಈ ಪುರಾಣವು ಶ್ರೀಮದಾಚಾರ್ಯರ ಕಾಲದಲ್ಲಿ (೧೨–೧೩ನೇ ಕ್ರಿಸ್ತ ಶತಮಾನದಲ್ಲಿ), ಜನಸಾಮಾನ್ಯರಲ್ಲಿ ಸಹ ವಿಶೇಷ ಪ್ರಸಿದ್ಧವಾಗಿ ಬಳಕೆಯಲ್ಲಿದ್ದ ಪುರಾಣವೆಂದು ತಿಳಿಯಬಹುದಾಗಿದೆ. ಈ ಕಾರಣದಿಂದಲೇ, ವೇದಾಂತ(ಮಾಯಾವಾದ) ಮತ್ತು ಇತಿಹಾಸ ಪುರಾಣ ಗಳಲ್ಲಿ ಸ್ಪಷ್ಟವಾಗಿ ತೋರುತ್ತಿದ್ದ ವಿರೋಧದಿಂದಲೇ ಮಾಯಾವಾದ ತತ್ವ ಗಳಿಂದ ಅಸಂತುಷ್ಟರಾಗಿ, ನಿತ್ಯಸುಖರೂಪದ ಮೋಕ್ಷಕ್ಕೆ ಮಾರ್ಗವನ್ನು

CC-0. In Public Domain. Gurukul Kangri Collection, Haridwar
*

Digitized by Arya Samaj Foundation Chennai and eGangotri

ಕಾಣದೇ, ಸಜ್ಜನರು ಪರಿತಪಿಸುತ್ತಿದ್ದರೆಂದೂ ತಿಳಿಯುತ್ತದೆ. ಶ್ರೀಮದಾಚಾರ್ಯರು ತಮ್ಮಿಂದ ರಚಿತವಾದ ಗ್ರಂಥಗಳಲ್ಲಿ ಅಲ್ಲಲ್ಲಿ, ಈ ಪುರಾಣದಿಂದ [ರಕ್ಷತೀತ್ಯೇವವಿಶ್ವಾಸಃ ತದೀಯೋಹಮಿತಿಸ್ಮೃತಿಃ (ಗೀತಾತಾತ್ಪರ್ಯ) ಇತ್ಯಾದಿ] ಬಹುವಾಕ್ಯಗಳನ್ನು ಉದಹರಿಸಿರುವರು. ಅಪರೋಕ್ಷಜ್ಞಾನಿಗಳಾದ ಪ್ರಸಿದ್ಧ ಹರಿದಾಸರುಗಳು ಸಹ ಈ ಪುರಾಣವನ್ನು, ತಮ್ಮ ಕೃತಿಗಳಲ್ಲಿ, ಅವಲಂಬಿಸಿರುವುದು ಕಂಡುಬರುತ್ತದೆ. ಶ್ರೀ ವಿಜಯದಾಸಾರ್ಯರ ಒಂದು ಸೃಷ್ಟಿನಿರೂಪಣ ಸುಳಾದಿಯು ಈ ಪುರಾಣದ ೨ನೇ ಅಧ್ಯಾಯದ ಅನುವಾದದಂತಿದೆ. ಶ್ರೀ ಜಗನ್ನಾಥದಾಸರವರ, ಹರಿಕಥಾಮೃತಸಾರದ, ದತ್ತ-ಸ್ವಾತಂತ್ರ್ಯ, ಸ್ವಗತ ಸ್ವಾತಂತ್ರ್ಯ ಮತ್ತು ಸರ್ವಸ್ವಾತಂತ್ರ್ಯ ಸಂಧಿಗಳು, ಈ ಪುರಾಣದ ಇಂದ್ರದ್ಯುಮ್ನಭೃಗುಸಂವಾದವನ್ನೇ (೨೦–೩೧ನೇ ಅಧ್ಯಾಯಗಳ ನಿರೂಪಣೆಯನ್ನು) ಆಧರಿಸಿವೆ—ಹಾಗೆಂದು ಸಂಧಿಸೂಚನೆಯಲ್ಲಿ ಸಹ ದಾಸಾರ್ಯರು ಹೇಳಿದ್ದಾರೆ. ಶ್ರೀ ವಿಜಯದಾಸರು ಶ್ರೀ ಜಗನ್ನಾಥದಾಸರು, ಅಪರೋಕ್ಷಜ್ಞಾನಿಗಳೆಂದು ಸರ್ವಮಾನ್ಯರಾಗಿದ್ದಾರೆ. ಅವರ ಮಾತುಗಳು (ಕೃತಿಗಳು) ಪಂಡಿತವರ್ಗದಿಂದ ಸಹ ಪ್ರಮಾಣತ್ವೇನ ಮಾನ್ಯವಾಗಿವೆ.

ಹೀಗೆ ಪರಮಪ್ರಮಾಣಭೂತವೂ ಅತ್ಯಾದರಣೀಯವೂ ಆದ ಶ್ರೇಷ್ಠ ಗ್ರಂಥದ ಸಂಸ್ಕೃತ ಮೂಲಗ್ರಂಥವೂ ಈಗ ಉಪಲಬ್ಧವಿಲ್ಲ. ಅರ್ಥಬೋಧಕ ವ್ಯಾಖ್ಯಾನವಂತೂ ಯಾವುದೂ ಇಲ್ಲ. ಈ ಕೊರತೆಯನ್ನು ನೀಗಿ, ಸಜ್ಜನರಿಗೆ ಪರಮೋಪಕಾರಕವಾದ ಈ ಗ್ರಂಥವನ್ನು, ಪ್ರತಿಪದಾರ್ಥ, ತಾತ್ಪರ್ಯ, ವಿಶೇಷ ವಿವರಣೆಗಳೊಂದಿಗೆ, ಸರಳ ಕನ್ನಡದಲ್ಲಿ ಮುದ್ರಿಸಿ ಪ್ರಕಾಶಗೊಳಿಸುವ, ಈ ಹರಿಸೇವೆಯನ್ನು ದಾವಣಗೆರೆಯ ಶ್ರೀ ಸರ್ವಜ್ಞಾಚಾರ್ಯ ಸೇವಾ ಸಂಘವು ಕೈಗೊಂಡಿದೆ. ಮೂಲಗ್ರಂಥವನ್ನು ವ್ಯಾಖ್ಯಾನ ಮಾಡಿ, ಸಂಘದ ಸಂಕಲ್ಪದಂತೆ, ಕನ್ನಡಾನುವಾದವನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಸಮರ್ಥರಾದ ಪಂಡಿತವರೇಣ್ಯರಿದ್ದರೂ, ಅಲ್ಪಜ್ಞನಾದ ನನ್ನನ್ನು ಯೋಜಿಸಿ, ಈ ಮಹಾ ಸೇವೆಯ ಸದವಕಾಶವನ್ನು ನನಗೆ ಒದಗಿಸಿರುವ ಶ್ರೀ ಸಂಘದ ಅಧಿಕಾರಿವರ್ಗದವರಿಗೆ ಚಿರಋಣಿಯಾಗಿದ್ದೇನೆ. ಪ್ರತಿಯೊಂದೂ ೨೦೦–೨೫೦ ಮುದ್ರಿತ ಪುಟಗಳುಳ್ಳ ೮ ಸಂಪುಟಗಳಲ್ಲಿ, ಈ ಮಹಾಕಾರ್ಯವನ್ನು ಪೂರ್ತಿಗೊಳಿಸಲು ಸಾಧ್ಯವಾಗಬಹುದೆಂದು ಅಂದಾಜು ಮಾಡಲಾಗಿದೆ. ಶ್ರೀಹರಿವಾಯುಗಳ ಅನುಗ್ರಹ, ವಿಷ್ಣುಭಕ್ತರ ಸದಾಶಯ ಆಶೀರ್ವಾದಗಳ ಬಲದಿಂದ ಮಾತ್ರ ನನ್ನಿಂದ ಈ ಸೇವೆಯು ಪೂರ್ಣಗೊಳ್ಳಬೇಕಾಗಿದೆ. ಉಡುಪಿ ಶ್ರೀ ಪೇಜಾವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು, ಕೃಪೆಮಾಡಿ, ಸಂಘದ ಪ್ರಾರ್ಥನೆಯಂತೆ, ಈ ಗ್ರಂಥಕ್ಕೆ, ಗ್ರಂಥದ ಮಹಾತ್ಮೆಯನ್ನೂ ಪ್ರಾಮಾಣ್ಯವನ್ನೂ ಪ್ರತಿಪಾದಿಸುವ, ಅತ್ಯುಪಯುಕ್ತವಾದ ಮುನ್ನುಡಿಯನ್ನು ಬರೆದು ಅನುಗ್ರಹಿಸಿದ್ದಾರೆ. ಶ್ರೀ ಶ್ರೀಗಳವರ ಆಶೀರ್ವಾದ ಬಲದಿಂದಲೇ ಆರಂಭಿಸಿದ ಈ ಗ್ರಂಥಮಾಲಿಕೆಯು ಪೂರ್ಣವಾಗಲಿದೆ, ಎಂಬ ಭರವಸೆಯೂ ನನಗಿದೆ.

ಮೂಲಶ್ಲೋಕಗಳನ್ನು, ಸಂಸ್ಕೃತ ಗ್ರಂಥದಿಂದ, ಮುದ್ರಣದೋಷಗಳನ್ನು, ನನಗೆ ತಿಳಿದಮಟ್ಟಿಗೆ ತಿದ್ದಿಕೊಂಡು ಕನ್ನಡಲಿಪಿಯಲ್ಲಿ ಬರೆದಿದ್ದೇನೆ. ಪ್ರತಿಶ್ಲೋಕಕ್ಕೆ ಅನ್ವಯಾನುಸಾರ ಪದಶಃ ಅರ್ಥಗಳನ್ನು ಬರೆದಿದ್ದೇನೆ. ಪ್ರತಿಶ್ಲೋಕಗಳ ತಾತ್ಪರ್ಯವನ್ನು ಮಾತ್ರ ಓದಿ ಮುಂದೆ ಸಾಗಲಿಚ್ಛಿಸುವ ಓದುಗರಿಗೆ ಅನುಕೂಲಿಸುವಂತೆ, ತಾತ್ಪರ್ಯವನ್ನು ಬೇರ್ಪಡಿಸಿ ಮುದ್ರಿಸಲಾಗಿದೆ. ವಿಶೇಷ ವಿವರಣೆಗಳು ಅವಶ್ಯಕವೆನಿಸುವಲ್ಲಿ ಅಡಿಟಿಪ್ಪಣಿಗಳನ್ನೂ ರಚಿಸಿದ್ದೇನೆ. ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಲು ಸರ್ವಪ್ರಯತ್ನ ಮಾಡಿದ್ದೇನೆ. ಪ್ರತಿ ಅಧ್ಯಾಯದಲ್ಲಿ ಪ್ರಸಕ್ತವಾಗುವ ಪ್ರಧಾನ ಪ್ರಮೇಯಗಳನ್ನು ಸೂಚಿಸಿ, ಓದುಗರಿಗೆ ಗ್ರಂಥವಾಲೋಕನದ ಕುತೂಹಲವನ್ನು ಹೆಚ್ಚಿಸುವಂತೆ ಸ್ವಲ್ಪ ವಿಸ್ತಾರವಾಗಿಯೇ, ವಿಷಯಸೂಚಿಯನ್ನು ರಚಿಸಿ, ಜೋಡಿಸಿದ್ದೇನೆ. ಗ್ರಾಹಕರು ಹಂಸಕ್ಷೀರ ನ್ಯಾಯದಿಂದ ಗುಣವನ್ನು ಮಾತ್ರ ಗ್ರಹಿಸಿ ಸಂತೋಷಿಸಬೇಕೆಂದು, ಪ್ರಾರ್ಥಿಸುತ್ತೇನೆ. ಈ ನನ್ನ ಅಲ್ಪ ಸೇವೆಯನ್ನು ಭಕ್ತಪ್ರಿಯನಾದ ಶ್ರೀಕೃಷ್ಣಪ್ರಭು ಸ್ವೀಕರಿಸಿ ಪ್ರೀತನಾಗಲೆಂದು ದೀನನಾಗಿ ಆತನಲ್ಲಿ ಯಾಚಿಸುತ್ತೇನೆ.

ವಿಷಯಸೂಚಿಯನ್ನು ರಚಿಸುವುದರಲ್ಲಿ ಹಾಗೂ ಒಪ್ಪೋಲೆಯನ್ನು ಸಿದ್ಧಗೊಳಿಸುವುದರಲ್ಲಿ ನನಗೆ ಸಹಾಯಕರಾಗಿ ನಿಂತು ದುಡಿಯುತ್ತಿರುವ ನನ್ನ ಮಾನ್ಯ ಮಿತ್ರರಾದ ಶ್ರೀ ಎಚ್. ವೆಂಕೋಬಾಚಾರ್ಯ, ಬಿ.ಎ., ಎಲ್‌ಎಲ್.ಬಿ. ಇವರನ್ನು ಅಭಿನಂದಿಸಿ ವಂದಿಸುತ್ತೇನೆ. ಸ್ವಂತ ಕಾರ್ಯವೆಂಬಷ್ಟು ಆದರ ವಿಶ್ವಾಸಗಳಿಂದ, ಬಹು ಎಚ್ಚರಿಕೆವಹಿಸಿ, ಹಸ್ತಪ್ರತಿಯನ್ನು ಪರಿಶೀಲಿಸಿ, ಕೆಲಸಗಾರರಿಗೆ ಯೋಗ್ಯಸೂಚನೆಗಳನ್ನಿತ್ತು, ಪ್ರಥಮ ಮುದ್ರಿತ ಪ್ರತಿಗಳನ್ನು ತಿದ್ದಿ ಸರಿಪಡಿಸಿ, ತಪ್ಪುಗಳಿಗೆ ಅವಕಾಶವಿಲ್ಲದಂತೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುದ್ರಣ ಕಾರ್ಯಗಳನ್ನು ನಿರ್ವಹಿಸಿ ಸಕಾಲದಲ್ಲಿ ಗ್ರಂಥಮಾಲಿಕೆಯ ಸಂಪುಟಗಳನ್ನು ಸಿದ್ಧಗೊಳಿಸಿಕೊಡುವ ಜವಾಬ್ದಾರಿಯನ್ನು ಸಂತೋಷದಿಂದ ವಹಿಸಿಕೊಂಡು, ಶುದ್ಧವೂ, ಸುಂದರವೂ ಆದ ರೀತಿಯಲ್ಲಿ ಸಾಧಿಸುತ್ತಿರುವ, ಸಂಘದ ಅಧಿಕಾರಿವರ್ಗದವರೊಂದಿಗೆ ಬಹುಪರಿಯಿಂದ ಸಹಕರಿಸುತ್ತಿರುವ, ಪ್ರಭಾ ಮುದ್ರಣಾಲಯದ ಮಾಲಕ ಶ್ರೀ ಡಿ. ಎಸ್. ಕೃಷ್ಣಾಚಾರ್ಯ, ಎಂ.ಎಸ್‌ಸಿ. ಇವರಿಗೆ, ಬಹುಭಾಗದ ಶ್ರಮವನ್ನು ತಾವೇ ವಹಿಸಿಕೊಂಡು ನನಗೆ ಸಹಾಯ ಮಾಡುತ್ತಿರುವುದನ್ನು, ಕೃತಜ್ಞತೆಯಿಂದ ಸ್ಮರಿಸಿ, ಅನಂತ ವಂದನೆಗಳನ್ನು ಅರ್ಪಿಸುತ್ತೇನೆ. ಜ್ಞಾನಪ್ರಚಾರರೂಪದ ಈ ಮಹಾಸೇವೆಯಲ್ಲಿ ನನಗೂ ಭಾಗವನ್ನಿತ್ತು, ತಮ್ಮೊಂದಿಗೆ ಪುಣ್ಯಭಾಗಿಯನ್ನಾಗಿಸುತ್ತಿರುವ ಶ್ರೀ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಕೃತಜ್ಞನಾಗಿ ವಂದಿಸುತ್ತೇನೆ. ಎಲ್ಲಕ್ಕಿಂತ ಅಧಿಕವಾಗಿ, ಈ ಪುರಾಣವನ್ನು ಕನ್ನಡದಲ್ಲಿ ಅನುವಾದಿಸುವ ಈ ನನ್ನ ಇಚ್ಛೆಗೆ ತಮ್ಮ ಅನುಮತಿ ಪ್ರದಾನದಿಂದ ಬೆಂಬಲವನ್ನಿತ್ತು, ಸಂತೋಷದಿಂದ ಮುನ್ನುಡಿಯನ್ನು ರಚಿಸಿಕೊಟ್ಟು ಆಶೀರ್ವದಿಸಿರುವ ಶ್ರೀ ೧೦೮ ಶ್ರೀ ವಿಶ್ವೇಶತೀರ್ಥರನ್ನು, ಕೃತಜ್ಞನಾಗಿ ಕೈಜೋಡಿಸಿ ವಂದಿಸಿ, ಅನಂತ ಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಈ ಗ್ರಂಥ ಮಾಲಿಕೆಯ ಗ್ರಾಹಕರೆಲ್ಲರೂ ಓದಿ ಸಂತೋಷಿಸಿ, ಯಥಾಯೋಗ್ಯವಾದ ಭಕ್ತಿಜ್ಞಾನಾಭಿವೃದ್ಧಿಯನ್ನು ಹೊಂದಿದರೆ ನಾನು ಧನ್ಯ. ಹಾಗಾಗಲೆಂದು ಶ್ರೀಹರಿವಾಯುಗಳಲ್ಲಿ ಪ್ರಾರ್ಥಿಸುತ್ತೇನೆ. ನನ್ನಿಂದ, ತತ್ವಾಭಿಮಾನಿಗಳ ದ್ವಾರಾ, ಶ್ರೀಹರಿಯೇ ನನ್ನಲ್ಲಿ ನಿಂತು ಮಾಡಿಸಿರುವ, ಈ ಸೇವೆಯನ್ನು, ನನ್ನ ಆತ್ಮೋದ್ಧಾರಕ ಗುರುಗಳಾದ ಶ್ರೀ ಶ್ರೀ ಪುತ್ತಿಕಾ ಮಠಾಧೀಶ ಶತಾಯುಷಿ ಶ್ರೀ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರ ದ್ವಾರಾ, ಶ್ರೀಕೃಷ್ಣನಲ್ಲಿ ಅರ್ಪಿಸಿದ್ದೇನೆ—ಸುಪ್ರೀತನಾಗಿ ಈ ಮುಂದಿನ ವರವನ್ನು ನನಗೆ ಅನುಗ್ರಹಿಸಲಿ—

‘ ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ । ’

ಶ್ರೀಕೃಷ್ಣಾರ್ಪಣಮಸ್ತು

ಹರಿಭಕ್ತ ಸೇವಕ
ಬಿ. ಭೀಮರಾವ್
ದಾವಣಗೆರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನ್ನುಡಿ

ವಿಷ್ಣುವಿನ ಮಹಿಮೆಯನ್ನು ಸ್ಪಷ್ಟ ಭಾಷೆಯಲ್ಲಿ ಪ್ರತಿಪಾದಿಸಿ ಅವರವರ ಅಧಿಕಾರಕ್ಕನುಗುಣವಾಗಿ ಪ್ರತಿಯೊಬ್ಬರು ಮಾಡಬೇಕಾದ ಕರ್ತವ್ಯಗಳ ವಿಶದ ವಿವರಣೆಯನ್ನು ನೀಡುವ ವಿಷ್ಣುರಹಸ್ಯ ಗ್ರಂಥವನ್ನು ವೈಷ್ಣವರ ಕೈಪಿಡಿಯೆಂದೇ ಹೇಳಬಹುದು. ಶ್ರೀಮದಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತದ ಪ್ರಮೇಯಗಳಿಗೆಲ್ಲಾ ಸ್ಪಷ್ಟ ಸಮರ್ಥನೆಯನ್ನು ಈ ಗ್ರಂಥದಲ್ಲಿ ನಾವು ಕಾಣಬಹುದು. ಇದನ್ನು ಸರಿಯಾಗಿ ಅಭ್ಯಾಸ ಮಾಡುವುದರಿಂದ ನಮ್ಮ ಮುಂದಿರುವ ಅನೇಕ ಪ್ರಶ್ನೆ ಸಮಸ್ಯೆಗಳಿಗೆ ಸೂಕ್ತ ಪರಿಹಾರವು ಒದಗಿ ವಿವಿಧ ಅಕೃತ್ಯಗಳು ನಮ್ಮಿಂದ ಘಟಿಸಿದ್ದರೂ ನಿರಾಶರಾಗದೆ ಹೇಗೆ ಆತ್ಮೋನ್ನತಿಯನ್ನು ಸಾಧಿಸಿ ಭಗವದನುಗ್ರಹವನ್ನು ಹೊಂದಬಹುದೆನ್ನುವ ಬಗ್ಗೆ ಸಮರ್ಥ ಮಾರ್ಗದರ್ಶನವನ್ನು ಈ ಗ್ರಂಥದಿಂದ ನಾವು ಪಡೆಯಬಹುದು. ಹೀಗೆ ಸಜ್ಜನರಿಗೆ ಅತ್ಯಂತ ಉಪಕಾರಕವಾದ ಉತ್ತಮ ವೈಷ್ಣವ ಗ್ರಂಥವಿದಾಗಿದೆ.

ಮಾನವ ದೇಹವು ಭಗವಂತನ ಸರ್ವಾಂಗಪೂರ್ಣವಾದ ಒಂದು ಅಪೂರ್ವ ಕೊಡುಗೆಯಾಗಿದೆ. ಸೃಷ್ಟಿಯ ಆದಿಯಲ್ಲಿ ಪರಮಾತ್ಮನಿಂದ ಉದ್ಬೋಧಿತರಾದ ತತ್ವಾಭಿಮಾನಿ ದೇವತೆಗಳು ತಮಗೆ ವಾಸಯೋಗ್ಯವೂ ಉತ್ತಮ ಕಾರ್ಯಕ್ಷೇತ್ರವೂ ಆದ ಸ್ಥಾನವನ್ನು ಶ್ರೀಹರಿಯಲ್ಲಿ ಪ್ರಾರ್ಥಿಸಿದರು. ಭಗವಂತನು ಮೃಗ, ಪಕ್ಷಿ, ಮರ, ಗಿಡಗಳ ನಾನಾ ಶರೀರಗಳನ್ನು ದೇವತೆಗಳಿಗೆ ತೋರಿಸಿದನು.

ತೃಣಗುಲ್ಮಲತಾವೃಕ್ಷಾನ್ ಗ್ರಾಮ್ಯಾರಣ್ಯಪಶೂನಪಿ ।
ಕ್ರಮೇಣಾದರ್ಶಯಂಸ್ತಾಂಸ್ತೇ ಸ್ಥಿತಾ ತೃಪ್ತಿಂ ನ-ಭೇಜಿರೇ ॥

ಈ ನಾನಾ ಪ್ರಾಣಿಗಳ ಶರೀರವನ್ನು ಪಡೆದರೂ ದೇವತೆಗಳಿಗೆ ಸಮಾಧಾನವಾಗಲಿಲ್ಲ. ಅಲ್ಪ ಅಪೂರ್ಣ ಐಂದ್ರಿಯಿಕ ಸುಖಸೇವನೆಗೆ ಮಾತ್ರ ಮೀಸಲಾದ ಈ ತಿರ್ಯಕ್ ಪ್ರಾಣಿಗಳ ಶರೀರಗಳಲ್ಲಿ ಜೀವರ ಆಧ್ಯಾತ್ಮಿಕ ಸಾಧನೆಗಳಿಗೆ ಯಾವ ಸೌಕರ್ಯವಿಲ್ಲದನ್ನು ಮನಗಂಡ ದೇವತೆಗಳು ಭಗವಂತನು ತೋರಿಸಿದ ಯಾವ ಶರೀರಗಳಿಂದಲೂ ತೃಪ್ತರಾಗಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊನೆಗೆ ಮಾನವ ದೇಹವನ್ನು ಕಂಡಾಗಲೇ ದೇವತೆಗಳಿಗೆ ಸಮಾಧಾನವಾಯಿತು. ಸರ್ವಾಂಗ ಸುಂದರವಾದ ಈ ಸಾಧನ ಶರೀರದಿಂದ ಜೀವರ ಆತ್ಮೋನ್ನತಿಯ ಕಾರ್ಯವನ್ನು ಸಾಧಿಸಬಹುದೆಂದು ದೇವತೆಗಳು ಭಾವಿಸಿದರು. ದೇವತೆಗಳ ಈ ಆಶೋತ್ತರಗಳಿಗೆ ಅನುಗುಣವಾಗಿ ಮಾನವರು ಕಾರ್ಯವನ್ನು ನಡೆಸುತ್ತಿದ್ದಾರೆಯೇ ಎಂಬುದನ್ನು ನಾವಿಂದು ಆಲೋಚಿಸಬೇಕಾಗಿದೆ. ದೇವತೆಗಳ ವಾಸಯೋಗ್ಯವೆನಿಸಿ ಅವರು ತಮ್ಮ ವಿಹಾರಕ್ಕಾಗಿ ಆರಿಸಿದ ಈ ಪವಿತ್ರ ಸಾಧನ ಕೇಂದ್ರವನ್ನು ನಮ್ಮ ಪಾಪಕೃತ್ಯಗಳಿಂದ ಹೊಲಸು ತುಂಬಿ ನಾರುವ ಕೊಳಚೆ ಭೂಮಿಯನ್ನಾಗಿಸಿ ದೇವತೆಗಳಿಗೆ ಅದೆಂತಹ ಆಘಾತ ಅಸಮಾಧಾನವನ್ನು ನಾವು ಮಾಡಿಲ್ಲ? ದೇವತೆಗಳ ಬದಲು ಅಸುರರ ಅರ್ಭಟ ಕಾರುಬಾರುಗಳೇ ಇಲ್ಲಿ ನಡೆದಿವೆ. ವಿಷ್ಣುರಹಸ್ಯದಲ್ಲಿ ವರ್ಣಿಸಿದ ಮಾನವ ಶರೀರ ನಿರ್ಮಾಣದ ಈ ಹಿನ್ನೆಲೆಯನ್ನೂ ಓದಿದಾಗ ನಮ್ಮ ಕರ್ತವ್ಯ ಮತ್ತು ಹೊಣೆಗಾರಿಕೆಯ ಅರಿವು ನಮಗೆ ಉಂಟಾಗದಿರದು.

ಈ ಸೃಷ್ಟಿ ಮಾನವ ಶರೀರ ಇವೆಲ್ಲಾ ಭಗವಂತನ ಕಾರುಣ್ಯದ ಉಜ್ವಲ ನಿದರ್ಶನವಾಗಿದೆ. ಈ ಸೃಷ್ಟಿಯಿಂದ ಭಗವಂತನಿಗೆ ಯಾವ ಪ್ರಯೋಜನ ಲಾಭವು ಇಲ್ಲ. ನಿತ್ಯತೃಪ್ತನೂ ಪರಿಪೂರ್ಣನೂ ಆದ ಪರಮಾತ್ಮನು ತನ್ನ ಯಾವ ಸ್ವಾರ್ಥಸಾಧನೆಗಾಗಿ ಸೃಷ್ಟಿಕಾರ್ಯಕ್ಕೆ ಪ್ರವರ್ತಿಸಲಿ? ಪ್ರಯೋಜನವಿಲ್ಲದಿದ್ದರೂ ವಿಧಿ ಸಂಬಂಧಗಳಿಗೆ ಒಳಗಾಗಿ ನಾವಾದರೂ ಕಾರ್ಯಪ್ರವೃತ್ತರಾಗಬಹುದು. ಆದರೆ ಯಾವುದೇ ವಿಧಿ ನಿಯಮ ಬಂಧನಗಳಿಗೆ ಒಳಗಾಗದ ಭಗವಂತನು ನಿರ್ವ್ಯಾಪಾರನಾಗಿ ಜಗದ್ವ್ಯವಹಾರವನ್ನು ಸ್ಥಗಿತಗೊಳಿಸಿ ಸುಮ್ಮನಿದ್ದರೆ ಯಾರೂ ಅವನನ್ನು ಆಕ್ಷೇಪಿಸಲಾರರು. ಇದರಿಂದ ಅವನಿಗೆ ಯಾವ ಪ್ರಯೋಜನ ಹಾನಿಯೂ ಒದಗದು. ಆದರೆ ಭಗವಂತನು ಒಂದು ಕ್ಷಣವೂ ನಿಷ್ಕ್ರಿಯನಾಗಿಲ್ಲ. ಯಾವ ಸ್ವಾರ್ಥವೂ ಇಲ್ಲದೆ ಪ್ರತಿಕ್ಷಣವೂ ಅಖಂಡ ಕಾರ್ಯತತ್ಪರನಾಗಿರುವನು. ಇದಕ್ಕೆಲ್ಲಾ ಅವನ ಸಹಜವಾದ ದಯಾಭಾವವೇ ಕಾರಣವಾಗಿದೆ.

ಇತಿ ತೇಷಾಂ ತು ಕಾರುಣ್ಯಾತ್ ದಯಾಲುರ್ಭಗವಾನಿದಂ ।
ಸೃಷ್ಟ್ಯಾದಿ ಕುರುತೇ ಸರ್ವಂ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನಾದಿ ಕರ್ಮಗಳಿಂದ ಬದ್ಧರಾಗಿ ಜೀವರು ತಮ್ಮದೇ ಆದ ಆನಂದ-ಮಯ ವ್ಯಕ್ತಿತ್ವವನ್ನು ಅನುಭವಿಸದಂತಹ ದುರ್ದಶೆಗೆ ಒಳಗಾಗಿದ್ದಾರೆ. ಜ್ಞಾನಾನಂದಮಯವಾದ ರೂಪವು ಇದ್ದೂ ಅವರ ಪಾಲಿಗೆ ಇಲ್ಲದಂತಾಗಿದೆ. ಈ ಸ್ಥೂಲಶರೀರವನ್ನು ಹೊಂದಿ ನಾನಾ ವಿಧ ಸಾಧನ ಕಲಾಪವನ್ನು ನಡೆಸಿದರೆ ಮಾತ್ರ ತಮ್ಮ ಸ್ವಚ್ಛ ಸುಂದರ ರೂಪವನ್ನು ಅವರು ಅಭಿವ್ಯಕ್ತಗೊಳಿಸಬಲ್ಲರು. ಸಜ್ಜನ ಜೀವವರ್ಗದ ಈ ದುರ್ದಶೆಯನ್ನು ಕಂಡು ಮರುಗಿಯೇ ಭಗವಂತನು ಈ ಜಗತ್ತನ್ನು ಸೃಜಿಸಿ ಸಾಧನ ಶರೀರವನ್ನು ಅವರಿಗೆ ಒದಗಿಸಿದ್ದಾನೆ. ಯಾವ ವಿಧಿನಿಬಂಧವೂ ಪ್ರಯೋಜನ ಅಪೇಕ್ಷೆಯೂ ಇಲ್ಲದ ಭಗವಂತನು ನಿಷ್ಕ್ರಿಯನಾಗಿ ಕುಳಿತಿದ್ದರೆ ಜೀವರು ಅನಂತಕಾಲದವರೆಗೆ ಈ ಕತ್ತಲೆಯಲ್ಲಿ ಕೊಳೆಯಬೇಕಾಗುವುದು. ಜ್ಞಾನಾನಂದ ರೂಪಿಗಳಾದ ಈ ಸಚ್ಚೇತನರು ಸದಾಕಾಲ ಈ ದುಸ್ಥಿತಿಯಲ್ಲಿ ಇರುವುದನ್ನು ಕರುಣಾಮೂರ್ತಿಯಾದ ಭಗವಂತನು ಹೇಗೆ ಸಹಿಸಬಲ್ಲನು? ಅದಕ್ಕಾಗಿ ಈ ವಿಶಾಲ ಪ್ರಪಂಚ ಹಾಗೂ ವಿವಿಧ ಸಾಧನ ಶರೀರಗಳನ್ನು ಒದಗಿಸಿ ಸತ್ವರಜಸ್ತಮೋಗುಣಗಳ ನಿರಂತರ ಘರ್ಷಣವಿರುವ ಈ ಜಗತ್ತಿನಲ್ಲಿ ಹೋರಾಡಿ ತನ್ನ ಶುಭ್ರ ವ್ಯಕ್ತಿತ್ವವನ್ನು ಸಜ್ಜನರು ಪಡೆಯುವಂತೆ ಅನುಕೂಲವನ್ನು ಶ್ರೀಹರಿಯು ಕಲ್ಪಿಸಿದ್ದಾನೆ.

ಪರಮಾತ್ಮನು ಪರಮದಯಾಲುವಾದಲ್ಲಿ ಅವನು ಎಲ್ಲರಿಗೂ ಒಂದೇ ರೀತಿಯಲ್ಲಿ ಶುಭಫಲವನ್ನು ಯಾಕೆ ಕೊಡುವುದಿಲ್ಲ? ಕೆಲವರಿಗೆ ಸ್ವರ್ಗ ಮುಕ್ತಿಗಳನ್ನು ಕರುಣಿಸಿ ಮತ್ತೆ ಕೆಲವರನ್ನು ನರಕ ಅಂಧಂತಮಸ್ಸುಗಳಿಗೆ ಯಾಕೆ ತಳ್ಳುವನು? ಪರಮಾತ್ಮನಲ್ಲಿ ಈ ವೈಷಮ್ಯ ನಿರ್ದಯತೆಗಳು ಏಕೆ? ಎಂಬ ಪ್ರಶ್ನೆಯು ನಮ್ಮಲ್ಲಿ ಮೂಡಬಹುದು. ವಿಷ್ಣುರಹಸ್ಯದಲ್ಲಿ ಈ ಅಂಶವನ್ನು ವಿಮರ್ಶಿಸಲಾಗಿದೆ. ಪ್ರಜೆಗಳಲ್ಲಿ ಅನುರಾಗ ಅಭಿಮಾನಗಳಿಂದ ವರ್ತಿಸಬೇಕಾದ ಸರಕಾರವು ಅನೇಕ ಸಂದರ್ಭಗಳಲ್ಲಿ ಕೆಲವು ಪ್ರಜೆಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಿ ಅವರನ್ನು ನಿಗ್ರಹಿಸುವುದೇಕೆ? ಸರಕಾರವು ತಾನೇ ಏರ್ಪಡಿಸಿದ ನಿಯಮಗಳ ಕಕ್ಷೆಯೊಳಗೆ ಕೆಲಸ ಮಾಡಬೇಕಾಗುತ್ತದೆ. ಆ ನೀತಿ ನಿಯಮಗಳನ್ನು ಅತಿಕ್ರಮಿಸಿ ವರ್ತಿಸುವವರ ಮೇಲೆ ಕ್ರಮವನ್ನು ಕೈಗೊಳ್ಳಬೇಕಾಗುವುದು. ಭಗವಂತನು ಜೀವವರ್ಗದ ಆಡಳಿತವನ್ನು ಇದೇ ರೀತಿ ನಡೆಸುವನು. ಅವನು ಕಾರುಣ್ಯಮೂರ್ತಿಯಾದರೂ ಜಗತ್ತಿನ ಒಳಿತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಾಗಿ ತನ್ನ ಅನಾದಿ ಸತ್ಯಸಂಕಲ್ಪದಂತೆ ಏರ್ಪಡಿಸಲಾದ ಶಾಸನಗಳನ್ನು ಅಲಕ್ಷಿಸುವ ಅತಿಕ್ರಮಕಾರಿಗಳನ್ನು ಶಿಕ್ಷಿಸುತ್ತಾನೆ. ಅವನಲ್ಲಿ ಯಾವ ರಾಗ-ದ್ವೇಷಗಳೂ ಇಲ್ಲ. ಅಪೌರುಷೇಯವಾದ ವೇದವೇ ಶ್ರೀಹರಿಯು ಮಾನವ ಸಮಾಜಕ್ಕಾಗಿ ಏರ್ಪಡಿಸಿದ ಸಂವಿಧಾನ (constitution). ಅದೇ ಭಗವಂತನ ಆದೇಶ. ತಮ್ಮ ಸ್ವಭಾವ ಸಂಸ್ಕಾರಗಳ ಒತ್ತಡದಿಂದ ಭಗವಂತನ ಆದೇಶವನ್ನು ಉಲ್ಲಂಘಿಸಿ ಸ್ವಚ್ಛಂದ ಪಾಪಜೀವನವನ್ನು ನಡೆಸುವ ವ್ಯಕ್ತಿಗಳನ್ನು ಶಿಕ್ಷಿಸುವುದೂ ಅನಿವಾರ್ಯವೇ ಆಗಿದೆ. ಇದರಿಂದ ಅವನ ದಯಾ-ಮಯ ಉದಾರ ವ್ಯಕ್ತಿತ್ವಕ್ಕೆ ಯಾವ ಕುಂದೂ ಬರಲಾರದು. ಹೀಗೆ ಪರಮಾತ್ಮನು ನಮಗೆ ಸಾಧನ ಶರೀರವನ್ನು ನೀಡಿ ಜೊತೆಗೆ ನಮ್ಮ ಜೀವನ ವಿಧಾನ, ಹಾಗೂ ಕರ್ತವ್ಯದ ಬಗ್ಗೆ ಶ್ರುತಿಸ್ಮೃತಿಗಳೆಂಬ ಅಮರವಾದ ಸಂದೇಶವನ್ನು ದಯಪಾಲಿಸಿದ್ದಾನೆ.

ಶ್ರುತಿಸ್ಮೃತೀ ಮಮೈವಾಜ್ಞೇ ಕುರ್ಯಾತ್ತದನುಸಾರತಃ ।
ಸತ್ಕರ್ಮಾಣಿ ದದಾಮ್ಯಸ್ಮೈ ಫಲಂ ಕರ್ಮಾನುಸಾರತಃ ॥

ನಿಷಿದ್ಧಾನಿ ತು ಯಃ ಕುರ್ಯಾದಜ್ಞಾನಾದ್ಧಾರ್ಷ್ಟ್ಯತೋಽಪಿ ವಾ ।
ವಿಹಿತಂ ಚ ನ ಕುರ್ವೀತ ತಂ ಕುರ್ಯಾನ್ನರಕೇ ಸ್ಥಿತಂ ॥

ದೇವರ ಕಾರುಣ್ಯದ ಕೊಡುಗೆಯಾದ ಈ ಮಾನವ ಶರೀರ ಮತ್ತು ಶಾಸ್ತ್ರಸಂದೇಶ ಇವೆರಡರ ಸದುಪಯೋಗವನ್ನು ಸಾಧಿಸುವುದೇ ನಮ್ಮ ಜೀವನದ ಪ್ರಧಾನ ಲಕ್ಷ್ಯವಾಗಿರಬೇಕು.

ಇಂಥಹ ಅಪೂರ್ವ ಉದ್ಬೋಧಕ ವಿಚಾರಗಳನ್ನು ವಿಷ್ಣುರಹಸ್ಯ ಗ್ರಂಥದ ಪುಟ ಪುಟಗಳಲ್ಲಿ ನಾವು ಕಾಣಬಹುದು. ಸಜ್ಜನರು ವಿಷ್ಣುಭಕ್ತಿ ಹಾಗೂ ವೈಷ್ಣವ ದೀಕ್ಷೆಯಿಂದ ತಮ್ಮ ಸಮಗ್ರಜೀವನವನ್ನು ಹೇಗೆ ಪುನೀತ ಗೊಳಿಸಬೇಕೆಂಬುದನ್ನು ಬಹಳ ಸುಂದರವಾಗಿ ಈ ಗ್ರಂಥದಲ್ಲಿ ವಿವರಿಸಲಾಗಿದೆ. ದೀಕ್ಷೆಯು ಎರಡು ಪ್ರಕಾರವಾಗಿದ್ದು ಒಂದು ಅಂತರವಾಗಿದ್ದರೆ ಇನ್ನೊಂದು ಬಾಹ್ಯವಾಗಿದೆ. ಗೋಪೀಚಂದನಧಾರಣೆ ಮುದ್ರಾಂಕನ ಮೊದಲಾದುವು ಬಾಹ್ಯದೀಕ್ಷೆಯಾಗಿದ್ದರೆ ನಾನು ಶ್ರೀಹರಿಯ ಸೇವಕನೆಂಬ ನಿರಂತರ ಸುದೃಢ ಜ್ಞಾನವೇ ಆಂತರಿಕ ದೀಕ್ಷೆಯಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಯಂ ಸರ್ವೇಷ್ಟದಾತಾ ಮೇ ಸರ್ವಾನಿಷ್ಟನಿವಾರಕಃ ।
ಸರ್ವೋತ್ಕೃಷ್ಟೋಽಯಮೇವೈಕಸ್ತದೀಯೋಽಹಂ ಸ ಮೇ ಪತಿಃ ॥

ಶ್ರೀವಿಷ್ಣುವೇ ಸರ್ವೋತ್ತಮನು, ಅವನೇ ಸ್ವಾಮಿಯು, ಅವನು ನನ್ನ ಸರ್ವ ಅನಿಷ್ಟವನ್ನು ನಿವೃತ್ತಿಗೊಳಿಸಿ ಸಕಲೇಷ್ಟಗಳನ್ನೂ ನೀಡುವವನು. ನಾನು ಎಂದೆಂದಿಗೂ ಅವನವನು. ಎಂಥಹ ಸುಂದರ ಭಾವನೆಯು ಈ ಶ್ಲೋಕದಲ್ಲಿ ಮೂಡಿದೆ! ಇದೇ ಅಂತರಂಗ ದೀಕ್ಷೆ ಎನಿಸುವುದು. ಇಂದು ಈ ಅಂತರ ದೀಕ್ಷೆಯು ಎಲ್ಲೆಲ್ಲೂ ಶಿಥಿಲವಾಗಿ ಸ್ವಾರ್ಥ ಅಹಂಕಾರಗಳೇ ಹೆಡೆ ಎತ್ತಿವೆ. ಬಾಹ್ಯದೀಕ್ಷೆಯಂತೂ ಶೂನ್ಯವೇ ಆಗಿದೆ. ಇದ್ದರೂ ಕೆಲವೆಡೆ ಅವು ಡಾಂಬಿಕ ಪ್ರದರ್ಶನದ ರೂಪವನ್ನು ತಾಳಿದೆ. ಈ ಗ್ರಂಥವನ್ನು ಓದಿದರೆ ವೈಷ್ಣವ ಜೀವನದ ಶುದ್ಧ ಆದರ್ಶವು ನಮ್ಮ ಕಣ್ಮುಂದೆ ನಿಂತು ನಮ್ಮ ಕರ್ತವ್ಯದ ಸ್ಮರಣೆ ಆಗುವುದರಲ್ಲಿ ಸಂದೇಹವಿಲ್ಲ. ಯಾವ ಜಾತಿಯವರೇ ಆಗಿರಲಿ, ಪತಿತರೇ ಆಗಿರಲಿ, ಎಲ್ಲರೂ ವಿಷ್ಣು ಭಕ್ತರಾಗಿ ಪುನೀತರಾಗಲು ಅವಕಾಶವನ್ನು ಈ ಗ್ರಂಥದಲ್ಲಿ ಕಾಣಬಹುದು. ಅನುಲೋಮರು, ಪ್ರತಿಲೋಮರು, ಪತಿತರೂ, ಸಕಲಜಾತಿಯವರೂ ತಮ್ಮ ಮಟ್ಟಕ್ಕೆ ಅನುಸಾರವಾಗಿ ವಿಷ್ಣುಭಕ್ತಿ ಹಾಗೂ ವೈಷ್ಣವ ದೀಕ್ಷೆಯನ್ನು ಹೊಂದಿ ಶ್ರೇಯಸ್ಸನ್ನೂ ಪಡೆಯಬಹುದೆಂಬುದನ್ನು ಇಲ್ಲಿ ವರ್ಣಿಸಲಾಗಿದೆ.

ಇಂತಹ ವಿಷ್ಣುಭಕ್ತಿಪ್ರಚೋದಕವೂ ಅಪೂರ್ವ ಪ್ರಮೇಯಾರ್ಥಗಳ ಕೈಗನ್ನಡಿಯೂ ಆಗಿರುವ ಈ ಗ್ರಂಥವನ್ನು ಸರಳವಾಗಿ ಕನ್ನಡಿಸಿ ಶ್ರೀ ಬಿ. ಭೀಮರಾಯರು ವೈಷ್ಣವ ಜನರಿಗೆ ಪರಮೋಪಕಾರವನ್ನು ಮಾಡಿರುವರು. ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ಅನುವಾದಿಸಿ ಶ್ರೀ ಭೀಮರಾಯರು ಈಗಾಗಲೇ ಸಜ್ಜನವೃಂದಕ್ಕೆ ಅಪೂರ್ವ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಈ ಸೇವೆಯನ್ನು ಮಾಧ್ವ ಸಮಾಜವು ಎಂದೆಂದಿಗೂ ಮರೆಯದು. ಅವರು ಹರಿವಾಯುಗಳಿಗೆ ಅರ್ಪಿಸಿರುವ ಕೃತಿರತ್ನಗಳ ಮಾಲೆಯಲ್ಲಿ ವರ್ಷ ವರ್ಷವೂ ಹೊಸ ಹೊಸ ರತ್ನಗಳು ಸೇರ್ಪಡೆಯಾಗುತ್ತಲೇ ಇವೆ. ಆ ಮಾಲೆಯ ಉತ್ತಮ ರತ್ನಗಳಲ್ಲಿ ಈ ಗ್ರಂಥವು ಒಂದಾಗಿದೆ. ಶ್ರೀ ಭೀಮರಾಯರು ಅರ್ಪಿಸಿರುವ ಈ ಜ್ಞಾನ ನೈವೇದ್ಯದಿಂದ ಹರಿವಾಯುಗಳು ಪೂರ್ಣ ಪ್ರಸನ್ನರಾಗಿದ್ದಾರೆ. ವರ್ಷವರ್ಷವೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಪಿಸಲಾಗುತ್ತಿರುವ ಈ ಜ್ಞಾನನೈವೇದ್ಯದ ಆಕರ್ಷಣೆಗೆ ಒಳಗಾದ ಶ್ರೀಕೃಷ್ಣನು ಶ್ರೀ ಭೀಮರಾಯರಿಗೆ ದೀರ್ಘಾಯುಷ್ಯಪೂರ್ಣಾರೋಗ್ಯಗಳನ್ನು ನೀಡಿ ಇನ್ನೂ ಬಹುಕಾಲದವರೆಗೆ ಪ್ರತಿ ವರ್ಷ ಇಂಥಹ ಜ್ಞಾನ ಕಾಣಿಕೆಗಳನ್ನು ಸ್ವೀಕರಿಸುವನೆಂದು ನಂಬಿದ್ದೇವೆ.

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ವಿಷ್ಣುರಹಸ್ಯ

ಸಂಪುಟ ೧—ವಿಷಯಸೂಚಿ

ಅಧ್ಯಾಯ ೧. ವಿಷ್ಣುಕ್ರೀಡನ. ಶ್ಲೋಕಸಂಖ್ಯಾ ೪೫

ಮಂಗಲಾಚರಣೆ—ನೈಮಿಷ ಕ್ಷೇತ್ರ ಮಹಿಮೆ—ಈ ಪುರಾಣದ ಪರಂಪರಾಗತಿ; ಪ್ರಲಯಕಾಲದ ಕಡೆಯ ಅಷ್ಟಮಾಂಶದಲ್ಲಿ ಶ್ರೀವಿಷ್ಣುಲೀಲೆ; ವಾಸುದೇವಾದಿ ನಾಲ್ಕು ರೂಪಗಳು—ರಮಾದೇವಿಯ ಮಾಯಾದಿ ನಾಲ್ಕು ರೂಪಗಳೊಡನೆ ವಿಹಾರ; ಮುಕ್ತರೊಡನೆ ರಮಾನಾರಾಯಣರ ವಿವಿಧ ವಿಚಿತ್ರ ಕ್ರೀಡೆ; ಪ್ರಲಯಕಾಲದ ಅಂತ್ಯದಿನಕಲ್ಪದವರೆಗೆ ನಡೆಯುವ ಈ ಅದ್ಭುತ ಕ್ರೀಡೆಯ ನಿತ್ಯಸ್ಮರಣ ಫಲ. ಪುಟ ೧—೨೫

ಅಧ್ಯಾಯ ೨. ಬ್ರಹ್ಮೋತ್ಪತ್ತಿ. ಶ್ಲೋಕಸಂಖ್ಯಾ ೬೩

ಬ್ರಹ್ಮದೇವನ ' ಪರ 'ನಾಮಕ ಆಯುಷ್ಯದ ಪರಿಮಿತಿ–ಕಾಲಗಣನೆ; ದಿನಕಲ್ಪ–ಮನ್ವಂತರ–ಯುಗಗಳು—ಸಂಧಿಕಾಲಗಳು; ಮಹದಾದಿ ತತ್ವಗಳ ಸೃಷ್ಟಿ—ಸೃಷ್ಟಿಕಾರ್ಯದಲ್ಲಿ ರಮಾದೇವಿಯ ಪಾತ್ರ; ಸೃಜ್ಯರಾದ ಜೀವರಿಗಾಗಿ, ಸೂಕ್ಷ್ಮತತ್ವಗಳಿಂದ ಪಶುಪಕ್ಷ್ಯಾದಿ ನಾನಾ ದೇಹಗಳ ಸೃಷ್ಟಿ; ತಾತ್ವಿಕ ದೇವತೆಗಳ ಸೂಕ್ಷ್ಮ ಸೃಷ್ಟಿ; ಪುರುಷದೇಹದ ಸೃಷ್ಟಿ; ದೇವತೆಗಳು ಆವಾಸಸ್ಥಾನಕ್ಕಾಗಿ ಪ್ರಾರ್ಥಿಸುವುದು—ನಾನಾ ದೇಹಗಳನ್ನು ಒಪ್ಪದೇ, ಪುರುಷದೇಹವನ್ನು ಅಂಗೀಕರಿಸಿದುದು; ತತ್ವದೇವತೆಗಳೊಂದಿಗೆ ಸಮಸ್ತ ಸೃಜ್ಯಜೀವರನ್ನು ಪುರುಷದೇಹದಲ್ಲಿ ಪ್ರವೇಶಿಸಿ, ಅದನ್ನು ಶ್ರೀ ವಾಸುದೇವನು ನುಂಗುವುದು; ಮಾಯಾದೇವಿಯಲ್ಲಿ ಬ್ರಹ್ಮದೇವನನ್ನು ಉತ್ಪಾದಿಸಿದುದು—ಶ್ರೀ ಸಂಕರ್ಷಣನು ಜಯಾನಾಮಕ ರಮೆಯಲ್ಲಿ, ಸೂತ್ರನನ್ನು (ವಾಯುದೇವನನ್ನೂ), ಶ್ರೀ ಪ್ರದ್ಯುಮ್ನನು ಕೃತೀದೇವಿಯಲ್ಲಿ (ರಮೆಯಲ್ಲಿ) ವಾಣೀ-ಭಾರತೀದೇವಿಯರನ್ನೂ ಸೃಷ್ಟಿಮಾಡಿದುದು ಪುಟ ೨೬—೫೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ೩. ವೇದವಿದ್ಯೋಪದೇಶ. ಶ್ಲೋಕಸಂಖ್ಯಾ ೪೪

ಜಗತ್ಸೃಷ್ಟ್ಯಾದಿಗಳಿಗೆ ಅವಶ್ಯಕವಾದ ಸರ್ವಜ್ಞತ್ವವನ್ನು ಪಡೆಯುವುದಕ್ಕಾಗಿ, ಬ್ರಹ್ಮದೇವನು, ಹರಿಧ್ಯಾನಪರನಾದುದು ; ಶ್ರೀಹರಿಯು ಹಯಗ್ರೀವರೂಪದಿಂದ ಪ್ರತ್ಯಕ್ಷನಾಗಿ, ಬ್ರಹ್ಮನಿಗೆ ವೇದವೇದಾಂಗಾದಿ ಸರ್ವವಿದ್ಯೆಗಳನ್ನು ಉಪದೇಶಿಸಿದುದು ; ಸ್ವಯೋಗ್ಯಪೂರ್ಣಜ್ಞಾನವು ಶ್ರೀವಿಷ್ಣುವಿನ ವಿಶೇಷಾನುಗ್ರಹವಿಲ್ಲದೇ ದೊರೆಯದು—ಈ ತತ್ವದ ನಿದರ್ಶನಾರ್ಥ ಶ್ರೀವಿಷ್ಣುವು ಬ್ರಹ್ಮ–ವಾಣೀ, ಸೂತ್ರ–ಭಾರತಿಯರಲ್ಲಿ ತತ್ತನ್ನಾಮಕರೂಪ ವಿಶೇಷಗಳಿಂದ ಪ್ರವೇಶಿಸಿ, ಜ್ಞಾನಸಾಮರ್ಥ್ಯವನ್ನಿತ್ತುದು ; ನಂತರ ಸರ್ವನಾಮತ್ವ, ಸರ್ವಾಂತರ್ಯಾಮಿತ್ವ ಸರ್ವವೇದ ಪರಮಮುಖ್ಯಪ್ರತಿಪಾದ್ಯತ್ವಾದಿ ಮಹಾರಹಸ್ಯಗಳ ಉಪದೇಶ ; ಅವಶಿಷ್ಟರಹಸ್ಯಗಳ ಉಪದೇಶದಿಂದ ಮನಸ್ಸಿನ ಅತೃಪ್ತಿಯನ್ನು ಪರಿಹರಿಸಲು, ಬ್ರಹ್ಮದೇವನ ಪ್ರಾರ್ಥನೆ.

ಪುಟ ೫೫–೮೦

ಅಧ್ಯಾಯ ೪. ಮಾಯಾಚರಿತ್ರಕಥನ. ಶ್ಲೋಕಸಂಖ್ಯಾ ೫೦

ವಿಷ್ಣ್ವಾದಿ ನಾಮ ನಿರ್ವಚನ—ಅದರಿಂದ ಸಿದ್ಧವಾಗುವ ಬಹುಮಹಿಮೆಗಳ ನಿರೂಪಣೆ ; ಲೋಕಾನುಭವಗಳಿಂದ ಸಹ ಸಿದ್ಧವಾಗುವ ಶ್ರೀವಿಷ್ಣುಮಾಯಾ (ಶಕ್ತಿಯ) ವೈಭವದ ವರ್ಣನೆ ; ಶ್ರೀವಿಷ್ಣುವೇ ಸರ್ವವಿದ್ಯಾಪ್ರವರ್ತಕ—ಆತನೇ ಮುಖ್ಯ ಜಗದ್ಗುರು ; ಶ್ರೀವಿಷ್ಣುಮಹಿಮೆಗಳ ಶ್ರವಣ, ಮನನಾದಿಗಳಿಂದ ಆತನ ಸಾಕ್ಷಾದ್ದರ್ಶನ ಲಾಭ—ಪ್ರಾರಬ್ಧ ಭೋಗಾನಂತರ ಮೋಕ್ಷ.

ಪುಟ ೮೦–೧೦೨

ಅಧ್ಯಾಯ ೫. ಸೃಷ್ಟ್ಯಾದಿಕಾರಣಕಥನ. ಶ್ಲೋಕಸಂಖ್ಯಾ ೧೭

ಪೂರ್ಣಾನಂದನಾದರೂ ಶ್ರೀವಿಷ್ಣುವು ಸೃಷ್ಟ್ಯಾದಿಗಳಲ್ಲಿ ತೊಡಗುವುದು ಯುಕ್ತವಾಗುತ್ತದೆ ; ಆನಂದದಿಂದಲೇ ಪ್ರವೃತ್ತಿ — ಆನಂದದ ಲೇಶಾಂಶದಿಂದ ಜಗತ್ತಿನ ಸೃಷ್ಟ್ಯಾದಿ ಸರ್ವವೂ ಸಾಧ್ಯ ; ದಯಾಸಮುದ್ರನಾದ್ದರಿಂದ ಜೀವರ ಪ್ರಯೋಜನಕ್ಕಾಗಿ—ಅವರವರ ಗತಿಗಳನ್ನು ಹೊಂದಿಸಲು ಜಗತ್ತಿನ ಸರ್ವಕರ್ತನಾಗಿ ಪ್ರವರ್ತಿಸುವನು. ಪುಟ ೧೦೩–೧೧೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ೬. ಸ್ವಾತಂತ್ರ್ಯೋಪಪಾದನ. ಶ್ಲೋಕಸಂಖ್ಯಾ ೨೭

ಜೀವರಿಗೆ ಭಿನ್ನಭಿನ್ನ ಗತಿಗಳನ್ನು ಕೊಡುವುದರಿಂದ ಶ್ರೀವಿಷ್ಣುವು ವೈಷಮ್ಯಾದಿ ದೋಷಿಯೆಂದು ತಿಳಿಯುವುದು ಸರಿಯಲ್ಲ—ಆತನು ಸರ್ವಸಮನು; ಕರ್ಮಾನುಸಾರ ಫಲಪ್ರದನೆಂಬುದರಿಂದ ಶ್ರೀವಿಷ್ಣುವಿನ ಸ್ವಾತಂತ್ರ್ಯಕ್ಕೆ ಹಾನಿ ಇಲ್ಲ; ಜಡಕರ್ಮವು ಫಲಪ್ರದವಾಗಲು ಸ್ವತಂತ್ರ ಪ್ರಭುವೊಬ್ಬನನ್ನು ಅಪೇಕ್ಷಿಸುತ್ತದೆ; ಶ್ರುತಿಸ್ಮೃತಿಗಳೇ ಶ್ರೀಹರಿಯ ಆಜ್ಞೆಗಳು—ಅವುಗಳನ್ನು ಪಾಲಿಸುವುದರಿಂದಲೇ ಆತನ ಪ್ರಸನ್ನತೆ—ಅದಿಲ್ಲದೇ ಮೋಕ್ಷವಿಲ್ಲ; ಹರಿಭಕ್ತಿಯ ಮಹಿಮೆ—ಹರಿದ್ವೇಷದಿಂದ ತಮಃ ಪ್ರಾಪ್ತಿ; ನವವಿಧಭಕ್ತಿ—ನವವಿಧ ದ್ವೇಷಗಳು. ಪುಟ ೧೧೨–೧೨೬

ಅಧ್ಯಾಯ ೭. ದೀಕ್ಷಾಧಿಕಾರಕಥನ. ಶ್ಲೋಕಸಂಖ್ಯಾ ೯೭

ಶ್ರುತಿಗಳು (ವೇದಗಳು) ಮತ್ತು ತಂತ್ರಗಳು (ಸ್ಮೃತಿಗಳು) ಬ್ರಾಹ್ಮಣನಿಗೆ ಎರಡು ಕಣ್ಣಿದ್ದಂತೆ; ಉಭಯಜ್ಞಾನವೂ ಅವಶ್ಯಕ; ವೇದಗಳು ಶ್ರೀವಿಷ್ಣುಮಹಿಮೆಗಳನ್ನು ತಿಳಿಸಿಕೊಟ್ಟರೆ, ತಂತ್ರಗಳು ಪೂಜಾರ್ಥವಾಗಿ ಆತನನ್ನು ಆಹ್ವಾನಿಸುವ ವಿಧಾನವನ್ನು ನಿರೂಪಿಸುತ್ತವೆ; ತಂತ್ರಗಳು ಪೂಜಾವಿಧಾನಗಳನ್ನೂ, ಅನ್ಯದೇವತೆಗಳನ್ನು ಆರಾಧಿಸಿ ಪ್ರಸನ್ನೀಕರಿಸಿಕೊಳ್ಳುವ ಮಾರ್ಗವನ್ನೂ ನಿರೂಪಿಸುತ್ತವೆ; ಆಗಮಗಳು ಪಾಂಚರಾತ್ರ, ಪಾಶುಪತಾದಿ ನಾನಾ ಪ್ರಕಾರವಾಗಿವೆ; ಪಂಚರಾತ್ರಾಗಮದ ವಕ್ತೃವು ಸ್ವಯಂ ಶ್ರೀವಿಷ್ಣುವು—ವಿಷ್ಣುಭಕ್ತರು ಇದನ್ನನುಸರಿಸಿ, ಮೋಕ್ಷವನ್ನು ಪಡೆಯುತ್ತಾರೆ; ರಾಜಸ, ತಾಮಸರು ಅನ್ಯಾಗಮಗಳನ್ನಾಶ್ರಯಿಸಿ, ಕ್ಷುದ್ರಸಿದ್ಧಿಗಳಿಂದ ಪ್ರಲೋಭಿತರಾಗಿ, ನಷ್ಟರಾಗುತ್ತಾರೆ; ತಂತ್ರಜ್ಞಾನವಿಲ್ಲದೇ ವೇದಜ್ಞಾನದ ಪರಿಪೂರ್ತಿಯಿಲ್ಲ; ಮೋಕ್ಷಕ್ಕೆ ಏಕೈಕ ಹೇತುವಾದ ಶ್ರೀವಿಷ್ಣುಪ್ರಸನ್ನತೆಗೆ, ವಿಷ್ಣುದೀಕ್ಷೆಯು ಅತ್ಯವಶ್ಯಕ; ಬಾಹ್ಯಾಂತರ ದೀಕ್ಷೆಗಳ ವಿವರಣೆ; ಅಜ್ಞಾನಿಗೆ (ಜಿಜ್ಞಾಸುವಿಗೆ) ಬಾಹ್ಯದೀಕ್ಷೆಯು ಅವಶ್ಯಕ; ಜ್ಞಾನಿಗೆ ಉಭಯವೂ ಅವಶ್ಯಕ; ಬಾಹ್ಯವಿಷ್ಣುದೀಕ್ಷೆಯುಳ್ಳವರು ಶ್ರೀವಿಷ್ಣುಪ್ರತಿಮೆಗಳು—ಅವರನ್ನು ಉಪೇಕ್ಷಿಸಿದರೆ, ಯಥಾಯೋಗ್ಯವಾಗಿ ಸತ್ಕರಿಸಿ ಪೂಜಿಸದಿದ್ದರೆ, ವಿಷ್ಣುವಿನ ಅವಜ್ಞೆಯ ಮಹಾದೋಷವುಂಟಾಗುತ್ತದೆ; ವಿಷ್ಣುಭಕ್ತಿಯುಳ್ಳ ಸರ್ವ-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಮುಕ್ಷುಗಳೂ (ಸ್ತ್ರೀಪುರುಷರೆಲ್ಲರೂ—ಜಾತಿವರ್ಣಗಳ ಯಾವ ನಿರ್ಬಂಧವೂ ಇಲ್ಲದೇ) ದೀಕ್ಷಾಧಿಕಾರಿಗಳಾಗಿರುವರು ; ತಪ್ತಮುದ್ರಧಾರಣ ವಿಧಿ ; ಅವಶ್ಯಕತೆ ಮತ್ತು ಪ್ರಮಾಣಗಳು ; ಗೋಪೀಚಂದನದಿಂದ ನಾಮಮುದ್ರೆಗಳ ನಿತ್ಯಧಾರಣೆಯೂ ಅವಶ್ಯಕ ; ಅದು ಶ್ರೀವಿಷ್ಣುಪ್ರೀತಿಕರ — ಅದರಿಂದ ಬ್ರಹ್ಮಾದಿದೇವತೆಗಳೆಲ್ಲರೂ, ವಿಷ್ಣುಭಕ್ತನ ಮೇಲೆ ಪ್ರೀತರಾಗುವರು ; ತಪ್ತ-ಚಕ್ರಾದಿಧಾರಣವಿಧಿ—ಸ್ತ್ರೀಪುರುಷ ನಿಮಿತ್ತವಾದ ಭಿನ್ನವಿಧಿಗಳು—ದೀಕ್ಷಾ ಸ್ವೀಕಾರವೆಂಬುದು ತಪ್ತಮುದ್ರಾಧಾರಣ ಮತ್ತು ಮಂತ್ರೋಪದೇಶವನ್ನು ಗುರುವಿನಿಂದ ಪಡೆಯುವುದೇ ಆಗಿದೆ ; ದೀಕ್ಷಾಸ್ವೀಕಾರದ ಕಾಲದೇಶ ವಿಶೇಷ ಗಳಿಂದ ಫಲಾಧಿಕ್ಯ. ಪುಟ ೧೨೭—೧೭೪

ಅಧ್ಯಾಯ ೮. ಗುರುವಿಚಾರ. ಶ್ಲೋಕಸಂಖ್ಯಾ ೨೪

ದೀಕ್ಷಾಪ್ರದಾನದಲ್ಲಿ ಅಧಿಕಾರಿಗಳು ; ಸರ್ವರಿಗೆ ಬ್ರಾಹ್ಮಣನೇ ಮುಖ್ಯ ಗುರು ; ಬ್ರಾಹ್ಮಣನ ಅನುಜ್ಞೆ ಪಡೆದು, ದೀಕ್ಷಾಸ್ವೀಕಾರ ಮಾಡುವಾತನ, ತಂದೆ ಮೊದಲಾದ ಬಂಧುಗಳೂ, ಸ್ವಜಾತಿಯ ಜ್ಞಾನವೃದ್ಧರೂ ದೀಕ್ಷೆಯನ್ನು ಕೊಡಬಹುದು ; ಬ್ರಾಹ್ಮಣನಿಗೆ ಜ್ಞಾನಾಧಿಕ ಬ್ರಾಹ್ಮಣರೇ ಗುರುಗಳು ; ಆಶ್ರಮಭೇದದಿಂದ ಗುರುತ್ವನಿರ್ಣಯ ಕ್ರಮ ; ವಿಷ್ಣುದೀಕ್ಷಾಸ್ವೀಕಾರಫಲ—ಪಾಪನಾಶ, ಪುಣ್ಯವೃದ್ಧಿ, ತಾಪತ್ರಯ ಪರಿಹಾರ ಇತ್ಯಾದಿ ; ಅನಧಿಕಾರಿ ಗಳಿಗೆ ದೀಕ್ಷೆಯನ್ನು ಕೊಡುವ ಗುರುವೂ, ದೀಕ್ಷೆಯನ್ನು ಸ್ವೀಕರಿಸಿದವನೂ ನರಕಾದ್ಯನರ್ಥ ಭಾಗಿಗಳಾಗುವರು. ಪುಟ ೧೭೫—೧೮೫

ಅಧ್ಯಾಯ ೯. ಮಂತ್ರಾಧಿಕಾರವಿವೇಕ. ಶ್ಲೋಕಸಂಖ್ಯಾ ೬೧

ತಪ್ತಚಕ್ರಾದಿಧಾರಣ—ಮಂತ್ರೋಪದೇಶ - ಗುರ್ವಾಶೀರ್ವಾದಗಳನ್ನು ವಿಧಿಪ್ರಕಾರ ಪಡೆಯುವುದು ದೀಕ್ಷಾಸ್ವೀಕಾರವು; ವಿಷ್ಣುಭಕ್ತಿಯುಳ್ಳ ಸರ್ವರೂ, ಪತಿತ ಚಾಂಡಾಲಾದಿ ಸರ್ವಸ್ತ್ರೀಪುರುಷರೂ ದೀಕ್ಷಾಸ್ವೀಕಾರಕ್ಕೆ ಅರ್ಹರು ; ಯೋಗ್ಯಾಧಿಕಾರಿಯು ದೀಕ್ಷೆಗಾಗಿ ಪ್ರಾರ್ಥಿಸುತ್ತಿರಲು, ಗುರುವು ತಿರಸ್ಕರಿಸ ಕೂಡದು ; ದೀಕ್ಷೆಯನ್ನಿತ್ತು ಅನುಗ್ರಹಿಸುವುದು ಶ್ರೀವಿಷ್ಣುಪ್ರೀತಿಕರವಾದ, ಗುರುವಿನ ಅವಶ್ಯಕರ್ತವ್ಯ; ಶೌಚಭಂಗಾದಿ ಕಾರಣಗಳಿಂದ ಚಂಡಾಲಾದಿ ಗಳಿಗೆ ದೀಕ್ಷೆ ಕೊಡುವುದರಲ್ಲಿ ಜಿಗುಪ್ಸೆಯನ್ನು ತಾಳಕೂಡದು ; ವೈದ್ಯರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೋಗಿಗಳನ್ನು ಸ್ಪರ್ಶಾದಿಗಳಿಂದ ಅವರೊಡನೆ ಬೆರೆತು ಚಿಕಿತ್ಸೆ ಮಾಡಿ, ನಂತರ ಸ್ನಾನಾದಿಗಳಿಂದ ಶುದ್ಧರಾಗುವಂತೆ, ಗುರುವೂ ಕೃಪಾಯುಕ್ತನಾಗಿ, ತನ್ನ ಕರ್ತವ್ಯವನ್ನು ಮಾಡತಕ್ಕದ್ದು; ಮಂತ್ರೋಪದೇಶ ನಿಯಮಗಳು; ವಿವಿಧ ಮಂತ್ರಗಳು ಮತ್ತು ವಿವಿಧ ಅಧಿಕಾರಿಗಳು; ಅಷ್ಟಮಹಾಮಂತ್ರಗಳು—ಸದಾಚಾರ ಸಂಪನ್ನರಾದ ದ್ವಿಜರು ಮಾತ್ರ ಅಧಿಕಾರಿಗಳು—ಅವುಗಳಲ್ಲಿ ಪ್ರಣವಜಪಕ್ಕೆ ಯತಿಗಳು ಮಾತ್ರ ಅಧಿಕಾರಿಗಳು; ನರಸಿಂಹ, ಹಯಗ್ರೀವಾದಿ ಉಗ್ರಮಂತ್ರಗಳ ಜಪ—ಅಧಿಕಾರಿಗಳು, ಅನಧಿಕಾರಿಗಳಿಗೆ ತಪ್ಪದೇ ಲಭಿಸುವ ಅನರ್ಥಗಳು; ರಾಮಕೃಷ್ಣಾದಿ ಸೌಮ್ಯಮಂತ್ರಗಳು—ಜಪದಲ್ಲಿ ಸರ್ವರೂ ಅಧಿಕಾರಿಗಳು; ದೀಕ್ಷಾಸ್ವೀಕಾರದ ಅವಶ್ಯಕತೆ—ದ್ವಿಜರಿಗೆ ಉಪನಯನ ಸಂಸ್ಕಾರವಿಲ್ಲದೇ ವೇದಾಧ್ಯಯನಾದಿ ಅಧಿಕಾರವಿಲ್ಲ—ಅದರಂತೆ ಸಂಧ್ಯಾದಿ ವೇದೋಕ್ತಕರ್ಮಾನುಷ್ಠಾನವಿಲ್ಲದೇ ತಂತ್ರೋಕ್ತಪೂಜಾದಿಗಳಲ್ಲಿ ಸಹ ದ್ವಿಜರಿಗೆ ಅಧಿಕಾರವಿಲ್ಲ; (ತಪ್ತಮುದ್ರಾಧಾರಣಾದಿ) ಬಾಹ್ಯದೀಕ್ಷೆಯಿಲ್ಲದೇ, ಮೇಲ್ಕಂಡ ಯಾವ ಕರ್ಮಾಚರಣೆಗೂ ಅಧಿಕಾರವಿಲ್ಲ—ವೇದಾನಧಿಕಾರಿಗಳಿಗೆ ತಂತ್ರೋಕ್ತಪೂಜಾದಿಗಳಿದ್ದರೂ, ಬಾಹ್ಯದೀಕ್ಷೆಯಿಲ್ಲದೇ ಆಚರಿಸಿಯೂ ಅವು ವ್ಯರ್ಥವಾಗುತ್ತವೆ. ಪುಟ ೧೮೫—೨೧೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಪ್ಪೋಲೆ

ಪುಟ	ಪಂಗ್ತಿ	ತಪ್ಪು	ಸರಿ
2	5	ಋಷಯಂ	ಋಷಯಃ
5	7	ಕರ್ವವ್ಯಂ	ಕರ್ತವ್ಯಂ
7	15	ಅವಾಸ್ತವಾನ್	ಅವಾಪ್ತವಾನ್
10	20	ಆತೀತೇ	ಅತೀತೇ
12	8	ಚತುರ್ಥಾ	ಚತುರ್ಧಾ
39	10		'ಪಾಣಿ' ನಂತರ 'ಪಾದ' ಶಬ್ದವನ್ನು ಸೇರಿಸಿರಿ
74	22	ಪುರುಷಸೂಕ್ತ	ವಿಷ್ಣುಸೂಕ್ತ
106	18	ಪ್ರಾಣಾತ್	ಪ್ರಾಣ್ಯಾತ್
107	19	ಕೆರೆಯ	ತೆರೆಯ
118	16	ವವು	ವವ್ರ
120	15	ಗಳಿಗೆ	ಗಳು
128	10	ದ್ವಾಭ್ಯ	ದ್ವಾಭ್ಯಾ
148	13	ಶ್ರೈವವಾ	ಶ್ರೈಶವಾ
160	15	ಆರ್ಚನೆ	ಅರ್ಚನೆ
163	20	ನಕ್ಷತ್ರಗಳ	ವಾರನಕ್ಷತ್ರಗಳ
169	10	ಸ್ವಸ್ವರ್ಣೋ	ಸ್ವಸ್ವವರ್ಣೋ
175	14	ಪ್ರಧಾನ	ಪ್ರದಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕರೋತು ಮಮ ಕಲ್ಯಾಣಂ ಹರಿರ್ಹಯಮುಖಾಭಿಧಃ |
ಗುರುಶ್ಚ ಮಧ್ವನಾಮಾ ಮೇ ವರದೋಽಸ್ತು ನಿರಂತರಮ್ ||

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀಃ

ಶ್ರೀ ಗುರುಭ್ಯೋ ನಮಃ ಹರಿಃ ಓಂ

ಶ್ರೀ ವಿಷ್ಣುರಹಸ್ಯ

ಆಚಾರ್ಯಃ ಪವನೋಽಸ್ಮಾಕಂ ಆಚಾರ್ಯಾಣೀ ಚ ಭಾರತೀ |
ದೇವೋ ನಾರಾಯಣಃ ಶ್ರೀಶಃ ದೇವೀ ಮಂಗಲದೇವತಾ ||

ಅಧ್ಯಾಯ ೧

ಶ್ರೀ ವೇದವ್ಯಾಸಾಯ ನಮಃ

ಓಂ

ಯತೋ ಭೂತಾನಿ ಜಾಯಂತೇ ಯೇನ ಜೀವಂತಿ ತಾನ್ಯುತ |
ಯೋ ಹಂತಿ ಮೋಕ್ಷದಸ್ತೇಷಾಂ ತಂ ವಿಷ್ಣುಂ ಪ್ರಣಮಾಮ್ಯಹಂ ||೧||

ಅರ್ಥ :—ಯತಃ – ಯಾವಾತನಿಂದ, ಭೂತಾನಿ – ಪ್ರಾಣಿಗಳು, ಜಾಯಂತೇ–ಹುಟ್ಟುತ್ತವೆಯೋ, ತಾನಿ–ಅವುಗಳು (ಹಾಗೆ ಹುಟ್ಟಿದವುಗಳು), ಯೇನ – ಯಾವಾತನಿಂದ, ಜೀವಂತಿ – ಬದುಕುತ್ತವೆಯೋ (ಚೇಷ್ಟಿಸುತ್ತವೆಯೋ), ಉತ–ಮತ್ತು, ಯಃ–ಯಾವಾತನು, ಹಂತಿ–(ಅವುಗಳನ್ನು) ಸಂಹರಿಸುತ್ತಾನೆಯೋ, (ದೇಹವಿಯೋಗವನ್ನು ಹೊಂದಿಸುತ್ತಾನೆಯೋ),

---

ತಾತ್ಪರ್ಯ :—ಜೀವರು, (ಸಾಧನೆಗಾಗಿ ಸ್ಥೂಲದೇಹಗಳನ್ನು ಹೊಂದುವುದೆಂಬ) ಸೃಷ್ಟಿಯನ್ನೂ, (ಆ ದೇಹಗಳಲ್ಲಿದ್ದು ವಿವಿಧ ವ್ಯಾಪಾರಗಳಲ್ಲಿ ಪ್ರವೃತ್ತರಾಗುವುದೆಂಬ) ಸ್ಥಿತಿಯನ್ನೂ, (ಆ ದೇಹಗಳ ವಿಯೋಗರೂಪದ) ಲಯವನ್ನೂ ಯಾವಾತನಿಂದ ಹೊಂದುವರೋ[1] ಮತ್ತು ಯಾರಿಂದ

---

[1] 'ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ' ಇತ್ಯಾದಿ ತೈತ್ತರೀಯ ಶ್ರುತಿ ಪ್ರತಿಪಾದ್ಯ ಮಹಿಮೆಗಳಿಂದ, ವಿಷ್ಣುವನ್ನು ಸ್ತುತಿಸಲಾಗಿದೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೇಷಾಂ – ಆ ಜೀವರಿಗೆ (ಹಾಗೆ ಹುಟ್ಟಿ, ಬದುಕಿ, ಸಾಯುತ್ತಲಿರುವ ಜೀವರಿಗೆ), ಮೋಕ್ಷದಃ–ಮೋಕ್ಷವನ್ನು ಕೊಡುತ್ತಾನೆಯೋ (ಸ್ವಯೋಗ್ಯಗತಿಗಳನ್ನು ಹೊಂದಿಸುವನೋ), ತಂ ವಿಷ್ಣುಂ–ಆ ವಿಷ್ಣುವನ್ನು, ಅಹಂ–ನಾನು, ಪ್ರಣಮಾಮಿ–ನಮಸ್ಕರಿಸುತ್ತೇನೆ (ಭಕ್ತಿಪೂರ್ವಕ ಶರಣುಹೊಂದುತ್ತೇನೆ).

ನೈಮಿಷೇಽನಿಮಿಷಕ್ಷೇತ್ರೇ ಋಷಯಃ ಶೌನಕಾದಯಃ ।
ದೀಕ್ಷಿತಾ ವೈಷ್ಣವೇ ಯಜ್ಞೇ ಸೂತಂ ಪಪ್ರಚ್ಛುರಾದರಾತ್ ॥ ೨ ॥

(ತಂತಮ್ಮ ಆತ್ಯಂತಿಕ ಗತಿಗಳನ್ನು) ನಿತ್ಯಸ್ಥಿತಿರೂಪದ ಮೋಕ್ಷವನ್ನೂ ಪಡೆಯುವರೋ, ಆ ಮಹಾವಿಷ್ಣುವನ್ನು ನಮಸ್ಕರಿಸುತ್ತೇನೆ (೧). ದೇವತೆಗಳ ಸಾನ್ನಿಧ್ಯದಿಂದ ಪರಮಪವಿತ್ರವಾದ ನೈಮಿಷಾರಣ್ಯವೆಂಬ ಪುಣ್ಯಕ್ಷೇತ್ರದಲ್ಲಿ[1] ಶೌನಕಾದಿ ಋಷಿಗಳು ಶ್ರೀವಿಷ್ಣುಪ್ರೀತಿಕರವಾದ ಜ್ಞಾನಸತ್ರದಲ್ಲಿ

---

[1] ನೈಮಿಷಾರಣ್ಯವು ಅತ್ಯಂತ ಪವಿತ್ರವಾದ ಕ್ಷೇತ್ರವು; ಅಲ್ಲಿ ಭೂಮಿಯು ಸೃಷ್ಟವಾದಂದಿನಿಂದ, ಮಹಾಯಜ್ಞಾದಿ ಕಾರ್ಯಗಳು ಮಹಾತ್ಮರಿಂದ ನಡೆಸಲ್ಪಡುತ್ತ ಬಂದಿವೆ. ಬ್ರಹ್ಮಾಂಡಪುರಾಣದ ಪ್ರಕ್ರಿಯಾಪಾದದ ೧–೨ನೇ ಅಧ್ಯಾಯಗಳಲ್ಲಿ ಈ ಕ್ಷೇತ್ರದಲ್ಲಿ ನಡೆದ ಮಹಾಯಜ್ಞಾದಿ ಕಾರ್ಯಗಳ ವಿಸ್ತಾರವಾದ ವಿವರಣೆ ಇದೆ. ಅಲ್ಲಿ ವಾಯುದೇವರು, ನೈಮಿಷಾರಣ್ಯವಾಸಿಗಳಾದ ವಸಿಷ್ಠಾದಿ ಋಷಿಗಳಿಗೆ ಸಚ್ಛಾಸ್ತ್ರಗಳನ್ನು ಉಪದೇಶಿಸಿದ್ದಾರೆ. ಸೃಷ್ಟಿಯಲ್ಲಿ ತೊಡಗುವ ಮೊದಲು, ಬ್ರಹ್ಮದೇವನು ಸಹಸ್ರವರ್ಷಪರ್ಯಂತ ಪುಣ್ಯತಮವಾದ ಸತ್ರವನ್ನು ನಡೆಸಿದನು. ಪುರೂರವ ರಾಜನು ದೀರ್ಘಕಾಲ ಆಚರಿಸಿದ ಯಜ್ಞವಾದರೂ, ಇಲ್ಲಿಯೇ ನಡೆದುದು. ಹೀಗೆ ಧರ್ಮಾತ್ಮರಿಂದ ಧರ್ಮಕೆಲಸಗಳು ಆರಂಭವಾಗಿ, ಅಲ್ಲಿಯೇ ಧರ್ಮರಥದ ಚಕ್ರದ ನೇಮಿಯು ಸೀಳಿ, ರಥವು ನಿಂತುಹೋದಂತೆ, ಸಹಸ್ರಾರು ವರ್ಷಗಳವರೆಗೆ ಧರ್ಮಕಾರ್ಯಗಳು ನೆರವೇರುತ್ತ ಬಂದ ಕಾರಣ, 'ಭ್ರಮತೋ ಧರ್ಮಚಕ್ರಸ್ಯ ಯತ್ರ ನೇಮಿರಶೀರ್ಯತ । ಕರ್ಮಣಾ ತೇನ ವಿಖ್ಯಾತಂ ನೈಮಿಷಂ ಮುನಿಪೂಜಿತಂ ॥' (ಬ್ರಹ್ಮಾಂಡಪುರಾಣ), 'ನೈಮಿಷ'ವೆಂಬ ಅನ್ವರ್ಥನಾಮವುಳ್ಳದ್ದಾಗಿದೆ. ಈ ಪುಣ್ಯಕ್ಷೇತ್ರದಲ್ಲಿ ದಾನವಬಲವು ನಿಮಿಷಮಾತ್ರದಲ್ಲಿ (ಕ್ಷಣಮಾತ್ರದಲ್ಲಿ) ಸಂಹರಿಸಲ್ಪಟ್ಟು ಯಜ್ಞಾದಿ (ತಪಸ್ಸು ಮೊದಲಾದ) ಸತ್ಕರ್ಮಗಳು ಸಾರೋದ್ಧಾರವಾಗಿ ನಡೆದಿವೆ. ಈ ಕಾರಣದಿಂದ ಸಹ ಇದು ನೈಮಿಷಾರಣ್ಯವೆನಿಸಿದೆ. 'ಯತಸ್ತು ನಿಮಿಷೇಣೇದಂ ನಿಹತಂ ದಾನವಂ ಬಲಂ । ಅರಣ್ಯೇಽಸ್ಮಿನ್ ತತಸ್ತೇನ ನೈಮಿಷಾರಣ್ಯಸಂಜ್ಞಿತಂ ॥' ಇತ್ಯಾದಿ ಪ್ರಮಾಣವಾಕ್ಯಗಳು ಈ ಅಂಶವನ್ನು ಸಾರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನಿಮಿಷಕ್ಷೇತ್ರೇ–ದೇವಕ್ಷೇತ್ರವಾದ (ದೇವತಾಸನ್ನಿಧಾನದಿಂದ ಪವಿತ್ರವಾದ), ನೈಮಿಷೇ–ನೈಮಿಷಾರಣ್ಯದಲ್ಲಿ, ವೈಷ್ಣವೇ–ಶ್ರೀವಿಷ್ಣುಪ್ರೀತಿಕರವಾದ, ಯಜ್ಞೇ–(ಜ್ಞಾನ)ಯಜ್ಞದಲ್ಲಿ, ದೀಕ್ಷಿತಾಃ–ದೀಕ್ಷಿತರಾದ (ಪ್ರತಿಜ್ಞಾಪೂರ್ವಕ ಸ್ಥಿರಚಿತ್ತರಾದ), ಶೌನಕಾದಯಃ–ಶೌನಕರೇ ಮೊದಲಾದ, ಋಷಯಃ–ಋಷಿಗಳು, ಆದರಾತ್–ಆದರದಿಂದ (ಭಕ್ತಿಪೂರ್ವಕವಾದ ಉತ್ಸಾಹದಿಂದ), ಸೂತಂ–ಸೂತನನ್ನು (ಅವರಿಂದಲೇ ಪ್ರವಚನಕ್ಕಾಗಿ ಬ್ರಹ್ಮಾಸನದಲ್ಲಿ ಕೂಡಿಸಲ್ಪಟ್ಟ ಸೂತಾಚಾರ್ಯನನ್ನು), ಪಪ್ರಚ್ಛುಃ–ಕೇಳಿದರು (ಪ್ರಶ್ನಿಸಿದರು).

ಋಷಯ ಊಚುಃ—

ಸೂತ ಸೂತ ಮಹಾಭಾಗ ವದ ನೋ ವದತಾಂ ವರ ।
ದುಃಖಾಂಬುಧೌ ನಿಮಗ್ನಸ್ಯ ಕಥಂ ಸ್ಯಾಜ್ಜಗತೋ ಹಿತಂ ॥ ೩ ॥

ಸೂತಸೂತ–ಹೇ! ಸೂತ, ಮಹಾಭಾಗ–ಮಹಾಭಾಗ್ಯಶಾಲಿಯೇ! (ಜ್ಞಾನನಿಧಿಯೇ!), ವದತಾಂ ವರ– ವಕ್ತೃಗಳಲ್ಲಿ ಶ್ರೇಷ್ಠನೇ (ಸ್ವಯಂ ತಿಳಿದಿದ್ದು ಅನ್ಯರು ತಿಳಿಯುವಂತೆ ಹೇಳಲು ಶಕ್ತನಾದ ಹೇ! ಸೂತ), ದುಃಖಾಂಬುಧೌ–ದುಃಖವೆಂಬ ಸಮುದ್ರದಲ್ಲಿ, ನಿಮಗ್ನಸ್ಯ–ಮುಳುಗಿರುವ, ಜಗತಃ–ಜಗತ್ತಿಗೆ (ಪ್ರಾಣಿಗಳಿಗೆ), ಹಿತಂ–ಹಿತವು (ಆತ್ಯಂತಿಕ ಶ್ರೇಯಸ್ಸು ಅಥವಾ ನಿತ್ಯಸುಖವು), ಕಥಂ ಸ್ಯಾತ್–ಹೇಗೆ ದೊರೆಯುತ್ತದೆ? ನೋ ವದ–ನಮಗೆ ಹೇಳು.

ಯಸ್ಮಿನ್ ಶ್ರುತೇ ಶ್ರುತಂ ಸರ್ವಂ ಯಸ್ಮಿನ್ ಕೃತೇಽಖಿಲಂ ಕೃತಂ ।
ಯದಜ್ಞಾನೇನ ಕಿಂಚಿತ್ ಜ್ಞೋ ಯಸ್ಮಿನ್ ಜ್ಞಾತೇ ಚ ಸರ್ವವಿತ್ ॥

ದೀಕ್ಷಿತರಾಗಿದ್ದರು. ಪ್ರವಚನಾಚಾರ್ಯನಾದ ಸೂತನನ್ನು, ಋಷಿಗಳು, (ಶೌನಕಮುಖೇನ) ಪ್ರಶ್ನಿಸುತ್ತಾರೆ (೨). ಹೇ ಸೂತ! ಮಹಾಭಾಗ್ಯವಂತ! ವಕ್ತೃಶ್ರೇಷ್ಠನಾದ ನೀನು, ದುಃಖಸಮುದ್ರದಲ್ಲಿ ಮುಳುಗಿರುವ ಜೀವರಿಗೆ ಸಂಸಾರದಿಂದ ಬಿಡುಗಡೆಯಾಗಿ ನಿತ್ಯಾನಂದರೂಪದ ಪರಮಹಿತವು (ಶ್ರೇಯಸ್ಸು) ಹೇಗೆ ದೊರೆಯುತ್ತದೆಂಬುದನ್ನು ಹೇಳು (೩). ಯಾವುದರ ಶ್ರವಣದಿಂದ, ಕೇಳಬೇಕಾದ ಸರ್ವವನ್ನೂ ಕೇಳಿದಂತಾಗುವುದೋ, ಬೇರೇನೂ ಕೇಳಬೇಕಾದುದು ಉಳಿಯುವುದಿಲ್ಲವೋ; ಯಾವುದನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಸ್ಮಿನ್ ಶ್ರುತೇ–ಯಾವುದನ್ನು ಶ್ರವಣಮಾಡಿದಲ್ಲಿ, ಸರ್ವಂ ಶ್ರುತಂ–ಎಲ್ಲವನ್ನೂ (ಅವಶ್ಯ ಶ್ರವಣಮಾಡಬೇಕಾದುದೆಲ್ಲವನ್ನೂ) ಶ್ರವಣಮಾಡಿದಂತಾಗುತ್ತದೆಯೋ (ಪೂರ್ಣಶ್ರವಣಫಲವು ದೊರೆಯುವುದೋ – ಬೇರೇನನ್ನೂ ಕೇಳಬೇಕಾದುದು ಉಳಿಯುವುದಿಲ್ಲವೋ), ಯಸ್ಮಿನ್ ಕೃತೇ–ಯಾವುದನ್ನು ಮಾಡುತ್ತಿರಲು, ಅಖಿಲಂ ಕೃತಂ–(ಮಾಡಬೇಕಾದ) ಎಲ್ಲವನ್ನೂ ಮಾಡಿದಂತಾಗುತ್ತದೆಯೋ, ಯದಜ್ಞಾನೇನ–ಯಾವುದರ ಅಜ್ಞಾನದಿಂದ (ಯಾವುದನ್ನು ತಿಳಿಯದಿರುವುದರಿಂದ), ಕಿಂಚಿತ್ಜ್ಞಃ–ಅಲ್ಪಜ್ಞನೆನಿಸುವನೋ, ಯಸ್ಮಿನ್ ಜ್ಞಾತೇ – ಯಾವುದನ್ನು ತಿಳಿಯುವುದರಿಂದ, ಸರ್ವವಿತ್–ಸರ್ವಜ್ಞನೆನಿಸುವನೋ ; (ಮುಂದಿನ ಶ್ಲೋಕದಲ್ಲಿ ಅನ್ವಯ ಪೂರ್ತಿಯಾಗುತ್ತದೆ.)

ತಾದೃಶಂ ಬ್ರೂಹಿ ನಃ ಕಿಂಚಿತ್ ಕಿಂ ವೃಥಾ ವಚನಾತ್ ಫಲಂ ।
ಕ್ಷಣೇ ಕ್ಷಣೇ ಪ್ರಯಾತ್ಯೇತದಾಯುರ್ನೃಣಾಂ ಮಿತಂ ಚ ತತ್ ॥೫॥

ತಾದೃಶಂ ಕಿಂಚಿತ್–ಆ ವಿಧದ ಒಂದು ವಿಷಯವನ್ನು, ನಃ–ನಮಗೆ, ಬ್ರೂಹಿ–ಹೇಳುವವನಾಗು ; ವೃಥಾವಚನಾತ್–ವ್ಯರ್ಥವಾದ ನುಡಿಗಳಿಂದ, ಕಿಂ ಫಲಂ – ಏನು ಫಲ? (ಯಾವ ಪ್ರಯೋಜನವೂ ಇಲ್ಲ) ; ನೃಣಾಂ – ಮನುಷ್ಯರ, ಏತತ್ ಆಯುಃ–ಈ ಆಯುಷ್ಯವು, ಕ್ಷಣೇ ಕ್ಷಣೇ–ಪ್ರತಿ ಕ್ಷಣದಲ್ಲಿಯೂ, ಪ್ರಯಾತಿ–ನಷ್ಟವಾಗುತ್ತದೆ ; ಚ–ಮತ್ತು, ತತ್–ಅದು (ಆಯುಷ್ಯವು), ಮಿತಂ–ಅಲ್ಪವಾದುದು.

ತಸ್ಮಾತ್ತತ್ಸಾರ್ಥಕಂ ಯೇನ ತಾದೃಶಂ ಸುಧಿಯಾ ಸದಾ ।
ಶ್ರೋತವ್ಯಂ ಚಾಪಿ ವಕ್ತವ್ಯಂ ಕರ್ತವ್ಯಂ ಚ ತದೇವ ಹಿ ॥ ೬ ॥

ಮಾಡಿದರೆ ಅವಶ್ಯ ಮಾಡಬೇಕಾದ ಎಲ್ಲವನ್ನೂ ಮಾಡಿದಂತಾಗುವುದೋ ; ಏನನ್ನು ತಿಳಿಯದವನು ಅಲ್ಪಜ್ಞನೆನಿಸುವನೋ ಮತ್ತು ಯಾವುದನ್ನು ತಿಳಿದವನು ಸರ್ವಜ್ಞನೆನಿಸುವನೋ, ಆ ವಿಧದ ವಿಷಯವನ್ನು (ವಸ್ತುವನ್ನು–ಪ್ರಮೇಯವನ್ನು ನಮಗೆ ಹೇಳುವವನಾಗು(೪). ಅನ್ಯವ್ಯರ್ಥನುಡಿಗಳಿಂದ ಏನು ಪ್ರಯೋಜನ? ಮೊದಲೇ ನಾವು ಅಲ್ಪ ಆಯುಷ್ಯವುಳ್ಳವರು ; ಅದು ಕ್ಷಣಕ್ಷಣಕ್ಕೂ ವ್ಯಯವಾಗುತ್ತದೆ (೫). ಆದ್ದರಿಂದ, ಯಾವುದರಿಂದ ಆಯುಷ್ಯವು ಸಫಲವಾಗುತ್ತದೆಯೋ, ಅದನ್ನೇ ಅನ್ಯರಿಂದ ಕೇಳಿ ತಿಳಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಸ್ಮಾತ್–ಆದ್ದರಿಂದ, ಯೇನ–ಯಾವುದರಿಂದ, ತತ್–ಆಯುಷ್ಯದ ಕಾಲವು, ಸಾರ್ಥಕಂ–ಸಾರ್ಥಕವಾಗುವುದೋ (ಫಲವುಳ್ಳದ್ದಾಗುವುದೋ), ತಾದೃಶಂ–ಅದೇ (ಆ ಕಾರ್ಯವೇ), ಸುಧಿಯಾ–ವಿವೇಕಿಯಾದವನಿಂದ (ಸದ್ಬುದ್ಧಿಯುಳ್ಳವನಿಂದ), ಸದಾ–ಎಲ್ಲ ಕಾಲದಲ್ಲಿ, ಶ್ರೋತವ್ಯಂ–ಶ್ರವಣ ಮಾಡಲ್ಪಡತಕ್ಕದ್ದು, ಅಪಿ ಚ–ಮತ್ತೂ ಕೂಡ, ವಕ್ತವ್ಯಂ–(ಅನ್ಯರಿಗಾಗಿ) ಹೇಳಲ್ಪಡತಕ್ಕದ್ದು, ಚ–ಮತ್ತು, ತದೇವ–ಅದೇ (ಆ ಕಾರ್ಯವೇ), ಕರ್ತವ್ಯಂ ಹಿ–ಮಾಡಲ್ಪಡತಕ್ಕದ್ದೆಂದು ಶಾಸ್ತ್ರಸಿದ್ಧವಷ್ಟೆ.

ವ್ಯಾಸಶಿಷ್ಯೋಽಮಹಾಭಾಗ ತತ್ಪ್ರಸಾದಾಚ್ಚ ಸರ್ವವಿತ್ ।
ಅತಃ ಪೃಚ್ಛಾಮಹೇ ಸರ್ವೇ ಶುಶ್ರೂಷಂತೋ ಜಗದ್ಧಿತಂ ॥ ೭ ॥

ಮಹಾಭಾಗ–ಹೇ ಪುಣ್ಯಶಾಲಿಯೇ! ವ್ಯಾಸಶಿಷ್ಯಃ–ವೇದವ್ಯಾಸರ ಶಿಷ್ಯನಾಗಿರುವಿ; ತತ್ಪ್ರಸಾದಾತ್–ಅವರ ಅನುಗ್ರಹದಿಂದ, ಸರ್ವವಿತ್ ಚ–ಸರ್ವವನ್ನೂ ತಿಳಿದವನಾಗಿರುವಿ; ಅತಃ–ಆದ್ದರಿಂದ, ಶುಶ್ರೂಷಂತಃ–(ನಿಮ್ಮಿಂದ) ಕೇಳಲಿಚ್ಛಿಸುವ, ಸರ್ವೇ–ನಾವೆಲ್ಲರೂ, ಜಗದ್ಧಿತಂ–ಜಗತ್ತಿಗೆ (ಸಜ್ಜನಲೋಕಕ್ಕೆ) ಹಿತವಾಗುವ ಪ್ರಕಾರವನ್ನು ಕುರಿತು, ಪೃಚ್ಛಾಮಹೇ–(ನಿಮ್ಮನ್ನು) ಪ್ರಶ್ನೆಮಾಡುತ್ತೇವೆ.

ಸೂತ ಉವಾಚ—

ಭವಂತೋ ವೇದವಿದ್ವಾಂಸಃ ಸರ್ವಶಾಸ್ತ್ರಾರ್ಥವೇದಿನಃ ।
ಯನ್ಮಾಂ ಪೃಚ್ಛಥ ತತ್ಪ್ರೀತ್ಯಾ ಕೇವಲಂ ಗುಣನಾಯ ವಾ ॥ ೮ ॥

ಬೇಕು, ಅನ್ಯರಿಗೆ ಹೇಳಬೇಕು; ಅದನ್ನೇ ಅವಶ್ಯಕರ್ತವ್ಯವೆಂದು ತಿಳಿದು ಆಚರಿಸಬೇಕು (೬). ಹೇ ಸೂತಾಚಾರ್ಯ! ನೀನು ವೇದವ್ಯಾಸರ ಪ್ರಸಾದದಿಂದ ಸರ್ವವನ್ನೂ ತಿಳಿದಿರುವಿ; ನಮ್ಮ ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಲು ಶಕ್ತನಾಗಿರುವಿ; ಆದ್ದರಿಂದ ಮಹಾಭಾಗ್ಯವಂತನಾದ ನಿನ್ನನ್ನು, ತಿಳಿಯಲಿಚ್ಛಿಸುವ ನಾವೆಲ್ಲರೂ ಲೋಕಹಿತವನ್ನು ಕುರಿತು (ಸಜ್ಜನರ ಶ್ರೇಯಸ್ಸಾಧಕವಾದ ವಿಷಯವನ್ನು ತಿಳಿಯಲು), ನಿಮ್ಮನ್ನು ಪ್ರಶ್ನಿಸುತ್ತೇವೆ (೭). ಎಲೈ ಋಷಿಗಳೇ! ನೀವೆಲ್ಲರೂ ವೇದಜ್ಞಾನಿಗಳು, ಸಕಲಶಾಸ್ತ್ರಾರ್ಥಗಳನ್ನು ತಿಳಿದವರು; ತಿಳಿದುದನ್ನೇ ಪುನಃ ಪುನಃ ಶ್ರವಣಮಾಡುವ ಇಚ್ಛೆಯಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅತೋ ಯಾವದಹಂ ವೇದ್ಮಿ ತಾವದ್ವಕ್ಷ್ಯಾಮಿ ನಾನ್ಯಥಾ ।
ಯತ್ಪುರಾ ವಿಷ್ಣುನಾ ಪ್ರೋಕ್ತಂ ಸೃಷ್ಟ್ಯಾದೌ ಬ್ರಹ್ಮಣೇ ಸ್ವಯಂ ॥೯॥

ಸೂತಾಚಾರ್ಯನು ಹೇಳುತ್ತಾನೆ—

ಭವಂತಃ—ನೀವುಗಳು, ವೇದವಿದ್ವಾಂಸಃ—ವೇದಜ್ಞಾನಿಗಳು, ಸರ್ವ-ಶಾಸ್ತ್ರಾರ್ಥವೇದಿನಃ – ಸಕಲಶಾಸ್ತ್ರಾರ್ಥಗಳನ್ನೂ ತಿಳಿದವರು, ಪ್ರೀತ್ಯಾ-(ನನ್ನಲ್ಲಿರುವ) ವಿಶ್ವಾಸದಿಂದ (ಪ್ರೀತಿಯಿಂದ), ಮಾಂ—ನನ್ನನ್ನು, ಯತ್ ಪೃಚ್ಛಥ—ಏನನ್ನು ಕೇಳುತ್ತೀರೋ, ತತ್—ಅದು, ಕೇವಲಂ ಗುಣನಾಯ ವಾ–ಪುನಃ ಕೇಳಬೇಕೆಂಬ ಇಚ್ಛೆಯಿಂದ ಮಾತ್ರ (ಶ್ರವಣದಿಂದ ಆವೃತ್ತಿಯಾಗಲೆಂದು ಮಾತ್ರ—ನಿಮಗೆ ತಿಳಿದುದರ ಪುನಃಶ್ರವಣಕ್ಕಾಗಿ ಮಾತ್ರ) ; ಅತೋ–ಆದ್ದರಿಂದ, ಯತ್ – ಯಾವುದು (ಯಾವುದು ಶ್ರೇಯಃಕಾರಣವೆಂದು), ಪುರಾ – ಈ ಮೊದಲು, ಸೃಷ್ಟ್ಯಾದೌ – ಸೃಷ್ಟಿಗೆ ಮೊದಲು, ಬ್ರಹ್ಮಣೇ–ಚತುರ್ಮುಖನಿಗೋಸ್ಕರ, ವಿಷ್ಣುನಾ—ಶ್ರೀ ಮಹಾವಿಷ್ಣುವಿನಿಂದ, ಸ್ವಯಂ–ಸಾಕ್ಷಾತ್ತಾಗಿ, ಪ್ರೋಕ್ತಂ—ಹೇಳಲ್ಪಟ್ಟಿತೋ (ಉಪದೇಶಿಸಲ್ಪಟ್ಟಿತೋ), (ಅದರಲ್ಲಿ) ಯಾವತ್—ಎಷ್ಟನ್ನು, ಅಹಂ—ನಾನು, ವೇದ್ಮಿ—ತಿಳಿದಿರುವೆನೋ, ತಾವತ್ – ಅಷ್ಟನ್ನು, ವಕ್ಷ್ಯಾಮಿ – ಹೇಳುತ್ತೇನೆ ; ನಾನ್ಯಥಾ – ಬೇರೆಯಲ್ಲ (ಶ್ರೀವಿಷ್ಣುವಿನಿಂದ ಹೇಳಲ್ಪಡದದ್ದನ್ನು ಅಲ್ಲ).

ಬ್ರಹ್ಮಾ ಪ್ರಾಹ ವಸಿಷ್ಠಾಯ ವಸಿಷ್ಠಸ್ತು ಪರಾಶರಂ ।
ಸ ಕೃಷ್ಣಾಯ ಸುತಾಯಾಹ ಸವ್ಯಾಸಃ ಶುಕಮುಕ್ತವಾನ್ ॥ ೧೦ ॥

ನನ್ನನ್ನು ಪ್ರಶ್ನೆಮಾಡುತ್ತೀರಲ್ಲದೇ ಬೇರೆಯಲ್ಲ; ಸೃಷ್ಟಿಯ ಆರಂಭಕ್ಕೆ ಮೊದಲು ಬ್ರಹ್ಮದೇವನಿಗೆ ಶ್ರೀವಿಷ್ಣುವೇ ಉಪದೇಶಮಾಡಿದ ವಿಷಯವನ್ನೇ ನಾನು ತಿಳಿದಮಟ್ಟಿಗೆ ಹೇಳುತ್ತೇನೆ—ಅದು ನಿಮ್ಮ ಪ್ರಶ್ನೆಗೆ ಸಾಧುವಾದ ಪರಿಹಾರ (ಉತ್ತರ) ವಾಗುತ್ತದೆ (೮–೯). ಸೃಷ್ಟ್ಯಾದಿಯಲ್ಲಿ ಶ್ರೀವಿಷ್ಣು ತನಗೆ ಉಪದೇಶಮಾಡಿದುದನ್ನು, ಬ್ರಹ್ಮದೇವನು, ವಸಿಷ್ಠಮಹರ್ಷಿಗೆ ಉಪದೇಶಿಸಿದನು ; ವಸಿಷ್ಠರು ಪರಾಶರಋಷಿಗಳಿಗೂ ಅವರು ತಮ್ಮ ಮಗನಾದ ಶ್ರೀ ವೇದವ್ಯಾಸರಿಗೂ, ಅವರು ತಮ್ಮ ಮಗನಾದ ಶುಕಾಚಾರ್ಯರಿಗೂ ಉಪದೇಶಿಸಿದರು. ಶ್ರೀ ಶುಕಾಚಾರ್ಯಚರಣಗಳನ್ನು ಸೇವಿಸಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಷೇವಿತ ಪದದ್ವಂದ್ವಾಚ್ಛುಕಾದಹಮವಾಪ್ತವಾನ್ ।
ಇಮಂ ವಿಷ್ಣುರಹಸ್ಯಾಖ್ಯಮಿತಿಹಾಸಂ ಹರಿಪ್ರಿಯಂ ॥ ೧೧ ॥

ಶ್ರೀವಿಷ್ಣು ಮಾಡಿದ ಉಪದೇಶವು ತನಗೆ ಲಭಿಸಿದ ಪ್ರಕಾರವನ್ನು ಸೂತಾಚಾರ್ಯನು ವಿವರಿಸುತ್ತಾನೆ—

ಬ್ರಹ್ಮಾ–(ವಿಷ್ಣುವಿನಿಂದ ಉಪದಿಷ್ಟನಾದ) ಚತುರ್ಮುಖನು, ವಸಿಷ್ಠಾಯ–ವಸಿಷ್ಠಋಷಿಗಳಿಗೆ, ಪ್ರಾಹ–(ಉಪದೇಶದ ಸಾರವನ್ನು ಹೇಳಿದನು; ವಸಿಷ್ಠಸ್ತು–ಆ ವಸಿಷ್ಠರಾದರೋ, ಪರಾಶರಂ–ಪರಾಶರರನ್ನು ಕುರಿತು (ತಮ್ಮ ಮೊಮ್ಮಗ–ಪೌತ್ರನಾದ ಪರಾಶರಋಷಿಗಳಿಗೆ) ಉಪದೇಶಿಸಿದರು; ಸಃ–ಆ ಪರಾಶರರು, ಸುತಾಯ–ತಮ್ಮ ಮಗನಾದ, ಕೃಷ್ಣಾಯ–ವೇದವ್ಯಾಸರಿಗೆ, (ವಾಸಿಷ್ಠಕೃಷ್ಣ=ವೇದವ್ಯಾಸ; ವಸಿಷ್ಠರ ವಂಶದಲ್ಲಿ ಅವತರಿಸಿದ್ದರಿಂದ, ನಾರಾಯಣನು, ವಾಸಿಷ್ಠಕೃಷ್ಣನೆಂದೂ ಪ್ರಸಿದ್ಧನಾಗಿರುವನು); ಸ ವ್ಯಾಸಃ–ಆ ವ್ಯಾಸರು, ಶುಕಂ–(ಸ್ವಪುತ್ರನಾದ) ಶುಕಾಚಾರ್ಯನನ್ನು ಕುರಿತು, ಉಕ್ತವಾನ್–ಹೇಳುವವರಾದರು; ಅಹಂ–ನಾನು, ನಿಷೇವಿತಪದದ್ವಂದ್ವಾತ್ ಶುಕಾತ್–ಸೇವಿತವಾದ ಪದದ್ವಂದ್ವಗಳುಳ್ಳ ಶುಕಾಚಾರ್ಯರಿಂದ, ಅವಾಪ್ತವಾನ್–(ಆ ವಿಷ್ಣೂಪದೇಶವನ್ನು) ಪಡೆದೆನು; ಇಮಂ–(ಹೀಗೆ ನನಗೆ ಪ್ರಾಪ್ತವಾದ) ಈ, ವಿಷ್ಣುರಹಸ್ಯಾಖ್ಯಂ–ವಿಷ್ಣುರಹಸ್ಯವೆಂದು ಕರೆಯಲ್ಪಡುವ, ಇತಿಹಾಸಂ–ಇತಿಹಾಸವು (ಪೂರ್ವೋಪದಿಷ್ಟಜ್ಞಾನದ ನಿರೂಪಣೆಯು), ಹರಿಪ್ರಿಯಂ–ಶ್ರೀಹರಿಗೆ ಅತಿಪ್ರಿಯವಾದುದು (ಇದನ್ನು ಶ್ರವಣ ಅಧ್ಯಯನಾದಿಗಳಿಂದ ಸೇವಿಸುವ ಅಧಿಕಾರಿಗಳಿಗೆ ಆತನು ಶೀಘ್ರವಾಗಿ ಪ್ರೀತನಾಗಿ ಅಭೀಷ್ಟಗಳನ್ನು ಸಲ್ಲಿಸುತ್ತಾನೆ).

ಲಕ್ಷಸಂಖ್ಯಾಮುವಾಚಾಸ್ಮೈ ಬ್ರಹ್ಮಣೇ ಸಸುತಂ ನಿಜಂ ।
ಕಿಂಚಿತ್ಭಾಗಂ ಪ್ರಾಹ ಚಾನ್ಯಾನ್ ಕಶ್ಯಪಾದೀನ್ ಮುನೀಶ್ವರಾನ್

ನಾನು (ಸೂತಾಚಾರ್ಯನಾದ ನಾನು), ವಿಷ್ಣುರಹಸ್ಯವೆಂಬ ಈ ಶ್ರೇಷ್ಠ ವಿದ್ಯೆಯನ್ನು, ಪಡೆದೆನು; ಇದು ಶ್ರೀಹರಿಗೆ ಅತಿಪ್ರಿಯಕರವು; ಭಕ್ತರಿಗೆ ಶ್ರೀಹರಿಪ್ರಸನ್ನತೆಯನ್ನು ಶೀಘ್ರವಾಗಿ ದೊರಕಿಸುತ್ತದೆ (೧೦–೧೧). ಶ್ರೀವಿಷ್ಣುವು ಬ್ರಹ್ಮದೇವನಿಗೆ ಒಂದು ಲಕ್ಷ ಗ್ರಂಥಾತ್ಮಕ (ಗ್ರಂಥ=೩೨ ಅಕ್ಷರಗಳ ಒಂದು ಶ್ಲೋಕ) ವಿದ್ಯೆಯನ್ನು ಉಪದೇಶಿಸಿದನು; ಬ್ರಹ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೈಶ್ಚ ಸ್ವಕೀಯಶಿಷ್ಯೇಭ್ಯಃ ಪ್ರಿಯೇಭ್ಯಃ ಸದುದೀರಿತಂ ।
ಯತ್ತು ಪ್ರಾಪ್ತಂ ವಸಿಷ್ಠೇನ ತಚ್ಛುಕೋ ಮಾಮುವೋಚತ್ ॥ ೧೩ ॥

ಯಾನಿ ಚಾನ್ಯಾನಿ ಲೋಕೇಸ್ಮಿನ್ ಪ್ರಸಿದ್ಧಾನಿ ದ್ವಿಜೋತ್ತಮ ।
ರಹಸ್ಯಾನಿ ಮಹಾವಿಷ್ಣೋಃ ವೇದ ತಾನ್ಯಪಿ ನಾರದಾತ್ ॥ ೧೪ ॥

ಶ್ರೀ ಶುಕರ ಮೂಲಕ ತನಗೆ ಪ್ರಾಪ್ತವಾದುದು ಶ್ರೀ ವಿಷ್ಣೂಪದೇಶದ ಒಂದು ಭಾಗ ಮಾತ್ರವೆನ್ನುತ್ತಾನೆ—ಸೂತನು.

ಅಸ್ಮೈ—ಬ್ರಹ್ಮದೇವನಿಗೆ, ಲಕ್ಷಸಂಖ್ಯಾಂ—ಒಂದು ಲಕ್ಷ ಸಂಖ್ಯೆಯನ್ನು (ಲಕ್ಷಸಂಖ್ಯಾತ್ಮಕ ಗ್ರಂಥವನ್ನು, ಎಂದರೆ ೧,೦೦,೦೦೦ ಶ್ಲೋಕಗಳುಳ್ಳ ವಿಷ್ಣುರಹಸ್ಯ ಗ್ರಂಥವನ್ನು, ಉವಾಚ—(ಶ್ರೀವಿಷ್ಣುವು) ಉಪದೇಶಿಸಿದನು; ಸಃ—ಆ ಬ್ರಹ್ಮನಾದರೋ, ನಿಜಂ ಸುತಂ—ತನ್ನ ಮಗನಾದ ನಾರದನಿಗೆ, ಕಿಂಚಿದ್ಭಾಗಂ—ಅದರಲ್ಲಿ ಒಂದು ಭಾಗವನ್ನು (ಕೆಲವು ಭಾಗ ಮಾತ್ರ), ಪ್ರಾಹ—ಹೇಳಿದನು; ಅನ್ಯಾನ್—ಮತ್ತೆ ಬೇರೆ ಕೆಲವು ಭಾಗಗಳನ್ನು, ಕಶ್ಯಪಾದೀನ್ ಮುನೀಶ್ವರಾನ್—ಕಶ್ಯಪರೇ ಮೊದಲಾದ ಋಷಿಶ್ರೇಷ್ಠರಿಗೆ, (ಪ್ರಾಹ-ಹೇಳಿದನು), ತೈಶ್ಚ—ಆ ಕಶ್ಯಪಾದಿಗಳಿಂದ, ಪ್ರಿಯೇಭ್ಯಃ—(ತಮಗೆ) ಪ್ರೀತಿಪಾತ್ರರಾದ, ಸ್ವಕೀಯ ಶಿಷ್ಯೇಭ್ಯಃ—ತಂತಮ್ಮ ಶಿಷ್ಯರಿಗಾಗಿ, ಸದುದೀರಿತಾ—ಚನ್ನಾಗಿ (ಪ್ರಸನ್ನಚಿತ್ತರಾಗಿ) ಉಪದೇಶಿಸಲ್ಪಟ್ಟಿತು; ವಸಿಷ್ಠೇನ ಯತ್ ತು ಪ್ರಾಪ್ತಂ—ವಸಿಷ್ಠರಿಂದ ಯಾವುದು ಪ್ರಾಪ್ತವಾಗಿದ್ದಿತೋ, ತತ್—ಅದನ್ನು, ಶುಕಃ—ಶುಕಾಚಾರ್ಯರು, ಮಾಂ—ನನ್ನನ್ನು

ದೇವನು, ಅದರಲ್ಲಿ ಕೆಲವು ಭಾಗವನ್ನು ನಾರದನಿಗೂ, ಮತ್ತೆ ಕೆಲವು ಭಾಗಗಳನ್ನು ಕಶ್ಯಪಾದಿ ಮುನೀಶ್ವರರಿಗೂ ಉಪದೇಶಿಸಿದನು; ಕಶ್ಯಪಾದಿ ಋಷಿಗಳು ತಮಗೆ ಬ್ರಹ್ಮದೇವನಿಂದ ಪ್ರಾಪ್ತವಾದುದನ್ನು ತಂತಮ್ಮ ಪ್ರಿಯ ಶಿಷ್ಯರಿಗೆ ಉಪದೇಶಿಸಿದರು; ವಸಿಷ್ಠರ ದ್ವಾರಾ ಶುಕರಿಗೂ ಅವರಿಂದ ನನಗೂ ಪ್ರಾಪ್ತವಾದುದನ್ನು ಮಾತ್ರ ನಾನು ಹೇಳುತ್ತೇನೆ; ಈ ಲೋಕದಲ್ಲಿ (ಲೋಕಾಂತರಗಳಲ್ಲಿ ವಿಸ್ತಾರವಾದ ವಿಷ್ಣುರಹಸ್ಯವು ಪ್ರಸಿದ್ಧವಾಗಿರುತ್ತದೆ) ಪ್ರಸಿದ್ಧವಾಗಿರುವ, ನಾನು ಹೇಳುವುದರಿಂದ ಭಿನ್ನವಾದ, ವಿವರಣಾತ್ಮಕ ರಹಸ್ಯಗಳು, ನಾರದರ ದ್ವಾರಾ (ಆ ಪರಂಪರೆಯಿಂದ) ಬಂದುವೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುರಿತು (ನನಗೆ), ಅವೋಚತ–ಹೇಳಿದರು. ಲೋಕೇ ಅಸ್ಮಿನ್–ಈ ಲೋಕ ದಲ್ಲಿ, ಪ್ರಸಿದ್ಧಾನಿ–(ಪ್ರಚಾರಗೊಂಡು) ಪ್ರಸಿದ್ಧವಾಗಿರುವ, ಯಾನಿ–ಯಾವ, ಅನ್ಯಾನಿ ರಹಸ್ಯಾನಿ – ಅನ್ಯರಹಸ್ಯಗಳಿವೆಯೋ (ಶ್ರೀ ವಿ ಷ್ಣು ವಿ ನ ಸ್ವರೂಪ ಮಹಿಮೆಗಳ ರಹಸ್ಯವನ್ನು ಪ್ರತಿಪಾದಿಸುವ ವಾಕ್ಯಸಮೂಹಗಳಿವೆಯೋ), ದ್ವಿಜೋತ್ತಮ–ಹೇ ಶೌನಕರೇ! ತಾನಿ–ಅವುಗಳು, ನಾರದಾತ್ ಅಪಿ–ನಾರದರಿಂದ ಸಹ ಪ್ರಾಪ್ತವಾದವೆಂದು, ವೇದ–ತಿಳಿಯುತ್ತೇನೆ.

ತತ್ರಾದೌ ಯಚ್ಛುಕಾದಾಪ್ತಂ ಶ್ರೂಯತಾಂ ಕಥಯಾಮಿ ತತ್ ।
ಸೃಷ್ಟ್ಯಾದೌ ನಿರ್ಮಿತೋ ಬ್ರಹ್ಮಾ ವಿಷ್ಣುನಾ ಪ್ರಭವಿಷ್ಣುನಾ ॥ ೧೫ ॥
ನಾಮ್ನಾ ಸ ಪುರುಷೋ ನಾಮ ಪಪ್ರಚ್ಛ ಪಿತರಂ ಸ್ವಕಂ ।
ಕಿಮರ್ಥಂ ಸೃಷ್ಟವಾನ್ ಮಾಂತ್ವಂ ಕಿಂನು ಕುರ್ಯಾಮತಃ ಪರಂ ॥
ಕಿಮಾಸೀದದ್ಯಪರ್ಯಂತಂ ತನ್ಮೇ ವಿಸ್ತರತೋ ವದ
ಇತ್ಯುಕ್ತೋ ಬ್ರಹ್ಮಣಾ ತೇನ ಕೃಪಯಾ ಸ ಮಹೇಶ್ವರಃ ।
ಪ್ರೋವಾಚಾಖಿಲಮಸ್ಮೈ ತದ್ಯತ್ಸೃಷ್ಟಂ ತೇನ ವಿಸ್ತರಾತ್ ॥ ೧೬ ॥

ಶ್ರೀ ಶುಕರಿಂದ ತನಗೆ ಪ್ರಾಪ್ತವಾದ ವಿದ್ಯೆಯನ್ನು ಸೂತಾಚಾರ್ಯನು ಉಪದೇಶಿಸಲು ಆರಂಭಿಸುತ್ತಾನೆ—

ತತ್ರ–ಹೀಗೆ ಬಹುಪ್ರಕಾರದಿಂದ ಲೋಕದಲ್ಲಿ ಪ್ರಾಪ್ತವಾದ ಈ ವಿದ್ಯೆಯಲ್ಲಿ, ಆದೌ–ಆರಂಭದಲ್ಲಿ, ಯತ್–ಯಾವುದು, ಶುಕಾತ್–ಶುಕಾಚಾರ್ಯರಿಂದ, ಆಪ್ತಂ–ಪ್ರಾಪ್ತವಾದುದೋ, ತತ್–ಅದನ್ನು, ಕಥಯಾಮಿ–ಹೇಳು

ತಿಳಿಯುತ್ತೇನೆ (ಹಾಗೆ ನೀವೂ ಗ್ರಹಿಸಿರಿ). (೧೫–೧೬). ಈ ಜಗತ್ತಿನ ಸೃಷ್ಟಿಗೆ ಮೊದಲು, ಶ್ರೀವಿಷ್ಣುವು ಬ್ರಹ್ಮದೇವನನ್ನು ಮೊದಲು ನಿರ್ಮಿಸಿದನು; ಪುರುಷಾಕಾರದಿಂದ ಸೃಷ್ಟನಾದ ಆತನು 'ಪುರುಷ'ನೆಂದೇ ಕರೆಯಲ್ಪಡುತ್ತಾನೆ. ಹುಟ್ಟಿದೊಡನೆ ಬ್ರಹ್ಮನು, ತನ್ನ ಜನಕನನ್ನು ಕುರಿತು ಹೀಗೆ ಪ್ರಶ್ನಿಸಿದನು:—'ನನ್ನನ್ನು ಏತಕ್ಕಾಗಿ ಹುಟ್ಟಿಸಿರುವಿ; ನಾನು ಮುಂದೇನು ಮಾಡಲಿ; ನಾನು ಹುಟ್ಟುವ ಮೊದಲು ಏನು ಇತ್ತು? (ನೀನೇನು ಮಾಡುತ್ತಿದ್ದಿ?) ಈ ಎಲ್ಲವನ್ನೂ ವಿಸ್ತಾರವಾಗಿ ಹೇಳು.' ಬ್ರಹ್ಮನು ಹೀಗೆ ಪ್ರಶ್ನಿಸಲು, ಶ್ರೀವಿಷ್ಣುವು ಎಲ್ಲವನ್ನೂ ವಿಸ್ತಾರವಾಗಿ ಉತ್ತರಿಸಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತೇನೆ; (ಅನ್ಯರೀತಿಯಿಂದ ಪ್ರಾಪ್ತವಾದರೂ ನನಗೆ ತಿಳಿದ ರಹಸ್ಯವಿಶೇಷಗಳನ್ನೂ ಕ್ರಮೇಣ, ಅಳವಡಿಸಿ ನಿರೂಪಿಸುವೆನೆಂಬರ್ಥವು ಇದರಿಂದ ಧ್ವನಿತವೆಂದು ತಿಳಿಯಬಹುದು); ಶ್ರೂಯತಾಂ–ಶ್ರವಣಮಾಡಲ್ಪಡಲಿ (ಕೇಳಿರಿ); ಪ್ರಭವಿಷ್ಣುನಾ–ಜಗತ್ಸೃಷ್ಟ್ಯಾದಿಗಳಲ್ಲಿ ಸಮರ್ಥನಾದ, ವಿಷ್ಣುನಾ–ಶ್ರೀಮಹಾವಿಷ್ಣುವಿನಿಂದ, ಬ್ರಹ್ಮಾ–ಚತುರ್ಮುಖಬ್ರಹ್ಮನು, ಸೃಷ್ಟ್ಯಾದೌ–ಸೃಷ್ಟಿಯ ಆರಂಭದಲ್ಲಿ, ನಿರ್ಮಿತಃ–ಹುಟ್ಟಿಸಲ್ಪಟ್ಟನು (ನಿರ್ಮಿತನಾದನು); ಸಃ–ಆತನು, ನಾಮ್ನಾ–ಹೆಸರಿನಿಂದ, ಪುರುಷೋನಾಮ–'ಪುರುಷ'ನೆಂಬ ಹೆಸರುಳ್ಳವನಾಗಿ, ಸ್ವಕಂ ಪಿತರಂ–ತನ್ನ ಜನಕನನ್ನು, ಪಪ್ರಚ್ಛ–(ಹೀಗೆ) ಕೇಳಿದನು; ತ್ವಂ–ನೀನು, ಕಿಮರ್ಥಂ–ಏತಕ್ಕಾಗಿ (ಯಾವ ಉದ್ದೇಶದಿಂದ), ಮಾಂ–ನನ್ನನ್ನು, ಸೃಷ್ಟವಾನ್–ಹುಟ್ಟಿಸಿದೆ? ಅತಃಪರಂ–ಈ ಮುಂದೆ, ಕಿಂನು–ಏನನ್ನು, ಕುರ್ಯಾಂ–ಮಾಡಲಿ? ಅದ್ಯಪರ್ಯಂತಂ–ಈವರೆಗೆ (ನಾನು ಹುಟ್ಟುವ ಮೊದಲು), ಕಿಂ ಆಸೀತ್–ಏನು ಇತ್ತು (ಏನು ನಡೆಯಿತು)? ತತ್–ಅದನ್ನು, ಮೇ–ನನಗೆ, ವಿಸ್ತರತಃ–ವಿಸ್ತಾರವಾಗಿ, ವದ–ಹೇಳು; ತೇನ–ಆ, ಬ್ರಹ್ಮಣಾ–ಬ್ರಹ್ಮನಿಂದ, ಇತ್ಯುಕ್ತಃ–ಹೀಗೆ ಪ್ರಶ್ನಿಸಲ್ಪಟ್ಟ, ಸಃ ಮಹೇಶ್ವರಃ–ಆ ಮಹಾಸ್ವಾಮಿಯು (ಶ್ರೀವಿಷ್ಣುವು), ಕೃಪಯಾ–ಕೃಪೆಮಾಡಿ, ಅಸ್ಮೈ–ಆತನಿಗೆ (ಹೀಗೆ ಕೇಳಿದ ಈ ಬ್ರಹ್ಮದೇವನಿಗೆ), ತೇನ ಯತ್ ಪೃಷ್ಟಂ–ಆತನಿಂದ ಯಾವುದು ಕೇಳಲ್ಪಟ್ಟಿತೋ, ತತ್–ಅದನ್ನು, ವಿಸ್ತರಾತ್–ವಿಸ್ತಾರವಾಗಿ, ಅಖಿಲಂ–ಸರ್ವವನ್ನೂ, ಪ್ರೋವಾಚ–ಹೇಳಿದನು.

ಶ್ರೀವಿಷ್ಣುರುವಾಚ—

ಅತೀತೇ ಪ್ರಲಯೇ ಬ್ರಹ್ಮನ್ನವಶಿಷ್ಟಾಷ್ಟಭಾಗತಃ ।
ಯೋಗನಿದ್ರಾಂ ತದಾ ಮುಕ್ತ್ವಾ ದೃಷ್ಟ್ವಾ ತಾಮಂತಿಕೇಂಭೃಣೀಂ॥
ಅಂಬ್ರಹ್ಮ ಪರಮೋವಿಷ್ಣುಃ ಪ್ರಿಯಮಣಾ ಸದಾ ತು ಯಾ ।
ತೇನೈವ ಸಾ ಸುಖಜ್ಞಾನ ಬಲರೂಪಾಂಭೃಣೀ ರಮಾ ॥ ೧೯ ॥

(೧೮–೧೭). ಹೇ ಬ್ರಹ್ಮ! ಕಳೆದುಹೋದ (ಹಿಂದಿನ) ಪ್ರಲಯಕಾಲದಲ್ಲಿ ಅಷ್ಟಮಾಂಶವು ಉಳಿದಿರಲು ಶ್ರೀವಿಷ್ಣುವು (ನಾನು) ಯೋಗನಿದ್ರೆಯಿಂದ ಎದ್ದು, ಸಮೀಪದಲ್ಲಿ ಅಂಭೃಣೀನಾಮಕಳಾದ ರಮಾದೇವಿಯನ್ನು ಕಂಡನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಾಂ ವೀಕ್ಷ್ಯ ಚಕಮೇ ವಿಷ್ಣುಃ ನಾನಾರೂಪಧರೋಽಸ್ಮಹಂ ।
ಕ್ರೀಡಾಮಿ ಸಮಯಂ ಕಿಂಚಿನ್ನಾನಾರೂಪಧರೋಽನಯಾ ॥ ೨೦ ॥

ಬ್ರಹ್ಮನ್ – ಹೇ ಬ್ರಹ್ಮ! ಅತೀತೇ – ಕಳೆದುಹೋದ (ಗತಿಸಿರುವ) ಪ್ರಲಯಕಾಲದಲ್ಲಿ, ಅವಶಿಷ್ಟಾಷ್ಟಭಾಗತಃ–ಅಷ್ಟಮಾಂಶವು ಉಳಿದಿದ್ದಾಗ (೧/೮ನೇ ಭಾಗವು ಉಳಿದಿರಲು), ಯೋಗನಿದ್ರಾಂ–ಯೋಗನಿದ್ರೆಯನ್ನು, ಮುಕ್ತ್ವಾ–ಬಿಟ್ಟು (ನಿದ್ರೆಯಿಂದ ಎದ್ದು), ತದಾ–ಆಗ, ಅಂತಿಕೇ–ಸಮೀಪದಲ್ಲಿ, ತಾಂ ಅಂಭೃಣೀಂ–(ವೇದಮುಖ್ಯಾಭಿಮಾನಿಯಾದ ಮಹಾಲಕ್ಷ್ಮಿಯು ದುರ್ಗಾರೂಪದಿಂದ ಸೃಷ್ಟಿಗಾಗಿ ಪ್ರವೃತ್ತನಾಗೆಂದು ನನ್ನನ್ನು ಸ್ತುತಿಸಿ ಪ್ರಾರ್ಥಿಸುತ್ತಿರುವ) ಆ ಲಕ್ಷ್ಮೀದೇವಿಯನ್ನು, ದೃಷ್ಟ್ವಾ–ಕಂಡು; ಪರಮೋವಿಷ್ಣುಃ–ಸರ್ವೋತ್ತಮನಾದ ಶ್ರೀ ಮಹಾವಿಷ್ಣುವು, ಅಂಬ್ರಹ್ಮ–'ಅಂ' ಎಂದು ಕರೆಯಲ್ಪಡುವ ಪರಬ್ರಹ್ಮನೇ; ಸದಾ–ನಿತ್ಯವೂ, ತೇನೈವ–ಆ ವಿಷ್ಣುವಿನಿಂದಲೇ (ಅನ್ಯಾಧೀನಳಲ್ಲದೇ), ಧ್ರಿಯಮಾಣಾ–ಧರಿಸಲ್ಪಟ್ಟಿರುವ, ಯಾ – ಯಾವ, ರಮಾ – ಲಕ್ಷ್ಮೀದೇವಿಯೋ, ಸಾ – ಆಕೆಯು, ಸುಖಜ್ಞಾನಬಲರೂಪಾ – ಸುಖ, ಜ್ಞಾನ, ಶಕ್ತಿರೂಪಳು (ಜ್ಞಾನಾನಂದ ಶಕ್ತ್ಯಾದಿ ಗುಣಗಳೇ ಮೂರ್ತಿವೆತ್ತ ಅಪ್ರಾಕೃತ ರೂಪವುಳ್ಳವಳು — ನಿತ್ಯ ಸಚ್ಚಿದಾನಂದ ದೇಹವುಳ್ಳವಳು), ಅಂಭೃಣೀ–ಅಂಭೃಣೀ ಎಂಬ ಅನ್ವರ್ಥ ನಾಮವುಳ್ಳವಳು; ವಿಷ್ಣುಃ – ಶ್ರೀವಿಷ್ಣುವು, ತಾಂ – ಅಂಭೃಣೀನಾಮಕ ರಮಾದೇವಿಯನ್ನು, ವೀಕ್ಷ್ಯ–ನೋಡಿ, ವಿಷ್ಣುಃ–ಶ್ರೀವಿಷ್ಣುವು, ನಾನಾ ರೂಪಧರಃ–ಅನಂತರೂಪಿಯಾದ, ಅಹಂನು–ನಾನೇ ಅಷ್ಟೆ; ಕಿಂಚಿತ್ ಸಮಯಂ–ಕೆಲವುಕಾಲ, ಅನಯಾ–ಈಕೆಯಿಂದ ಕೂಡಿ, ನಾನಾರೂಪಧರಃ–(ಜಗತ್ತಿನ ಸೃಷ್ಟ್ಯಾದಿಗಳನ್ನು ನಡೆಸಲು, ಈ ಮೂಲರೂಪದಿಂದಲೇ ಅವುಗಳನ್ನು ನಡೆಸಲಿಚ್ಛಿಸದೆ, ವಾಸುದೇವಾದಿ) ಬಹುರೂಪಗಳನ್ನೂ (ಕ್ರೀಡಾರ್ಥ

ಸರ್ವೋತ್ತಮನಾದ ಶ್ರೀವಿಷ್ಣುವು 'ಅಂ' ಎನಿಸುವನು; ಆತನಿಂದ ಸದಾ ಧರಿಸಲ್ಪಟ್ಟವಳಾದ, ಸಚ್ಚಿದಾನಂದರೂಪಳಾದ ರಮಾದೇವಿಯು 'ಅಂಭೃಣೀ' ಎಂದು ಕರೆಯಲ್ಪಡುತ್ತಾಳೆ; ಅನಂತರೂಪಿಯಾದ ಶ್ರೀವಿಷ್ಣುವು, ಬಹುರೂಪಗಳನ್ನೇ ಸ್ವೀಕರಿಸಿ (ಪ್ರಕಟಿಸಿ), ರಮಾದೇವಿಯೊಂದಿಗೆ ಸ್ವಲ್ಪಕಾಲದವರೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿ ಅಸಂಖ್ಯ ಇತರ ರೂಪಗಳನ್ನೂ) ಪ್ರಕಟಿಸಿ, ಕ್ರೀಡಾಮಿ–ಕ್ರೀಡಿಸು ತ್ತೇನೆ, (ಹೀಗೆಂದು) ಚಕಮೇ–ಇಚ್ಛಿಸಿದನು.

ಏವಂ ಸಂಚಿಂತ್ಯ ದೇವೇಶಃ ಸ್ವಯಂ ನಾರಾಯಣಃ ಪ್ರಭುಃ ।
ಚತುರ್ಧಾಽಹ್ಯ ಭವತ್ಪೂರ್ವಂ ತಥೈವಾಭೂತ್ತತೋ ರಮಾ ॥ ೨೦ ॥

ಏವಂ–ಹೀಗೆಂದು, ಸಂಚಿಂತ್ಯ–ಆಲೋಚಿಸಿ, ದೇವೇಶಃ–ಸರ್ವದೇವ ನಿಯಾಮಕನಾದ ಶ್ರೀವಿಷ್ಣುವು, ಸ್ವಯಂ ನಾರಾಯಣಃ–ಸಾಕ್ಷಾತ್ ನಾರಾಯಣನೂ, ಪ್ರಭುಃ–ಸಮರ್ಥನೂ (ಸತ್ಯಸಂಕಲ್ಪನೂ) ಆದ ತಾನು, ಪೂರ್ವಂ–ಮೊದಲಿಗೆ, ಚತುರ್ಧಾ–ನಾಲ್ಕುರೂಪಗಳುಳ್ಳವನು, ಅಭವತ್ ಹಿ– ಆದನೆಂಬುದು ವೇದಪ್ರಸಿದ್ಧವಷ್ಟೆ; ತತಃ–ನಂತರ (ಆಗ), ರಮಾ–ಶ್ರೀ ಮಹಾಲಕ್ಷ್ಮೀದೇವಿಯೂ, ತಥೈವ–ಹಾಗೆಯೇ (ನಾಲ್ಕುರೂಪಗಳುಳ್ಳವಳು), ಅಭವತ್–ಆದಳು.

ವಾಸುದೇವಸ್ಯ ಭಾರ್ಯಾಭೂನ್ಮಾಯಾಸಂಕರ್ಷಣಸ್ಯ ಚ ।
ಜಯಾಥಾಸೀತ್ ಕೃತಿಃ ಶಾಂತಿರಭೂತ್ಸಾಕ್ರಮಶಸ್ತ್ವಮೋ ॥ ೨೧ ॥

ಕ್ರೀಡಿಸಲಿಚ್ಛಿಸಿದನು (೧೮–೨೦). ಹೀಗೆ ರಮಾದೇವಿಯೊಡನೆ ಕೆಲವು ಕಾಲ ಕ್ರೀಡಿಸಲು ಸಂಕಲ್ಪಿಸಿ, ಸಾಕ್ಷಾತ್ ನಾರಾಯಣನಾದ (ಮೂಲರೂಪಿಯಾದ) ತಾನು, ಸ್ವೇಚ್ಛೆಯಂತೆ ಕ್ರೀಡಿಸಲು ಸಮರ್ಥನಾಗಿದ್ದು ನಾಲ್ಕು ರೂಪಗಳಿಂದ ಪ್ರಕಟನಾದನು; ಆಗ, ರಮಾದೇವಿಯೂ ಸಹ ತಾನೂ ನಾಲ್ಕು ರೂಪ ಗಳನ್ನು ಸ್ವೀಕರಿಸಿ ಪತಿಸೇವೆಗೆ ಸಿದ್ಧಳಾದಳು. ಹೀಗೆ ರಮಾನಾರಾಯಣರು ರೂಪಗಳನ್ನು ಸ್ವೀಕರಿಸಿದುದು ವೇದಪ್ರಸಿದ್ಧವು (೨೧). ನಾನು ಮೊದಲು ವಾಸುದೇವರೂಪನಾದೆನು; ಆಗ ರಮಾದೇವಿಯು ಮಾಯಾನಾಮಕರೂಪ ವನ್ನು ಧರಿಸಿ, ನನ್ನ ಭಾರ್ಯಳಾದಳು; ನಂತರ ಕ್ರಮವಾಗಿ ನಾನು ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನಾಮಕರೂಪಗಳಿಂದ ಅಭಿವ್ಯಕ್ತ ನಾದೆನು; ರಮೆಯಾದರೂ ಈ ನನ್ನ ರೂಪಗಳ ಸೇವಾರ್ಥವಾಗಿ, ಜಯಾ, ಕೃತಿ, ಶಾಂತಿನಾಮಕರೂಪಗಳನ್ನು ಧರಿಸಿ ನನ್ನ ಭಾರ್ಯಳಾದಳು. ಆ ನಂತರ ನಾನು, ೨೪, ೧೦, ೧೦೦೦, ಸಂಖ್ಯೆಗಳುಳ್ಳ ಪ್ರತ್ಯೇಕ ರೂಪಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರದ್ಯುಮ್ನಸ್ಯಾನಿರುದ್ಧಸ್ಯ ಭಾರ್ಯೇ ನಿತ್ಯಸುಖಾತ್ಮಿಕೇ ।
ಚತುರ್ವಿಂಶತಿಧಾ ಪಶ್ಚಾದ್ದಶಧಾ ಚ ಸಹಸ್ರಧಾ ॥ ೨೩ ॥

ಅನಂತಧಾ ತತೋ ಭೂತ್ವಾ ತಥೈವಾಸೀದ್ರಮಾಪಿ ಹಿ ।

ತಾನು ಮತ್ತು ರಮಾದೇವಿಯೂ ಸ್ವೀಕರಿಸಿದ ರೂಪಗಳ ವಿವರವನ್ನು ಶ್ರೀವಿಷ್ಣುವು ನಿರೂಪಿಸುತ್ತಾನೆ—

ವಾಸುದೇವಸ್ಯ – ವಾಸುದೇವರೂಪದ (ನನ್ನ ಈ ರೂಪದ), ಭಾರ್ಯಾ–ಪತ್ನಿಯು, ಮಾಯಾ–(ಮಾಯಾನಾಮಕ ರೂಪವನ್ನು ಧರಿಸಿದ ಲಕ್ಷ್ಮೀದೇವಿಯು) ಮಾಯಾರೂಪಳಾದ ರಮೆಯು, ಅಭೂತ್–ಆದಳು; ಅಥ – ನಂತರ (ಪ್ರಕಟಿಸಿದ ನನ್ನ), ಸಂಕರ್ಷಣಸ್ಯ – ಸಂಕರ್ಷಣರೂಪದ ಭಾರ್ಯಳು, ಜಯಾ – ಜಯಾರೂಪದ ರಮೆಯು, ಆಸೀತ್ – ಆದಳು; ಸಾ – ಆ ರಮಾದೇವಿಯೇ, ಕೃತಿಃ – ಕೃತಿನಾಮಕಳೂ, ಶಾಂತಿಃ – ಶಾಂತಿ ನಾಮಕಳೂ, ಅಭೂತ್–ಆದಳು; ಇಮೇ–ಈ ಎರಡು ರಮಾರೂಪಗಳೂ, ನಿತ್ಯಸುಖಾತ್ಮಿಕೇ–(ಆಕೆಯ ಎಲ್ಲ ರೂಪಗಳಂತೆ) ನಿತ್ಯಾನಂದ ಸ್ವರೂಪಗಳೇ; ಕ್ರಮಶಃ–ಕ್ರಮವಾಗಿ, ಪ್ರದ್ಯುಮ್ನಸ್ಯ–ಪ್ರದ್ಯುಮ್ನನ (ಪ್ರದ್ಯುಮ್ನರೂಪದಿಂದ ಪ್ರಕಟನಾದ ನನ್ನ), ಅನಿರುದ್ಧಸ್ಯ–ಅನಿರುದ್ಧನ (ಅನಿರುದ್ಧರೂಪಿಯಾದ ನನ್ನ), ಭಾರ್ಯೇ – ಪತ್ನಿಯರಾದವು; ಪಶ್ಚಾತ್ – ಆ ನಂತರ, ಚತುರ್ವಿಂಶತಿಧಾ–(ನಾನು) ೨೪ ರೂಪಗಳನ್ನು ಧರಿಸಿದೆನು, ದಶಧಾ–ಹತ್ತು ಪ್ರಕಾರನೂ (೧೦ ರೂಪಗಳನ್ನು ಧರಿಸಿದವನೂ), ಸಹಸ್ರಧಾ–ಸಹಸ್ರ ಪ್ರಕಾರನೂ, ಅನಂತಧಾ–ಅಸಂಖ್ಯರೂಪನೂ (ಆದೆನು); ತತಃ–ಅನಂತರ (ಹೀಗೆ ನಾನು ಬಹುರೂಪಗಳನ್ನು ಧರಿಸಿದ ನಂತರ), ರಮಾಪಿ–ರಮೆಯೂ (ಅಭಿನ್ನನಾದರೂ ನಾನಾವ್ಯೂಹಗಳ ರೂಪಗಳನ್ನು)[1] ಧರಿಸಿದೆನು; ರಮೆಯೂ ಸಹ ಅಷ್ಟುಷ್ಟೇ ರೂಪಗಳನ್ನು ಧರಿಸಿ ನನ್ನ ಭಾರ್ಯಳಾದಳು (೨೨–೨೩).

[1] ಕೇಶವಾದಿ ೨೪, ಮತ್ಸ್ಯಾದಿ ೧೦, ವಿಶ್ವಾದಿ ಸಹಸ್ರ (೧೦೦೦) ಇತ್ಯಾದಿ ಭಗವದ್ರೂಪಗಳ ವ್ಯೂಹಗಳು (ಗುಂಪುಗಳು) ಇಲ್ಲಿ ಪ್ರಸಕ್ತವೆಂದು ತಿಳಿಯಬೇಕು; ವಿವಿಧ ವ್ಯೂಹಗತ ವಿವಿಧ ಭಗವದ್ರೂಪಗಳಿಗೆ ಮೂಲಸ್ವರೂಪದಿಂದ ಅತ್ಯಂತ ಅಭೇದವಿದ್ದರೂ ಅವುಗಳಿಂದ ಬಹುವಿಧ ನಾನಾ ವ್ಯಾಪಾರಗಳು ನಡೆಯುತ್ತವೆ ಮತ್ತು ಅವು 'ವಿಶೇಷ' ಬಲದಿಂದ ವಿಭಿನ್ನ ನಾಮರೂಪಗಳೆಂದು ವ್ಯವಹರಿಸಲ್ಪಡುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹ, ತಥಾಭೂತ್ವಾ–ಹಾಗೆಯೇ (ಬಹುರೂಪಳು) ಆಗಿ, ಆಸೀತ್–ನನ್ನ ಆ ರೂಪಗಳ ಭಾರ್ಯಳಾದಳು.

ಅನ್ಯಾ ನಾನಾವಿಧಾ ನಾರ್ಯೋ ಮುಕ್ತಾಃ ಸಂಸಾರಬಂಧನಾತ್ ||೨೪||
ದೇವಪತ್ನ್ಯೋಪಿ ಯಾ ಮುಕ್ತಾಸ್ತಥಾದೇವಾದಯಃ ಪರೇ |
ಗಂಧರ್ವಾ ಯಕ್ಷರಕ್ಷಾಂಸಿ ಋಷಯೋ ಗುಹ್ಯಕಾಸ್ತಥಾ || ೨೫ ||
ಸಿದ್ಧಾ ಅಪ್ಸರಸಶ್ಚೈವ ವೈಕುಂಠಾದಿಸ್ಥಿತಾಶ್ಚ ಯೇ |
ಸರ್ವೇಮುಕ್ತಗಣಾಸ್ತಾನಿ ಮಮ ರೂಪಾಣಿ ಸರ್ವಶಃ || ೨೬ ||
ಸ್ವಸ್ವೇಚ್ಛಯಾ ಜುಷಂತೇಸ್ಮ ತತ್ತದ್ಬ್ರಹ್ಮಪುರಸ್ಸರಾಃ |
ತತೋಭೂದ್ಧಯಶೀರ್ಷಃ ಸ ಶ್ರೀರಪ್ಯಾಸೀದ್ಧಯಾನನಾ || ೨೭ ||

ಶ್ರೀಹರಿಯು ವಾಸುದೇವಾದಿ ಬಹುರೂಪಗಳನ್ನು ಧರಿಸಲು ರಮಾದೇವಿಯೂ, ಬಹುರೂಪಗಳನ್ನು ಧರಿಸಿ, ಆ ನನ್ನ (ಶ್ರೀ ವಿಷ್ಣುವಿನ) ರೂಪಗಳ ಸೇವೆಗೆ ನಿಂತನಂತರ, ಮುಕ್ತರಾದ ನಾನಾವಿಧ ದೇವತೆಗಳು. ಅವರ ಮುಕ್ತ ಭಾರ್ಯರೂ,[1] ಇನ್ನೂ ವಿವಿಧರಾದ ಮುಕ್ತಸ್ತ್ರೀಯರೂ, ಯಕ್ಷ, ರಾಕ್ಷಸ, ಋಷಿ, ಗಂಧರ್ವ, ಗುಹ್ಯಕ, ಸಿದ್ಧ ಮೊದಲಾದವರೂ, ಮುಕ್ತ ಅಪ್ಸರಾಸ್ತ್ರೀಯರೂ, ವೈಕುಂಠಾದಿ ನಾನಾ ಮುಕ್ತಸ್ಥಾನಗಳಲ್ಲಿದ್ದ[2] ಸರ್ವಮುಕ್ತಜೀವಗಣಗಳೂ, ಈ ಹಿಂದೆ ಹೇಳಿದ ನನ್ನ ಬಹುರೂಪಗಳನ್ನು, ತಂತಮ್ಮ ಬ್ರಹ್ಮನನ್ನು[3] ಮುಂದೆಮಾಡಿಕೊಂಡು, ಸ್ವೇಚ್ಛಾನುಸಾರ ಸೇವಿಸಿ ಆನಂದಿಸುತ್ತಿದ್ದರು;

---

[1] ದೇವತೆಗಳೆಲ್ಲರೂ ಪ್ರಾಯಃ ಸ್ವನಿಯತಪತ್ನಿಯರೊಂದಿಗೆ ಮುಕ್ತರಾಗುತ್ತಾರೆ (ದಂಪತ್ತುಗಳು ದಂಪತ್ಸಮೇತ ಮುಕ್ತರಾಗುತ್ತಾರೆ).

[2] ಮುಕ್ತರೆಲ್ಲರೂ ವೈಕುಂಠ, ಶ್ವೇತದ್ವೀಪ, ಅನಂತಾಸನಗಳೆಂಬ ಮುಕ್ತಿಧಾಮಗಳನ್ನು ಹೊಂದುವದಿಲ್ಲ. ಸ್ವಸ್ವಯೋಗ್ಯತಾನುಸಾರ ಮೇರುಪರ್ವತ, ಅಂತರಿಕ್ಷವೇ ಮೊದಲಾದ ವಿಭಿನ್ನ ಸ್ಥಾನಗಳಲ್ಲಿ ವಿಹರಿಸುತ್ತಾ ಆನಂದಿಸುತ್ತಿರುತ್ತಾರೆ.

[3] ಮುಕ್ತಬ್ರಹ್ಮರು, ತಮ್ಮೊಂದಿಗೆ ಮುಕ್ತರಾದ ಜೀವರಿಗೆಲ್ಲ, ಮುಕ್ತಿಯಲ್ಲಿ ಸಹ ಅಧಿಪತಿಗಳಾಗಿರುತ್ತಾರೆ; ಒಬ್ಬ ಬ್ರಹ್ಮನೊಂದಿಗೆ ಮುಕ್ತರಾದ ಜೀವರಿಗೆ ಅನ್ಯ ಬ್ರಹ್ಮರೊಂದಿಗೆ ಮುಕ್ತರಾದ ಜೀವರು ಜ್ಞಾತಿಗಳು ಮಾತ್ರ. ಹಿಂದೆಹಿಂದಿನ (ಪೂರ್ವಪೂರ್ವಮುಕ್ತರು ದೂರದಜ್ಞಾತಿಗಳು—ಅಜ್ಞಾತಿಗಳು ಎನಿಸುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀವಿಷ್ಣುವು ಮುಕ್ತರೊಂದಿಗೆ ನಡೆಸಿದ ಕ್ರೀಡೆಯನ್ನು ವರ್ಣಿಸುತ್ತಾನೆ—

ಸಂಸಾರಬಂಧನಾತ್–ಸಂಸಾರಬಂಧದಿಂದ, ಮುಕ್ತಾಃ–ಮುಕ್ತರಾದ, ನಾನಾವಿಧಾಃ–ಬಹುವಿಧರಾದ, ಅನ್ಯಾಃ–ಇತರ (ಲಕ್ಷ್ಮೀದೇವಿಯಿಂದ ಇತರರಾದ), ನಾರ್ಯಃ–ಸ್ತ್ರೀಯರು, ತಥಾ–ಹಾಗೂ, ಮುಕ್ತಾಃ–ಮುಕ್ತರಾದ, ಪರೇದೇವಾದಯಃ–ಇತರ ದೇವತೆಗಳೂ, ಯಾಃ–ಯಾರು, ದೇವಪತ್ನ್ಯಃ ಅಪಿ–ಆ ದೇವತೆಗಳ ಪತ್ನಿಯರೋ (ಅವರೂ), ಗಂಧರ್ವಾ–ಗಂಧರ್ವರು, ಯಕ್ಷರಕ್ಷಾಂಸಿ – ಯಕ್ಷರೂ ರಾಕ್ಷಸರೂ, ಋಷಯಃ – ಋಷಿಗಳೂ, ತಥಾ–ಮತ್ತು, ಗುಹ್ಯಕಾಃ–ಗುಹ್ಯಕರೂ, ಸಿದ್ಧಾಃ–ಸಿದ್ಧರೂ, ಅಪ್ಸರಸಃ ಚ–ಅಪ್ಸರಸ್ತ್ರೀಯರೂ, ಯೇ–ಯಾರು, ವೈಕುಂಠಾದಿಸ್ಥಿತಾಃ–ವೈಕುಂಠ ಮೊದಲಾದ ಸ್ಥಾನಗಳಲ್ಲಿದ್ದ, ಸರ್ವೇ–ಎಲ್ಲ, ಮುಕ್ತಗಣಾಃ–ಮುಕ್ತಜೀವಸಮೂಹಗಳೂ; ಸರ್ವಶಃ-ಈ ಸಕಲರೂ, ತಾನಿ-ಪೂರ್ವೋಕ್ತವಾದ, ಮಮ-ನನ್ನ, ರೂಪಾಣಿ-ರೂಪಗಳನ್ನು (ನಾನಾ ವ್ಯೂಹಗತ ಬಹುರೂಪಗಳನ್ನು), ಸ್ವಸ್ವೇಚ್ಛಯಾ–ತಂತಮ್ಮ ಇಚ್ಛಾನುಸಾರವಾಗಿ, ತತ್ತದ್ಬ್ರಹ್ಮಪುರಸ್ಸರಾಃ – ಆಯಾ ಮುಕ್ತಬ್ರಹ್ಮರನ್ನು (ಯಾವ ಜೀವರು ಯಾವ ಮುಕ್ತಬ್ರಹ್ಮನೊಂದಿಗೆ, ಆ ಬ್ರಹ್ಮಕಲ್ಪದ ಅಂತ್ಯದಲ್ಲಿ ಮುಕ್ತರಾದರೋ ಆತನನ್ನು) ಮುಂದಿಟ್ಟುಕೊಂಡು, ಜುಷಂತೇ ಸ್ಮ–(ನನ್ನ ರೂಪಗಳನ್ನು) ಸೇವಿಸುತ್ತಿದ್ದರು.[1] ತತಃ–ಅನಂತರ,

---

ಆಗ ನಾನು ಹಯಗ್ರೀವರೂಪನಾದೆನು—ರಮಾದೇವಿಯು ಹಯಮುಖರೂಪವನ್ನು ಧರಿಸಿದಳು.[4] (೨೪-೨೭).

---

[1] ಬ್ರಹ್ಮನು, ತಾನು ಹುಟ್ಟುವ ಮೊದಲು ಏನೇನು ನಡೆದಿತ್ತೆಂದು ಮಾಡಿದ ಪ್ರಶ್ನೆಗೆ ಉತ್ತರವಾಗಿ ಶ್ರೀವಿಷ್ಣುವು ಹೇಳುತ್ತಿದ್ದಾನೆ—

[4] ಸ್ವರೂಪದಿಂದ ಸ್ತ್ರೀಯರಾದ ಸಾಮಾನ್ಯಜೀವರಿಗೆ ಸಹ, ಪುರುಷತ್ವವು ದೊರೆಯುವುದಿಲ್ಲ; ಸಂಸಾರಾವಸ್ಥೆಯಲ್ಲಿ ಸಹ 'ನ ಸ್ತ್ರೀ ಪುಂಸ್ತ್ವಮರ್ಹತಿ'—ಸ್ತ್ರೀಯು ಪುರುಷದೇಹವನ್ನು ಹೊಂದುವುದಿಲ್ಲ; ವಿಷಯಭೋಗದಲ್ಲಿ ಅತ್ಯಾಸಕ್ತರಾದ ಪುರುಷ ಜೀವರಿಗೆ (ಪಾಪನಿಮಿತ್ತವಾಗಿ) ಸ್ತ್ರೀದೇಹವು ಬರುವುದುಂಟು. ಸ್ತ್ರೀಪುರುಷ ಸಂಬಂಧ ನಿಯಮವು ಹೀಗಿರುವಾಗ, ನಿತ್ಯಸೌಭಾಗ್ಯದೇವಿಯೂ ಪರಮಮಂಗಳ ಸ್ತ್ರೀಸ್ವರೂಪಳೂ ಆದ ರಮಾದೇವಿಗೆ ಹಯರೂಪವೆಂದರೆ, ಹೆಣ್ಣು ಕುದುರೆರೂಪವೆಂದೇ ತಿಳಿಯಬೇಕು. ಪ್ರಕೃತ 'ಹಯಾನನಾ' ಎಂಬುದರಿಂದ, ಶ್ರೀವಿಷ್ಣುವಿನಂತೆ ಹಯಮುಖವೂ ಇತರ ಅವಯವಗಳು ಸ್ತ್ರೀದೇಹದಂತೆ ಎಂದೂ ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಃ–ಆ ಶ್ರೀ ವಿಷ್ಣುವು, ಹಯಶೀರ್ಷಃ–ಹಯಗ್ರೀವರೂಪನು, ಅಭೂತ್–ಆದನು; ಶ್ರೀಃ ಅಪಿ–ರಮಾದೇವಿಯೂ, ಹಯಾನನಾ–ಹಯಮುಖವುಳ್ಳವಳು (ಆ ರೂಪವನ್ನು ಧರಿಸಿದವಳು), ಆಸೀತ್–ಆದಳು.

ಹಯರೂಪೀ ಬಭೂವಾಯಂ ರಮಾಪ್ಯಾಸೀತ್ತತೋಽಶ್ವಿನೀ ।
ದೇವಾದ್ಯಾಶ್ಚ ತಥೈವಾಸನ್ ಚಿಕ್ರೀಡೇಽಸೌ ತತಃ ಸುರೈಃ ॥ ೨೮ ॥
ಕಿಂಚಿತ್ಕಾಲಂ ತತಃ ಕಾಮರೂಪೀ ಗೋರೂಪವಾನಭೂತ್ ।
ರಮಾದ್ಯಾಶ್ಚ ತಥೈವಾಸನ್ ಶುದ್ಧಸತ್ವಗುಣೇನ ಸಃ ॥ ೨೯ ॥

ಅಯಂ–ಈ ಶ್ರೀವಿಷ್ಣುವು (ಹೀಗೆ ಬಹುರೂಪಗಳಿಂದ ಮುಕ್ತಬ್ರಹ್ಮಾದಿಗಳೊಂದಿಗೆ ಕ್ರೀಡಿಸುತ್ತಿದ್ದ ನಾಸು), ಹಯರೂಪೀ–ಹಯ (ಕುದುರೆ–ಅಶ್ವ) ರೂಪನು, ಬಭೂವ–ಆದನು; ತತಃ–ಆಗ, ರಮಾಪಿ–ರಮಾದೇವಿಯೂ ಸಹ, ಅಶ್ವಿನೀ–ಹೆಣ್ಣು ಅಶ್ವರೂಪಳು, ಆಸೀತ್–ಆದಳು; ದೇವಾದ್ಯಾಶ್ಚ–ದೇವತೆಗಳೇ ಮೊದಲಾದವರೆಲ್ಲರೂ, ತಥೈವ–ಹಾಗೆಯೇ (ಹರಿಯ ರೂಪರೇ), ಆಸನ್–ಆದರು; ತತಃ–ನಂತರ, ಸುರೈಃ–ದೇವತೆಗಳಿಂದ ಕೂಡಿ, ಅಸೌ–ಈತನು (ಹಯರೂಪೀ ವಿಷ್ಣುವು), ಚಿಕ್ರೀಡೇ–ಕ್ರೀಡಿಸಿದನು; ಕಿಂಚಿತ್ಕಾಲಂ–ಸ್ವಲ್ಪಕಾಲ ಹೀಗೆ ಕ್ರೀಡಿಸಿ, ತತಃ–ನಂತರ, ಸಃ–ಆ, ಕಾಮರೂಪೀ–ಸ್ವೇಚ್ಛಾನುಸಾರವಾದ ರೂಪವನ್ನು ಧರಿಸಲು ಸಮರ್ಥನಾದ ಶ್ರೀವಿಷ್ಣುವು, ಗೋರೂಪವಾನ್–ಗೋರೂಪವುಳ್ಳವನು, ಅಭೂತ್–ಆದನು; ರಮಾದ್ಯಾಃ ಚ–ರಮಾದೇವಿಯೇ ಮೊದಲಾದ ಸ್ತ್ರೀಜೀವರೆಲ್ಲರೂ, (ರಮಾದೇವಿಯೇ ಪ್ರಧಾನಳಾಗಿ ಉಳ್ಳ ಅನ್ಯಸ್ತ್ರೀಯರೆಲ್ಲರೂ–ಆಕೆಯನ್ನು ಬಿಟ್ಟು

ಹಯಗ್ರೀವರೂಪದಿಂದ ಕೆಲವು ಕಾಲ ವಿಹರಿಸಿ, ಹಯರೂಪವನ್ನು ಶ್ರೀವಿಷ್ಣುವು ಧರಿಸಿದನು; (ಆಗ) ರಮಾದೇವಿ ಸಹ ಹಯರೂಪಳಾದಳು; ಎಲ್ಲ ದೇವತೆಗಳೂ ದೇವಸ್ತ್ರೀಯರೂ, ಮುಕ್ತಪುರುಷ ಸ್ತ್ರೀಗಣದವರು ಸಹ, ಗಂಡು ಹೆಣ್ಣು ಹಯರೂಪರಾದರು. ಆಗ ಶ್ರೀವಿಷ್ಣುವು, ಈ ರೂಪಗಳಿಂದ ಸ್ವಲ್ಪಕಾಲ ಕ್ರೀಡಿಸಿ, ಗೋರೂಪವನ್ನು ಧರಿಸಿದನು. ಶ್ರೀವಿಷ್ಣುವು ಕಾಮರೂಪಿಯು; ಸ್ವತಂತ್ರವಾದ ತನ್ನ ಇಚ್ಛಾಮಾತ್ರದಿಂದ ಯಾವ ರೂಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತರರು), ಶುದ್ಧಸತ್ವಗುಣೇನ–ಶುದ್ಧಸತ್ವಗುಣದಿಂದಾದ ಗೋರೂಪದೇಹಿಗಳಾಗಿ, ತಥೈವ–ಹಾಗೆಯೇ, ಆಸನ್–ಆದರು.

ನದೀಪರ್ವತವೃಕ್ಷಾದೀನ್ ನಾನಾರತ್ನಾನಿ ಸೃಷ್ಟವಾನ್ ।
ಸುವರ್ಣರಜತಾದೀನಿ ಭೂಮಿಂ ದ್ಯಾಂ ಸಾಗರಾನಪಿ ॥ ೩೦ ॥

ತತೋ ಮಕರ ಮೀನಾದಿ ನಾನಾ ಜಲಚರಾಣಿ ತು ।
ಸ್ವಯಮೇವಾಭವತ್ಸರ್ವರೂಪಃ ಪುರುಷವಿಗ್ರಹಃ ॥ ೩೧ ॥

ತತ್ತದ್ರೂಪವತೀ ಚಾಥ ರಮಾಪ್ಯಾಸೀತ್ತಥೇತರೇ ।
ಬ್ರಹ್ಮಾದ್ಯಾಶ್ಚ ಸಪತ್ನೀಕಾ ನಿತ್ಯಾನಂದಾ ಯಥೇಚ್ಛತಃ ॥ ೩೨ ॥

ನದೀಪರ್ವತವೃಕ್ಷಾದೀನ್–ನದೀ, ಪರ್ವತ, ವೃಕ್ಷ ಮೊದಲಾದವುಗಳನ್ನೂ, ನಾನಾರತ್ನಾನಿ–ವಿವಿಧರತ್ನಗಳನ್ನೂ, ಸುವರ್ಣರಜತಾದೀನಿ–

ವನ್ನಾದರೂ ಪ್ರಕಟಿಸಲು ಶಕ್ತನಾದ ತಾನು,[1] ತನ್ನ ವಿವಿಧ ಅನಂತಾನಂತ ರೂಪಗಳಲ್ಲಿ, ಗೋರೂಪವನ್ನು ಧರಿಸಿದನು. ರಮಾದೇವಿಯೂ ಗೋರೂಪಳಾದಳು; ಅನ್ಯಮುಕ್ತಗಣದ ಸ್ತ್ರೀಯರೆಲ್ಲರೂ ಶುದ್ಧ ಸತ್ವಾತ್ಮಕ ಗೋರೂಪಗಳನ್ನು ಧರಿಸಿದರು[2] (೨೮–೨೯). ವಿವಿಧ ನದೀಪರ್ವತವೃಕ್ಷಗಳನ್ನೂ,

---

1 ಅನ್ಯಕಾಮಿರೂಪಿಗಳೆಂಬ ರಾಕ್ಷಸಾದಿ ಜೀವರು, ಸ್ವಾಭಾವಿಕವಲ್ಲದ ತಾತ್ಕಾಲಿಕ ಯೋಗಶಕ್ತಿಯಿಂದ ಇಚ್ಛಿತ ಭೌತಿಕದೇಹಗಳನ್ನು ಸ್ವೀಕರಿಸಲು ಮಾತ್ರ ಸಮರ್ಥರು. ಶ್ರೀಹರಿಯ ರೂಪಗಳೆಲ್ಲ ಸಚ್ಚಿದಾನಂದಾತ್ಮಕವಾದವುಗಳು–ಇಚ್ಛಿತ ರೂಪಗ್ರಹಣವು ಆತನ ಸಹಜವಾದ ಸ್ವತಂತ್ರ (ಅನ್ಯಾಧೀನವಲ್ಲದ) ಸಾಮರ್ಥ್ಯವು.

2 ಜಗನ್ನಿರ್ಮಾಣದಲ್ಲಿ ಅಪಾರವಾದ ಮೂಲಪ್ರಕೃತಿಯ ಒಂದು ಭಾಗ ಮಾತ್ರ ಉಪಯೋಗಿಸಲ್ಪಡುತ್ತದೆ. ಹೀಗೆ ಉಪಯೋಗಿಸಲ್ಪಡದ ಪ್ರಕೃತಿಯೂ, ಸೂಕ್ಷ್ಮ ಸತ್ವಾದಿ ಗುಣಾತ್ಮಕವಾದುದೇ. ಇದರ ಸತ್ವಗುಣವು 'ಶುದ್ಧಸತ್ವ'ವೆಂದು ಕರೆಯಲ್ಪಡುತ್ತದೆ. ಶುದ್ಧಸತ್ತ್ವಗುಣವೂ ಪ್ರಾಕೃತವೇ; ಇದು, ಮುಕ್ತರ ಇಚ್ಛಾನುಸಾರವಾಗಿ, ಅವರಿಂದ ಭೋಗ್ಯವಾಗುವ ಫಲಪುಷ್ಪ ಮೊದಲಾದ ವಸ್ತುರೂಪದಿಂದಲೂ, ಮುಕ್ತರಿಂದ ಸ್ವೇಚ್ಛೆಯಿಂದ ಸ್ವೀಕರಿಸಲ್ಪಡುವ ದೇಹರೂಪದಿಂದ ಸಹ, ಉಪಯೋಗಿಸಲ್ಪಟ್ಟು, ಸಮುದ್ರದಿಂದ ಅಲೆಗಳು ಮೇಲೆದ್ದು, ಪುನಃ ಅಲ್ಲಿಯೇ ಲೀನವಾಗುವಂತೆ, ಶುದ್ಧಸತ್ವದಲ್ಲಿಯೇ ಲೀನವಾಗುತ್ತದೆ. ಈ ಪ್ರಮೇಯ, ಈ ಗ್ರಂಥದಲ್ಲಿ ಕ್ರಮಶಃ ಪ್ರಸಕ್ತವಾಗಲಿದೆ; ಅಲ್ಲಿ ಇದರ ವಿವರಣವು ವಿಸ್ತಾರದಿಂದ ಕೈಗೊಳ್ಳಲಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಂಗಾರ ಬೆಳ್ಳಿಗಳ ಸಮೃದ್ಧಿಯುಳ್ಳ, ಭೂಮಿಂ–ಭೂಮಿಯನ್ನೂ, ದ್ಯಾಂ–ಅಂತರಿಕ್ಷ (ಅಥವಾ ಸ್ವರ್ಗ) ವನ್ನೂ, ಅಪಿ–ಮತ್ತು, ಸಾಗರಾನ್–ಸಮುದ್ರಗಳನ್ನೂ, ಸೃಷ್ಟವಾನ್–(ಸಃ–ಶ್ರೀವಿಷ್ಣುವು, ಶುದ್ಧಸತ್ವಗುಣೇನ–ಶುದ್ಧಸತ್ವದಿಂದ) ಸೃಷ್ಟಿಸಿದವನಾದನು ; ತತಃ–ನಂತರ, ಮಕರ ಮೀನಾದಿ ನಾನಾ ಜಲಚರಾಣಿ ತು–ಮೊಸಳೆ, ಮೀನು ಮೊದಲಾದ ಜಲಚರಪ್ರಾಣಿಗಳನ್ನೂ, (ಸೃಷ್ಟವಾನ್–ಸೃಷ್ಟಿಸಿದನು) ; ಪುರುಷವಿಗ್ರಹಃ–ಮೂಲನಾರಾಯಣರೂಪದಲ್ಲಿ ಪುರುಷಾಕಾರದ ಸಚ್ಚಿದಾನಂದ ದೇಹವುಳ್ಳ, ಸ್ವಯಂ ಏವ–ತಾನೇ, ಸರ್ವರೂಪಃ – ನಿರ್ಮಿತಗಳಾದ ಮೇಲಿನ ಎಲ್ಲ ವಸ್ತುಗಳ ರೂಪನೂ, ಅಭವತ್–ಆದನು ; ಅಥ–ಅನಂತರದಲ್ಲಿ, ರಮಾ ಅಪಿ–ರಮಾದೇವಿಯೂ ಸಹ, ತತ್ತದ್ರೂಪವತೀ–ಆಯಾ ರೂಪಳು, (ಶ್ರೀವಿಷ್ಣು ಧರಿಸಿದ ರೂಪಗಳಿಗೆ

ಸುವರ್ಣರಜತಾದಿ ನಾನಾರತ್ನಗಳನ್ನೂ, ಭೂಮಿ, ಸ್ವರ್ಗ, ಸಾಗರಗಳನ್ನೂ, ಇಚ್ಛಾಮಾತ್ರದಿಂದ ಸತ್ವಾದಿ ಶುದ್ಧಪ್ರಕೃತಿಗುಣಗಳಿಂದ ನಿರ್ಮಿಸಿದನು; ನಂತರ ಮೀನು ಮೊಸಳೆ ಮೊದಲಾದ ಜಲಚರಪ್ರಾಣಿಗಳನ್ನೂ ಸೃಷ್ಟಿಸಿದನು;[1]

---

[1] ಸಾಮಾನ್ಯ ಮುಕ್ತ ಮನುಷ್ಯೋತ್ತಮಾದಿ ಜೀವರು ಸಹ ಇಚ್ಛಾಮಾತ್ರದಿಂದ ಶುದ್ಧಸತ್ವಾತ್ಮಕದೇಹಗಳನ್ನು ಧರಿಸಿ, ಶುದ್ಧಸತ್ವಾತ್ಮಕ ಫಲಪುಷ್ಪಾದಿ ಭೋಗ್ಯ ವಸ್ತುಗಳನ್ನು ಸಂಕಲ್ಪಮಾತ್ರದಿಂದ ಪಡೆದು ಭೋಗಿಸಲು ಶಕ್ತರಾಗಿರುವಾಗ, ಈ ವಿಧವಾದ ಅದ್ಭುತ ಸೃಷ್ಟಿಯು ಶ್ರೀವಿಷ್ಣುವಿನಲ್ಲಿ ಆಶ್ಚರ್ಯವಲ್ಲ—ಆದರೆ ಒಂದು ಮುಖ್ಯ ಪ್ರಮೇಯವನ್ನು ತಪ್ಪದೇ ಗಮನದಲ್ಲಿಡಬೇಕು. ಅದೇನೆಂದರೆ, ರಮಾನಾರಾಯಣರು, ಎಂದೂ ಯಾವ ಕಾರಣದಿಂದಲೂ ಶುದ್ಧಸತ್ವಾದಿ ಪ್ರಾಕೃತ ಗುಣನಿರ್ಮಿತ ದೇಹಗಳನ್ನು ಧರಿಸುವುದಿಲ್ಲ. ಅವರು ನಿತ್ಯವೂ ತಮ್ಮ ಸರ್ವರೂಪಗಳಲ್ಲಿ ಚಿದಾನಂದಸ್ವರೂಪರೇ ಸರಿ. ಅಪ್ರಾಕೃತಸ್ವರೂಪಗಳಿಂದಲೇ ಪ್ರಾಕೃತರೊಡನೆಯೂ, ಮುಕ್ತರೊಂದಿಗೂ ಯಥೇಚ್ಛವಾಗಿ ವಿಹರಿಸುತ್ತಾರೆ. ಮುಕ್ತಜೀವರ ಸ್ವರೂಪದೇಹಗಳು, ಅಣುಪರಿಮಾಣದವುಗಳು—ವ್ಯಾಪ್ತಗಳಲ್ಲ; ಶ್ರೀಹರಿಯ ಅಚಿಂತ್ಯಾದ್ಭುತಶಕ್ತಿಯ ಬಲದಿಂದ, ಆತನ ಅನುಗ್ರಹದಿಂದ, ಯದ್ಯಪಿ, ಸ್ವರೂಪದೇಹಗಳೂ, ಮುಕ್ತರ ನಾನಾಭೋಗಗಳಿಗೆ ಅವಕಾಶವಾಗುವಂತೆ, (ಅವುಗಳ ನಿರ್ವಿಕಾರಿತ್ವಕ್ಕೆ ವಿರೋಧವಿಲ್ಲದಂತೆ) ಬೆಳೆಯುತ್ತವೆ; ಹೀಗಿದ್ದರೂ ತಮ್ಮ ಇಚ್ಛಾಭೋಗಗಳಿಗಾಗಿ ಮುಕ್ತರು ಶುದ್ಧಸತ್ವಾತ್ಮಕ ದೇಹಗಳನ್ನೂ ಧರಿಸುತ್ತಾರೆ. ರಮಾನಾರಾಯಣರ ಸ್ವರೂಪಗಳು (ಅವರ ಸರ್ವರೂಪಗಳೂ) ವ್ಯಾಪ್ತಗಳೇ—ಜೀವರಂತೆ ಅಣುಗಳಲ್ಲ. ಈ ವಿಶೇಷವೈಲಕ್ಷಣ್ಯವನ್ನೂ ಗಮನದಲ್ಲಿಡಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸದೃಶಗಳಾದ ಸ್ತ್ರೀರೂಪಗಳುಳ್ಳವಳು), ಆಸೀತ್–ಆದಳು ; ತಥಾ–ಹಾಗೂ, ಇತರೇ–ಅನ್ಯರಾದ, ನಿತ್ಯಾನಂದಾಃ–ಮುಕ್ತರಾದ, ಸಪತ್ನೀಕಾಃ–ತಂತಮ್ಮ ಪತ್ನಿಯರಿಂದ ಸಹಿತರಾದ, ಬ್ರಹ್ಮಾದ್ಯಾಶ್ಚ – ಬ್ರಹ್ಮಾದಿ ಜೀವರೂ ಕೂಡ, ಯಥೇಚ್ಛತಃ – ಸ್ವೇಚ್ಛಾನುಸಾರವಾಗಿ, (ತಥಾ ಆಸನ್ – ಶ್ರೀವಿಷ್ಣುರೂಪ ಗಳೊಂದಿಗೆ ಕ್ರೀಡಿಸಲು ತೊಡಗಿದರು).

ಭೂಮೌ ಚಾಪ್ಯಸೃಜತ್ ಸೋಽಥ ಸ್ವಾತ್ಮಾನಂ ಶಿಲ್ಪವಿತ್ತಮಂ ।
ನಾನಾಶಿಲ್ಪಾನಿ ಚಕ್ರೇ ಸ ಸರ್ವವೇತ್ತಾ ಜಗತ್ಪತಿಃ ॥ ೩೩ ॥
ಶಿಷ್ಯತ್ವೇ ಕಲ್ಪಯಾಮಾಸ ಬ್ರಹ್ಮಾದ್ಯಾಃ ಸರ್ವದೇವತಾಃ ।
ಗ್ರಾಮ್ಯಾರಣ್ಯಪಶೂನಾಂ ಸ ಬಭ್ರೇ ರೂಪಾಣಿ ದೇವರಾಟ್ ॥ ೩೪ ॥

ಮುಕ್ತರೊಡನೆ ಶ್ರೀವಿಷ್ಣುವು ಕ್ರೀಡಿಸಿದ ವಿವರಗಳನ್ನು ಇಲ್ಲಿಂದ ಮುಂದೆ ವಿವರಿಸಲಾಗುತ್ತದೆ—

ಭೂಮೌ–(ಹಾಗೆ ನಿರ್ಮಿತವಾದ ಶುದ್ಧಸತ್ತ್ವಾತ್ಮಕ) ಭೂಮಿಯಲ್ಲಿ, ಸಃ–ಶ್ರೀವಿಷ್ಣುವು, ಸ್ವಾತ್ಮಾನಂ ಅಪಿ–ತನ್ನನ್ನೂ, ಶಿಲ್ಪವಿತ್ತಮಂ–ಶಿಲ್ಪಜ್ಞ ಶ್ರೇಷ್ಠನನ್ನಾಗಿ (ಆ ರೂಪದಿಂದ), ಅಥ–ನಂತರ (ತನ್ನ ಕ್ರೀಡೆಯನ್ನಾರಂಭಿ ಸುವ ಮೊದಲು), ಅಸೃಜತ್–ವ್ಯಕ್ತನನ್ನಾಗಿ ಮಾಡಿಕೊಂಡನು ; ಸಃ ಸರ್ವ– ವೇತ್ತಾ ಜಗತ್ಪತಿಃ–ಆ ಸರ್ವಜ್ಞನಾದ ಜಗದೊಡೆಯನು, ನಾನಾಶಿಲ್ಪಾನಿ– ಬಹುವಿಧ ಶಿಲ್ಪಗಳನ್ನು (ಬಹುವಿಧ ಕಲಾಕೃತಿಗಳನ್ನು – ಪುರ, ಉದ್ಯಾನ, ಗೋಪುರಾದಿಗಳನ್ನು), ಚಕ್ರೇ – ನಿರ್ಮಿಸಿದನು ; ಬ್ರಹ್ಮಾದ್ಯಾ – ಬ್ರಹ್ಮನೇ ಮೊದಲಾದ, ಸರ್ವದೇವತಾಃ–ಎಲ್ಲ (ಮುಕ್ತ) ದೇವತೆಗಳನ್ನು, ಶಿಷ್ಯತ್ವೇ– ಶಿಷ್ಯರನ್ನಾಗಿ, ಕಲ್ಪಯಾಮಾಸ – ನೇಮಿಸಿಕೊಂಡನು ; ದೇವರಾಟ್–

ಈ ಎಲ್ಲ ವಸ್ತುಗಳನ್ನು ಚೇಷ್ಟಿಸಲು, ಮೂಲಪುರುಷರೂಪಿಯಾದ ತಾನೇ, ತದಾಕಾರದ ಅಸಂಖ್ಯರೂಪಗಳುಳ್ಳವನಾದನು ; ಆಗ ರಮಾದೇವಿಯು ತದನುರೂಪವಾದ ಅಸಂಖ್ಯ ಸ್ತ್ರೀರೂಪಗಳುಳ್ಳವಳಾದಳು ; ಸಪತ್ನೀಕರಾದ ಮುಕ್ತಬ್ರಹ್ಮಾದಿ ಜೀವರು, ಶ್ರೀವಿಷ್ಣುವಿನ ಈ ಅದ್ಭುತ ಕ್ರೀಡೆಯಲ್ಲಿ ಅಂಗ ಭೂತರಾಗಿ ಕ್ರೀಡಿಸಲು ಯಥಾಯೋಗ್ಯ ಶುದ್ಧಸತ್ತ್ವಾತ್ಮಕ ದೇಹಗಳನ್ನು ಧರಿಸಿ, ಸಿದ್ಧರಾದರು (೩೦-೩೨). ಹಾಗೆ ನಿರ್ಮಿಸಿದ ಭೂಮಿಯಲ್ಲಿ, ತಾನು,

*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇವೋತ್ತಮನಾದ, ಸಃ–ಆ ವಿಷ್ಣುವು, ಗ್ರಾಮ್ಯಾರಣ್ಯಪಶೂನಾಂ–ಗ್ರಾಮಗಳಲ್ಲಿಯೂ ಅರಣ್ಯಗಳಲ್ಲಿಯೂ ಇರುವ ಪಶುಗಳ, ರೂಪಾಣಿ–ರೂಪಗಳನ್ನು, ಬಭ್ರೇ–ಧರಿಸಿದನು.

ಮಹಾರಾಜೋಽಭವತ್ಸೋಽಥ ತಥಾ ಸಾಮಂತರೂಪವಾನ್ ।
ಪ್ರಾಧಾನ್ಯೇ ಯೋಜಯಾಮಾಸ ತಥಾಮಾತ್ಯಾದಿಕರ್ಮಸು ॥ ೩೫॥
ಬ್ರಹ್ಮಾದೀನೇವ ದೇವೇಶಃ ಸರ್ವದಾನಂದವಿಗ್ರಹಃ ।

ಒಂದು ಪ್ರಕಾರದ ಶ್ರೀಹರಿಕ್ರೀಡೆಯನ್ನು ವರ್ಣಿಸುತ್ತಾರೆ—

ಅಥ-ಅನಂತರದಲ್ಲಿ, ಸಃ-ಆ ವಿಷ್ಣುವು, ಮಹಾರಾಜಃ-ಮಹಾರಾಜನೂ, ತಥಾ–ಹಾಗೂ, ಸಾಮಂತರೂಪವಾನ್–ಸಾಮಂತರ ರೂಪಗಳುಳ್ಳವನೂ, ಅಭವತ್ – ಆದನು; ಪ್ರಾಧಾನ್ಯೇ – ಮುಖ್ಯಾಧಿಕಾರಿಸ್ಥಾನದಲ್ಲಿ, ತಥಾ-ಹಾಗೂ, ಅಮಾತ್ಯಾದಿ ಕರ್ಮಸು – ಸಚಿವಸ್ಥಾನ ಯೋಗ್ಯಕರ್ಮಗಳಲ್ಲಿ, ದೇವೇಶಃ–ಸಕಲ ದೇವತೆಗಳೊಡೆಯನಾದ, ಶ್ರೀವಿಷ್ಣುವು, ಸರ್ವದಾನಂದ

ಶಿಲ್ಪಶ್ರೇಷ್ಠನೂ ಜಗತ್ಪ್ರಭುವೂ ಆದ ತನ್ನದೊಂದು ರೂಪವನ್ನು ಪ್ರಕಟಗೊಳಿಸಿದನು; ಬ್ರಹ್ಮಾದಿ ಮುಕ್ತದೇವತೆಗಳನ್ನು, ಶಿಷ್ಯರನ್ನಾಗಿ ಮಾಡಿಕೊಂಡು, ಭೂಮಿಯಲ್ಲಿ ಪುರೋದ್ಯಾನಾದಿ ನಾನಾಶ್ರೇಷ್ಠ ಶಿಲ್ಪಕೃತಿಗಳನ್ನು ನಿರ್ಮಿಸಿದನು.[1] ಅಲ್ಲಿ ನಾನಾಗ್ರಾಮ್ಯ, ಆರಣ್ಯ ಪಶುಗಳನ್ನು ನಿರ್ಮಾಣಮಾಡಿ, ತಾನೇ ಅವುಗಳ ಚೇಷ್ಟಕರೂಪಗಳಿಂದ ಅವುಗಳಲ್ಲಿ ಪ್ರವಿಷ್ಟನಾದನು[2] (೩೩-೩೪). ನಂತರ ಶ್ರೀವಿಷ್ಣುವು ತಾನು ಮಹಾರಾಜನಾಗಿ, ತಾನೇ ಸಾಮಂತರಾಜರ

---

1 ದೇವಶಿಲ್ಪಿಯಾದ 'ವಿಶ್ವಕರ್ಮ'ನ ಅಂತರ್ಯಾಮಿಯೂ, ನಿಯಾಮಕನೂ, ಅವನಲ್ಲಿದ್ದು ಸರ್ವಕಲಾಕೃತಿಗಳನ್ನು ಮಾಡಿ ಮಾಡಿಸುವವನೂ, ತನ್ನಾಮಕನೂ (ವಿಶ್ವಕರ್ಮನೆಂದೇ ನಾಮವುಳ್ಳ) ಆದ 'ವಿಶ್ವಕರ್ಮ'ರೂಪದ ಅಭಿವ್ಯಕ್ತಿ—ಇದು ಎಂದು ತಿಳಿಯಬೇಕು.

2 ಶುದ್ಧಸತ್ತ್ವಾತ್ಮಕವಾದರೂ ಶ್ರೀವಿಷ್ಣುವು, ಪ್ರಾಕೃತವೇ ಆದ, ದೇಹವನ್ನು ಧರಿಸಿರುವನೆಂದು ಭ್ರಮಿಸಲಾಗದು; ವಿಶ್ವದ ಜಡವಸ್ತುಗಳಲ್ಲಿ ವ್ಯಾಪ್ತನಾದ ಅಪ್ರಾಕೃತಗಳಾದ ಶ್ರೀಹರಿರೂಪಗಳಂತೆ ಸಚ್ಚಿದಾನಂದರೂಪಗಳಿಂದಲೇ ಪ್ರವೇಶಿಸಿ, ದೇಹಸಂಬಂಧವಿಲ್ಲದೇ ನಿಯಾಮಕನಾಗಿರುವನೆಂದು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಗ್ರಹಃ–ನಿತ್ಯಪೂರ್ಣಾನಂದಸ್ವರೂಪನಾದ ತಾನು, (ಅತ ಏವ, ಸರ್ವ ನಿರ್ವಾಹಕನು ತಾನೇ ಆಗಿರಲು ಸಮರ್ಥನಾದರೂ), ಬ್ರಹ್ಮಾದೀನ್ ಏವ–ಬ್ರಹ್ಮಾದಿ ದೇವತೆಗಳನ್ನೇ, ಯೋಜಯಾಮಾಸ – ಯೋಜನೆಮಾಡಿದನು (ಆಜ್ಞಾಪಿಸಿ, ನೇಮಿಸಿಕೊಂಡನು).

ಯೇ ತು ನಿತ್ಯಂ ತಮೋವಿಷ್ಟಾಃ ಪಾಪರೂಪಾಸ್ಸ್ವಭಾವತಃ ॥ ೩೬ ॥

ಚೋರತ್ವೇ ಕಲ್ಪಯಾಮಾಸ ದಂಡಯಾಮಾಸ ತಾನಪಿ ।

ಯೇ ತು–ಯಾರಾದರೋ, ಸ್ವಭಾವತಃ–ಸ್ವಭಾವದಿಂದಲೇ, ಪಾಪರೂಪಾಃ–ಪಾಪಸ್ವರೂಪರೋ, ನಿತ್ಯಂ ತಮಃ–ನಿತ್ಯನರಕವನ್ನು, ವಿಷ್ಟಾಃ–ಪ್ರವೇಶಮಾಡಿರುವರೋ, ತಾನ್–ಅವರನ್ನು (ಮುಕ್ತತಾಮಸಜೀವರನ್ನು), ಚೋರತ್ವೇ–ಚೋರತ್ವದಲ್ಲಿ (ಭಗವದ್ಗುಣಗಳನ್ನು ಕದ್ದು, ಎಂದರೆ ಗುಣಶೂನ್ಯನೆಂದು ತಿಳಿದು, ಅಥವಾ ನಾನೇ ಬ್ರಹ್ಮಸ್ವರೂಪನೆಂದು ಬ್ರಹ್ಮತ್ವ ಜೀವನಲ್ಲಿ ಆರೋಪಣೆಮಾಡಿಕೊಂಡು ನಿತ್ಯನರಕವನ್ನು ಹೊಂದಿದವರನ್ನು

ರೂಪದಿಂದಲೂ, ಇರುವವನಾದನು;[1] ಪ್ರಧಾನಿ ಹಾಗೂ ಅಮಾತ್ಯರ ಸ್ಥಾನಗಳಿಗೆ ಬ್ರಹ್ಮಾದಿ ದೇವತೆಗಳನ್ನು ನೇಮಿಸಿಕೊಂಡನು; ಪೂರ್ಣಾನಂದ ಸ್ವರೂಪನೂ,[2] ಅತ ಏವ ಸರ್ವಶಕ್ತನೂ ಆದ ಶ್ರೀ ವಿಷ್ಣುವಿನ ಈ ಲೀಲೆಯು ಆಶ್ಚರ್ಯಕರವಲ್ಲವೇ! ದೇವತೆಗಳಿಗೆ (ಮುಕ್ತರಿಗೆ) ಆನಂದಪ್ರದವಲ್ಲವೇ! (೩೫). ಮಹಾರಾಜನಾಗಿ, ಸಾಮಂತರ ಸಭೆಯಲ್ಲಿ ಕೂತು, ಬ್ರಹ್ಮಾದಿಗಳನ್ನು ಸಚಿವರನ್ನಾಗಿ ಮಾಡಿಕೊಂಡ ನಂತರ, ಅಂಧತಮಸ್ಸಿನಲ್ಲಿ ಬಿದ್ದಿರುವ

---

[1] ಕ್ರೀಡಾದಿಗಳಲ್ಲಿ ಸಹ ಸ್ವಾಮಿತ್ವ, ಸ್ವತಂತ್ರತ್ವದ್ಯೋತಕವಾದ ರಾಜತ್ವವನ್ನು–ಸಾಮಂತರಾಜತ್ವವನ್ನೂ (ಪಾರ್ಶ್ವಸ್ಥ ಅಧೀನರಾದ ರಾಜರು) ಶ್ರೀಹರಿಯು ಜೀವರಿಗೆ ಕೊಡುವುದಿಲ್ಲ. ಮುಕ್ತಜೀವರಿಗೆ ಸಹ, ಸ್ವತಂತ್ರಭ್ರಮೆಯುಂಟಾಗುವ ಸನ್ನಿವೇಶ ಸಹ ಇರಕೂಡದೆಂಬ ಅಪಾರವಾತ್ಸಲ್ಯ—ಮಹಾಪ್ರಭುವಿನದು. ಪ್ರಧಾನಿ, ಸಚಿವಾದಿ ರಾಜಭೃತ್ಯರ (ರಾಜಾಜ್ಞಾ ನಿರ್ವಾಹಕರ) ಸ್ಥಾನದಲ್ಲಿಯೇ ಇಡುತ್ತಾನೆ.

[2] ಪೂರ್ಣಾನಂದಸ್ವರೂಪನಾದ ಶ್ರೀಹರಿಯು, ಆನಂದಲೇಶದಿಂದ, ಜಗತ್ಸೃಷ್ಟ್ಯಾದಿ ಸಕಲವನ್ನೂ ಲೀಲೆಯಿಂದ, ನಿರ್ವಹಿಸುತ್ತಾನೆ. ಆನಂದದಿಂದಿರುವನೇ ಲೀಲೆಯಲ್ಲಿ ಆಸಕ್ತನಾಗುವನು—ಅನ್ಯರಲ್ಲ (ದುಃಖಿಗಳಲ್ಲ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಳ್ಳರ ಸ್ಥಾನದಲ್ಲಿ), ಕಲ್ಪಯಾಮಾಸ–ಗೊತ್ತುಮಾಡಿ ನಿಲ್ಲಿಸಿದನು; ಅಪ್ಪಿ– ಮತ್ತು, ದಂಡಯಾಮಾಸ–ಶಿಕ್ಷಿಸುತ್ತಿದ್ದನು.

ಪ್ರಜಾರೂಪಾಂಶ್ಚಕಾರಾನ್ಯಾನ್ ಮುಕ್ತಾನೇವ ಹ್ಯನೇಕಶಃ ॥ ೩೭ ॥
ನಿತ್ಯಾನಂದಾನ್ ಲೀಲಯೈವ ವಿಷ್ಣುಭಕ್ತಿಪರಾಯಣಾನ್ ।
ದುಃಖಲೇಶವಿನಿರ್ಮುಕ್ತಾನ್ ಸ್ವಸ್ವವೃತ್ತ್ಯೈವ ತೋಷಿತಾನ್ ॥ ೩೮ ॥
ಅಸೂಯಾದ್ಯಖಿಲೈರ್ದೋಷೈರ್ವರ್ಜಿತಾನ್ ಲೀಲಯೈವ ಹಿ ।
ವಿಕ್ರೀಣಂತಶ್ಚ ಕ್ರೀಣಂತೋ ಹರಿತುಷ್ಟ್ಯರ್ಥಮೇವ ಹಿ ॥ ೩೯ ॥

ಅನ್ಯಾನ್–ಇತರ, ಮುಕ್ತಾನ್ ಏವ–ಮುಕ್ತಜೀವರನ್ನೇ, ಅನೇಕಶಃ– ಬಹುಸಂಖ್ಯೆಯಲ್ಲಿ, ಅಥವಾ ಬಹುಪ್ರಕಾರದ, ಪ್ರಜಾರೂಪಾನ್–ಪ್ರಜೆಗಳ ನ್ನಾಗಿ, ಚಕಾರ–ಮಾಡಿದನು (ನಿಲ್ಲಿಸಿದನು–ಸ್ಥಾಪಿಸಿದನು); (ಈ ಎಲ್ಲ ರನ್ನೂ) ದುಃಖಲೇಶವಿನಿರ್ಮುಕ್ತಾನ್ – ದುಃಖಲೇಶರಹಿತರೂ, ಸ್ವಸ್ವ- ವೃತ್ತ್ಯೈವ–ತಂತಮ್ಮ (ಮುಕ್ತಾವಸ್ಥೆಯಲ್ಲಿ ಸಹಜವಾದ, ಕಥಾಶ್ರವಣ, ಧ್ಯಾನ, ಯಜ್ಞಾದಿ ಕರ್ಮಕರಣ ಇತ್ಯಾದಿ) ವೃತ್ತಿಗಳಿಂದ ಸಂತುಷ್ಟರೂ, ನಿತ್ಯಾನಂದವನ್ನು ಅನುಭವಿಸುವವರೂ, ಲೀಲಯಾ – ಲೀಲೆಯಿಂದಲೇ, ವಿಷ್ಣುಭಕ್ತಿಪರಾಯಣಾನ್–ಶ್ರೀವಿಷ್ಣುವಿನಲ್ಲಿ ಭಕ್ತಿಯನ್ನು ಮಾಡುವ (ಅನ್ಯ ಫಲಕ್ಕೆ ಸಾಧನವಲ್ಲದ ಸ್ವಾಭಾವಿಕವಾದ ಭಕ್ತಿಯುತರಾದ), ಅಸೂಯಾದಿ– ಅಸೂಯೆಯೇ (ದ್ವೇಷಾದಿ) ಮೊದಲಾದ, ದೋಷೈಃ–ದೋಷಗಳಿಂದ, ವರ್ಜಿತಾನ್–ಬಿಡಲ್ಪಟ್ಟವರಾದ (ರಹಿತರಾದ), (ಈ ಮುಕ್ತರನ್ನು ರಾಜ್ಯದ

ಮುಕ್ತಕಲ್ಯಾದಿ ದೈತ್ಯರನ್ನು ಕಳ್ಳರನ್ನಾಗಿ ಕಲ್ಪಿಸಿ (ತಂದು ಅಪರಾಧಿ ಸ್ಥಾನ ದಲ್ಲಿ ನಿಲ್ಲಿಸಿ), ಪಾಪಸ್ವರೂಪರಾದ ಅವರನ್ನು ಶಿಕ್ಷಿಸುತ್ತಿದ್ದನು (೩೬). ದುಃಖಾದಿ ದೋಷಲೇಶರಹಿತರೂ, ತಂತಮ್ಮ ಸ್ವಾಭಾವಿಕ ಪ್ರವೃತ್ತಿಗಳಿಂದ ಸಂತುಷ್ಟರಾಗುವವರೂ, ನಿತ್ಯಾನಂದಸ್ವರೂಪರೂ, ವಿಷ್ಣುಭಕ್ತಿ ಪರಾಯಣರೂ, ಅಸೂಯಾದಿ ದೋಷಗಳಿಲ್ಲದವರೂ, ಆದ ಮುಕ್ತರನ್ನು ಪ್ರಜೆಗಳನ್ನಾಗಿಟ್ಟುಕೊಂಡನು; ಅವರೆಲ್ಲರೂ ಕ್ರಯವಿಕ್ರಯ ವ್ಯವಹಾರ ಗಳನ್ನು ಶ್ರೀವಿಷ್ಣುಪ್ರೀತ್ಯರ್ಥವಾಗಿಯೇ, ಕ್ರೀಡೆಗಾಗಿ ಮಾಡುತ್ತಿದ್ದರು (೩೭–೩೯). ಒಂದು ವೇಳೆ, ಶ್ರೀವಿಷ್ಣು ತನ್ನ ಅಸಂಖ್ಯರೂಪಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಜೆಗಳನ್ನಾಗಿ ನೇಮಿಸಿದನು) ; (ಅವರು), ಕ್ರೀಣಂತಃ-(ಪದಾರ್ಥಗಳನ್ನು) ಕೊಳ್ಳುವವರೂ, ವಿಕ್ರೀಣಂತಃ–ಮಾರುವವರೂ, ಲೀಲಯಾ–ಕ್ರೀಡೆಗಾಗಿ, ಮತ್ತು, ಹರಿತುಷ್ಟ್ಯರ್ಥಮೇವ–ಶ್ರೀಹರಿಪ್ರೀತ್ಯರ್ಥವಾಗಿಯೇ, ಆಸನ್– (ವ್ಯವಹರಿಸುವವರೂ) ಆದರು (ಎಂದು ಮುಂದಿನ ಶ್ಲೋಕದಿಂದ ಅನ್ವಯ ಮಾಡಿಕೊಳ್ಳಬೇಕು) ; ಹಿ–ಶ್ರೀ ವಿಷ್ಣುವಿನ ಮುಕ್ತಕ್ರೀಡನವು ಹೀಗೆಂದು ಪ್ರಮಾಣಸಿದ್ಧವೇ ಸರಿ.

ಆಸನ್ ಕದಾಚಿತ್ ಸ್ತ್ರೀರೂಪೋ ನಾನಾರೂಪಸಹಸ್ರಕೈಃ ।
ಸರ್ವೇಽಪಿ ದೇವಾ ಸ್ತ್ರೀರೂಪಾ ಭೂತ್ವಾ ತಾನಿ ನಿಷೇವಿರೇ ॥ ೪೦ ॥
ತಾನಿ ಪ್ರಚ್ಛಾದ್ಯ ರೂಪಾಣಿ ಪುನಃ ಪುರುಷರೂಪಕಃ ।
ಜಾತೋ ದೇವಾಸ್ತತೋಽಪ್ಯಾಸನ್ ಸರ್ವೇ ಪುರುಷರೂಪಿಣಃ ॥ ೪೧ ॥

ಕದಾಚಿತ್–ಮತ್ತೊಂದು ವೇಳೆ, ನಾನಾರೂಪಸಹಸ್ರಕೈಃ–ಸಹಸ್ರಾರು ರೂಪಗಳಿಂದ, ಸ್ತ್ರೀರೂಪಃ–ಸ್ತ್ರೀರೂಪನು ; ಜಾತಃ–ಆದನು ; ಸರ್ವೇಽಪಿ ದೇವಾಃ–ಎಲ್ಲ ದೇವತೆಗಳೂ, ಸ್ತ್ರೀರೂಪಾಃ–ಸ್ತ್ರೀರೂಪರು, ಭೂತ್ವಾ–ಆಗಿ, ತಾನಿ–(ಶ್ರೀವಿಷ್ಣುವಿನ) ಆ (ಸ್ತ್ರೀ) ರೂಪಗಳನ್ನು, ನಿಷೇವಿರೇ–ಸೇವಿಸಿದರು ; ತಾನಿ ರೂಪಾಣಿ–ಆ ತನ್ನ ಸ್ತ್ರೀರೂಪಗಳನ್ನು, ಪ್ರಚ್ಛಾದ್ಯ–ಮುಚ್ಚಿಕೊಂಡು (ಅದೃಶ್ಯಗೊಳಿಸಿ), ಪುನಃ–ಮತ್ತೆ, ಪುರುಷರೂಪಕಃ–ಪುರುಷರೂಪ ಉಳ್ಳವನು, ಜಾತಃ–ಆದನು ; ತತಃ–ಆಗ, ದೇವಾಃ–ದೇವತೆಗಳು, ಸರ್ವೇ ಅಪಿ– ಎಲ್ಲರೂ ಸಹ, ಪುರುಷರೂಪಿಣಃ–ಪುರುಷರೂಪವುಳ್ಳವರು, ಆಸನ್–ಆದರು.

ಕೇಚಿದ್ಯಜ್ಞೈರೀಜಿರೇ ವಿಷ್ಣುಮೇವ
ನಾನಾರೂಪಂ ಕೇಚಿದಧ್ಯಾಪಯಂಶ್ಚ ।
ಸ್ವಸ್ವಾಮ್ನ್ಯಾನಾನ್ ಕೇಚಿತ್ ಆಹುಃ ಪುರಾಣಾ-
ನೀತಿಹಾಸಾನ್ಕೇಚಿದಾಹುರ್ವಿಮಿಥಶ್ಚ ॥ ೪೨ ॥

ಕೇಚಿತ್ – (ಆ ಮುಕ್ತಪ್ರಜೆಗಳಲ್ಲಿ) ಕೆಲವರು, ಯಜ್ಞೈಃ – ಯಜ್ಞಗಳಿಂದ, ವಿಷ್ಣುಂ ಏವ–ಶ್ರೀವಿಷ್ಣುವನ್ನೇ, ಈಜಿರೇ–ಪೂಜಿಸಿದರು ; ಕೇಚಿತ್-

---

ಸ್ತ್ರೀರೂಪಗಳನ್ನಾಗಿ ಮಾಡಿದನು ; ಎಲ್ಲ ದೇವತೆಗಳೂ ಸ್ತ್ರೀರೂಪರಾಗಿ ಆತನನ್ನು ಸೇವಿಸಿದರು ; ಪುನಃ, ಶ್ರೀವಿಷ್ಣುವು ಎಲ್ಲವನ್ನೂ ಪುರುಷರೂಪಗಳನ್ನಾಗಿ ಮಾಡಿದನು ; ಆಗ ದೇವತೆಗಳೆಲ್ಲರೂ ಪುರುಷರೂಪಗಳನ್ನು ತಾಳಿದರು (೪೦-೪೧). ಆ ಮುಕ್ತಪ್ರಜೆಗಳಲ್ಲಿ ಕೆಲವರು ಶ್ರೀವಿಷ್ಣು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತೆ ಕೆಲವರು, ನಾನಾರೂಪಂ – ಬಹು ರೂ ಪಿ ಯಾ ದ ವಿಷ್ಣುವನ್ನು, ಸ್ವಸ್ಮಾತ್–ತಮ್ಮಿಂದ, ನ್ಯೂನಾನ್–ಅಲ್ಪರಿಗೆ (ನೀಚರಿಗೆ ತಾರತಮ್ಯದಲ್ಲಿ ಅಧಮರಾದವರಿಗೆ), ಅಧ್ಯಾಪಯನ್–ಅಧ್ಯಯನಮಾಡಿಸಿದರು (ಶ್ರೀವಿಷ್ಣು ಮಹಿಮೆಗಳನ್ನು ತಿಳಿಸಿಕೊಟ್ಟರು–ಜ್ಞಾಪಕಕ್ಕೆ ತಂದುಕೊಟ್ಟು ಆನಂದಪಡಿಸಿದರು) ; ಕೇಚಿತ್–ಮತ್ತೆ ಕೆಲವರು, ಪುರಾಣಾನ್–ಪುರಾಣಗಳನ್ನು, ಆಹುಃ–ಹೇಳಿದರು ; ಕೇಚಿತ್–ಇನ್ನೂ ಕೆಲವರು, ಮಿಥಶ್ಚ–ಪರಸ್ಪರವಾಗಿ ಸಹ, ಇತಿಹಾಸಾನ್–ಇತಿಹಾಸಗಳನ್ನು (ರಾಮಕೃಷ್ಣಾದ್ಯವತಾರ ಮಹಿಮೆಗಳನ್ನು ನಿರೂಪಿಸುವ ರಾಮಾಯಣ ಭಾರತಾದಿಗಳನ್ನು), ಆಹುಃ–ಹೇಳಿದರು.

ಏವಂ ಪೂರ್ವಂ ದೇವದೇವೋಹಮೇವ
ಕಾಲಂ ಕಂಚಿನ್ಮುಕ್ತಬಂಧೈರಜಾದ್ಯೈಃ ।
ಲಕ್ಷ್ಮ್ಯಾ ಯುಕ್ತಃ ಕ್ರೀಡಯಾಮಾಸ ಪಶ್ಚಾತ್
ಸ್ರಷ್ಟುಂ ಚಾಸೀನ್ಮಾನಸಂ ಕರ್ಮಬದ್ಧಾನ್ ॥ ೪೩ ॥

ಏವಂ ಯಃ ಕ್ರೀಡನಂ ವಿಷ್ಣೋರ್ರಹಸ್ಯಂ ಪರಮಾದ್ಭುತಂ ।
ಪ್ರಾತಃ ಸ್ಮರತಿ ವಾ ರಾತ್ರೌ ಸೋಪ್ಯೇವಂ ತೇನ ಮೋದತೇ ॥ ೪೪ ॥

ಧನಂ ಧಾನ್ಯಂ ಪಶೂನ್ ಪುತ್ರಾನ್
ಭಾರ್ಯಾಂ ಚೈವ ಮನೋಹರಾಂ ।
ಇಹ ಲೋಕೇ ಚಿರಂ ಭುಕ್ತ್ವಾ
ತತೋ ಮುಕ್ತಿಮವಾಪ್ನುಯಾತ್ ॥ ೪೫ ॥

ಏವಂ–ಹೀಗೆ, ಪೂರ್ವಂ–(ಹೇ ಬ್ರಹ್ಮ! ನೀನು ಹುಟ್ಟುವ) ಮೊದಲು, ದೇವದೇವಃ–ದೇವೋತ್ತಮನಾದ, ಅಹಮೇವ–ನಾನೇ, ಕಂಚಿತ್‌ಕಾಲಂ–

ಪ್ರೀತ್ಯರ್ಥವಾಗಿ ಯಜ್ಞಗಳನ್ನು ಆಚರಿಸಿದರು ; ಮತ್ತೆ ಕೆಲವರು ಶ್ರೀಹರಿಯ ಬಹುರೂಪಗಳ ಮಹಿಮೆಗಳನ್ನೇ ಪ್ರತಿಪಾದಿಸುವ ವೇದಾದಿಗಳನ್ನು, ತಮಗಿಂತ ಕನಿಷ್ಠರಿಗೆ ಅಧ್ಯಯನ ಮಾಡಿಸಿದರು ; ಕೆಲವರು ಪುರಾಣಗಳನ್ನು ಹೇಳಿದರು ; ಇನ್ನೂ ಕೆಲವರು ಪರಸ್ಪರವಾಗಿ ಇತಿಹಾಸಗಳನ್ನು ಹೇಳಿಕೊಳ್ಳುತ್ತಾ ಆನಂದಿಸಿದರು (೪೨). ಹೀಗೆ ಪ್ರಲಯಕಾಲದ ಅಷ್ಟಮಾಂಶವು ಉಳಿದಿರುವಾಗ, ಕೆಲವು ಕಾಲ, ಲಕ್ಷ್ಮೀಸಮೇತನಾದ, ಮುಕ್ತಬ್ರಹ್ಮಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಲ್ಪಕಾಲ, ಮುಕ್ತಬಂಧೈಃ–ಬಂಧನದಿಂದ ಬಿಡುಗಡೆಹೊಂದಿದ (ಸಂಸಾರದಿಂದ ಮುಕ್ತರಾದ), ಅಜಾದ್ಯೈಃ–ಬ್ರಹ್ಮಾದಿಗಳಿಂದ ಕೂಡಿ, ಲಕ್ಷ್ಮ್ಯಾ–ಶ್ರೀ ಲಕ್ಷ್ಮೀದೇವಿಯಿಂದ, ಯುಕ್ತಃ–ಸಹಿತನಾಗಿ, ಕ್ರೀಡಯಾಮಾಸ–ಕ್ರೀಡಿಸಿದೆನು; ಪಶ್ಚಾತ್–ನಂತರ, ಕರ್ಮಬದ್ಧಾನ್–ಅನಾದಿ ಕರ್ಮಾದಿಗಳಿಂದ ಬದ್ಧರಾದ ಜೀವರನ್ನು, ಸ್ರಷ್ಟುಂ-ಸೃಷ್ಟಿಸಲು (ಸ್ಥೂಲಸಾಧನದೇಹಗಳನ್ನಿತ್ತು ಸಾಧನೆಯಲ್ಲಿ ತೊಡಗಿಸಲು), ಮಾನಸಂ ಆಸೀತ್–ಮನಸ್ಸನ್ನು ಹೊಂದಿದೆನು (ಸಂಕಲ್ಪಿಸಿದೆನು);

ಯಃ–ಯಾವ ಅಧಿಕಾರಿಯು, ಪರಮಾದ್ಭುತಂ–ಅತ್ಯಾಶ್ಚರ್ಯಕರವೂ, ರಹಸ್ಯಂ–ರಹಸ್ಯವೂ (ಗೋಪ್ಯವೂ), ಆದ, ವಿಷ್ಣೋಃ–ಶ್ರೀವಿಷ್ಣುವಿನ, ಏವಂ–ಈ ಪ್ರಕಾರವಾದ, ಕ್ರೀಡನಂ–ಮುಕ್ತರೊಡನೆ ನಡೆಸಿದ ಕ್ರೀಡೆಯನ್ನು, ಪ್ರಾತಃ–ಪ್ರಾತಃಕಾಲದಲ್ಲಿ, ರಾತ್ರೌವಾ–ರಾತ್ರಿಯಲ್ಲಾಗಲಿ, ಸ್ಮರತಿ–ಸ್ಮರಿಸುವನೋ, ಸಃ ಅಪಿ–ಅವನೂ ಕೂಡ, ಏವಂ–ಹೀಗೆಯೇ (ಇತರ ಮುಕ್ತರಂತೆ ತಾನೂ ಮುಕ್ತನಾಗಿ), ತೇನ–ಶ್ರೀವಿಷ್ಣುವಿನಿಂದ ಕೂಡಿ, ಮೋದತೇ–ಕ್ರೀಡೆಯಿಂದ ಆನಂದಿಸುತ್ತಾನೆ; ಇಹಲೋಕೇ–ಈ ಲೋಕದಲ್ಲಿ (ಸಂಸಾರಾವಸ್ಥೆಯಲ್ಲಿ), ಧನಂ–ಐಶ್ವರ್ಯವನ್ನೂ, ಧಾನ್ಯಂ–ಧಾನ್ಯಾದಿ ಸಂಪತ್ತನ್ನೂ, ಪಶೂನ್–(ಗೋ, ಅಶ್ವಗಜಾದಿ) ಪಶುಗಳನ್ನೂ, ಪುತ್ರಾನ್–ಪುತ್ರಪೌತ್ರಾದಿ ಸತ್ಸಂತಾನವನ್ನೂ, ಮನೋಹರಾಂ – ಮನೋಹರಳಾದ, (ಸುಂದರಳೂ ಮನೋನುಕೂಲಳೂ ಆದ), ಭಾರ್ಯಾಂ-ಪತ್ನಿಯನ್ನೂ, ಚಿರಂ-ಬಹುಕಾಲ, ಭುಕ್ತ್ವಾ–ಭೋಗಿಸಿ (ಸುಖದಿಂದ ಇಹಜೀವನವನ್ನು ಅನುಭವಿಸಿ), ತತಃ–ಅನಂತರ, ಮುಕ್ತಿಂ–ಮೋಕ್ಷವನ್ನು, ಅವಾಪ್ನುಯಾತ್–ಹೊಂದುತ್ತಾನೆ.

ಜೀವರನ್ನು ಸೇರಿಸಿಕೊಂಡು, ಸ್ವೇಚ್ಛೆಯಿಂದ ಕ್ರೀಡಿಸಿ, ನಂತರ ಕರ್ಮಬದ್ಧರಾದ ಜೀವರನ್ನು ಸೃಷ್ಟಿಸಲು ಸಂಕಲ್ಪಿಸಿದೆನು, ಎಂದು ಮೊದಲು ಸೃಷ್ಟನಾದ ಬ್ರಹ್ಮದೇವನಿಗೆ ಶ್ರೀವಿಷ್ಣುವು ಹೇಳಿ, ತನ್ನ ಈ ಮುಕ್ತಕ್ರೀಡಾಮಹಿಮೆಯನ್ನು ಪ್ರಾತಃಕಾಲದಲ್ಲಿ ಅಥವಾ (ರಾತ್ರೌ) ರಾತ್ರಿಯಲ್ಲಿ ಸ್ಮರಿಸುವ ಅಧಿಕಾರಿಗಳು, ಇಹದಲ್ಲಿ (ಮುಕ್ತರಾಗುವ ಮೊದಲು) ಧನ, ಧಾನ್ಯ ಪಶು ಮೊದಲಾದ ಸಂಪತ್ತನ್ನೂ, ಸತ್ಸಂತಾನವನ್ನೂ ಅನುಕೂಲಳಾದ ಭಾರ್ಯೆಳನ್ನೂ ಹೊಂದುತ್ತ, ಬಹುಕಾಲ ಸುಖಭೋಗವನ್ನು ಪಡೆದು, ನಂತರ ಮೋಕ್ಷವನ್ನೇ ಹೊಂದುವರೆಂಬ ಮಹಾಫಲವನ್ನೂ ಹೇಳಿರುವನು (೪೩-೪೫).

ವಿಷ್ಣುಕ್ರೀಡೆಯೆಂಬ ೧ನೇ ಅಧ್ಯಾಯವು ಮುಗಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ೨

ಶ್ರೀ ವೇದವ್ಯಾಸಾಯ ನಮಃ

ಬ್ರಹ್ಮೋವಾಚ—

ಕಿಯಾನ್ ಪ್ರಲಯಕಾಲೋ ವೈ ಸೃಷ್ಟಿಕಾಲಃ ಕಿಯಾನಪಿ ।
ಸೃಷ್ಟಿಃ ಕತಿ ವಿಧಾ ಚಾಸೀತ್ ಕ್ರೀಡನಾನಂತರಂ ಹರೇಃ ॥ ೧ ॥

ಪ್ರಲಯಕಾಲಃ–ಪ್ರಳಯಕಾಲದ ಅವಧಿಯು, ಕಿಯಾನ್ ವೈ–ಎಷ್ಟು ಪ್ರಮಾಣವುಳ್ಳದ್ದು; ಅಪಿ–ಮತ್ತು, ಸೃಷ್ಟಿಕಾಲದ ಪರಿಮಿತಿಯು, ಕಿಯಾನ್–ಎಷ್ಟು? ಹರೇಃ–ಶ್ರೀವಿಷ್ಣುವಿನ, ಕ್ರೀಡನಾನಂತರಂ–ಪೂರ್ವೋಕ್ತ ಕ್ರೀಡೆಯನಂತರ, ಸೃಷ್ಟಿಃ – ಸೃಷ್ಟಿಯು, ಕತಿ ವಿಧಾ ಚ – ಎಷ್ಟು ಪ್ರಕಾರವುಳ್ಳದ್ದು, ಆಸೀತ್–ಆಯಿತು?

ಶ್ರೀ ಭಗವಾನುವಾಚ—

ಅತಿಸೂಕ್ಷ್ಮಸ್ತು ಯಃ ಕಾಲಃ ಸ ಕ್ಷಣಃ ಪರಿಕೀರ್ತಿತಃ ।
ಕ್ಷಣಾಃ ಪಂಚ ತೃಟಿಃ ಪ್ರೋಕ್ತಾ ಪಂಚಾಶತ್ತಾ ಲವಃ ಸ್ಮೃತಃ ॥ ೨ ॥
ಲವದ್ವಯಂ ನಿಮೇಷ ಸ್ಯಾನ್ಮಾತ್ರಾ ಸ್ಯಾದಷ್ಟಭಿಶ್ಚ ತೈಃ ।
ಯಥಾಯಂ ವದತೇ ಚಾಷೋ ಮಾತ್ರಯೋ ದ್ವಿತಯಂ ಗುರುಃ ॥
ಗುರೂಣಾಂ ದಶಕಂ ಪ್ರಾಣಃ ಪ್ರಾಣಷಟ್ಕಂ ಪಳಂ ಭವೇತ್ ।
ಪಳಷಷ್ಟಿರ್ಘಟೀ ಪ್ರೋಕ್ತಾ ತಾಃ ಷಷ್ಟಿರ್ದಿನಮುಚ್ಯತೇ ॥ ೪ ॥
ತತಸ್ತ್ರಿಂಶದ್ಘಟೀಃ ಪೂರ್ವಾ ದಿವಾ ರಾತ್ರಿಸ್ತಥಾ ಪರಾ ।
ದಿನಪಂಚದಶಪಕ್ಷಸ್ತೌ ದ್ವೌಮಾಸಸ್ತು ತದ್ದ್ವಯಂ ॥ ೫ ॥

ಪ್ರಲಯಕಾಲದ ಅವಧಿಯೇನು? ಮತ್ತು ಸೃಷ್ಟಿಕಾಲವು ಎಷ್ಟು ಪ್ರಮಾಣವುಳ್ಳದ್ದು?; ಶ್ರೀವಿಷ್ಣುವು ಲಕ್ಷ್ಮೀದೇವಿ ಮತ್ತು ಮುಕ್ತ ಬ್ರಹ್ಮಾದಿ ಜೀವರೊಡನೆ ಕ್ರೀಡಿಸಿದನಂತರ ನಡೆಸಿದ ಸೃಷ್ಟಿಯು ಎಷ್ಟು ಪ್ರಕಾರವಾದುದು, ಎಂದು ಬ್ರಹ್ಮದೇವನು ಕೇಳಿದನು (೧). ಅತ್ಯಂತ ಸೂಕ್ಷ್ಮವಾದ (ಅಲ್ಪವಾದ) ಕಾಲವು ಕ್ಷಣವೆನಿಸುತ್ತದೆ; ೫ ಕ್ಷಣಗಳು ಸೇರಿದರೆ ೧ ತೃಟಿಯು; ೫೦ ತೃಟಿಗಳು ೧ ಲವ; ೨ ಲವಗಳು ೧ ನಿಮೇಷ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅತಿಸೂಕ್ಷ್ಮಃ ತು–ಅತ್ಯಂತ ಸೂಕ್ಷ್ಮವಾದ (ಅತ್ಯಲ್ಪವಾದ), ಯಃ ಕಾಲಃ–ಯಾವ ಕಾಲವೋ, ಸಃ–ಅದು, ಕ್ಷಣಃ ಪರಿಕೀರ್ತಿತಃ–ಕ್ಷಣವೆಂದು ಹೇಳಲ್ಪಡುತ್ತದೆ; ಕ್ಷಣಾಃ ಪಂಚ–ಐದು ಕ್ಷಣಗಳು, ತ್ರುಟಿಃ–ತ್ರುಟಿಯೆಂದು, ಪ್ರೋಕ್ತಾ–ಹೇಳಲ್ಪಡುತ್ತದೆ; ತಾಃ–ಆ ತ್ರುಟಿಗಳು, ಪಂಚಾಶತ್–ಐವತ್ತಾದರೆ, ಲವಃ ಸ್ಮೃತಃ–ಅದು ಲವವೆನಿಸುತ್ತದೆ; ಲವದ್ವಯಂ–ಎರಡು ಲವಗಳು, ನಿಮೇಷಃ ಸ್ಯಾತ್–ಒಂದು ನಿಮೇಷವೆನಿಸುತ್ತದೆ; ತೈಃ ಅಷ್ಟಭಿಃ–ನಿಮೇಷ ಗಳ ಎಂಟರಿಂದ, ಮಾತ್ರಾ–ಒಂದು ಮಾತ್ರೆಯು, ಸ್ಯಾತ್–ಆಗುತ್ತದೆ; ಅಯಂ–ಈ, ಚಾಷಃ–ಪಕ್ಷಿವಿಶೇಷವು, ಯಥಾ ವದತೇ–ಹೇಗೆ ಧ್ವನಿಗೈಯು ತ್ತದೆಯೋ ಅದರ ಕಾಲವು ಮಾತ್ರೆಯು (ಅತಿವೇಗವಾಗಿ ಉಚ್ಚರಿಸುವ ಹ್ರಸ್ವಾಕ್ಷರದಷ್ಟು ಕಾಲವು ಮಾತ್ರೆಯೆನಿಸುತ್ತದೆ—ಕಾಗೆಯ ಜಾತಿಗೆ ಸೇರಿದ ಈ ಪಕ್ಷಿಯು (ಚಾಷಃ–jay) ಶಬ್ದಮಾಡುವ ಕಾಲವು ಅತ್ಯಲ್ಪ—ಕ್, ಕ್ ಎಂದು ಕೂಗುತ್ತದಂತೆ); ಮಾತ್ರಯೋಃ–ಮಾತ್ರೆಗಳ, ದ್ವಿತಯಂ–ಎರಡು, ಗುರುಃ – ಗುರುವೆನಿಸುತ್ತದೆ; ಗುರೂಣಾಂ ದಶಕಂ – ಹತ್ತು ಗುರುಗಳು, ಪ್ರಾಣಃ–ಪ್ರಾಣವೆನಿಸುತ್ತದೆ; ಪ್ರಾಣಷಟ್ಕಂ–ಆರು ಪ್ರಾಣಗಳ ಕಾಲವು, ಪಳಂ ಭವೇತ್ – 'ಪಳ'ವಾಗುತ್ತದೆ; ಪಳಷಷ್ಟಿಃ – ಅರವತ್ತು ಪಳಗಳು, ಘಟೀ–ಒಂದು ಘಳಿಗೆಯೆಂದು, ಪ್ರೋಕ್ತಾ–ಹೇಳಲ್ಪಡುತ್ತದೆ; ತಾಃ ಷಷ್ಟಿಃ–ಘಳಿಗೆಗಳ ಅರವತ್ತು, ದಿನಂ ಉಚ್ಯತೇ–ಒಂದು ದಿನವೆಂದು ಹೇಳಲ್ಪಡುತ್ತದೆ; ತತಃ–ಅದರ (ದಿನದ), ಪೂರ್ವಾ–ಮೊದಲಿನ, ತ್ರಿಂಶತ್‌ಘಟೀಃ–ಮುವ್ವತ್ತು ಘಳಿಗೆಗಳ ಕಾಲವು, ದಿವಾ–ಹಗಲು; ತಥಾ–ಹಾಗೆಯೇ, ಅಪರಾ–ನಂತರದ ೩೦ ಘಳಿಗೆಗಳ ಕಾಲವು, ರಾತ್ರಿಃ – ರಾತ್ರಿಯು; ದಿನಪಂಚದಶ – ದಿನಗಳ ಹದಿನೈದು, ಪಕ್ಷಃ–ಒಂದು ಪಕ್ಷವೆಂದು ಕರೆಯಲ್ಪಡುತ್ತದೆ; ತೌದ್ವೌ–ಎರಡು ಪಕ್ಷಗಳು, ಮಾಸಃ–ಒಂದು ತಿಂಗಳು; ತದ್ದ್ವಯಂ–ಮಾಸಗಳ ಎರಡು

---

೮ ನಿಮೇಷಗಳು ಒಂದು ಮಾತ್ರಾ; ೨ ಮಾತ್ರೆಗಳು ೧ ಗುರು; ೧೦ ಗುರು ಗಳು ೧ ಪ್ರಾಣ; ೬ ಪ್ರಾಣಗಳು ೧ ಪಳ; ೬೦ ಪಳಗಳಿಗೆ ೧ ಘಳಿಗೆ; ೬೦ ಘಳಿಗೆಗಳಿಗೆ ೧ ದಿನ; ಅದರಲ್ಲಿ ಮೊದಲಿನ ೩೦ ಘಳಿಗೆಗಳು ಹಗಲು— ನಂತರದ ೩೦ ಘಳಿಗೆಗಳು ರಾತ್ರಿ; ೧೫ ದಿನಗಳಿಗೆ ಒಂದು ಪಕ್ಷ; ೨ ಪಕ್ಷ ಗಳಿಗೆ ಒಂದು ಮಾಸ (ತಿಂಗಳು); ೨ ತಿಂಗಳಿಗೆ ೧ ಋತು (೨-೫).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಎರಡು ತಿಂಗಳಿಗೆ), (ಋತುಃ–ಒಂದು ಋತುವು, ಎಂದು ಮುಂದಿನ ಶ್ಲೋಕ ದಿಂದ ಅನ್ವಯ).

ಋತುಸ್ತ್ರಿತಯಂ ಪ್ರೋಕ್ತಮಯನಂ ತದ್ದ್ವಯಂ ಪುನಃ ।
ವರ್ಷಮಿತ್ಯುಚ್ಯತೇ ತಚ್ಚ ದೇವಾನಾಂ ದಿನಮೇವ ತು ॥ ೬ ॥
ಅಯನಂ ತೂತ್ತರಂ ತತ್ರ ದಿನಾರಾತ್ರಿಶ್ಚ ದಕ್ಷಿಣಂ ।
ಏವಂ ದಿನಾನಾಂ ಷಷ್ಟಿಶ್ಚ ಶತತ್ರಯಸಮನ್ವಿತಂ ॥ ೭ ॥
ದಿವ್ಯಂ ವರ್ಷಮಿದಂ ಪ್ರೋಕ್ತಂ ಯುಗಸಂಖ್ಯಾಂ ತತಃ ಶೃಣು ।
ಚತ್ವಾರ್ಯೇವ ಸಹಸ್ರಾಣಿ ಕೃತಂ ಯುಗಮಿತೀರಿತಂ ॥ ೮ ॥
ಅಷ್ಟೌ ಶತಾನಿ ವರ್ಷಾಣಾಮಾದಾವಂತೇ ಚ ಸಂಧ್ಯಕೇ ।
ಏತತ್ಪಾದವಿಹೀನಂ ತು ತ್ರೇತಾಯುಗಮಿತೀರ್ಯತೇ ॥ ೯ ॥
ತತೋಽಪಿ ಪಾದಹೀನಂ ತು ದ್ವಾಪರಂ ತಸ್ಯ ಯತ್ಪುನಃ ।
ಅರ್ಧಂ ತತ್ಕಲಿಮಾನಂ ಸ್ಯಾದೇವಂ ಯುಗಚತುಷ್ಟಯಂ ॥ ೧೦ ॥
ದಿವ್ಯದ್ವಾದಶಸಾಹಸ್ರಂ ವರ್ಷಮಾನಂ ಮಹಾಯುಗಂ ।

(ಋತುಃ–ಹಿಂದಿನ ಶ್ಲೋಕದಲ್ಲಿ ಅನ್ವಯವಾಗಿದೆ), ತತ್ರಿತಯಂ– ಅವುಗಳ (ಋತುಗಳ) ಮೂರು, ಅಯನಂ ಪ್ರೋಕ್ತಂ – ಅಯನವೆಂದು ಹೇಳಲ್ಪಡುತ್ತದೆ; ಪುನಃ–ಮತ್ತು, ತದ್ದ್ವಯಂ–ಅವುಗಳ (ಅಯನಗಳ) ಎರಡು, ವರ್ಷಂ ಇತಿ–ವರ್ಷವೆಂದು, ಉಚ್ಯತೇ–ಹೇಳಲ್ಪಡುತ್ತದೆ; ತತ್ ಚ– ಈ ವರ್ಷವೆಂಬ ಕಾಲಾವಧಿಯು, ದೇವಾನಾಂ ತು–ದೇವತೆಗಳಿಗಾದರೋ,

---

ಮೂರು ಋತುಗಳು ಸೇರಿದ ಕಾಲವು ಒಂದು ಅಯನವೆನಿಸುತ್ತದೆ; ಎರಡು ಅಯನಗಳಿಗೆ ಒಂದು ವರ್ಷ; ಹೀಗಿರುವ (ಮನುಷ್ಯಮಾನದ) ಒಂದು ವರ್ಷವು ದೇವತೆಗಳಿಗೆ ಒಂದು ದಿನವೆಂದು ತಿಳಿಯಬೇಕು; ಉತ್ತರಾಯಣವು ದೇವತೆಗಳ ಹಗಲು—ದಕ್ಷಿಣಾಯನವು ರಾತ್ರಿ; ಇಂಥ ೩೬೦ ದಿನಗಳು ದೇವತೆಗಳ ಒಂದು ವರ್ಷ. ಕೃತಯುಗವು, ದೇವತೆಗಳ ೪,೦೦೦ ವರ್ಷಗಳ ಕಾಲಾವಧಿಯುಳ್ಳದ್ದು; ಅದರ ಮೊದಲು ಮತ್ತು ಕೊನೆ ಯಲ್ಲಿರುವ ಎರಡೂ ಸಂಧಿಕಾಲಗಳಿಂದ ದೇವಮಾನದ ೮೦೦ ವರ್ಷಗಳಾಗು ತ್ತವೆ; (ಪ್ರತಿಯೊಂದು ಯುಗಕ್ಕೂ ಯುಗಾರಂಭಕ್ಕೆ ಮೊದಲು ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿನಂ ಏವ–ಒಂದು ದಿನ ಮಾತ್ರವೇ ; ತತ್ರ–ಅಲ್ಲಿ (ಆ ದೇವತೆಗಳ ಒಂದು ದಿನದಲ್ಲಿ), ಉತ್ತರಂ ಅಯನಂ ತು – ಉತ್ತರಾಯಣವಾದರೋ, ದಿವಾ–ಹಗಲು ; ದಕ್ಷಿಣಂ ಚ – ದಕ್ಷಿಣಾಯನವಾದರೂ, ರಾತ್ರಿಃ – ರಾತ್ರಿಯು ; ಏವಂ–ಈ ಪ್ರಕಾರದ, ಶತತ್ರಯಸಮನ್ವಿತಂ–ಮೂರುನೂರರಿಂದ (೩೦೦) ಕೂಡಿದ, ದಿನಾನಾಂ ಷಷ್ಠಿಃ–ಅರವತ್ತು (೬೦) ದಿನಗಳು (೩೬೦ ದಿನಗಳು), ಇದಂ–ಇದು, ದಿವ್ಯಂವರ್ಷಂ-ದಿವ್ಯವರ್ಷವೆಂದು (ದೇವಮಾನದ ಒಂದು ವರ್ಷವೆಂದು), ಪ್ರೋಕ್ತಂ–ಹೇಳಲಾಗುತ್ತದೆ ; ತತಃ–ನಂತರ, ಯುಗಸಂಖ್ಯಾಂ–ಯುಗಗಳ ಸಂಖ್ಯೆಯನ್ನು (ಗಣನೆಯ ಕ್ರಮವನ್ನು), ಶೃಣು–ಕೇಳು ; ಕೃತಯುಗಂ–ಕೃತಯುಗವು, ಚತ್ವಾರಿ–ನಾಲ್ಕು, ಸಹಸ್ರಾಣಿ ಏವ–ಸಾವಿರ ವರ್ಷಗಳೆಂದೇ, (ದೇವಮಾನದ ೪,೦೦೦ ವರ್ಷಗಳ ಕಾಲಪರಿಮಿತವಾದುದೆಂದು), ಇತಿ ಈರಿತಂ–ಹೀಗೆ ಹೇಳಲಾಗುತ್ತದೆ ; ಆದಾವಂತೇ ಚ–(ಕೃತಯುಗದ) ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ಸಹ, ಸಂಧ್ಯಕೇ – ಸಂಧಿ ಕಾಲಗಳೆರಡೂ ಸೇರಿ, ವರ್ಷಾಣಾಂ-ದಿವ್ಯವರ್ಷಗಳ, ಅಷ್ಟೌಶತಾನಿ-(೮೦೦) ಎಂಟುನೂರು ; ತ್ರೇತಾಯುಗಂ–ತ್ರೇತಾಯುಗವು, ಏತತ್ಪಾದವಿಹೀನಂ ತು–ಇವರ (ಕೃತಯುಗದ) ಪಾದ (೧/೪) ಕಡಿಮೆಯೇ, ಇತಿ ಈರ್ಯತೇ–ಎಂದು ಹೇಳಲ್ಪಡುತ್ತದೆ ; ತತೋಽಪಿ-ಅದಕ್ಕಿಂತಲೂ (ತ್ರೇತಾಯುಗಕ್ಕಿಂತಲೂ), ದ್ವಾಪರಂ ತು–ದ್ವಾಪರಯುಗವಾದರೋ, ಪಾದಹೀನಂ–೧/೪ ಭಾಗ ಕಡಿಮೆಯಾದುದು ; ಪುನಃ–ಮತ್ತು, ಯತ್ ಅರ್ಧಂ–ಯಾವುದರ (ದ್ವಾಪರದ) ಅರ್ಧಭಾಗವು,

---

ಯುಗವು ಮುಗಿದನಂತರ ಆ ಯುಗದ ಸಂಧಿಕಾಲಗಳಿರುತ್ತವೆ ; ಉದಾ.– ಕೃತಿಯುಗಾರಂಭದ ಮೊದಲು, ೪೦೦ ವರ್ಷಗಳ ಸಂಧಿಕಾಲವೂ, ಯುಗವು ಮುಗಿದನಂತರ, ಎಂದರೆ ೪,೦೦೦ ಸಾವಿರ ದೇವಮಾನದ ವರ್ಷಗಳಾದ ನಂತರ, ಕೃತಯುಗದ ಸಂಧಿಕಾಲವಾದ ೪೦೦ ವರ್ಷಗಳೂ, ನಂತರ ತ್ರೇತಾ ಯುಗದ ಆರಂಭದ ಸಂಧಿಕಾಲವಾದ ೩೦೦ ವರ್ಷಗಳೂ ಕಳೆದನಂತರ ತ್ರೇತಾಯುಗವು ಆರಂಭವಾಗುತ್ತದೆ. ಹೀಗೆ ಇತರ ಯುಗಗಳಿಗೂ ಸಂಧಿ ಕಾಲಗಳನ್ನು ತಿಳಿಯಬೇಕು. ಆಯಾ ಯುಗದ ಸಂಧಿಕಾಲವು ಆಯಾ ಯುಗನಾಮದಿಂದಲೇ ವ್ಯವಹರಿಸಲ್ಪಡುತ್ತದೆ) ; ತ್ರೇತಾಯುಗವು ೩,೦೦೦ ದಿವ್ಯವರ್ಷಗಳ ಅವಧಿಯುಳ್ಳದು—ಇದರ ಸಂಧಿಕಾಲವು ಆದ್ಯಂತ್ಯಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತ್—ಅದು (೧೦೦೦ ವರ್ಷಗಳು), ಕಲಿಮಾನಂ—ಕಲಿಯುಗದ ಪ್ರಮಾಣವು, ಸ್ಯಾತ್—ಆಗುತ್ತದೆ; ಏವಂ—ಹೀಗೆ (ಒಟ್ಟು ಸೇರಿ), ಯುಗಚತುಷ್ಟಯಂ—ಕೃತಾದಿ ನಾಲ್ಕು ಯುಗಗಳು, ಮಹಾಯುಗಂ—ಮಹಾಯುಗವೆಂದು ಕರೆಯಲ್ಪಡುವುದು; ದಿವ್ಯದ್ವಾದಶಸಾಹಸ್ರಂ ವರ್ಷಮಾನಂ — ದೇವಮಾನದ ೧೨೦೦೦ ವರ್ಷಗಳ ಪ್ರಮಾಣ (ಕಾಲಮಾನ—ಕಾಲದ ಅಳತೆ) ವುಳ್ಳದ್ದು.

ಮಹಾಯುಗಾನಾಂ ಸಪ್ತತ್ಯಾ ಸೈಕಯೈವಾಂತರಂ ಮನೋಃ ॥ ೧೧ ॥
ಚತುರ್ದಶೈವಂ ಮನವಃ ಪ್ರತ್ಯೇಕಂ ತು ತದಂತತಃ ।
ಸಂಧ್ಯಾ ಕೃತೋನ್ಮಿತೈಕಾ ಸ್ಯಾತ್ ಕಲ್ಪಾದೌ ಚ ತಥೈಕಕಾ ॥ ೧೨ ॥
ಸಂಧ್ಯಾ ಪಂಚದಶೈವಂ ತು ಯುಕ್ತಾ ಮನ್ವಂತರಾಬ್ದಕೈಃ ।
ಕೃತೈವಂ ಜಾಯತೇ ಯತ್ತನ್ಮಹಾಯುಗಸಹಸ್ರಕಂ ॥ ೧೩ ॥
ಪಿತಾಮಹದಿನಂ ತ್ವೇತತ್ತಾವತೀ ರಾತ್ರಿರೇವ ಹಿ ।
ಸ ಹಿ ಕಲ್ಪ ಇತಿ ಪ್ರೋಕ್ತಃ ತಚ್ಛತತ್ರಯುಷಷ್ಟಿಕಂ ॥ ೧೪ ॥
ವರ್ಷಂ ಬ್ರಾಹ್ಮಮಿತಿ ಪ್ರೋಕ್ತಂ ತಚ್ಛತಂ ಪರಮುಚ್ಯತೇ ।
ತದರ್ಧಂ ತು ಪರಾರ್ಧಾ ಸ್ಯಾತ್ ಪಂಚಾಶದ್ಬ್ರಾಹ್ಮವರ್ಷಕಂ॥೧೫॥
ಪರಮಾಯುರ್ಬ್ರಹ್ಮಣಃ ಸ್ಯಾತ್ತದತೀತೌ ಚ ತಲ್ಲಯಃ ॥ ೧೬ ॥

ಮಹಾಯುಗಾನಾಂ — ಮಹಾಯುಗಗಳ ಸೈಕಯಾ ಸಪ್ತತ್ಯಾ — ಎಪ್ಪತ್ತೊಂದ (೭೧) ರಿಂದ, (೭೧ ಮಹಾಯುಗಗಳಿಗೆ), ಮನೋಃ—ಮನುವಿನ, ಅಂತರಂ ಏವ — ಅಂತರವೇ (ಆಗುತ್ತದೆ); ಏವಂ — ಹೀಗಿರುವ,

---

ಒಟ್ಟು ೬೦೦ ವರ್ಷಗಳು; ದ್ವಾಪರಯುಗವು ೨,೦೦೦ ವರ್ಷಗಳ ಕಾಲಮಾನವುಳ್ಳದ್ದು—ಇದರ ಒಟ್ಟು ಸಂಧಿಕಾಲವು ೪೦೦ ವರ್ಷಗಳು; ಕಲಿಯುಗವು, ದ್ವಾಪರಯುಗದ ಅರ್ಧ (ಅಥವಾ ಕೃತಯುಗದ ೧/೪) ಅವಧಿಯುಳ್ಳದ್ದು, ಎಂದರೆ ೧,೦೦೦ ವರ್ಷಗಳ ಪ್ರಮಾಣವುಳ್ಳದ್ದು; ನಾಲ್ಕೂ ಯುಗಗಳಿಂದ (ಸಂಧಿಕಾಲಗಳೂ ಸೇರಿ) ಒಟ್ಟು ದೇವಮಾನದ ೧೨,೦೦೦ ವರ್ಷಗಳಾಗುತ್ತವೆ. ನಾಲ್ಕು ಯುಗಗಳು ಸೇರಿ ಒಂದು ಮಹಾಯುಗವೆಂದು ವ್ಯವಹರಿಸಲ್ಪಡುತ್ತದೆ—ಅದರ ಕಾಲಮಾನ, ದಿವ್ಯ ೧೨,೦೦೦ ವರ್ಷಗಳು (೬-೧೦). ೭೧ ಮಹಾಯುಗಗಳಿಗೊಂದು ಮನ್ವಂತರ; (ಒಬ್ಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನವಃ–ಮನುಗಳು, ಚತುರ್ದಶ–೧೪, (ಬ್ರಹ್ಮದೇವನ ಒಂದು ಹಗಲಿನಲ್ಲಿ ಅಧಿಕಾರದಲ್ಲಿರುತ್ತಾರೆ) ; ತದಂತತಃ – ಆ ಮನ್ವಂತರಗಳ ಮಧ್ಯದಲ್ಲಿ, ಪ್ರತ್ಯೇಕಂ–ಬೇರೆಬೇರೆಯಾಗಿ, ಏಕಾಸಂಧ್ಯಾ–ಈ ಮನ್ವಂತರಗಳ ಮಧ್ಯದಲ್ಲಿ ಬರುವ ಒಂದೊಂದು ಸಂಧಿಕಾಲವೂ, ಕೃತೋನ್ಮಿತಾಸ್ಯಾತ್–ಒಂದು ಕೃತ ಯುಗದಮಾನದಷ್ಟು ಇರುತ್ತದೆ; ಕಲ್ಪಾದೌ ಚ–ಕಲ್ಪದ ಆದಿಯಲ್ಲಿ (ಬ್ರಹ್ಮ ದೇವನ ದಿನವು ದಿನಕಲ್ಪವೆನಿಸುತ್ತದೆ; ಅದರ ಆದಿಯಲ್ಲಿ ಒಂದು ಕೃತಯುಗ ದಷ್ಟು ಕಾಲವು ಗತಿಸಿದನಂತರ ಮೊದಲನೇ ಮನುವಿನ ಅಧಿಕಾರ ಕಾಲವು ಆರಂಭವಾಗುತ್ತದೆ) ಸಹ; ತಥಾ–ಹಾಗೆಯೇ (ಪ್ರತಿಮನ್ವಂತರದ ಮಧ್ಯದ ಸಂಧಿಕಾಲದಂತೆ), ಏಕಕಾ – ಒಂದು (ಕೃತಯುಗಮಾನದ) ಸಂಧಿಕಾಲವೂ ಇದ್ದು, ಸಂಧ್ಯಾಪಂಚದಶ–ಹದಿನೈದು ಸಂಧಿಕಾಲಗಳಾಗುತ್ತವೆ; ಮನ್ವಂ-ತರಾಬ್ದಕೈಃ–ಮನ್ವಂತರಗಳ ವರ್ಷಗಳಿಂದ, ಯುಕ್ತಾಃ–ಈ ಸಂಧಿಕಾಲಗಳು ಕೂಡಿದರೆ, ಏವಂಕೃತ್ವಾ – ಹೀಗೆ ಗಣನೆ ಮಾಡುವುದರಿಂದ, ಯತ್-ಜಾಯತೇ – ಯಾವ ಕಾಲಾವಧಿಯು ದೊರೆಯುವುದೋ, ತತ್ – ಅದು, ಮಹಾಯುಗ ಸಹಸ್ರಕಂ–೧೦೦೦ ಮಹಾಯುಗಗಳಷ್ಟು ಆಗುತ್ತದೆ; ಏತತ್ ತು – ಇದು (೧೦೦೦ ಮಹಾಯುಗಗಳ ಕಾಲವು) ಆದರೂ, ಪಿತಾ-ಮಹದಿನಂ–ಬ್ರಹ್ಮದೇವನ ಹಗಲು (ಎನಿಸುತ್ತದೆ); ರಾತ್ರಿಃ–(ಪಿತಾಮಹನ) ರಾತ್ರಿಯೂ, ತಾವತೀ ಏವ ಹಿ–ಅಷ್ಟೇ (೧೦೦೦ ಮಹಾಯುಗಗಳ) ಅವಧಿ ಯುಳ್ಳದ್ದು ಎಂದು ಶಾಸ್ತ್ರಪ್ರಸಿದ್ಧವು; ಸಃ–ಹಗಲು ರಾತ್ರಿಗಳು ಸೇರಿದ

ಮನುವು ಅಧಿಕಾರಾರೂಢನಾಗಿ ಮನ್ವಂತರಕಾಲವು ಸಮಾಪ್ತಿಯಾಗುವ ವರೆಗೆ ಧರ್ಮ ವ್ಯವಸ್ಥಾಪಕನಾಗಿ ಕಾಲಕಾಲಕ್ಕೆ ಧರ್ಮಶಾಸ್ತ್ರಗಳನ್ನು ರಚಿಸಿ, ಶ್ರೀಹರಿಸೇವೆಯಲ್ಲಿ ತೊಡಗಿರುತ್ತಾನೆ) ; ಇಂಥ ೧೪ ಮನ್ವಂತರಗಳಿಗೆ ಒಂದು ಬ್ರಹ್ಮದೇವನ ಹಗಲು; ಆತನಿಗೆ ಅಷ್ಟೇ ಕಾಲಾವಧಿಯ ರಾತ್ರಿಯು—ಈ ಹಗಲು ರಾತ್ರಿಗಳು ಸೇರಿ ಒಂದು ದಿನ; ಅದು ಕಲ್ಪವೆಂದು ಕರೆಯಲ್ಪಡು ತ್ತದೆ. ದಿನಕಲ್ಪದ ಆರಂಭದಲ್ಲಿ, ಮೊದಲನೆ ಮನುವಿನ ಕಾಲವು ಪ್ರಾರಂಭ ವಾಗುವ ಮೊದಲು, ೪,೮೦೦ ದೇವಮಾನ ವರ್ಷಗಳ ಅವಧಿಯ ಒಂದು ಕೃತ ಯುಗ ಸಮಾನವಾದ ಸಂಧಿಕಾಲವೂ, ಮುಂದೆ ಪ್ರತಿಮನ್ವಂತರದ ಮಧ್ಯದಲ್ಲಿ ಸಹ ಅಷ್ಟೇ ಕಾಲದ (ಒಂದು ಕೃತಯುಗದಷ್ಟು) ಸಂಧಿಕಾಲವಿರುತ್ತದೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆ ಒಂದು ದಿನವು, ಕಲ್ಪ ಇತಿ ಪ್ರೋಕ್ತಃ ಹಿ–(ದಿನ) ಕಲ್ಪವೆಂದು ಕರೆಯಲ್ಪಡುತ್ತದಷ್ಟೆ; ಶತತ್ರಯಷಷ್ಟಿಕಂ – ೩೬೦ ದಿನಗಳ, ತತ್ – ಆ ಕಾಲವು, ಬ್ರಾಹ್ಮಂ ವರ್ಷಂ ಇತಿ – ಬ್ರಹ್ಮದೇವನ ಒಂದು ವರ್ಷವೆಂದು, ಪ್ರೋಕ್ತಂ – ಹೇಳಲ್ಪಡುತ್ತದೆ; ತಚ್ಛತಂ–ಅದರ (ಆ ವರ್ಷದ) ಒಂದು ನೂರು, ಪರಂ– 'ಪರ' ವೆಂದು, ಉಚ್ಯತೇ–ಹೇಳಲ್ಪಡುತ್ತದೆ; ತದರ್ಧಂ ತು–ಅದರ ಅರ್ಧ ಭಾಗವಾದರೋ, ಪಂಚಾಶತ್ ಬ್ರಾಹ್ಮವರ್ಷಕಂ – ಬ್ರಹ್ಮದೇವನ ೫೦ ವರ್ಷಗಳು, ಪರಾರ್ಧಾ – 'ಪರಾರ್ಧ'ವೆಂದು ಸ್ಯಾತ್–ಆಗುತ್ತದೆ. ಬ್ರಹ್ಮಣಃ– ಬ್ರಹ್ಮನಿಗೆ, ಪರಂ ಆಯುಃ–'ಪರ' (೧೦೦ ವರ್ಷಗಳು) ಕಾಲದ ಆಯುಷ್ಯವು; ಸ್ಯಾತ್–ಆಗಿರುತ್ತದೆ; ಚ–ಮತ್ತು, ತದತೀತೌ–ಅದು ಮುಗಿಯುತ್ತಿರಲು (ಆ 'ಪರ' ಕಾಲವು ಕಳೆಯಲು), ತಲ್ಲಯಃ – ಆತನಿಗೆ ಲಯವು (ಮರಣವುಂಟಾಗುತ್ತದೆ).

ಪ್ರಲಯಃ ಪರಸಂಖ್ಯಾಕಃ ಸಾರ್ಧಂದ್ವಾದಶವರ್ಷಕಂ ।
ಅಷ್ಟವಿಾಂಶೋಭವೇತ್ಸಾರ್ಧಂ ಸಪ್ತಾಶೀತ್ಯಬ್ದಕೇ ಗತೇ ॥ ೧೭ ॥

ಯೋಗನಿದ್ರಾಂ ವಿಮುಂಚಾಮಿ ತತಃ ಕ್ರೀಡಾಮಿ ಪೂರ್ವವತ್ ।
ತತಶ್ಶ್ವಾಂತಿಮೇ ಕಲ್ಪೇ ಪ್ರಲಯಸ್ಯಾವಶೇಷಿತೇ ॥ ೧೮ ॥

ಕ್ರೀಡಾಃ ಸಮಾಪಿತಾಃ ಪಶ್ಚಾತ್ ಸಿಸೃಕ್ಷಾಮೇವ್ಯಜಾಯತ ।
ತತೋ ವಿದಿತತತ್ತ್ವಾಮೇ ಲಕ್ಷ್ಮೀರೂಪದ್ವಯಾನ್ವಿತಾ ॥
ಪ್ರಕೃತಿಂ ಬೋಧಯಾಮಾಸ ದೇವಾನಾಂ ದೇಹಸೃಷ್ಟಯೇ ॥ ೧೯ ॥

---

೧೪ ಮನ್ವಂತರಗಳ ಒಂದು ದಿನದಲ್ಲಿ ಒಟ್ಟು ಮನ್ವಂತರಗಳ ಸಂಧಿಕಾಲಗಳು ೧೫ ಬರುತ್ತವೆ. ಈ ಸಂಧಿಕಾಲಗಳಿಂದ ಸಹಿತವಾದ ೧೪ ಮನ್ವಂತರಗಳ ಒಟ್ಟು ಕಾಲವು ೧,೦೦೦ ಮಹಾಯುಗಗಳಾಗುತ್ತವೆ. ಇದು ಬ್ರಹ್ಮನ ಹಗಲು—ಅಷ್ಟೇ ರಾತ್ರಿ; ಇಂತಹ ೩೬೦ ದಿನಗಳಿಗೆ ಬ್ರಹ್ಮದೇವನ ಒಂದು ವರ್ಷ; ಬ್ರಹ್ಮನ ಆಯುರ್ಮಾನವು ೧೦೦ ವರ್ಷಗಳು; ಇದು 'ಪರ' ಎಂದು ಕರೆಯಲ್ಪಡುತ್ತದೆ; ಇದರ ಅರ್ಧಭಾಗವು 'ಪರಾರ್ಧ' ವೆಂದು ಕರೆಯಲ್ಪಡುತ್ತದೆ. ಈ 'ಪರ'ನಾಮಕ ಬ್ರಹ್ಮದೇವನ ಆಯುಷ್ಯವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸತ್ವರಾಶೇಸ್ತತಃ ಸತ್ವಂ ಶ್ರೀಃ ಸಮಾದಾಯ ತಸ್ಥುಷೀ ।
ತಮೋರಾಶೇಸ್ತಥಾದಾಯ ತಮೋ ದುರ್ಗಾ ವ್ಯವಸ್ಥಿತಾ ॥ ೨೦ ॥

ಪ್ರಲಯಃ–ಪ್ರಲಯಕಾಲವೂ, ಪರಸಂಖ್ಯಾಕಃ–ಪರಸಂಖ್ಯೆಯುಳ್ಳದ್ದು (ಬ್ರಹ್ಮನ ೧೦೦ ವರ್ಷಗಳಷ್ಟು ಕಾಲಾವಧಿಯುಳ್ಳದ್ದು) ; ಸಾರ್ಧಂ ದ್ವಾದಶ-ವರ್ಷಕಂ-೧೨-೧/೨ ವರ್ಷಗಳು, ಅಷ್ಟಮಾಂಶಃ-(ಪ್ರಲಯಕಾಲದ) ೧/೮ನೇ ಭಾಗವು, ಭವೇತ್ – ಆಗುತ್ತದೆ ; ಸಾರ್ಧಂಸಪ್ತಾಶೀತ್ಯಬ್ದಕೇ – (ಪ್ರಳಯ ಕಾಲದ ೧೦೦ ವರ್ಷಗಳಲ್ಲಿ) ೮೭-೧/೨ ವರ್ಷಗಳು, ಗತೇ–ಗತಿಸುತ್ತಿರಲು (ಕಳೆದಾಗ), ಯೋಗನಿದ್ರಾಂ–ಯೋಗನಿದ್ರೆಯನ್ನು, ವಿಮುಂಚಾಮಿ–ಬಿಡು ತ್ತೇನೆ; ತತಃ-ನಂತರ, ಪೂರ್ವವತ್–ಈ ಮೊದಲು ಹೇಳಿದಂತೆ, ಕ್ರೀಡಾಮಿ-ಕ್ರೀಡಿಸುತ್ತೇನೆ; ತತಃ–ನಂತರ, ಪ್ರಲಯಸ್ಯ–ಪ್ರಳಯಕಾಲದ, ಅಂತಿಮೋ ಕಲ್ಪೇ ಏವ–ಕೊನೆಯ ಕಲ್ಪಮಾತ್ರವು (ಕಡೆಯದಿನ ಕಲ್ಪದಷ್ಟು ಕಾಲವು),

---

ಪೂರ್ತಿಗೊಳ್ಳಲು, ಆತನಿಗೆ ಮರಣವುಂಟಾಗುತ್ತದೆ (ದೇಹವಿಯೋಗವಾಗು ತ್ತದೆ) (೧೧-೧೬). ಪ್ರಲಯಕಾಲವೂ ಬ್ರಹ್ಮದೇವನ ಪರನಾಮಕ ೧೦೦ ವರ್ಷ ಗಳ ಆಯುರ್ಮಾನದಷ್ಟೇ ಆಗಿರುತ್ತದೆ. ಅದರಲ್ಲಿ ೮೭-೧/೨ ವರ್ಷಗಳು ಕಳೆದು, ೧/೮ನೇ ಭಾಗದ ೧೨-೧/೨ ವರ್ಷಗಳು ಉಳಿದಿರುವಾಗ ಯೋಗನಿದ್ರೆಯಿಂದ ಎದ್ದು,[1] ಈ ಹಿಂದೆ ಹೇಳಿದಂತೆ ಮುಕ್ತರೊಡನೆ ಕ್ರೀಡಿಸಲು ತೊಡಗುತ್ತೇನೆ. ಪ್ರಲಯಕಾಲದ ಕಡೆಯ ದಿನ ಕಲ್ಪದಷ್ಟು ಕಾಲವು ಉಳಿದಿರುವಾಗ, ನನ್ನ ವಿವಿಧ ಕ್ರೀಡೆಗಳನ್ನು ಮುಗಿಸಿದೆನು ; ಜಗತ್ಸೃಷ್ಟಿಯಲ್ಲಿ ಇಚ್ಛೆಯುಂಟಾ ಯಿತು. ಆಗ ನನ್ನ ಸಂಕಲ್ಪವನ್ನು (ಇಚ್ಛೆಯನ್ನು) ತಿಳಿದ ಲಕ್ಷ್ಮೀದೇವಿಯು, ಶ್ರೀ ಮತ್ತು ದುರ್ಗಾನಾಮಕ ಎರಡು ರೂಪಗಳಿಂದ ಸಿದ್ಧಳಾಗಿ ನಿಂತು, ದೇವತೆಗಳ ದೇಹಸೃಷ್ಟಿಗಾಗಿ ತನ್ನಿಂದ ನಿಯಮ್ಯವಾದ ಮೂಲಪ್ರಕೃತಿ ಯನ್ನು ಪ್ರಚೋದಿಸಿದಳು. ಪ್ರಕೃತಿಯಲ್ಲಿದ್ದ ಸೂಕ್ಷ್ಮ ಸತ್ವಗುಣರಾಶಿಯಿಂದ,

---

[1] ಶ್ರೀವಿಷ್ಣುವಿನ ಪ್ರಲಯಕಾಲದ ನಿದ್ರೆಯು, ನಿತ್ಯಜ್ಞಾನಸ್ವರೂಪನಾದ ಶ್ರೀಹರಿಗೆ, ಅಸ್ಮದಾದಿಗಳಂತೆ ಅಜ್ಞಾನದಿಂದ ಉಂಟಾದುದಲ್ಲ. ಯೋಗನಿದ್ರೆ ಎಂದರೆ, ಆತ್ಮಧ್ಯಾನದಿಂದ ಆತ್ಮಾನಂದದ ಭೋಗದಲ್ಲಿಯೇ ನಿರತನಾಗಿ, ಜಗದ್ವ್ಯಾಪಾರಗಳನ್ನು ಉಪರಮಗೊಳಿಸಿ, ಶಯನಮಾಡಿರುವ ಅವಸ್ಥಾವಿಶೇಷದ ಅಭಿವ್ಯಕ್ತಿ ಗೊಳಿಸುವುದೆಂದರ್ಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಶೇಷಿತೇ – ಉಳಿದಿರಲು, ಕ್ರೀಡಾಃ – (ಮುಕ್ತರೊಡನೆ ನಡೆಸಿದ ನನ್ನ) ಕ್ರೀಡೆಗಳು, ಸಮಾಪಿತಾಃ–ಮುಗಿಸಲ್ಪಟ್ಟವು ; ಪಶ್ಚಾತ್–ಆಮೇಲೆ, ಮೇ– ನನಗೆ, ಸಿಸೃಕ್ಷಾಅಪಿ – ಜಗತ್ತನ್ನು ಸೃಷ್ಟಿಮಾಡಬೇಕೆಂಬ ಇಚ್ಛೆಯು, ಅಜಾಯತ–ಉಂಟಾಯಿತು ; ತತಃ–ನಂತರ, ಮೇ–ನನ್ನ, ವಿದಿತತತ್ವಾ– ಸಂಕಲ್ಪನಿಶ್ಚಯವನ್ನು ತಿಳಿದ, ಲಕ್ಷ್ಮೀಃ–ಲಕ್ಷ್ಮೀದೇವಿಯು, ರೂಪದ್ವಯಾ– ನ್ವಿತಾ – ಎರಡು ರೂಪಗಳುಳ್ಳವಳಾಗಿ, ದೇವಾನಾಂ – ದೇವತೆಗಳ, ದೇಹ ಸೃಷ್ಟಯೇ–ದೇಹಗಳನ್ನು ಸೃಷ್ಟಿಮಾಡುವುದಕ್ಕಾಗಿ, ಪ್ರಕೃತಿಂ–(ತನ್ನ ಅಧೀನ ವಾದ) ಜಡಪ್ರಕೃತಿಯನ್ನು, ಬೋಧಯಾಮಾಸ – ಜಾಗೃತಗೊಳಿಸಿದಳು, (ಪ್ರೇರಿಸಿದಳು– ಕಾರ್ಯೋನ್ಮುಖವನ್ನಾಗಿ ಮಾಡಿದಳು) ; ತತಃ–ಅನಂತರ, ಸತ್ವರಾಶೇಃ – (ಮೂಲಪ್ರಕೃತಿಯಲ್ಲಿರುವ ಸೂಕ್ಷ್ಮರೂಪದ) ಸತ್ವಗುಣದ ರಾಶಿಯಿಂದ, ಸತ್ವಂ–(ಸ್ವಲ್ಪಭಾಗ) ಸತ್ವಗುಣವನ್ನು, ಶ್ರೀಃ–ಶ್ರೀರೂಪಳಾದ ಲಕ್ಷ್ಮೀದೇವಿಯು, ಸಮಾದಾಯ–ತೆಗೆದುಕೊಂಡು, ತಸ್ಥುಷೀ–ನಿಂತಳು ; ತಥಾ–ಹಾಗೆಯೇ, ತಮೋರಾಶೇಃ–ತಮೋಗುಣದ ರಾಶಿಯಿಂದ, ತಮಃ– ತಮೋಗುಣವನ್ನು, ಆದಾಯ–ತಂದು (ತೆಗೆದುಕೊಂಡು), ದುರ್ಗಾ–ದುರ್ಗಾ ರೂಪದಿಂದ ಲಕ್ಷ್ಮೀದೇವಿಯು, ವ್ಯವಸ್ಥಿತಾ– ಸಿದ್ಧಳಾಗಿ ನಿಂತಳು.

ಅತಿಶ್ವೇತಂ ಶುದ್ಧಸತ್ವಂ ಅತಿಶ್ಯಾಮಂ ತಮಸ್ತಥಾ ।
ತತೋ ಮಮೇಚ್ಛಯೈವೈಷಾ ಲಕ್ಷ್ಮೀರ್ಭೂರೂಪಮಾಸ್ಥಿತಾ ॥೨೦॥

ತತೋ ಭೂಸ್ತಮಸೋ ರಾಶೇಃ ಕಿಂಚಿಚ್ಚಕ್ರೇ ತಮಃ ಪೃಥಕ್ ।
ಸತ್ವರಾಶೇಸ್ತಥಾ ಸತ್ವಂ ಪೃಥಕ್ ಚೈವ ಚಕಾರ ಹ ॥ ೨೨ ॥

ಸ್ವಲ್ಪಭಾಗ ಸತ್ವಗುಣವನ್ನೂ ಕೈಗೆ ತೆಗೆದುಕೊಂಡು ಶ್ರೀರೂಪದಿಂದಲೂ, ಹಾಗೆಯೇ ಸೂಕ್ಷ್ಮತಮೋರಾಶಿಯಿಂದ, ಸ್ವಲ್ಪ ತಮೋಗುಣವನ್ನು ತೆಗೆದು ಕೊಂಡು ದುರ್ಗಾರೂಪದಿಂದಲೂ, ನನ್ನೆದುರು ನಿಂತಳು (೧೭–೨೦). ಸತ್ವಗುಣವು ಅತ್ಯಂತ ಶುಭ್ರವಾದುದು ; ತಮೋಗುಣವು ನೀಲವರ್ಣ ವುಳ್ಳದ್ದು (ಅತಿ ಕಪ್ಪು) ; ಹಿಂದೆ ಹೇಳಿದಂತೆ ಶ್ರೀ ಮತ್ತು ದುರ್ಗಾರೂಪ ಗಳಿಂದ ಬಂದು ನಿಂತ ಶ್ರೀ ಮಹಾಲಕ್ಷ್ಮೀದೇವಿಯು, ನನ್ನ ಇಚ್ಛಾಮಾತ್ರ ದಿಂದ, ಭೂನಾಮಕ ಮತ್ತೊಂದು ರೂಪವನ್ನು ಧರಿಸಿದಳು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಲೋಡಯಾಮಾಸ ತಮಃ ಸತ್ವೇ ಸತ್ವಂ ತಮಸ್ಯಪಿ ।
ತತಸ್ತ ಸ್ಮಾತ್ಸಮಾದಾಯ ಮಿಶ್ರೀಭೂತಾದ್ಗುಣದ್ವಯಾತ್ ॥ ೨೩ ॥
ಭಾಗದ್ವಯಯುತಂ ಚಕ್ರೇ ಶಬಲಂ ತದ್ರಜೋಽಭವತ್ ।

ಶುದ್ಧಸತ್ವಂ–ಅಮಿಶ್ರಿತ ಸತ್ವಗುಣವು, ಅತಿಶ್ವೇತಂ–ಅತ್ಯಂತ ಶುಭ್ರ (ಬಿಳಿ) ವರ್ಣವುಳ್ಳದ್ದು; ತಥಾ–ಹಾಗೆಯೇ, ತಮಃ–ಶುದ್ಧತಮೋಗುಣವು, ಅತಿಶ್ಯಾಮಂ–ಅತಿಕಪ್ಪುವರ್ಣವುಳ್ಳದ್ದು; ತತಃ–ಶ್ರೀ ಮತ್ತು ದುರ್ಗೆಯರು, ನನ್ನೆದುರು ನಿಂತಬಳಿಕ, ಮಮ–ನನ್ನ, ಇಚ್ಛಯಾ ಏವ–ಇಚ್ಛೆಯಿಂದಲೇ, ಏಷಾ ಲಕ್ಷ್ಮೀಃ – ಈ ಲಕ್ಷ್ಮೀದೇವಿಯು, ಭೂ ರೂ ಪಂ – ಭೂ ನಾ ಮ ಕ ಮತ್ತೊಂದು ರೂಪವನ್ನು, ಆಸ್ಥಿತಾ–ಹೊಂದಿದಳು; ತತಃ–ನಂತರ, ಭೂಃ–ಭೂದೇವಿಯು, ತಮಸಃ ರಾಶೇಃ–ತಮೋಗುಣದ ರಾಶಿಯಿಂದ, ಕಿಂಚಿತ್ ತಮಃ – ಸ್ವಲ್ಪತಮೋಗುಣವನ್ನು, ಪೃಥಕ್ ಚಕ್ರೇ – ಬೇರೆ ಮಾಡಿದಳು (ಪ್ರತ್ಯೇಕಿಸಿ ತೆಗೆದಳು); ತಥಾ–ಹಾಗೆಯೇ, ಸತ್ವರಾಶೇಃ–ಸತ್ವಗುಣದ ರಾಶಿಯಿಂದ, ಸತ್ವಂ – ಸ್ವಲ್ಪ ಸತ್ವಗುಣವನ್ನು, ಪೃಥಕ್ ಚೈವ – ಬೇರೆ ಯಾಗಿಯೇ, ಚಕಾರ ಹ–ತೆಗೆದಳು (ಮಾಡಿದಳು), ನಿಶ್ಚಯವು; ತಮಃ–ತಮೋಗುಣವನ್ನು (ಹಾಗೆ ಪ್ರತ್ಯೇಕಿಸಿದ ತಮೋಗುಣವನ್ನು), ಸತ್ವೇ–ಸತ್ವ ಗುಣದಲ್ಲಿಯೂ, ತಮಸಿ–ತಮೋಗುಣದಲ್ಲಿ, ಸತ್ವಂ ಅಪಿ–ಸತ್ವಗುಣವನ್ನೂ,

---

ಈ ಭೂದೇವಿಯು, ಸತ್ವಗುಣರಾಶಿಯಿಂದ, ಸ್ವಲ್ಪ ಸತ್ವಗುಣವನ್ನೂ, ತಮೋಗುಣರಾಶಿಯಿಂದ ಸ್ವಲ್ಪ ತಮೋಗುಣವನ್ನೂ ಬೇರ್ಪಡಿಸಿ, ಸತ್ವಗುಣ ವನ್ನು ತಮೋಗುಣದಲ್ಲಿಯೂ, ತಮೋಗುಣವನ್ನು ಸತ್ವಗುಣದಲ್ಲಿಯೂ ಬೆರೆಸಿದಳು; ಹಾಗೆ ಬೆರೆಸಿದ ಎರಡು ಗುಣರಾಶಿಗಳಿಂದ ಸಮವಾದ ಎರಡು ಭಾಗಗಳನ್ನು ಮಿಶ್ರಮಾಡಿದಳು. ಅದು ಮಿಶ್ರವರ್ಣದ (ಶಬಲ) ರಜೋ ಗುಣವಾಯಿತು[1] (೨೧–೨೩). ಅಧಿಕವಾದ ರಜೋಗುಣಕ್ಕೆ ಅದಕ್ಕಿಂತ ಕಡಿಮೆ (ಸ್ವಲ್ಪವಾದ) ಸತ್ವಗುಣವನ್ನೂ, ಅದಕ್ಕೂ ಅಲ್ಪವಾದ ತಮೋ ಗುಣವನ್ನೂ ಕೂಡಿಸಿ, ಶ್ರೀವಿಷ್ಣುವು, ಮಹತ್ತತ್ವವನ್ನು ನಿರ್ಮಿಸಿದನು;

[1] ಬಿಳಿ ಮತ್ತು ಕಪ್ಪು ವರ್ಣಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬೆರಸಿದರೆ, ಮಿಶ್ರಣದಿಂದಾದ ಪದಾರ್ಥವು ಕೆಂಪು ವರ್ಣವುಳ್ಳದ್ದಾಗುತ್ತದೆ. ಆದ್ದರಿಂದ ರಜೋ ಗುಣವು ಕೆಂಪು ವರ್ಣದ್ದೆಂದೂ ನಿರೂಪಿಸಲಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಲೋಡಯಾಮಾಸ–ಬೆರೆಸಿ ಕಲಸಿದಳು ; ತತಃ–ಅನಂತರ, ತಸ್ಮಾತ್–ಆ, ಮಿಶ್ರೀಭೂತಾತ್-ಹಾಗೆ ಮಿಶ್ರಮಾಡಲ್ಪಟ್ಟ, ಗುಣದ್ವಯಾತ್–ಎರಡು ಗುಣಗಳಿಂದ, ಭಾಗದ್ವಯಯುತಂ – ಸಮವಾದ ಎರಡು ಭಾಗಗಳುಳ್ಳದ್ದನ್ನಾಗಿ, ಚಕ್ರೇ–(ಭೂದೇವಿಯು) ಮಾಡಿದಳು ; ತತ್–ಅದು, ಶಬಲಂ–ಮಿಶ್ರವಾದ ವರ್ಣವುಳ್ಳ, ರಜಃ–ರಜೋಗುಣವು, ಅಭವತ್–ಉಂಟಾಯಿತು.

ಏವಂ ರಾಶಿತ್ರಯೇ ಜಾತೇ ಶ್ರೀಭೂದುರ್ಗಾಭಿರಕ್ಷಿತೇ ॥ ೨೪ ॥

ರಜೋಭೂಯಿಷ್ಠಮಾದಾಯ ತತೋಽಲ್ಪಂ ಸತ್ವಮೇವ ತು ।
ತತೋಽಪ್ಯಲ್ಪಂ ತಮಶ್ಚಾಥ ತ್ರಯಮೇಕತ್ರ ಕ್ಲಿಪ್ತವಾನ್ ॥ ೨೫ ॥

ಮಹತ್ತತ್ವಂ ತು ತತ್ಪ್ರೋಕ್ತಂ ತತೋಽಪ್ಯರ್ಧಂ ಸಮಾದದೇ ।
ಕಿಂಚಿತ್ತತ್ರ ತಮಃ ಕ್ಷಿಪ್ತ್ವಾಽಹಂಕಾರಂ ಕೃತವಾನಹಂ ॥ ೨೬ ॥

ಏವಂ – ಹೀಗೆ, ಶ್ರೀಭೂದುರ್ಗಾಭಿರಕ್ಷಿತೇ – ಶ್ರೀಭೂದುರ್ಗಾರೂಪಗಳಿಂದ ರಕ್ಷಿತವಾದ, ರಾಶಿತ್ರಯೇ–ರಾಶಿಗಳ ಮೂರು (ಸತ್ವ, ರಜ, ತಮಗಳೆಂಬ ಮೂರು ಗುಣರಾಶಿಗಳು), ಜಾತೇ–ಉಂಟಾಗುತ್ತಿರಲು ; ರಜೋಭೂಯಿಷ್ಠಂ–ಅಧಿಕವಾದ ರಜೋಗುಣವನ್ನು, ಆದಾಯ–ತೆಗೆದುಕೊಂಡು, ತತಃ–ಅದಕ್ಕಿಂತ, ಅಲ್ಪಂ–ಸ್ವಲ್ಪವಾದ (ಕಡಿಮೆಯಾದ), ಸತ್ವಂ ಏವ ತು–ಸತ್ವಗುಣವನ್ನೂ, ತತೋಽಪಿ–ಅದಕ್ಕಿಂತ (ಸತ್ವಗುಣಕ್ಕಿಂತ), ಅಲ್ಪಂ–ಕಡಿಮೆಯಾದ, ತಮಶ್ಚ–ತಮೋಗುಣವನ್ನೂ (ಆದಾಯ–ತೆಗೆದುಕೊಂಡು), ಅಥ–ಅನಂತರ, ತ್ರಯಂ–ಆ ಮೂರನ್ನೂ, ಏಕತ್ರ–ಒಂದಾಗಿ, ಕ್ಲಿಪ್ತವಾನ್–ಮಾಡಿದೆನು (ಕೂಡಿಸಿದೆನು); ತತ್ – ಈ ಮಿಶ್ರಣದಿಂದಾದುದು, ಮಹತ್ತತ್ವಂ ತು–ಮಹತ್ತತ್ವವೆಂದೇ, ಪ್ರೋಕ್ತಂ–ಹೇಳಲ್ಪಡುತ್ತದೆ ; ತತೋಽಪಿ ಅರ್ಧಂ–ಅದರಲ್ಲಿ ಸಹ ಅರ್ಧಭಾಗವನ್ನು, ಸಮಾದದೇ–ತೆಗೆದುಕೊಂಡೆನು ;

ಮಹತ್ತತ್ವದಲ್ಲಿ ಅರ್ಧಭಾಗವನ್ನು ಬೇರ್ಪಡಿಸಿ, ಅದಕ್ಕೆ ಸ್ವಲ್ಪ ತಮೋಗುಣವನ್ನು ಕೂಡಿಸಿ, ಅಹಂಕಾರತತ್ವವನ್ನು ನಿರ್ಮಿಸಿದನು (೨೪–೨೬). ಅಹಂಕಾರತತ್ವವು ಸಿದ್ಧವಾಗಲು, ಅದನ್ನು ಮೂರು ರಾಶಿಗಳನ್ನಾಗಿ ವಿಭಾಗಿಸಿ, ಒಂದರಲ್ಲಿ ಸತ್ವಗುಣವನ್ನೂ ಮತ್ತೊಂದರಲ್ಲಿ ರಜೋಗುಣವನ್ನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತ್ರ – ಅದರಲ್ಲಿ (ಆ ಮಹತ್ತತ್ತ್ವದ ಅರ್ಧಭಾಗದಲ್ಲಿ), ಕಿಂಚಿತ್ – ಸ್ವಲ್ಪ, ತಮಃ–ತಮೋಗುಣವನ್ನು, ಕ್ಷಿಪ್ತ್ವಾ–ಹಾಕಿ, ಅಹಂ–ನಾನು, ಅಹಂಕಾರಂ–ಅಹಂಕಾರತತ್ತ್ವವನ್ನು ಕೃತವಾನ್–ಮಾಡಿದೆನು.

ಅಹಂಕಾರಂ ವಿಭಜ್ಯಾಥ ತ್ರೀನ್ ರಾಶೀನ್ ಕೃತವಾನಹಂ ।
ರಾಶಿತ್ರಯಂ ಕ್ರಮೇಣೈವ ತತ್ತ್ವದ್ರಾಶಿಂ ಸಮಂ ಪುನಃ ॥ ೨೭ ॥

ಗುಣತ್ರಯಂ ವಿನಿಕ್ಷಿಪ್ತಮೇಕಸ್ಮಿನ್ನೇಕಮೇವ ಹಿ ।
ಯತ್ರ ಸತ್ತ್ವಂ ವಿನಿಕ್ಷಿಪ್ತಂ ಜಾತೋ ವೈಕಾರಿಕೋ ಹಿ ಸಃ ॥ ೨೮ ॥

ರಜಸಾ ತೈಜಸಃ ಪ್ರೋಕ್ತಃ ತಮಸಾಚೈವ ತಾಮಸಃ ।
ಅರ್ಧವೈಕಾರಿಕಾದ್ಬ್ರಹ್ಮದೇವದೇಹಾನ್ಮನಸ್ತಥಾ ॥ ೨೯ ॥

ವಿನಿರ್ಮಮೇ ತೈಜಸಾರ್ಧಾತ್ ಜ್ಞಾನಕರ್ಮೇಂದ್ರಿಯಾಣಿ ಚ ।
ಋಷಿಗಂಧರ್ವಮುಖ್ಯಾನಾಂ ದೇಹಾನಪಿ ವಿಭಾಗಶಃ ॥ ೩೦ ॥

ತಾಮಸಾರ್ಧಾತ್ತು ಕೃತವಾನ್ ಸೂಕ್ಷ್ಮಂ ಶಬ್ದಾದಿಪಂಚಕಂ ।
ಯಕ್ಷರಾಕ್ಷಸದೇಹಾಂಶ್ಚ ತಥೈವಾನ್ಯಾನ್ ಸಹಸ್ರಶಃ ॥ ೩೧ ॥

ಅಥ–ಅನಂತರದಲ್ಲಿ, ಅಹಂ–ನಾನು, ಅಹಂಕಾರಂ–ಅಹಂಕಾರತತ್ತ್ವವನ್ನು, ವಿಭಜ್ಯ – ವಿಭಾಗಿಸಿ, ತ್ರೀನ್ ರಾಶೀನ್ – ಮೂರು ರಾಶಿಗಳನ್ನು,

---

ಮೂರನೆಯದರಲ್ಲಿ ತಮೋಗುಣವನ್ನೂ ಸಮಾನಪ್ರಮಾಣದಲ್ಲಿ ಕೂಡಿಸಿದೆನು; ಅದರಿಂದ, ಕ್ರಮವಾಗಿ ವೈಕಾರಿಕ, ತೈಜಸ, ತಾಮಸಗಳೆಂದು ಕರೆಯಲ್ಪಡುವ ಅಹಂಕಾರತತ್ತ್ವಪ್ರಭೇದಗಳು ಸೃಷ್ಟವಾದವು; ವೈಕಾರಿಕದ ಅರ್ಧಭಾಗದಿಂದ,[1] ಬ್ರಹ್ಮಾದಿ ದೇವತೆಗಳ ದೇಹಗಳನ್ನೂ ಮನಸ್ತತ್ತ್ವ

---

[1] ವೈಕಾರಿಕಾಹಂಕಾರದಿಂದ, ತತ್ತ್ವಾಭಿಮಾನಿದೇವತೆಗಳ ದೇಹಗಳು ನಿರ್ಮಿತವಾದವು; ವೈಕಾರಿಕದಲ್ಲಿ ಸತ್ತ್ವಗುಣವೇ ಬಹಳವಾಗಿರುತ್ತದೆ; ಬ್ರಹ್ಮದೇವನ ದೇಹವು ಬಹು ಸತ್ತ್ವಮಯವಾದುದು — ಮಹತ್ತತ್ತ್ವದಿಂದ ಆದುದೆಂದೂ ಹೇಳಲಾಗುತ್ತದೆ. ಮಹತ್ತತ್ತ್ವದಲ್ಲಿ ಈ ಹಿಂದೆ ಹೇಳಿದಂತೆ, ರಜೋಗುಣ, ತಮೋಗುಣಾಂಶಗಳಿರುತ್ತವೆ; ಅಲ್ಪವಾದ ತಮೋಗುಣವನ್ನು ಮಹತ್ತತ್ತ್ವಕ್ಕೆ ಕೂಡಿಸಿದ್ದರಿಂದ, ಅಹಂಕಾರತತ್ತ್ವವು ನಿರ್ಮಿತವಾದುದಾದರೂ, ವೈಕಾರಿಕದಲ್ಲಿ ಪುನಃ ಸತ್ತ್ವಗುಣವು ಸೇರಿದ್ದರಿಂದ ಸತ್ತ್ವಗುಣಾಧಿಕ್ಯವಿದೆ. ಬ್ರಹ್ಮದೇವನ ದೇಹನಿರ್ಮಾಣದಲ್ಲಿರುವ ರಜಸ್ತಮೋಗುಣಾಂಶಗಳು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೃತವಾನ್ ; ಕ್ರಮೇಣ ಏವ-ಕ್ರಮವಾಗಿಯೇ (ಒಂದಾದನಂತರ ಒಂದರಂತೆ), ರಾಶಿತ್ರಯಂ–ಆ ಮೂರು ರಾಶಿಗಳನ್ನು, ಪುನಃ–ಮತ್ತು, ತತ್ತದ್ರಾಶಿಂ–ಆಯಾ ರಾಶಿಯನ್ನು (ಒಂದೊಂದು ರಾಶಿಯಲ್ಲಿಯೂ), ಸಮಂ–(ಪರಸ್ಪರ) ಸಮ ಪರಿಮಾಣದ, ಗುಣತ್ರಯಂ–ಮೂರು (ಸತ್ವಾದಿ) ಗುಣಗಳನ್ನು, ಏಕಸ್ಮಿನ್ – ಒಂದು ರಾಶಿಯಲ್ಲಿ (ಅಹಂಕಾರತತ್ವದಿಂದ ವಿಭಾಗಿಸಲ್ಪಟ್ಟ ಒಂದರಲ್ಲಿ), ಏಕಮೇವ–ಒಂದನ್ನೇ (ಎಂದರೆ ಒಂದರಲ್ಲಿ ಸತ್ವಗುಣವನ್ನೂ, ಮತ್ತೊಂದರಲ್ಲಿ ಸಮವಾದ ರಜೋಗುಣವನ್ನೂ, ಮೂರನೇ ರಾಶಿಯಲ್ಲಿ ಅಷ್ಟೇ ಪರಿಮಾಣದ ತಮೋಗುಣವನ್ನೂ), ವಿನಿಕ್ಷಿಪ್ತಂ–(ಹಾಕಿದೆನು) ಹಾಕಲಾಯಿತು ; ಯತ್ರ–ಯಾವ ರಾಶಿಯಲ್ಲಿ, ಸತ್ವಂ–ಸತ್ವಗುಣವು, ವಿನಿಕ್ಷಿಪ್ತಂ–

ವನ್ನೂ ; ತೈಜಸಾಹಂಕಾರದ ಅರ್ಧಭಾಗದಿಂದ,[1] ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನೂ, ಋಷಿ ಗಂಧರ್ವ ಮೊದಲಾದವರ ದೇಹಗಳನ್ನೂ, ಯಥೋಚಿತ ವಿಭಾಗಯುಕ್ತಗಳನ್ನಾಗಿ ನಿರ್ಮಿಸಿದೆನು ; ತಾಮಸಾರ್ಧದಿಂದ ಶಬ್ದಾದಿ ಪಂಚತನ್ಮಾತ್ರೆಗಳನ್ನೂ, ಯಕ್ಷರಾಕ್ಷಸರ ದೇಹಗಳನ್ನೂ, ಇನ್ನೂ ಇತರ ಅಸಂಖ್ಯ ಪ್ರಕಾರಕ ಪ್ರಾಣಿದೇಹಗಳನ್ನೂ ನಿರ್ಮಿಸಿದೆನು (೨೭–೩೧).

ಅತ್ಯಲ್ಪ ಮತ್ತು ತಮ್ಮ ಕಾರ್ಯಗಳಾದ ರಾಗ, ಅಜ್ಞಾನಾದಿ ಕಾರ್ಯಗಳನ್ನು ಉತ್ಪಾದಿಸಲು ಅಸಮರ್ಥವಾದ ಸ್ಥಿತಿಯಲ್ಲಿವೆ. 'ಸತ್ವಸತ್ವಮಹಾಸತ್ವ ಸೂಕ್ಷ್ಮ-ಸತ್ವಶ್ಚತುರ್ಮುಖಃ' (ಗೀತಾ-ಭಾ) ಮತ್ತು 'ವಿಶುದ್ಧಸತ್ವ ಬ್ರಹ್ಮಾದೇಃ ಶರೀರೇ ಸಂಸ್ಥಿತೋ ಹರಿಃ' (ಭಾಗ-ತಾ) ಮೊದಲಾದ ವಾಕ್ಯಗಳು ಬ್ರಹ್ಮದೇವನ ದೇಹವು ಶುದ್ಧಸತ್ವಾತ್ಮಕವೆಂದು ಹೇಳಿದರೂ, ಮಹತ್ತತ್ವದಲ್ಲಿರುವ ರಜಸ್ತಮೋಗುಣಗಳು ಬಂಧಕಶಕ್ತಿಶೂನ್ಯಳಾದ್ದರಿಂದ, ಹಾಗೆ ಹೇಳಲಾಗಿರುತ್ತದೆಂದು ತಿಳಿಯಬೇಕು. ಅಲ್ಲಿರುವ ಶುದ್ಧಸತ್ವಗುಣವೂ ಸಹ ಅಬಂಧಕವಾದುದೇ ಸರಿ ; 'ಅಬಂಧಕ ಪರಮ ಸೂಕ್ಷ್ಮಸತ್ವೋಪಾದಾನಕ ದೇಹಾದಿ ಮತ್ತ್ವಾಭಿಧಾನಾತ್' ಎಂದು (ಸತ್ತತ್ವರತ್ನ ಮಾಲಾ)ದಲ್ಲಿ ಹೇಳಲಾಗಿದೆ. ಬ್ರಹ್ಮೇತರ ದೇವತೆಗಳಿಗೆ, ತಾರತಮ್ಯಾನುಸಾರವಾದ ಅತ್ಯಲ್ಪಗುಣಬಂಧವನ್ನು ತಿಳಿಯಬೇಕು.

[1] ವೈಕಾರಿಕಾದಿ ಮೂರು ಅಹಂಕಾರತತ್ವಗಳ ಉಳಿದ ಅರ್ಧಭಾಗಗಳನ್ನು ಕೆಳಗಿನ (ಮುಂದೆ ನಿರ್ಮಾಣವಾಗುವ) ತತ್ವಗಳ ಕಾಲೋಚಿತ ಉಪಚಯಗಳಿಗಾಗಿ, ಯಥಾಯೋಗ್ಯವಾಗಿ ಉಪಯೋಗಿಸಲ್ಪಡುತ್ತವೆ. ಮಣ್ಣಿನ ಗೋಡೆಯನ್ನು ಮಣ್ಣಿನಿಂದಲೂ, ಗಾರೆಯ ಗೋಡೆಯನ್ನು ಗಾರೆಯಿಂದಲೂ ಲೇಪಿಸಿ ದೃಢಗೊಳಿಸುವಂತೆ (ರಿಪೇರಿಮಾಡುವಂತೆ) ತತ್ವಗಳ ಉಪಚಯವನ್ನು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಕಲ್ಪಟ್ಟಿತೋ, ಸಃ–ಅದು (ಆ ರಾಶಿಯು), ವೈಕಾರಿಕಃ ಜಾತಃ–ವೈಕಾರಿಕ ಅಹಂಕಾರವೆಂದು ಆಯಿತು; ರಜಸಾ – ರಜೋಗುಣದ ಮಿಶ್ರಣದಿಂದ, ತೈಜಸಃ–ತೈಜಸಾಹಂಕಾರವೆಂದೂ, ತಮಸಾ–ತಮೋಗುಣಮಿಶ್ರಣದಿಂದ, ತಾಮಸಾಶ್ಚೈವ–ತಾಮಸಾಹಂಕಾರವೆಂದೂ, ಪ್ರೋಕ್ತಃ–ಕರೆಯಲ್ಪಡುತ್ತದೆ; ಅರ್ಧವೈಕಾರಿಕಾತ್–ವೈಕಾರಿಕಾಹಂಕಾರದ ಅರ್ಧಭಾಗದಿಂದ, ಬ್ರಹ್ಮದೇವ ದೇಹಾನ್–ಬ್ರಹ್ಮಾದಿ ದೇವತೆಗಳ ದೇಹಗಳನ್ನೂ, ತಥಾ–ಹಾಗೂ, ಮನಃ–ಮನಸ್ಸನ್ನೂ (ಮನಸ್ತತ್ವವನ್ನೂ), ವಿನಿರ್ಮಮೇ–ನಾನು (ಶ್ರೀವಿಷ್ಣುವು) ನಿರ್ಮಿಸಿದೆನು; ತೈಜಸಾರ್ಧಾತ್–ತೈಜಸಾಹಂಕಾರದ ಅರ್ಧಭಾಗದಿಂದ, ಜ್ಞಾನಕರ್ಮೇಂದ್ರಿಯಾಣಿ ಚ–ಜ್ಞಾನೇಂದ್ರಿಯ (ಶ್ರೋತ್ರ, ಚಕ್ಷು, ಸ್ಪರ್ಶ, ರಸನ, ಘ್ರಾಣಗಳೆಂಬ ಇಂದ್ರಿಯ)ಗಳನ್ನೂ ಕರ್ಮೇಂದ್ರಿಯ (ವಾಕ್, ಪಾಣಿ, ಪಾಯು, ಉಪಸ್ಥಗಳೆಂಬ ಇಂದ್ರಿಯ) ಗಳನ್ನೂ, ಅಪಿ – ಮತ್ತು, ಋಷಿಗಂಧರ್ವಮುಖ್ಯಾನಾಂ–ಋಷಿಗಳು, ಗಂಧರ್ವರೇ ಮೊದಲಾದವರ, ದೇಹಾನ್–ದೇಹಗಳನ್ನೂ, ವಿಭಾಗಶಃ–ಯಥೋಚಿತವಾದ ವಿಭಾಗಗಳಿಂದ ಸಹಿತವಾಗಿ, (ವಿನಿರ್ಮಮೇ – ನಿರ್ಮಿಸಿದೆನು); ತಾಮಸಾರ್ಧಾತ್ತು–ತಾಮಸಾಹಂಕಾರದ ಅರ್ಧಭಾಗದಿಂದ, ಸೂಕ್ಷ್ಮಂ – ಸೂಕ್ಷ್ಮಗಳಾದ, ಶಬ್ದಾದಿಕಂ–ಶಬ್ದಾದಿ (ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ತನ್ಮಾತ್ರೆ) ಗಳನ್ನೂ, ಚ–ಮತ್ತು, ಯಕ್ಷರಾಕ್ಷಸದೇಹಾನ್–ಯಕ್ಷರು, ರಾಕ್ಷಸರು, ಇವರ ದೇಹಗಳನ್ನೂ, ' ತಥೈವ – ಹಾಗೆಯೇ (ಅದರಿಂದಲೇ–ತಾಮಸಾಹಂಕಾರ ದಿಂದಲೇ), ಅನ್ಯಾನ್ – ಬೇರೆ, ಸಹಸ್ರಶಃ – ಸಹಸ್ರ (ಬಹು–ಅಸಂಖ್ಯ) ಪ್ರಕಾರದ ದೇಹಗಳನ್ನೂ, ಕೃತವಾನ್ – ಮಾಡಿದವನು (ಆದೆನು–ನಿರ್ಮಿಸಿ ದೆನು).

ಹಸ್ತಿನೋಽಶ್ವಾನ್ ವೃಕಾನ್ ಗಾಶ್ಚ ಮೃಗವ್ಯಾಘ್ರಸರೀಸೃಪಾನ್ ।
ಅಜಾನವೀನ್ ಶುನಃ ಕೋಲಾನ್ ಸೃಗಾಲಾನ್ ಪಕ್ಷಿಣಸ್ತರೂನ್ ॥
ತೃಣಗುಲ್ಮಲತಾದೀಂಶ್ಚ ಬಿಡಾಲಾದೀನ್ ತಥಾಖಿಲಾನ್ ।
ತಥಾ ಮಕರಮೀನಾದೀನ್ ಮದ್ರುಕರ್ಕಟಭುಪ್ರಿಕಾನ್ ॥ ೩೩ ॥

ತಾಮಸಾಹಂಕಾರದಿಂದ ನಿರ್ಮಿತವಾದ ಪ್ರಾಣಿದೇಹಗಳು ಇಲ್ಲಿ ವಿವರಿಸಲ್ಪಟ್ಟಿವೆ. ಗಜ, ಕುದುರೆ, ಗೋವು, ಜಿಂಕೆ, ತೋಳ, ಹುಲಿ, ಸರ್ಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏವಂ ಜಲಚರಾನ್ ಸರ್ವಾನ್ ಗ್ರಾಮ್ಯಾರಣ್ಯಪಶೂನಪಿ ।
ಕಲ್ಪಯಿತ್ವಾಽಖಿಲಾನ್ ಪಶ್ಚಾಜ್ಜೀವರಾಶೀನ್ ವ್ಯಲೋಕಯಂ॥೩೪॥

ಹಸ್ತಿನಃ–ಗಜಗಳನ್ನು, ಅಶ್ವಾನ್–ಕುದುರೆಗಳನ್ನು, ವೃಕಾನ್–ತೋಳಗಳನ್ನು, ಗಾಃ ಚ–ಗೋವುಗಳನ್ನು, ಮೃಗವ್ಯಾಘ್ರಸರೀಸೃಪಾನ್–ಜಿಂಕೆ, ಹುಲಿ, ಸರ್ಪಗಳನ್ನು, ಅಜಾನ್–ಮೇಕೆಗಳನ್ನು, ಅವೀನ್–ಕುರಿಗಳನ್ನು ಶುನಃ – ನಾಯಿಗಳನ್ನು, ಕೋಲಾನ್ – ವರಾಹ (ಕಾಡುಹಂದಿ)ಗಳನ್ನು, ಸೃಗಾಲಾನ್–ನರಿಗಳನ್ನು, ಪಕ್ಷಿಣಃ–ವಿವಿಧ ಪಕ್ಷಿಗಳನ್ನೂ, ತರೂನ್–ನಾನಾ ವಿಧ ವೃಕ್ಷಗಳನ್ನೂ; ತೃಣಗುಲ್ಮಲತಾದೀನ್ ಚ – ತೃಣ, ಗುಲ್ಮ, ಬಳ್ಳಿ ಮೊದಲಾದವುಗಳನ್ನೂ, ಬಿಡಾಲಾದೀನ್–ಬೆಕ್ಕು ಮೊದಲಾದವುಗಳನ್ನು, ತಥಾ–ಹಾಗೂ, ಅಖಿಲಾನ್–ನಾನಾ ವಿಧಗಳಾದ ಸಮಸ್ತ, ಮಕರಮೀನಾದೀನ್–ಮೊಸಳೆ ಮತ್ಸ್ಯ ಮೊದಲಾದ, ಮದ್ರುಕರ್ಕಟಭುವ್ರಿಕಾನ್–ಮದ್ರ, ಏಡಿ, ಭುವ್ರಿಕೆ ಮೊದಲಾದ, ಏವಂ-ಹೀಗೆ, ಸರ್ವಾನ್ ಜಲಚರಾನ್–ಸಕಲ ಜಲಚರಪ್ರಾಣಿದೇಹಗಳನ್ನೂ, ಅಪಿ – ಮತ್ತು, ಗ್ರಾಮ್ಯಾರಣ್ಯಪಶೂನ್–ಗ್ರಾಮ್ಯ (ಗ್ರಾಮಗಳಲ್ಲಿರುವ) ಮತ್ತು ಆರಣ್ಯ (ಅರಣ್ಯದಲ್ಲಿರುವ) ನಾನಾ ಪಶುಗಳ ದೇಹಗಳನ್ನೂ, ಅಖಿಲಾನ್-ಇನ್ನಿತರ ಸಕಲ ಪ್ರಾಣಿದೇಹಗಳನ್ನೂ, ಕಲ್ಪಯಿತ್ವಾ–ಸೃಷ್ಟಿಮಾಡಿ, ಪಶ್ಚಾತ್–ಅನಂತರ, ಜೀವರಾಶೀನ್–(ಸೃಷ್ಟವಾದ ದೇಹಗಳಲ್ಲಿ ಯಥಾಯೋಗ್ಯವಾಗಿ ಪ್ರವೇಶಗೊಳಿಸಲ್ಪಡಬೇಕಾದ) ಜೀವರಾಶಿಗಳನ್ನು, ವ್ಯಲೋಕಯಂ–ನೋಡಿದೆನು.

ಕತಿಚಿತ್ ಪುರುಷಾಕಾರಾಃ ಕತಿಚಿದ್ಧಯರೂಪಿಣಃ ।
ಸಿಂಹವ್ಯಾಘ್ರಮೃಗಾದೀನಾಂ ಗಜಗೋಜಾವಿಪಕ್ಷಿಣಾಂ ॥ ೩೫ ॥

ಮೊದಲಾದವುಗಳು; ಮೇಕೆ, ಕುರಿ, ನಾಯಿ, ಹಂದಿ, ನರಿ, ಪಕ್ಷಿ, ವೃಕ್ಷ, ತೃಣ, ಗುಲ್ಮ (ಪೊದೆಯಾಗಿ ಬೆಳೆಯುವ ಗಿಡಗಳು), ಬಳ್ಳಿ ಮೊದಲಾದವುಗಳು; ಬೆಕ್ಕು ಮೊದಲಾದ ವಿವಿಧ ಪ್ರಾಣಿಗಳು; ಮಕರ, ಮೀನು, ಏಡಿ ಮೊದಲಾದ ಸಮಸ್ತ ಜಲಚರ ಪ್ರಾಣಿಗಳು, ಗ್ರಾಮ್ಯ ಮತ್ತು ಆರಣ್ಯಕ ಪಶುಗಳು, ಇತ್ಯಾದಿ ನಾನಾ ಪ್ರಾಣಿದೇಹಗಳನ್ನು ಸೃಷ್ಟಿಮಾಡಿದ ನಂತರ, ಶ್ರೀವಿಷ್ಣುವು, ಸೃಷ್ಟರಾಗಬೇಕಾದ (ಸ್ಥೂಲದೇಹಸಂಬಂಧವನ್ನು ಹೊಂದಿಸಲ್ಪಡಬೇಕಾದ) ಜೀವರಾಶಿಗಳನ್ನು ನೋಡಿದನು (೩೧–೩೪). ಸೃಷ್ಟಿಗಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೃಕ್ಷಗುಲ್ಮಲತಾದೀನಾಮಾಕಾರಂ ಬಿಭ್ರತೋ ಪರೇ ।
ಅಪರೇ ಸದೃಶಾಕಾರಾನ್ ಝಷಮೀನಾದಿಯಾದಸಾಂ ॥ ೩೬ ॥
ಸ್ವರೂಪೇಣೈವ ಯೇ ಜೀವಾಸ್ತಾದೃಶಾನಂತಸಂಜ್ಞಕಾಃ ।
ಗುಣೈರನೇಕಸಂಖ್ಯಾಕೈಃ ಪ್ರತ್ಯೇಕಮಪಿ ಚಾನ್ವಿತಾಃ ॥ ೩೭ ॥

ಕತಿಚಿತ್–ಕೆಲವು ಜೀವರು, ಪುರುಷಾಕಾರಾಃ–ಮನುಷ್ಯಾಕಾರವುಳ್ಳವರು, ಕತಿಚಿತ್–ಇನ್ನೂ ಕೆಲವರು, ಹಯರೂಪಿಣಃ–ಕುದುರೆಯ ಆಕಾರವುಳ್ಳವರು; ಅಪರೇ–ಇನ್ನೂ ಇತರರಾದ, ಸಿಂಹವ್ಯಾಘ್ರಮೃಗಾದೀನಾಂ–ಸಿಂಹ, ಹುಲಿ, ಜಿಂಕೆ ಮೊದಲಾದ ಪ್ರಾಣಿಗಳ, ಗಜಗೋಜಾವಿಪಕ್ಷಿಣಾಂ–ಆನೆ, ಗೋವು, ಮೇಕೆ, ಕುರಿ, ಪಕ್ಷಿಗಳ ಮತ್ತು, ವೃಕ್ಷಗುಲ್ಮಲತಾದೀನಾಂ–ಗಿಡ, ಪೊದೆ, ಬಳ್ಳಿ ಮೊದಲಾದವುಗಳ, ಆಕಾರಂ–ಆಕಾರವನ್ನು, ಬಿಭ್ರತಃ–ಉಳ್ಳವರನ್ನು, ಅಪರೇ–ಮತ್ತೆ ಕೆಲವರಾದ, ಝಷಮೀನಾದಿಯಾದಸಾಂ–ಮಕರಮೀನಾದಿ ಜಲಚರಪ್ರಾಣಿಗಳ, ಸದೃಶಾಕಾರಾನ್ – ಸದೃಶವಾದ ಆಕಾರವುಳ್ಳವರನ್ನು, ವ್ಯಲೋಕಯಂ – ನೋಡಿದೆನು; ಯೇ ಜೀವಾಃ – ಯಾವ ಜೀವರು, ಸ್ವರೂಪೇಣ ಏವ–ಸ್ವರೂಪದಿಂದಲೇ, ತಾದೃಶಾನಂತಸಂಜ್ಞಕಾಃ – ಆ ಪ್ರಕಾರದ ವಿವಿಧ ಲಕ್ಷಣಗಳುಳ್ಳವರು (ಪುರುಷ, ಅಶ್ವ, ಗಜಾದಿ ಅಸಂಖ್ಯ ಪ್ರತ್ಯೇಕ ನಾಮಗಳಿಂದ ಹೇಳಲ್ಪಡುವರೂ); ಮತ್ತು, ಅನೇಕಸಂಖ್ಯಾಕೈಃ–ಬಹುಸಂಖ್ಯೆಯ, ಗುಣೈಃ–ಗುಣಗಳಿಂದ, ಪ್ರತ್ಯೇಕಂ ಅಪಿ–(ತಮ್ಮತಮ್ಮಲ್ಲಿ) ಪ್ರತ್ಯೇಕವಾಗಿ ಸಹ, ಅನ್ವಿತಾಃ – ಕೂಡಿದವರೂ (ಯುಕ್ತರಾದವರು) ಆಗಿರುತ್ತಾರೆ.

ಜೀವರಾಶಿಗಳನ್ನು ಶ್ರೀವಿಷ್ಣುವು ನೋಡಿದನಷ್ಟೆ; ಅವರಲ್ಲಿ ಕೆಲವರು ಪುರುಷಾಕಾರವುಳ್ಳವರು; ಕೆಲವರು ಹಯಾಕಾರವುಳ್ಳವರು; ಸಿಂಹ, ವ್ಯಾಘ್ರ, ಪಶು, ಪಕ್ಷಿ, ಗಜ–ಗೋ–ಅಜ–ಅವಿ ಮೊದಲಾದ ರೂಪಗಳುಳ್ಳವರನ್ನೂ, ವೃಕ್ಷ, ಗುಲ್ಮ, ಲತಾದಿ ರೂಪಗಳುಳ್ಳವರನ್ನೂ, ಮಕರ ಮೀನಾದಿ ಜಲಚರಪ್ರಾಣಿರೂಪಗಳುಳ್ಳವರನ್ನೂ ಕಂಡನು; ಈ ಎಲ್ಲ ಜೀವರು ಸ್ವರೂಪದಿಂದಲೇ ಆಯಾ ರೂಪಗಳುಳ್ಳವರು ಮತ್ತು ಪುರುಷ, ಅಶ್ವ, ಸಿಂಹಾದಿ ನಾಮಗಳಿಂದ ಕರೆಯಲ್ಪಡುವವರೂ, ಪ್ರತ್ಯೇಕವಾದ ಗುಣಗಳುಳ್ಳವರೂ ಆಗಿದ್ದರು—ಅವರೆಲ್ಲರನ್ನೂ ಸೃಷ್ಟಿಯಲ್ಲಿ ತರಲು ಶ್ರೀಹರಿಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾತ್ವಿಕಾಃ ಶ್ವೇತರೂಪಾಸ್ತು ಶ್ಯಾಮಾಸ್ತತ್ರೈವ ತಾಮಸಾಃ ।
ತತ್ರಾಪಿ ತಾರತಮ್ಯೇನ ಶ್ವೇತಶ್ವೇತತರಾದಿಕಂ ॥ ೩೮ ॥
ಯಥಾಯೋಗ್ಯತಯಾ ಸರ್ವೇ ರಾಜಸಾಃ ಶಬಲಾಸ್ತಥಾ ।
ತತ್ತದಾಕಾರಸದೃಶೈರ್ಲಿಂಗದೇಹೈರನಾದಿಭಿಃ ॥ ೩೯ ॥
ಕಂಚುಕೈರಿವ ಸಂಛನ್ನಾಸ್ತತ್ತದ್ವರ್ಣೈಃ ಪೃಥಕ್ ಪೃಥಕ್ ।
ಇಂದ್ರಿಯಾಣಿ ದಶೈಕಂ ಚ ಮನಸ್ತನ್ಮಾತ್ರಕಾಸ್ತಥಾ ॥ ೪೦ ॥
ಪಂಚೈವ ಷೋಡಶಕಲಂ ಲಿಂಗದೇಹಮನಾದಿಮತ್ ।

ಸಾತ್ವಿಕಾಃ – (ಆ ವಿವಿಧಾಕಾರದ ಸ್ವರೂಪಗಳುಳ್ಳ ಜೀವರಲ್ಲಿ) ಸಾತ್ವಿಕಾಃ–ಸಾತ್ವಿಕರು (ಸದ್ಗುಣಸ್ವಭಾವದವರು), ಶ್ವೇತರೂಪಾಃ–ಶುಭ್ರ ವರ್ಣದವರಾಗಿರುವರು ; ತು – ಹಾಗೆಯೇ ಸರಿ ; ತತ್ರೈವ – ಅವರಲ್ಲಿಯೇ (ಆ ಜೀವರಲ್ಲಿಯೇ), ತಾಮಸಾಃ–ತಾಮಸರು (ದುಷ್ಟಸ್ವಭಾವದ ದೋಷಿಗಳು), ಶ್ಯಾಮಾಃ–ಕಪ್ಪುವರ್ಣವುಳ್ಳವರು ; ತತ್ರಾಪಿ–ಹೀಗಿರುವ ಜೀವರಲ್ಲಿ ಸಹ, ತಾರತಮ್ಯೇನ–ತರತಮಭಾವಗಳಿಂದ, ಶ್ವೇತಶ್ವೇತತರಾದಿಕಂ–ಶ್ವೇತ, ಶ್ವೇತತರ, ಶ್ವೇತತಮ, ಎಂದೂ, ಶ್ಯಾಮ, ಶ್ಯಾಮತರ, ಶ್ಯಾಮತಮ, ಎಂದೂ, (ವಿವಿಧ ಕಕ್ಷ್ಯೆಗಳಿವೆ) ; ತಥಾ–ಮತ್ತು (ಹಾಗೆಯೇ), ಸರ್ವೇ ರಾಜಸಾಃ–ಎಲ್ಲ ರಾಜಸಜೀವರೂ, ಯಥಾಯೋಗ್ಯತಯಾ–ಸ್ವಯೋಗ್ಯತೆಗೆ ಅನುಗುಣವಾಗಿ, ಶಬಲಾಃ–ಮಿಶ್ರವರ್ಣವುಳ್ಳವರು ; ತತ್ತದಾಕಾರಸದೃಶೈಃ–(ಈ ತ್ರಿವಿಧ ಜೀವರೂ) ತಂತಮ್ಮ ಸ್ವರೂಪದ ಆಕಾರಕ್ಕೆ ಸದೃಶಗಳಾದ, ಅನಾದಿಭಿಃ–ಅನಾದಿಯಿಂದ ಇರತಕ್ಕ, ಲಿಂಗದೇಹೈಃ–ಲಿಂಗದೇಹಗಳಿಂದ,

---

ಸಂಕಲ್ಪಿಸಿದನು (೩೫–೩೭). ಪುರುಷ, ಅಶ್ವ, ಗಜಾದಿ ನಾನಾ ಆಕಾರಗಳ ಸ್ವರೂಪವುಳ್ಳ ಜೀವರಲ್ಲಿ, ಸದ್ಗುಣ ಸ್ವಭಾವದವರು ಸಾತ್ವಿಕರು—ಅವರು ಶ್ವೇತವರ್ಣದ ಸ್ವರೂಪ ಉಳ್ಳವರು ; ದುಷ್ಟಸ್ವಭಾವದ ದೋಷಸ್ವರೂಪರು, ತಾಮಸರು—ಅವರು ಕಪ್ಪುವರ್ಣವುಳ್ಳವರು ; ಮಿಶ್ರಗಳಾದ ಗುಣ ಸ್ವರೂಪರು, ರಾಜಸರು—ಮಿಶ್ರ (ಶಬಲ) ವರ್ಣವುಳ್ಳವರು ; ಹೀಗಿರುವ ತ್ರಿವಿಧ ಜೀವರಲ್ಲಿ ಸಹ ಬಹು ತಾರತಮ್ಯವಿದೆ—ಅವರ ಸ್ವರೂಪ ವರ್ಣಗಳಲ್ಲಿ ಸಹ ತದನುಗುಣವಾದ ತರತಮ ಭಾವಗಳುಳ್ಳವರು ; ಈ ಎಲ್ಲರೂ ಅನಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಂಚುಕೈಃ ಇವ – ಧರಿಸುವ ಕವಚಗಳಂತೆ, ಪೃಥಕ್‌ಪೃಥಕ್ – ಬೇರೆಬೇರೆಯಾದ, ತದ್ವರ್ಣೈಃ–ತಮ್ಮ ಸ್ವರೂಪದ ವರ್ಣಗಳುಳ್ಳವುಗಳಿಂದ (ಲಿಂಗದೇಹಗಳಿಂದ), ಸಂಛನ್ನಾಃ – ಆಚ್ಛಾದಿತರಾಗಿದ್ದಾರೆ.[1] ಅನಾದಿಮತ್–ಅನಾದಿಯಾದ, ಲಿಂಗದೇಹಂ–ಲಿಂಗದೇಹವು, ಇಂದ್ರಿಯಾಣಿ ದಶ–ಹತ್ತು ಇಂದ್ರಿಯಗಳು, ಏಕಂ ಚ ಮನಃ – ಒಂದು ಮನಸ್ಸು, ತಥಾ – ಹಾಗೂ, ತನ್ಮಾತ್ರಕಾಃ ಪಂಚ–ಐದು ತನ್ಮಾತ್ರೆಗಳು (ಶಬ್ದಸ್ಪರ್ಶಾದಿಗಳು) (ಎಂಬ) ಷೋಡಶಕಲಂ ಏವಂ–ಹದಿನಾರು ಕಲೆಯಿಂದಾದುದೇ (ಈ ೧೬ ತತ್ವಗಳ ಸೂಕ್ಷ್ಮಾಂಶಗಳಿಂದ ನಿರ್ಮಿತವಾದುದೇ ಸರಿ–ಹೀಗೆಂದು ಪ್ರಮಾಣಸಿದ್ಧವು);

ಆಸನ್ನಮರಣಾಸ್ತೇಷು ಯೇಽಸ್ಮಿನ್ ಕಲ್ಪೇ ಮುಮುಕ್ಷವಃ ॥ ೪೧ ॥
ತತೋ ವಿಲಂಬಿತಂ ಯೇಷಾಂ ತೇ ವೈ ವೃದ್ಧಾಸ್ತತೋಽಪಿ ಯೇ ।
ವಿಲಂಬಿತಾ ಮೋಕ್ಷಮಾಪ್ತುಂ ತೇ ಯುವಾನಸ್ತತೋಽರ್ಭಕಾಃ ॥೪೨॥
ಏವಂ ಪ್ರತೀಯಮಾನಾಸ್ತೇ ತೇಷು ಪ್ರಾಣಂ ವ್ಯಬೋಧಯಂ ।
ಉದ್ಬೋಧಿತಸ್ತತಃ ಪ್ರಾಣಃ ಪ್ರಣಿಪತ್ಯೋಪತಸ್ಥಿವಾನ್ ॥ ೪೩ ॥

ತೇಷು – ಈ ಲಿಂಗದೇಹಯುಕ್ತರಾದ ಜೀವರಲ್ಲಿ, ಯೇ – ಯಾರು, ಅಸ್ಮಿನ್ ಕಲ್ಪೇ – ಈ ಕಲ್ಪದಲ್ಲಿ (ಬ್ರಹ್ಮಕಲ್ಪದಲ್ಲಿ), ಮುಮುಕ್ಷವಃ – ಮೋಕ್ಷವನ್ನು ಹೊಂದಲಿರುವರೋ, ತೇ–ಅವರು, ಆಸನ್ನಮರಣಾಃ–ಸಾಯುವುದಕ್ಕೆ ಸಿದ್ಧರು; (ಮರಣಕಾಲವನ್ನು ಸಮೀಪಿಸಿದವರು) ಎನಿಸುವರು. ಯೇಷಾಂ–

ಕಾಲದಿಂದ, ಪ್ರತಿ ಜೀವನೂ ಪ್ರತ್ಯೇಕವಾದ, ಲಿಂಗದೇಹವೆಂಬ ಆಚ್ಛಾದನೆಯುಳ್ಳವನಾಗಿದ್ದಾನೆ; ಅವರವರ ಲಿಂಗದೇಹಗಳು, ದೇಹದ ಮೇಲೆ ಧರಿಸುವ ಕವಚದಂತೆ, ಅವರವರ ಸ್ವರೂಪಸದೃಶಾಕಾರವುಳ್ಳವುಗಳೂ, ಸ್ವರೂಪ ಸದೃಶವರ್ಣಗಳುಳ್ಳವೂ ಆಗಿರುತ್ತವೆ. ಈ ಲಿಂಗದೇಹವೆಂಬ ಆಚ್ಛಾದನೆಯು

---

[1] ಜೀವಸ್ವರೂಪಗಳು ನಿತ್ಯ—ಅನಾದಿಯಿಂದ ಇವು, ಸ್ವರೂಪ ಸದೃಶ ಆಕಾರವುಳ್ಳ (ದೇಹದಮೇಲೆ ಧರಿಸಿದ ಕವಚದಂತಿರುವುದು) ಲಿಂಗದೇಹಗಳಿಂದ ಆಚ್ಛಾದಿಸಲ್ಪಟ್ಟವೆ. ಗಜ, ಸಿಂಹ, ಪುರುಷಾದಿ ಆಕಾರಗಳನ್ನು ಸ್ವರೂಪದಿಂದಲೇ ಹೊಂದಿರುತ್ತವೆ. ಅವುಗಳಿಗೆ ಸದೃಶವಾದ ಸ್ಥೂಲದೇಹಗಳನ್ನು (ಮಾನುಷಾದಿ ದೇಹಗಳನ್ನು ಸಹ) ಸ್ವಯೋಗ್ಯಸಾಧನೆಗಾಗಿ ಹೊಂದುವುದುಂಟು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾರಿಗೆ, ತತಃ–ಅದಕ್ಕಿಂತ, ವಿಲಂಬಿತಂ–(ಮೋಕ್ಷಪ್ರಾಪ್ತಿಯು) ತಡವಾಗಿರುವುದೋ, ತೇವೈ–ಅವರೇ, ವೃದ್ಧಾಃ–ವೃದ್ಧರೆನಿಸಿಸುತ್ತಾರೆ; ತತೋಪಿ–ಅದಕ್ಕಿಂತಲೂ, ಮೋಕ್ಷಂ – ಮುಕ್ತಿಯನ್ನು, ಆಪ್ತುಂ – ಹೊಂದಲಿಕ್ಕೆ, ವಿಲಂಬಿತಾಃ – ವಿಳಂಬವುಳ್ಳವರೋ (ಹೆಚ್ಚು ತಡವಾಗಿ ಮುಕ್ತರಾಗಲಿರುವರೋ), ತೇ–ಅವರು, ಯುವಾನಃ–ಯುವಕರೆನಿಸುವರು; ತತಃ–ಅದಕ್ಕಿಂತ ನಿಧಾನವಾಗಿ ಮುಕ್ತರಾಗಲಿರುವರು, ಅರ್ಭಕಾಃ – ಶಿಶುಗಳೆನಿಸುತ್ತಾರೆ; ಏವಂ – ಹೀಗೆ, ತೇ – ಆ ಜೀವರು, ಪ್ರತೀಯಮಾನಾಃ – ತೋರಿದರು (ಶ್ರೀವಿಷ್ಣುವು ಹೀಗಿರುವವರನ್ನಾಗಿ ತಿಳಿದನು); ತೇಷು–ಅವರಲ್ಲಿ (ಹಾಗೆ ಸೃಷ್ಟಿಗೆ ಬರತಕ್ಕ ಜೀವರ ಮಧ್ಯದಲ್ಲಿ ಅಥವಾ ಸೃಷ್ಟಿಯಲ್ಲಿ ಬರಲಿರುವ ಜೀವರ ವಿಷಯದಲ್ಲಿ), ಪ್ರಾಣಂ–ಮುಖ್ಯಪ್ರಾಣನನ್ನು, ವ್ಯಬೋಧಯಂ–ಪ್ರೇರಿಸಿ ಜಾಗ್ರತಗೊಳಿಸಿದೆನು; ತತಃ–ನಂತರ, ಉದ್ಬೋಧಿತಃ ಪ್ರಾಣಃ–ಪ್ರಚೋದಿತನಾದ ಮುಖ್ಯಪ್ರಾಣನು, ಪ್ರಣಿಪತ್ಯ – (ನನ್ನನ್ನು–ಶ್ರೀವಿಷ್ಣುವನ್ನು) ನಮಸ್ಕರಿಸಿ, ಉಪತಸ್ಥಿವಾನ್–ಸಮೀಪದಲ್ಲಿ ಬಂದು ನಿಂತನು.

ಷೋಡಶಕಲಾತ್ಮಕವಾದುದು—ಎಂದರೆ ಜ್ಞಾನಕರ್ಮೇಂದ್ರಿಯಗಳೆಂಬ ೧೦ ಇಂದ್ರಿಯಗಳು, ಮನಸ್ಸು ಮತ್ತು ಶಬ್ದ ಸ್ಪರ್ಶ ಮೊದಲಾದ ೫ ತನ್ಮಾತ್ರೆಗಳು, ಹೀಗೆ ೧೬ ತತ್ವಗಳ ಸೂಕ್ಷ್ಮಾಂಶಗಳಿಂದ ನಿರ್ಮಿತವಾದುದು. ಹೀಗಿರುವ ಲಿಂಗದೇಹಧಾರಿಗಳಾದ ಜೀವರಾಶಿಗಳಲ್ಲಿ, ಈ ಬ್ರಹ್ಮಕಲ್ಪದಲ್ಲಿ (ಮಹಾಪ್ರಳಯಕಾಲಕ್ಕೆ ಬ್ರಹ್ಮನೊಂದಿಗೆ) ಮುಕ್ತರಾಗಲು ಸಿದ್ಧರಿರುವರು, ಆಸನ್ನಮರಣರು (ಸಮೀಪಿಸಿದ ಮರಣಕಾಲವುಳ್ಳವರು); ಯಾರು ವಿಳಂಬದಿಂದ ಮುಕ್ತರಾಗುವರೋ ಅವರು ವೃದ್ಧರು; ಅದಕ್ಕಿಂತ ಹೆಚ್ಚುಕಾಲದ ನಂತರ ಮೋಕ್ಷವನ್ನು ಹೊಂದುವವರು, ಯುವಕರು, ಅದಕ್ಕೂ ಹೆಚ್ಚಿನ ದೀರ್ಘಕಾಲದ ನಂತರ (ಅನೇಕ ಬ್ರಹ್ಮಕಲ್ಪಗಳ ನಂತರ) ಮುಕ್ತರಾಗುವವರು ಶಿಶುಗಳು ಅಥವಾ ಬಾಲಕರು. ಈ ಎಲ್ಲರ ಮಧ್ಯದಲ್ಲಿದ್ದ ಮುಖ್ಯಪ್ರಾಣನನ್ನು ಶ್ರೀವಿಷ್ಣುವು ಪ್ರೇರಿಸಿ ಜಾಗೃತಗೊಳಿಸಿದನು.[1] ಹೀಗೆ

[1] ಶ್ರೀ ಮುಖ್ಯಪ್ರಾಣನಿಗೆ (ಶ್ರೀ ವಾಯುದೇವನಿಗೆ) ಪ್ರಳಯಕಾಲದಲ್ಲಿ ಸಹ ಅಜ್ಞಾನದಿಂದ ಪ್ರಾಪ್ತವಾಗುವ ನಿದ್ರೆ ಇರುವುದಿಲ್ಲ; ಜಾಗ್ರತಗೊಳಿಸಿದನೆಂದರೆ, ಮುಂದಿನ ಕಾರ್ಯಕ್ಕೆ ಸಿದ್ಧನಾಗುವಂತೆ ಉತ್ಸಾಹಯುಕ್ತನನ್ನಾಗಿ ಮಾಡಿದನೆಂದರ್ಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಮುವೋಚಂ ತತಃ ಪ್ರಾಣಮಸ್ಮಿನ್ ಕಲ್ಪೇ ತ್ವಯಾ ಸಹ ।
ಮೋಕ್ಷ್ಯಮಾಣಾಂಶ್ಚ ತಾನ್ ಜೀವಾನ್ ಪೃಥಕ್ಕುರು ಮಹಾಮತೇ ॥

ತತಃ – ಅನಂತರ, ಅಸ್ಮಿನ್ ಕಲ್ಪೇ – ಈ ಕಲ್ಪದಲ್ಲಿ, ತ್ವಯಾ ಸಹ– ನಿನ್ನೊಂದಿಗೆ, ಮೋಕ್ಷ್ಯಮಾಣಾನ್–ಮೋಕ್ಷವನ್ನು ಹೊಂದಲಿರುವ, ತಾನ್ ಜೀವಾನ್ – ಆ ಜೀವರನ್ನು, ಮಹಾಮತೇ – ಹೇ ಮಹಾಜ್ಞಾನಿಯೇ! ಪೃಥಕ್ ಕುರು–ಪ್ರತ್ಯೇಕಿಸು (ಬೇರೆಮಾಡಿ ಇಡು), (ಎಂದು) ತಂ ಪ್ರಾಣಂ– ಆ ಪ್ರಾಣದೇವನನ್ನು ಕುರಿತು, ಅವೋಚಂ–ಹೇಳಿದೆನು.

ಏವಂ ಮದಾಜ್ಞಯಾ ಪ್ರಾಣೋ ಜೀವಾನ್ ಸರ್ವಾಂಶ್ಚ ತಾದೃಶಾನ್
ಉದ್ಬೋಧಯಿತ್ವಾ ಪುರತಃ ಸ್ಥಾಪಯಾಮಾಸ ಸರ್ವವಿತ್ ॥ ೪೫ ॥

ಮದಾಜ್ಞಯಾ – ನನ್ನ ಆಜ್ಞೆಯಿಂದ, ಪ್ರಾಣಃ – ಮುಖ್ಯಪ್ರಾಣನು, ಏವಂ–ಹೀಗೆ (ನಾನು ಹೇಳಿದಂತೆ), ತಾದೃಶಾನ್–ಆ ವಿಧದ (ತನ್ನೊಡನೆ

ಉದ್ಬೋಧಿತನಾದ ಮುಖ್ಯಪ್ರಾಣನು, ನಮಸ್ಕರಿಸಿ ಶ್ರೀಹರಿಯ ಎದುರಿನಲ್ಲಿ ಕೈಮುಗಿದು ನಿಂತನು (೩೮–೪೩). ಈ ಬ್ರಹ್ಮಕಲ್ಪದಲ್ಲಿ ನಿನ್ನೊಡನೆ ಮುಕ್ತರಾಗಲಿರುವ ಜೀವರನ್ನು, ಈ ಜೀವರಾಶಿಗಳಿಂದ ಬೇರೆಮಾಡೆಂದು, ಮಹಾಪ್ರಾಜ್ಞನಾದ ಮುಖ್ಯಪ್ರಾಣನಿಗೆ ಆಜ್ಞಾಪಿಸಿದೆನು [1] (೪೪). ಸರ್ವಜ್ಞನಾದ ಮುಖ್ಯಪ್ರಾಣದೇವನು, ನನ್ನ ಆಜ್ಞೆಯಂತೆ, ಆ ವಿಧರಾದ [2] ಎಲ್ಲ

[1] ಇಲ್ಲಿ ಮುಖ್ಯಪ್ರಾಣ ಅಥವಾ ಶ್ರೀ ವಾಯುದೇವನೆಂಬುದರಿಂದ, ಸೃಷ್ಟಿಯಾದೊಡನೆ ಬ್ರಹ್ಮಪದವಿಗೆ ಬರಲಿರುವ, ಹಿಂದಿನ ಕಲ್ಪದ ವಾಯುದೇವನನ್ನು ಇಟ್ಟುಕೊಳ್ಳಬೇಕು—'ನಿನ್ನೊಂದಿಗೆ ಮುಕ್ತರಾಗುವ ಜೀವರನ್ನು' ಎಂದಿರುವುದರಿಂದ ಹೀಗೆ ತಿಳಿಯಬೇಕು.

[2] ಒಂದೇ ಬ್ರಹ್ಮಕಲ್ಪಸಾಧನೆಯುಳ್ಳ ಮನುಷ್ಯೋತ್ತಮ ಜೀವರೆಲ್ಲರೂ ಈ ವಿಧ ಜೀವರಲ್ಲಿ ಸೇರಿರುತ್ತಾರೆ. ಮನುಷ್ಯೋತ್ತಮರೆಂದರೆ ಸ್ವರೂಪದಿಂದಲೇ ವೇದವಿದ್ಯಾಧಿಕಾರವುಳ್ಳ ದ್ವಿಜರು (ಅವರಲ್ಲಿ ಸಹ ವಿವಿಧ ಆಶ್ರಮಗಳಲ್ಲಿ ಸ್ವರೂಪದಿಂದಲೇ ಸ್ಥಿತರಾದವರು), ಪಶುಪಕ್ಷಿಗುಲ್ಮಲತಾದಿ ಪರ್ಯಂತದ ಮುಕ್ತಿಯೋಗ್ಯ ಜೀವರೆಲ್ಲರಿರುತ್ತಾರೆ. ಅಲ್ಲದೇ ನಿತ್ಯಸಂಸಾರಿಗಳೆಂಬ ಮನುಷ್ಯ ಮಧ್ಯಮಜೀವರೂ ಮತ್ತು ತಮೋಯೋಗ್ಯರಾದ ಮನುಷ್ಯಾಧಮರು, ಕೆಲವು ಪಿಶಾಚ ರಾಕ್ಷಸರೂ ಸೇರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಕ್ತರಾಗುವ), ಸರ್ವಾನ್ ಜೀವಾನ್ – ಎಲ್ಲ ಜೀವರನ್ನೂ, ಉದ್ಬೋಧಯಿತ್ವಾ – ನಿದ್ರೆಯಿಂದ ಎಚ್ಚರಗೊಳಿಸಿ, ಸರ್ವವಿತ್ – ಸರ್ವಜ್ಞನಾದ ಆ ಪ್ರಾಣನು, ಪುರತಃ – (ನನ್ನ) ಎದುರಿಗೆ, ಸ್ಥಾಪಯಾಮಾಸ – ಇಟ್ಟನು (ನಿಲ್ಲಿಸಿದನು).

ತತಸ್ತತ್ವಾಭಿಮಾನಿನ್ಯಸ್ತತ್ರ ರುದ್ರಪುರಸ್ಸರಾಃ ।
ದೇವತಾಃ ಶಕ್ರಸೂರ್ಯಾದ್ಯಾಃ ತಾಃ ಸರ್ವಾಃ ಪ್ರತಿಬೋಧಯ ॥

ಇತ್ಯುಕ್ತಃ ಸ ಮಯಾ ಪ್ರಾಣಸ್ತಾನಪ್ಯಾದಾಯ ತಸ್ಥಿವಾನ್ ।

ತತಃ–ಆನಂತರ, ತತ್ವಾಭಿಮಾನಿನ್ಯಃ–ತತ್ವಾಭಿಮಾನಿಗಳಾದ, ತತ್ರ–ಅವರಲ್ಲಿಯೂ, ರುದ್ರಪುರಸ್ಸರಾಃ – ಮ ಹ ದೇ ವ ನೇ ಮೊದಲಾದ, ಶಕ್ರ ಸೂರ್ಯಾದ್ಯಾಃ – ಇಂದ್ರಸೂರ್ಯಾದಿ, ತಾಃ – ಆ, ಸರ್ವಾಃ ದೇವತಾಃ–ಎಲ್ಲಾ ದೇವತೆಗಳನ್ನೂ, ಪ್ರತಿಬೋಧಯ – ಎ ಚ್ಚ ರ ಗೊ ಳಿ ಸು ; ಇತಿ – ಹೀಗೆಂದು, ಮಯಾ – ನನ್ನಿಂದ, ಉಕ್ತಃ – ಹೇಳಲ್ಪಟ್ಟ, ಸಃ ಪ್ರಾಣಃ – ಆ ಪ್ರಾಣದೇವನು, ತಾನ್ ಅಪಿ–ಅವರನ್ನೂ ಸಹ, ಆದಾಯ–ತಂದು, ತಸ್ಥಿವಾನ್–ನಿಂತನು.

ಜೀವರನ್ನೂ ಜಾಗೃತಗೊಳಿಸಿ ನನ್ನ ಮುಂದೆ ಇರಿಸಿದನು (೪೫). ಆ ನಂತರ ಈ ಬ್ರಹ್ಮಕಲ್ಪದಲ್ಲಿ ಮುಕ್ತರಾಗುವ ರುದ್ರ ಮೊದಲಾದವರನ್ನು (ಈಗ ಶೇಷನಾಗಿ ಸೃಷ್ಟನಾಗುವ ಹಿಂದಿನ ಕಲ್ಪದಲ್ಲಿ ರುದ್ರನಾಗಿದ್ದವನು), ಮತ್ತು ಇಂದ್ರ ಸೂರ್ಯಾದಿ (ಈ ಕಲ್ಪದಲ್ಲಿ ಈ ಪದಗಳಿಂದ ಮುಕ್ತರಾಗಲಿರುವವರು) ಎಲ್ಲ ದೇವತೆಗಳನ್ನೂ ಎಚ್ಚರಗೊಳಿಸೆಂದು (ಸೃಷ್ಟಿಗೆ ಸಿದ್ಧಗೊಳಿಸುವಂತೆ) ನನ್ನಿಂದ ಆಜ್ಞಪ್ತನಾದ ಮುಖ್ಯಪ್ರಾಣನು, ಆ ಎಲ್ಲರನ್ನೂ ಕರೆತಂದು, ನನ್ನೆದುರು

ಇವರಲ್ಲದೇ ೨ರಿಂದ ಆರಂಭಿಸಿ ಅನೇಕ ಬ್ರಹ್ಮಕಲ್ಪಗಳ ಪರ್ಯಂತದ ಸಾಧನ ಕಾಲವುಳ್ಳ, ವಿವಿಧ ತಾರತಮ್ಯಕಕ್ಷ್ಯೆಗಳಲ್ಲಿರುವ ಜೀವರೂ ಸಹ ಸೇರಿರುತ್ತಾರೆ. ೨ ಬ್ರಹ್ಮಕಲ್ಪಸಾಧನವುಳ್ಳ ಮನುಷ್ಯಗಂಧರ್ವರು, ೩ ಕಲ್ಪಸಾಧನವುಳ್ಳ ಚಿರಪಿತೃಗಳು ಇತ್ಯಾದಿ, ಕ್ರಮವಾಗಿ ಪೂರ್ವಪೂರ್ವ ಕಲ್ಪಗಳಲ್ಲಿ ಸಹ ಸೃಷ್ಟರಾಗಿ, ಮಹಾಪ್ರಳಯದಲ್ಲಿ ಪರಮಾತ್ಮನ ಉದರ ಪ್ರವೇಶಮಾಡಿ, ಈ ಕಲ್ಪದಲ್ಲಿ ಮುಕ್ತರಾಗಲಿರುವವರೂ ಈ ರಾಶಿಯಲ್ಲಿ ಸೇರಿರುತ್ತಾರೆಂದು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತೋ ಮದಾಜ್ಞಯಾ ಪ್ರಾಣೋ ಮನಸೀಂದ್ರಂ ನ್ಯವೇಶಯತ್ ॥
ಶ್ರೋತ್ರೇ ದಿಗ್ದೇವತಾ ವಾಯುಂ ತ್ವಚಿ ಸೂರ್ಯಂ ವಿಲೋಚನೇ ।
ರಸೇ ತು ವರುಣಂ ಘ್ರಾಣೇ ದಸ್ರೌ ವಾಚಿ ಧನಂಜಯಂ ॥ ೪೮ ॥
ಪಾಣೌ ದಕ್ಷಂ ಜಯಂತಂ ಚ ಪಾದೇ ಶಿಶ್ನೇ ತಥಾ ಮನುಂ ।
ಪಾಯೌ ಮಿತ್ರಂ ತತಸ್ತಾಸಾಂ ಬುಭುಕ್ಷಾ ಚಾಭವತ್ತೃಷಾ ॥ ೪೯ ॥
ತತಃ ಸಂಪೀಡ್ಯಮಾನಾಸ್ತಾಸ್ತದಾಮಾಂ ಶರಣಂ ಯಯುಃ ।
ಸ್ಥಾನಂ ಪ್ರದಿಶ ಯತ್ರಸ್ಥಾ ವಿಷಯಾನ್ ಭುಜ್ಮಹೇ ವಯಂ ॥೫೦॥

ತತಃ–ನಂತರ, ಮದಾಜ್ಞಯಾ–ನನ್ನಾಜ್ಞೆಯಿಂದ, ಪ್ರಾಣಃ–ಮುಖ್ಯ ಪ್ರಾಣನು, ಇಂದ್ರಂ–ಇಂದ್ರದೇವನನ್ನು, ಮನಸಿ–ಮನಸ್ಸಿನಲ್ಲಿ (ಮನಸ್ತತ್ವ ದಲ್ಲಿ), ನ್ಯವೇಶಯತ್–ಪ್ರವೇಶಗೊಳಿಸಿದನು ; ದಿಗ್ದೇವತಾಃ–ದಿಗ್ದೇವತೆ ಗಳನ್ನು, ಶ್ರೋತ್ರೇ – ಶ್ರೋತ್ರೇಂದ್ರಿಯದಲ್ಲಿಯೂ, ತ್ವಚಿ – ಚರ್ಮದಲ್ಲಿ

ನಿಂತನು (೪೭). ಆ ನಂತರ ನನ್ನ ಆಜ್ಞೆಯಿಂದ ಮುಖ್ಯಪ್ರಾಣನು ತತ್ವಾಭಿಮಾನಿದೇವತೆಗಳನ್ನು, ಭಿನ್ನಭಿನ್ನ ತತ್ವಗಳಲ್ಲಿ ಪ್ರವೇಶಗೊಳಿಸಿದನು ; ಇಂದ್ರನನ್ನು ಮನಸ್ಸಿನಲ್ಲಿಯೂ, ಶ್ರೋತ್ರೇಂದ್ರಿಯದಲ್ಲಿ ದಿಗ್ದೇವತೆಗಳನ್ನೂ,[1] ಸ್ಪರ್ಶೇಂದ್ರಿಯದಲ್ಲಿ ಭೂತವಾಯುವನ್ನೂ (ತದಭಿಮಾನಿ ದೇವತೆಯನ್ನೂ), ಚಕ್ಷುರಿಂದ್ರಿಯದಲ್ಲಿ ಸೂರ್ಯದೇವನನ್ನೂ, ರಸನೇಂದ್ರಿಯದಲ್ಲಿ ವರುಣ ನನ್ನೂ, ಘ್ರಾಣೇಂದ್ರಿಯದಲ್ಲಿ ಅಶ್ವಿನೀದೇವತೆಗಳನ್ನೂ, ವಾಗಿಂದ್ರಿಯದಲ್ಲಿ

---

[1] ಯಾವ ಯಾವ ತತ್ವಗಳಿಗೆ ಯಾರು ಯಾರು ಅಭಿಮಾನಿಗಳೆಂಬ ವಿಷಯದಲ್ಲಿ ಈ ಮುಂದಿನ ಸಂಗ್ರಹವಾದ ವಿವರಣೆಯನ್ನು ಗಮನದಲ್ಲಿಟ್ಟು, ವಿಸ್ತಾರವನ್ನು ಗ್ರಂಥಾಂತರಗಳ ಅಭ್ಯಾಸದಿಂದ ತಿಳಿಯಬೇಕು. ಮೊದಲು ಮೊದಲು ಉತ್ಪನ್ನ ವಾದ ತತ್ವಗಳ ಅಭಿಮಾನಿದೇವತೆಗಳು, ನಂತರ ಉತ್ಪನ್ನವಾದ ಎಲ್ಲ ತತ್ವಗಳ ಅಭಿಮಾನಿಗಳೂ ಆಗಿರುತ್ತಾರೆ ; ನಂತರ ಉತ್ಪನ್ನವಾದ ತತ್ವಗಳ ಅಭಿಮಾನಿಗಳು, ತಮ್ಮ ಉತ್ಪತ್ತಿಗೆ ಕಾರಣವಾದ ಮೇಲಿನ ತತ್ವಗಳಿಗೆ ಅಭಿಮಾನಿಗಳಲ್ಲ ; ಇದು ಸಾಮಾನ್ಯ ನಿಯಮ ; ತಂದೆಯ ಅಧಿಕಾರಕ್ಕೆ ಒಳಪಟ್ಟ ವಿಷಯದಲ್ಲಿ ಮಗನಿಗೂ ಸ್ಥಾನವಿರುವಂತೆ, ಇಂದ್ರಾದಿಗಳಿಗೆ ಅಹಂಕಾರತತ್ವಾಭಿಮಾನಿತ್ವವೂ ಇರುತ್ತದೆ. ಮುಖ್ಯ ನಿಯಾಮಕನನ್ನು ಮಾತ್ರ ಆ ತತ್ವದ ಅಭಿಮಾನಿಯೆಂದು ನಿರೂಪಿಸಲಾಗು ತ್ತದೆ. ಒಂದೊಂದು ತತ್ವಕ್ಕೂ ಅವಾಂತರಾಭಿಮಾನಿಗಳು, ಅನೇಕರಿರುತ್ತಾರೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸ್ಪರ್ಶೇಂದ್ರಿಯದಲ್ಲಿ–ಚರ್ಮವು ಈ ಇಂದ್ರಿಯದ ಗೋಳಕ ಸ್ಥಾನದಲ್ಲಿದೆ), ವಾಯುಂ–ವಾಯುದೇವನನ್ನೂ (ಭೂತವಾಯುವಿನ ಅಭಿಮಾನಿಯನ್ನೂ–ಮುಖ್ಯವಾಯುದೇವನಲ್ಲ), ವಿಲೋಚನೇ–ಚಕ್ಷುರಿಂದ್ರಿಯದಲ್ಲಿ, ಸೂರ್ಯಂ–ಸೂರ್ಯನನ್ನೂ, ರಸೇ–ರಸನೇಂದ್ರಿಯದಲ್ಲಿ, ವರುಣಂ–ವರುಣದೇವನನ್ನೂ, ಘ್ರಾಣೇ–ಘ್ರಾಣೇಂದ್ರಿಯದಲ್ಲಿ, ದಸ್ರೌ–ಅಶ್ವಿನೀದೇವತೆಗಳನ್ನೂ, ವಾಚಿ–ವಾಗಿಂದ್ರಿಯದಲ್ಲಿ, ಧನಂಜಯಂ–ಅಗ್ನಿದೇವನನ್ನೂ, ಪಾಣೌ–ಕರಗಳಲ್ಲಿ, ದಕ್ಷಂ–ದಕ್ಷನನ್ನು, ಚ–ಮತ್ತು, ಪಾದೇ–ಪಾದಗಳಲ್ಲಿ, ಜಯಂತಂ–ಜಯಂತನನ್ನೂ (ಜಯಂತನು ಇಂದ್ರಪುತ್ರನು), ತಥಾ-ಹಾಗೂ, ಶಿಶ್ನೇ-ಗುಹ್ಯೇಂದ್ರಿಯದಲ್ಲಿ, ಮನುಂ–ಸ್ವಾಯಂಭುವ ಮನುವನ್ನೂ, ಪಾಯೌ–ಗುದದಲ್ಲಿ (ಮಲ ವಿಸರ್ಜನೆಯ ಕರ್ಮೇಂದ್ರಿಯದಲ್ಲಿ), ಮಿತ್ರಂ–ಮಿತ್ರನಾಮಕ ಸೂರ್ಯನನ್ನೂ (ನ್ಯವೇಶಯತ್–ಪ್ರವೇಶಗೊಳಿಸಿದನು); ತತಃ–ನಂತರ, ತಾಸಾಂ–ಈ ತತ್ವಾಭಿಮಾನಿಗಳಿಗೆ, ತೃಷಾ-ನೀರಡಿಕೆಯೂ, ಬುಭುಕ್ಷಾಚ-ಹಸಿವೆಯೂ, ಅಭವತ್–ಉಂಟಾಯಿತು; ತತಃ–ನಂತರ, ಸಂಪೀಡ್ಯಮಾನಾಃ–(ಹಸಿವೆ ತೃಷೆಗಳಿಂದ) ಪೀಡಿತರಾದ, ತಾಃ–ಆ ದೇವತೆಗಳು, ತದಾ–ಆಗ, ಮಾಂ–

ಅಗ್ನಿಯನ್ನೂ, ಕರಗಳಲ್ಲಿ ದಕ್ಷನನ್ನೂ, ಪಾದಗಳಲ್ಲಿ ಜಯಂತನನ್ನೂ, ಶಿಶ್ನದಲ್ಲಿ ಮನುವನ್ನೂ, ಗುದದಲ್ಲಿ ಮಿತ್ರನನ್ನೂ, ಪ್ರವೇಶಗೊಳಿಸಿದನು. ಆಗ ಅವರಿಗೆ ಹಸಿವೆ ತೃಷೆಗಳ ಪೀಡೆಯುಂಟಾಯಿತು; ಅವರು ನನ್ನನ್ನು ಶರಣು ಹೊಂದಿ ಯಾವ ದೇಹದಲ್ಲಿ ವಾಸಿಸುತ್ತ, ವಿಷಯಗಳನ್ನು ಭೋಗಿಸಿ, ಈ ಪೀಡೆಗಳನ್ನು ಪರಿಹರಿಸಿಕೊಳ್ಳಬಹುದೋ, ಆ ಸ್ಥಾನವನ್ನು ತೋರಿಸೆಂದು ಪ್ರಾರ್ಥಿಸಿದರು (೪೭–೫೦). ತತ್ವಾಭಿಮಾನಿಗಳ ಈ ಪ್ರಾರ್ಥನೆಯನ್ನು ಕೇಳಿ, ಅವರಿಗೆ

ಒಂದು ವಿವಕ್ಷೆಯಿಂದ, ಎಲ್ಲ ತತ್ವಾಭಿಮಾನಿಗಳೂ, ಎಲ್ಲ ತತ್ವಗಳ ಅಭಿಮಾನಿಗಳೆಂದೂ ನಿರೂಪಿಸುವುದುಂಟು. ಎಲ್ಲ ತತ್ವಾಭಿಮಾನಿಗಳೂ ಸರ್ವಜ್ಞರು—ಸಾಮಾನ್ಯರಿಂದ ಅಚಿಂತ್ಯವಾದ (ಕೆಳಗಿನವರಿಂದ ತಿಳಿಯಲಾಗದ) ಶಕ್ತಿಯುಳ್ಳ ಮಹಾಪ್ರತಿಭಾನ್ವಿತರು; ಅಷ್ಟಮಹಾಸಿದ್ಧಿಗಳುಳ್ಳವರು. ಪರ್ಜನ್ಯಾದಿ ಪುಷ್ಕರಾಂತ್ಯ ಇತರ ದೇವತೆಗಳೂ, ತತ್ವಾಭಿಮಾನಿಗಳೆಂದು ಹೇಳಲ್ಪಡುವುದುಂಟು. ಇವರು ಬ್ರಹ್ಮಾಂಡದ ಹೊರಗಿನ (ಅಸಂಸೃಷ್ಟ) ತತ್ವಗಳಿಗೆ ಅಭಿಮಾನಿಗಳಲ್ಲ; ಪ್ರಾಣಿದೇಹಗತ ತತ್ವಾಂಶಗಳಿಗೆ (ಕಲೆಗಳಿಗೆ) ಮಾತ್ರ ಅಭಿಮಾನಿಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನ್ನನ್ನು, ಶರಣಂ ಯಯುಃ–ಶರಣು ಹೊಂದಿದರು ; (ಏನೆಂದು ಪ್ರಾರ್ಥಿಸಿದ ರೆಂದರೆ), ಸ್ಥಾನಂ-(ನಮ್ಮ ವಾಸಕ್ಕೆ ಯೋಗ್ಯವಾದ) ಸ್ಥಾನವನ್ನು (ಪ್ರಾಣಿ ದೇಹವನ್ನು), ಪ್ರದಿಶ–ತೋರಿಸು (ಇಲ್ಲಿ ವಾಸಮಾಡಿರೆಂದು ಅಜ್ಞಾಪಿಸು), ಯತ್ರಸ್ಥಾಃ–ಎಲ್ಲಿ ವಾಸಿಸುವವರಾಗಿ, ವಯಂ–ನಾವು, ವಿಷಯಾನ್– (ಹಸಿವೆ ತೃಷೆಗಳನ್ನು ಪರಿಹರಿಸುವ) ಅನ್ನ, ನೀರು ಮೊದಲಾದ ವಿಷಯ ಗಳನ್ನು (ಭೋಗಗಳನ್ನು), ಭುಜ್ಮಹೇ–ಭೋಗಿಸುವೆವೋ (ಅಂತಹ ಸ್ಥಾನ ವನ್ನು ತೋರಿಸು).

ತೃಣಗುಲ್ಮಲತಾವೃಕ್ಷಾನ್ ಗ್ರಾಮ್ಯಾರಣ್ಯಪಶೂನಪಿ ।
ಕ್ರಮೇಣಾದರ್ಶಯಂಸ್ತಾಂಸ್ತೇ ಸ್ಥಿತಾ ತೃಪ್ತಿಂ ನ ಭೇಜಿರೇ ॥ ೫೧ ॥

ತೃಣಗುಲ್ಮಲತಾವೃಕ್ಷಾನ್–ತೃಣ, ಗುಲ್ಮ, ಲತೆ, ವೃಕ್ಷದೇಹಗಳನ್ನು, ಅಪಿ–ಮತ್ತು, ಗ್ರಾಮ್ಯಾರಣ್ಯಪಶೂನ್–ಗ್ರಾಮ್ಯ, ಅರಣ್ಯ ಪಶುಗಳ ದೇಹ ಗಳನ್ನು, ಕ್ರಮೇಣ–ಕ್ರಮದಿಂದ (ಒಂದಾದನಂತರ ಒಂದರಂತೆ), ಅದರ್ಶ ಯನ್–(ಪ್ರವೇಶಿಸಿ ವಿಷಯಗಳನ್ನು ಭೋಗಿಸಿ ಹಸಿವೆ ತೃಷೆಗಳ ಪರಿಹಾರ ವನ್ನು ಹೊಂದಿರೆಂದು) ತೋರಿಸಿದನು; ತಾನ್–ಆ ದೇಹಗಳನ್ನು, ತೇ– ಆ ತತ್ವಾಭಿಮಾನಿಗಳು, ಸ್ಥಿತಾಃ–ಅಲ್ಲಿದ್ದವರಾಗಿ, ತೃಪ್ತಿಂ–ತೃಪ್ತಿಯನ್ನು, ನ ಭೇಜಿರೇ–ಹೊಂದಲಿಲ್ಲ.

ತತೋಽಶ್ವಂ ದರ್ಶಯಾಮಾಸ ನಾಸ್ಮಿನ್ ಪ್ರೀತಾ ಬಭೂವಿರೇ ।
ತತೋ ಗಾಂ ದರ್ಶಯಾಮಾಸ ತತ್ರಾಪ್ಯಾಸುರತೃಪ್ತಯಃ ॥ ೫೨ ॥

ತತಃ-ನಂತರ, ಅಶ್ವಂ-ಅಶ್ವವನ್ನು, ದರ್ಶಯಾಮಾಸ–ತೋರಿಸಿದನು ; ಅಸ್ಮಿನ್–ಆ ದೇಹದಲ್ಲಿದ್ದು, ಪ್ರೀತಾಃ–ಸಂತುಷ್ಟರಾದವರು, ನ ಬಭೂವಿರೇ– ಆಗಲಿಲ್ಲ ; ತತಃ–ನಂತರ, ಗಾಂ–ಗೋದೇಹವನ್ನು, ದರ್ಶಯಾಮಾಸ–

ಕ್ರಮವಾಗಿ, ತೃಣಗುಲ್ಮಲತಾವೃಕ್ಷಾದಿ ಸ್ಥಾನಗಳನ್ನು ಗ್ರಾಮ್ಯಾರಣ್ಯ ಪಶುಗಳ (ದೇಹಗಳೆಂಬ) ಸ್ಥಾನಗಳನ್ನೂ (ಮುಖ್ಯಪ್ರಾಣನು ನನ್ನಾಜ್ಞೆಯಿಂದ) ತೋರಿಸಿದನು ; ಅವರು ಆ ದೇಹಗಳನ್ನು ಪ್ರವೇಶಿಸಿ, ಅಲ್ಲಿ ಸ್ಥಿತರಾಗಿ ತೃಪ್ತಿ ಯನ್ನು ಹೊಂದಲಿಲ್ಲ (೫೧). ನಂತರ ಮುಖ್ಯಪ್ರಾಣನು ತತ್ವಾಭಿಮಾನಿ ದೇವತೆಗಳಿಗೆ, ಅಶ್ವದೇಹವನ್ನೂ, ಗೋದೇಹವನ್ನೂ, ವಾಸಸ್ಥಾನವನ್ನಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೋರಿಸಿದನು (ವಾಸಸ್ಥಾನವನ್ನಾಗಿ ನಿರ್ದೇಶಿಸಿದನು) ; ತತ್ರಾಪಿ–ಅಲ್ಲಿಯೂ ಸಹ, ಅತೃಪ್ತಯಃ–ತೃಪ್ತಿಯಿಲ್ಲದವರು, ಆಸುಃ–ಆದರು.

ಮಹತ್ತತ್ತ್ವೇನ ಕೃತವಾನ್ ಪೂರ್ವಂ ಯಾಂ ಪುರುಷಾಕೃತಿಂ ।
ತತ್ತ್ವೇನ ಭೂಯಸಾ ಭೂಯೋ ಭಾವಿನಾಂ ಸ್ವಯಮೇವ ಹಿ ॥ ೫೩ ॥
ತಾಮುದರ್ಶಯಮೇತಾಭ್ಯೋ ವರಮಿತ್ಯಬ್ರುವಂಶ್ಚ ತಾಃ ।
ತತಃ ಪ್ರಾಣಂ ತು ದೇಹೇಸ್ಮಿನ್ನಿವೇಶ್ಯೇಂದ್ರಿಯದೇವತಾಃ ॥ ೫೪ ॥
ಸರ್ವಾನ್ ಜೀವಗಣಾಂಶ್ಚಾಪಿ ಸರ್ವಾನ್ ದೇವಾನಪಿ ಸ್ಮ ಹ ।
ಯಾವನ್ನ್ಯವೇಶಯತ್ತಾವದ್ಬುಭುಕ್ಷಾ ಚ ಪಿಪಾಸಿಕಾ ॥ ೫೫ ॥
ಆವಾಭ್ಯಾಮದಿಶ ಸ್ಥಾನಮಿತಿ ಚುಕ್ರುಶತುಸ್ತತಃ ।
ಅವೋಚಂ ಕೃಪಯಾ ತಾಭ್ಯಾಂ ಸರ್ವೇ ಸ್ಥಾನಂ ಭವಂತ್ವಿತಿ ॥ ೫೬ ॥

ಪೂರ್ವಂ – ಹಿಂದೆ (ಮೊದಲು), ಮಹತ್ತತ್ತ್ವೇನ – ಮಹತ್ತತ್ವದಿಂದ, ಯಾಂ ಪುರುಷಾಕೃತಿಂ–ಯಾವ ಪುರುಷದೇಹವನ್ನು, ಕೃತವಾನ್–ನಿರ್ಮಿಸಿದೆನೋ, ಭೂಯಸಾತತ್ತ್ವೇನ–ಅಧಿಕವಾದ ತತ್ವದಿಂದ (ಅಧಿಕವಾದ ಇತರ ವಿಕೃತತತ್ವಗಳ ಸಮೂಹದಿಂದ), ಭೂಯೋ ಭಾವಿನಾಂ – ಬಹುವಾಗಿ (ಅಸಂಖ್ಯವಾಗಿ) ಮುಂದೆ ಹುಟ್ಟುವ, ಮನುಷ್ಯಾದಿ ಜೀವರಿಗೆ, ಹಿ–ಯಾವ ಕಾರಣದಿಂದ, ಸ್ವಯಮೇವ–ಪುರುಷಾಕಾರದ ದೇಹಗಳು ಸಾಕ್ಷಾತ್ಸಾಧನಗಳಾಗುವುವೋ (ಅಂಥ), ತಾಂ – ಆ ಪುರುಷಾಕೃತಿಯನ್ನು, ಏತಾಭ್ಯಃ–

ನಿರ್ದೇಶಿಸಿದನು ; ಅವುಗಳಲ್ಲಿ ಹೊಕ್ಕ ಅವರಿಗೆ ಅಲ್ಲಿಯೂ ತೃಪ್ತಿ ದೊರೆಯಲಿಲ್ಲ (೫೨). ನಂತರ ಈ ಮೊದಲು, ಮಹತ್ತತ್ವದಿಂದ ನಾನು ನಿರ್ಮಿಸಿದ ಪುರುಷಾಕೃತಿಯ ದೇಹವನ್ನು, ನಾನು ಆ ತತ್ವಾಭಿಮಾನಿ ದೇವತೆಗಳಿಗೆ ಅವರ ವಾಸಸ್ಥಾನವನ್ನಾಗಿ ತೋರಿಸಿದೆನು ; ಮುಂದೆ ಬ್ರಹ್ಮನಿಂದ ಸೃಷ್ಟರಾಗುವ ಅಸಂಖ್ಯ ಜೀವರಿಗೆ, ಈ ಪುರುಷಾಕಾರದ ದೇಹವೇ ಶ್ರೇಷ್ಠಸಾಧನ ದೇಹವಾಗಲಿದ್ದು, ಈ ದೇಹವನ್ನು ಆ ದೇವತೆಗಳು ತಮಗೆ ಯೋಗ್ಯವಾದ ಸ್ಥಾನವೆಂದು ಒಪ್ಪಿದರು. ನಂತರ ಆ ಪುರುಷಾಕಾರದ ದೇಹದಲ್ಲಿ, ಮುಖ್ಯಪ್ರಾಣನನ್ನೂ, ತತ್ವಾಭಿಮಾನಿ ದೇವತೆಗಳನ್ನೂ, ಇತರ ಸಕಲ ದೇವತೆಗಳನ್ನೂ, ಸೃಷ್ಟಿಯಲ್ಲಿ ಬರಲಿರುವ ಸಮಸ್ತ ಜೀವರನ್ನೂ ಪ್ರವೇಶಗೊಳಿಸಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ತತ್ತ್ವಾಭಿಮಾನಿಗಳಿಗೆ, ಆದರ್ಶಯಂ – (ವಾಸಸ್ಥಾನವನ್ನಾಗಿ) ತೋರಿಸಿದೆನು ; ತಾಃ–ಅವರು, ವರಂ ಇತಿ ಚ–ಉತ್ತಮವಾಗಿದೆ ಎಂಬುದಾಗಿಯೂ (ತಮ್ಮ ವಾಸಕ್ಕೆ ಯೋಗ್ಯವೆಂದೂ), ಅಬ್ರುವನ್ – ಹೇಳಿದರು ; ತತಃ–ಅನಂತರ, ಅಸ್ಮಿನ್ ದೇಹೇ – ಈ ಪುರುಷಾಕಾರದ ದೇಹದಲ್ಲಿ, ಪ್ರಾಣಂ – ಮುಖ್ಯಪ್ರಾಣನನ್ನೂ, ಇಂದ್ರಿಯದೇವತಾಃ – ಇಂದ್ರಿಯಾಭಿಮಾನಿದೇವತೆಗಳನ್ನೂ, ಸರ್ವಾನ್ ದೇವಾನಪಿ–ಸಕಲ (ಇತರ ದೇವತೆಗಳನ್ನೂ) ದೇವತಾಜೀವರನ್ನೂ, ಸರ್ವಾನ್–ಸಮಸ್ತ, ಜೀವಗಣಾನ್ ಚ ಅಪಿ–ಜೀವಸಮೂಹಗಳನ್ನೂ ಸಹ, ನಿವೇಶ್ಯ–ಪ್ರವೇಶಗೊಳಿಸಿ, ಯಾವತ್ ನ್ಯವೇಶಯತ್–ತಾನೂ (ಶ್ರೀವಿಷ್ಣುವೂ) ಪ್ರವೇಶಿಸಿದನೋ (ನಾನೂ ಪ್ರವೇಶಿಸಿದೆನೋ), ತಾವತ್–ಅಷ್ಟರೊಳಗೆ (ಆ ಕಾಲಕ್ಕೆ), ಬುಭುಕ್ಷಾಪಿಪಾಸಿಕಾ – ಹಸಿವು ತೃಷೆಗಳು (ಈ ದೇವಾದಿ ಜೀವಸಮೂಹಕ್ಕೆ ಉಂಟಾದುವು) ; ತತಃ–ಹೀಗಾದ ಒಡನೆ, ಆವಾಭ್ಯಾಂ–ನಮಗೆ (ಈ ಹಸಿವೆ ತೃಷೆಗಳು), ಸ್ಥಾನಂ–ಸ್ಥಾನವನ್ನು, ಅದಿಶ–ಆಜ್ಞಾಪಿಸು (ತೋರಿಸು—ನಾವು ಇರಬೇಕಾದ ಸ್ಥಾನವನ್ನು ನಿರ್ದೇಶಿಸು), ಇತಿ – ಹೀಗೆಂದು, ಚುಕ್ರುಶತುಃ – ಕಿರುಚಿಕೊಳ್ಳುವುದಕ್ಕೆ ಆರಂಭಿಸಿದವು ;

ನಾನೂ ಅದರಲ್ಲಿ ಹೊಕ್ಕೆನು ; ಅಷ್ಟರಲ್ಲಿ, ಹಸಿವೆ ತೃಷೆಗಳು ಎಲ್ಲರನ್ನೂ ಬಾಧಿಸತೊಡಗಿದವು. ಈ ಹಸಿವೆ ತೃಷೆಗಳ ನಿಯಾಮಕದೇವತೆಗಳು, ನಮಗೆ ಯೋಗ್ಯಸ್ಥಾನಗಳನ್ನು ತೋರಿಸೆಂದು ಆಕ್ರೋಶ ಮಾಡಿದವು—ಕೂಗಿಕೊಳ್ಳಲಾರಂಭಿಸಿದವು ;[1] ಆಗ ನಾನು, ಅವುಗಳಿಗೆ, ನನ್ನಿಂದ ಸೃಷ್ಟವಾದ ಎಲ್ಲ ಪ್ರಾಣಿದೇಹಗಳೂ ನಿಮಗೆ ವಾಸಸ್ಥಾನವಾಗಲಿ ; ಅಲ್ಲಿದ್ದು ತೃಪ್ತಿಯನ್ನು ಹೊಂದಿರಿ, ಎಂದು ಹೇಳಿದೆನು (೫೩–೫೬). ನನ್ನಿಂದ ಪೂರ್ವಸೃಷ್ಟವಾದ

---

[1] ಆರಣ್ಯಕ ೨—ಅಧ್ಯಾಯ ೪—ಖಂಡ ೨ (ಐತರೇಯೋಪನಿಷತ್ತು) ರಲ್ಲಿ ಈ ಅಶನಾಪಿಪಾಸೆಗಳಿಗೆ ನಿಯಾಮಕರಾದ ದೇವತೆಗಳು, ವಾಯುದೇವನ ಎರಡು ರೂಪಗಳೆಂದೂ, ಅಗ್ನಿ ಮೊದಲಾದ ಸಕಲ ತತ್ತ್ವಾಭಿಮಾನಿಗಳನ್ನು ಪ್ರವೇಶಿಸಿ, ಈ ಎರಡು ರೂಪಗಳಿಂದ ಎಲ್ಲ ದೇವತೆಗಳ ಭೋಗಭೋಕ್ತನಾಗಿರುವನೆಂದೂ ಹೇಳಲಾಗಿದೆ. ಪ್ರಾಣನಾಮಕನಾಗಿ ಎಲ್ಲ ದೇವತೆಗಳಲ್ಲಿದ್ದು ಅಶನಪಿಪಾಸಾನಾಮಕನೂ ಆಗಿರುವಾತನು ಶ್ರೀ ವಾಯುದೇವನೇ. ಶ್ರೀಹರಿಯ ನಂತರ, ಆತನೇ ಸರ್ವಪ್ರಾಣಿಗಳ ದೇಹದಲ್ಲಿದ್ದು ಸರ್ವಭೋಕ್ತನೆನಿಸುವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಾಭ್ಯಾಂ – ಅವುಗಳಿಗೆ (ಹಸಿವೆ ತೃಷೆಗಳಿಗೆ), ಕೃಪಯಾ – ಕೃಪೆಯಿಂದ, ಸರ್ವೇ – ಎಲ್ಲವೂ (ಎಲ್ಲಾ ಪ್ರಾಣಿದೇಹಗಳೂ), ಸ್ಥಾನಂ – ನಿಮ್ಮ ವಾಸ ಸ್ಥಾನವು ; ಭವಂತು–ಆಗಲಿ, ಇತಿ–ಹೀಗೆ, ಅವೋಚಂ–ಹೇಳಿದೆನು.

ಏವಂ ಪುರುಷದೇಹಂ ತು ವಾಸುದೇವೋಽಗಿಲಂ ತತಃ ।
ಮಾಯಾಯಾಂ ಜನಯಾಮಾಸ ಪುರುಷಂ ಪರಮಾದ್ಭುತಂ ॥ ೫೭ ॥

ಏವಂ ಪುರುಷದೇಹಂ ತು – ಹೀಗೆ ಎಲ್ಲವನ್ನೂ ಪ್ರವೇಶಗೊಳಿಸಿದ ಪುರುಷಾಕಾರದ ದೇಹವನ್ನು, ತತಃ–(ಹಾಗೆ ಎಲ್ಲರನ್ನೂ ಪ್ರವೇಶಗೊಳಿಸಿದ) ನಂತರ, ವಾಸುದೇವಃ–ವಾಸುದೇವರೂಪನಾದ ನಾನು (ಶ್ರೀವಿಷ್ಣುವು), ಅಗಿಲಂ–ನುಂಗಿದೆನು ; (ತತಃ–ನಂತರ), ಮಾಯಾಯಾಂ–ಮಾಯರೂಪಳಾದ ಲಕ್ಷ್ಮೀದೇವಿಯಲ್ಲಿ, ಪರಮಾದ್ಭುತಂ–ಅತ್ಯಾಶ್ಚರ್ಯಕರನಾದ, ಪುರುಷಂ-ಪುರುಷನಾಮಕ ಬ್ರಹ್ಮದೇವನನ್ನು, ಜನಯಾಮಾಸ-ಹುಟ್ಟಿಸಿದನು.

ಸ್ವಸಹಾಯಂ ದ್ವಿತೀಯಂ ಸ ವಾಂಛಮಾನೋಽಥ ಮಾಂ ಪ್ರತಿ ।
ಉಕ್ತವಾನ್ ದೇಹಿ ಮೇ ಸ್ವಾಮಿನ್ ಸಹಾಯಂಕೃಪಯೇತಿ ವೈ ॥
ತತಃ ಸಂಕರ್ಷಣಾಜ್ಜಜ್ಞೇ ಮಹತ್ತತ್ವಸ್ಯ ಭಾಗತಃ ।
ಸೂತ್ರನಾಮಾ ಜೀವಗಣೈರ್ಯುಕ್ತಃ ಪ್ರಾಣೋ ಜಯಾತ್ಮಜಃ ॥
ಆದಿದೇವೌ ಪುರಾ ತೌ ತು ತಾಭ್ಯಾಂ ಸೃಷ್ಟ್ಯರ್ಥಮೇವ ಹಿ ।
ಪ್ರದ್ಯುಮ್ನೋ ಜನಯಾಮಾಸ ಕೃತೌ ಕನ್ಯಾದ್ವಯಂ ತದಾ ॥ ೬೦ ॥
ಸರಸ್ವತೀಂ ತುಂ ತತ್ರಾದ್ಯಾಂ ಬ್ರಹ್ಮಣಾ ಸಮಯೋಜಯತ್ ।
ವಾಣೀಂ ಪ್ರಾಣೇನ ತಾಭ್ಯಾಂ ತೌ ಕ್ರೀಡಂತೌ ತಸ್ಥತುಶ್ಚಿರಂ ॥ ೬೧ ॥

ಅಥ–ಹೀಗೆ ಸೃಷ್ಟನಾದ ನಂತರ, ಸ್ವಸಹಾಯಂ–ತನಗೆ ಸಹಾಯಕನಾದ, ದ್ವಿತೀಯಂ–ಎರಡನೆಯವನನ್ನು, ವಾಂಛಮಾನಃ–ಅಪೇಕ್ಷಿಸುವನಾಗಿ,

---

ಪುರುಷಾಕಾರದ ದೇಹದಲ್ಲಿ ತತ್ವಾಭಿಮಾನಿಗಳನ್ನೂ, ಮುಖ್ಯಪ್ರಾಣನನ್ನೂ, ಇತರ ಸಕಲ ಜೀವಗಣಗಳನ್ನೂ ಪ್ರವೇಶಮಾಡಿಸಿ, ವಾಸುದೇವರೂಪನಾದ ನಾನು, ಆ ಪುರುಷದೇಹವನ್ನು ನುಂಗಿದೆನು ; ನಂತರ, ವಾಸುದೇವರೂಪದ ಭಾರ್ಯೆಗಳಾದ ಮಾಯಾನಾಮಕ ಶ್ರೀಲಕ್ಷ್ಮೀದೇವಿಯಲ್ಲಿ, ಅದ್ಭುತನಾದ ಪುರುಷನಾಮಕ ಬ್ರಹ್ಮದೇವನನ್ನು ಹುಟ್ಟಿಸಿದೆನು (೫೭). ಬ್ರಹ್ಮದೇವನು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾಮಿನ್ – ಹೇ ಸ್ವಾಮಿ !, ಕೃಪಯಾ – ಕೃಪೆಮಾಡಿ, ಮೇ – ನನಗೆ, ಸಹಾಯಂ-ಸಹಾಯಕನೊಬ್ಬನನ್ನು, ದೇಹಿ-ಕೊಡು (ಕರುಣಿಸು), ಇತಿ ವೈ-ಹೀಗೆಂದು, ಮಾಂ ಪ್ರತಿ–ನನ್ನನ್ನು ಕುರಿತು, ಉಕ್ತವಾನ್–ಹೇಳಿದನು ; ತತಃ–ಈ ಪ್ರಾರ್ಥನೆಯ ನಂತರ, ಸಂಕರ್ಷಣಾತ್–ಸಂಕರ್ಷಣರೂಪನಾದ ನನ್ನ ದೆಶೆಯಿಂದ, ಮಹತ್ತತ್ವಸ್ಯ–ಮಹತ್ತತ್ವದ, ಭಾಗತಃ–ಒಂದು ಭಾಗದಿಂದ, ಜಯಾತ್ಮಜಃ – ಜಯಾನಾಮಕ ಲಕ್ಷ್ಮೀದೇವಿಯ ಮಗನಾಗಿ, ಜೀವಗಣೈಃ ಯುಕ್ತಃ – ಜೀವಗಣಗಳಿಂದ ಸಹಿತನಾಗಿ, ಸೂತ್ರನಾಮಾ – ಸೂತ್ರನಾಮಕ ವಾಯುದೇವನು, ಜಜ್ಞೇ–ಹುಟ್ಟಿದನು ; ತೌ ತು–ಆ ಇಬ್ಬರಾದರೋ (ಬ್ರಹ್ಮ ಮತ್ತು ವಾಯು, ಇವರೀರ್ವರೂ), ಪುರಾ- ಮೊದಲಿಗೆ, ಆದಿದೇವೌ-ಎಲ್ಲ ದೇವತೆಗಳ ಉತ್ಪಾದಕರು ; ತಾಭ್ಯಾಂ–ಅವರಿಬ್ಬರಿಗೋಸ್ಕರ, ಸೃಷ್ಟ್ಯರ್ಥಂ ಏವ–ಸೃಷ್ಟಿಗಾಗಿಯೇ (ಜಗತ್ಸೃಷ್ಟಿಕಾರ್ಯವನ್ನು ಮುಂದರಿಸಲಿಕ್ಕಾಗಿಯೇ), ಪ್ರದ್ಯುಮ್ನಃ–ಪ್ರದ್ಯುಮ್ನನ ರೂಪನಾದ ಶ್ರೀವಿಷ್ಣುವು, ತದಾ–ಆಗ, ಕೃತೌ–(ತನ್ನ ಭಾರ್ಯಳಾದ) ಕೃತೀನಾಮಕ ಲಕ್ಷ್ಮೀದೇವಿಯಲ್ಲಿ, ಕನ್ಯಾದ್ವಯಂ – ಇಬ್ಬರು ಹೆಣ್ಣುಮಕ್ಕಳನ್ನು, ಜನಯಾಮಾಸ – ಹುಟ್ಟಿಸಿದನು ; ತತ್ರ-ಆ ಇಬ್ಬರಲ್ಲಿ, ಆದ್ಯಾಂ-ಮೊದಲಿನವಳಾದ, ಸರಸ್ವತೀಂ- ಸರಸ್ವತಿಯನ್ನು, ಬ್ರಹ್ಮಣಾ–ಬ್ರಹ್ಮದೇವನಿಂದ, ಸಮಯೋಜಯತ್–ಕೂಡಿಸಿದನು (ಆತನ ಭಾರ್ಯಳನ್ನಾಗಿ ಮಾಡಿದನು) ; ವಾಣೀಂ – (ಎರಡನೆಯವಳಾದ) ಭಾರತಿಯನ್ನು, ಪ್ರಾಣೇನ–ಸೂತ್ರನಾಮಕ ವಾಯುದೇವನೊಡನೆ

ತನಗೊಬ್ಬ ಸಹಾಯಕನನ್ನು ಕರುಣಿಸೆಂದು ನನ್ನನ್ನು ಪ್ರಾರ್ಥಿಸಿದನು ; ಆಗ ನನ್ನ ಸಂಕರ್ಷಣರೂಪದಿಂದ, ಆ ರೂಪದ ನನ್ನ ಭಾರ್ಯಳಾದ ಜಯಾನಾಮಕ ಲಕ್ಷ್ಮೀದೇವಿಯಲ್ಲಿ, ಮಹತ್ತತ್ವದ ಮತ್ತೊಂದು ಭಾಗದಿಂದ, ಸೂತ್ರನಾಮಕ ವಾಯುದೇವನನ್ನು ಸೃಷ್ಟಿಸಿದೆನು ; ಸೃಷ್ಟಿಗೆ ಆದಿಭೂತರಾದ (ಇತರ ಜೀವರ ಸೃಷ್ಟಿಗೆ ಕಾರಣರಾದ) ಈ ಉಭಯರ ಸೃಷ್ಟಿಕಾರ್ಯಕ್ಕಾಗಿ, ಪ್ರದ್ಯುಮ್ನರೂಪನಾದ ನಾನು, ನನ್ನ ಭಾರ್ಯಳಾದ ಕೃತಿದೇವಿಯಲ್ಲಿ (ಲಕ್ಷ್ಮೀರೂಪದಲ್ಲಿ), ಇಬ್ಬರು ಕನ್ಯೆಯರನ್ನು ಹುಟ್ಟಿಸಿದೆನು ; ಅವರಲ್ಲಿ ಮೊದಲಿನವಳಾದ ಸರಸ್ವತೀದೇವಿಯನ್ನು ಬ್ರಹ್ಮನಿಂದಲೂ, ಇನ್ನೊಬ್ಬಳಾದ ವಾಣೀ (ಭಾರತೀ) ದೇವಿಯನ್ನು ವಾಯುವಿನಿಂದಲೂ, ಸೇರಿಸಿ (ಕ್ರಮವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸೇರಿಸಿದನು—ಭಾರ್ಯೆಗಳನ್ನಾಗಿ ಮಾಡಿದನು); ತೌ – ಆ ಬ್ರಹ್ಮವಾಯು ಗಳಿಬ್ಬರೂ, ತಾಭ್ಯಾಂ–ಆ ಸರಸ್ವತೀವಾಣಿಯರಿಂದ ಕೂಡಿ, ಚಿರಂ–ಬಹು ಕಾಲ, ಕ್ರೀಡಂತೌ–ವಿಹರಿಸುತ್ತ, ತಸ್ಥತುಃ–ಇರುವವರಾದರು.

ಯ ಇಮಾಂ ಪ್ರಾಕೃತಾಂ ಸೃಷ್ಟಿಂ ಜನನಂ ಬ್ರಹ್ಮಸೂತ್ರಯೋಃ ।
ಶ್ರಾವಯೇತ್ ಶೃಣುಯಾದ್ವಾಪಿ ಪ್ರಾಕೃತೈರ್ಮುಚ್ಯತೇ ಗುಣೈಃ ॥
ಧನವಾನ್ ಪುತ್ರವಾನ್ ಲೋಕೇ ದೀರ್ಘಾಯುಃ ಪ್ರಿಯದರ್ಶನಃ ।
ಜಾತಿಶ್ರೈಷ್ಠ್ಯಮವಾಪ್ಯೈವ ಸಭಾರ್ಯೋ ಮೋದತೇ ಚಿರಂ ॥ ೬೩ ॥

ಯಃ–ಯಾರು,[1] ಇಮಾಂ–ಈ (ಈ ಮೊದಲು ಹೇಳಿದ), ಪ್ರಾಕೃತಾಂ–ಪ್ರಕೃತಿಯಿಂದಾದ, ಸೃಷ್ಟಿಂ–ಸೃಷ್ಟಿಯನ್ನು, (ಮತ್ತು), ಬ್ರಹ್ಮಸೂತ್ರಯೋಃ–ಬ್ರಹ್ಮವಾಯುಗಳ, ಜನನಂ–ಉತ್ಪತ್ತಿಯನ್ನೂ, ಶೃಣುಯಾತ್–ಶ್ರವಣ ಮಾಡುತ್ತಾರೆಯೋ (ಶ್ರದ್ಧೆಯಿಂದ ಕೇಳುತ್ತಾರೆಯೋ), ವಾ – ಮತ್ತು (ಅಥವಾ), ಶ್ರಾವಯೇತ್–ಅನ್ಯರಿಗೆ ಶ್ರವಣಮಾಡಿಸುತ್ತಾರೆಯೋ (ಅನ್ಯರಿಗೆ ಹೇಳಿ ಕೇಳಿಸುತ್ತಾರೆಯೋ), (ಅವರು), ಪ್ರಾಕೃತೈಃ ಗುಣೈಃ–ಪ್ರಾಕೃತಗುಣ ಗಳಿಂದ (ಸತ್ವಾದಿ ಗುಣಬಂಧರೂಪದ ಸಂಸಾರದಿಂದ), ಮುಚ್ಯತೇ-ಬಿಡುಗಡೆ ಯನ್ನು ಹೊಂದುತ್ತಾರೆ; (ಹೀಗೆ ಪ್ರಾಕೃತಸೃಷ್ಟಿಯನ್ನು ಕೇಳುವ, ಹೇಳುವ ಅಧಿಕಾರಿ ಜೀವನು) ಧನವಾನ್-ಧನವಂತನೂ, ಪುತ್ರವಾನ್-ಪುತ್ರವಂತನೂ,

---

ಅವರ ಪತ್ನಿಯರನ್ನಾಗಿಮಾಡಿ) ದೆನು; ಆಗ ಬ್ರಹ್ಮವಾಯುಗಳು ಸರಸ್ವತೀ ಭಾರತಿಯರೊಂದಿಗೆ ಬಹುಕಾಲ ವಿಹರಿಸುತ್ತಿದ್ದರು (೫೮–೬೧). ಪ್ರಕೃತಿ ಯನ್ನು ವಿಕಾರಗೊಳಿಸಿ, ಮಹದಾದಿತತ್ವಗಳನ್ನು ನಿರ್ಮಿಸಿ, ಅವುಗಳಿಂದ ಶ್ರೀವಿಷ್ಣುವು ಮಾಡಿದ ನಾನಾ ಯೋನಿಗಳ ಸೃಷ್ಟಿಯನ್ನೂ, ವಾಸುದೇವ, ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪಗಳಿಂದ ಪುರುಷನಾಮಕ (ಬ್ರಹ್ಮ, ಸೂತ್ರನಾಮಕವಾಯು, ಸರಸ್ವತೀ ಭಾರತೀದೇವಿಯರನ್ನೂ (ಆಯಾ ಲಕ್ಷ್ಮೀ ರೂಪಗಳಿಂದ) ಸೃಷ್ಟಿಮಾಡಿದ ಮಹಿಮೆಯನ್ನೂ ಯಾರು ಕೇಳುತ್ತಾರೆಯೋ,

---

[1] ಯಃ–ಯಾವಾತನು (ಯಾರೊಬ್ಬನು); ಇಲ್ಲಿರುವ ಏಕವಚನವು ಅಧಿಕಾರಿ ವರ್ಗವನ್ನು (ಮುಕ್ತಿಯೋಗ್ಯಜೀವ ಸಮುದಾಯವನ್ನು) ಪ್ರತಿನಿಧಿಸುವ ವ್ಯಕ್ತಿ ಯನ್ನು ಹೇಳುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೀರ್ಘಾಯುಃ – ದೀರ್ಘಾಯುಷ್ಯವುಳ್ಳವನೂ, ಲೋಕೇ – ಲೋಕದಲ್ಲಿ, ಪ್ರಿಯದರ್ಶನಃ – ಪ್ರೀತಿಪಾತ್ರನೂ (ಜನರಿಂದ ಪ್ರೀತಿಯಿಂದ ಕಾಣಲ್ಪಡುವವನೂ) (ಆಗಿ) ಜಾತಿಶ್ರೈಷ್ಠ್ಯಂ–ಸ್ವಜಾತಿಯಲ್ಲಿ ಶ್ರೇಷ್ಠತ್ವವನ್ನು, ಅವಾಪ್ಯ–ಹೊಂದಿ, ಸಭಾರ್ಯಃ–ಪತ್ನಿಸಮೇತನಾಗಿ, ಚಿರಂ–ಬಹುಕಾಲ, ಮೋದತೇ ಏವ–ಸುಖಿಸುವುದು ನಿಶ್ಚಯ.

ಅಧ್ಯಾಯ ೩

ಶ್ರೀ ಭಗವಾನ್ ಉವಾಚ—

ಏಕದಾ ಚಿಂತಯಾವಿಷ್ಟಃ ಸ ಬ್ರಹ್ಮಾ ಚಿಂತಯಚ್ಚಿರಂ ।
ಕಥಂ ಸರ್ವಜ್ಞತಾಂ ಯಾಮಿ ಸೃಷ್ಟೌ ಶಕ್ತಿಃ ಕಥಂ ಭವೇತ್ ॥ ೧ ॥

ಏಕದಾ – (ಹೀಗೆ ಸ್ವಭಾರ್ಯೆಯರಿಂದ ಕೂಡಿ ವಿಹರಿಸುತ್ತಿರುವಾಗ) ಒಂದುವೇಳೆ, ಬ್ರಹ್ಮಾ–ಬ್ರಹ್ಮದೇವನು, ಕಥಂ–ಹೇಗೆ, ಸೃಷ್ಟೌ–(ಜಗತ್ತಿನ ಸೃಷ್ಟಿಗಾಗಿಯೇ ಹುಟ್ಟಿಸಲ್ಪಟ್ಟ ನನಗೆ) ಸೃಷ್ಟಿಕಾರ್ಯದಲ್ಲಿ, ಶಕ್ತಿಃ –

ಯಾರು ಅನ್ಯಶ್ರದ್ಧಾವಂತರಿಗೆ ಕೇಳಿಸುತ್ತಾರೆಯೋ, ಅವರು ಲೋಕದಲ್ಲಿ, ಜನಪ್ರಿಯರಾಗಿ, ಧನವಂತರೂ ಪುತ್ರವಂತರೂ, ದೀರ್ಘಾಯುಗಳೂ, ಆಗಿ, ತಮ್ಮ ಜಾತಿಯಲ್ಲಿ ಶ್ರೇಷ್ಠರೆನಿಸಿ, ಪತ್ನೀಸಮೇತ ಬಹುಕಾಲ ಸುಖಿಸುತ್ತಾರೆ. (ಈ ಅಧ್ಯಾಯದ ಶ್ರೀವಿಷ್ಣುಮಹಿಮೆಯ ಶ್ರವಣಫಲವನ್ನು ಹೇಳಲಾಗಿದೆ) (೬೨–೬೩).

ಬ್ರಹ್ಮೋತ್ಪತ್ತಿಯೆಂಬ ೨ನೇ ಅಧ್ಯಾಯವು ಮುಗಿದುದು.

ಸೃಷ್ಟಿಗಾಗಿಯೇ ಹುಟ್ಟಿಸಲ್ಪಟ್ಟ ನಾನು, ಜಗತ್ತಿನ ಸೃಷ್ಟಿಕಾರ್ಯದಲ್ಲಿ ಹೇಗೆ ಸಮರ್ಥನಾದೇನು ಮತ್ತು ಅದಕ್ಕೆ ಅವಶ್ಯಕವಾದ ಸರ್ವಜ್ಞತ್ವವು,[1]

[1] ಅಸಂಖ್ಯಜೀವರಿಗೆ, ಅವರವರ ಯೋಗ್ಯತೆ ಮತ್ತು ಕರ್ಮಾನುಸಾರವಾಗಿ ಸಾಧನದೇಹಗಳನ್ನು, ಯೋಗ್ಯಕಾಲಗಳಲ್ಲಿ, ಕೊಟ್ಟು ಅವರವರ ಗತಿಗಳನ್ನು ಸಾಧಿಸಿಕೊಳ್ಳುವಂತೆ ಸೃಷ್ಟಿಕಾರ್ಯವನ್ನು ನೆರವೇರಿಸಿ, ಶ್ರೀಹರಿಪ್ರೀತಿಯನ್ನು ಪಡೆಯಲು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮರ್ಥ್ಯವು, ಭವೇತ್–ಉಂಟಾದೀತು, (ಮತ್ತು), ಸರ್ವಜ್ಞತಾಂ–(ಆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಅವಶ್ಯಕವಾದ) ಸರ್ವಜ್ಞತ್ವವನ್ನು, ಕಥಂ–ಹೇಗೆ, ಯಾಮಿ–ಹೊಂದುವೆನು, (ಎಂಬ), ಚಿಂತಯಾವಿಷ್ಟಃ-ಚಿಂತೆಯಲ್ಲಿ ಮುಳುಗಿ, ಚಿರಂ-ಬಹುಕಾಲ, ಅಚಿಂತಯತ್–ಯೋಚಿಸಿದನು.

ಕಥಂ ಮೋಕ್ಷಮವಾಪ್ಸ್ಯಾಮಿ ಮುಕ್ತಃ ಸಂಸಾರಸಾಗರಾತ್ ।
ಏವಂ ಚಿಂತಯತಾ ತೇನ ಸ್ಮೃತೋಽಹಂ ಸರ್ವವಿತ್ತಮಃ ॥ ೨ ॥

ಸ ಏವ ಭಗವಾನ್ ಮಹ್ಯಮುಪದೇಷ್ಟುಮಿಹಾರ್ಹತಿ ।
ನಾನ್ಯತ್ಕಿಂಚಿತ್ ಪ್ರಪಶ್ಯಾಮಿ ಮಮ ಚಿಂತಾಪನೋದಕಂ ॥ ೩ ॥

ಸಂಸಾರಸಾಗರಾತ್ – ಭವಸಮುದ್ರದಿಂದ, ಮುಕ್ತಃ – ಬಿಡಲ್ಪಟ್ಟು (ಜನನಮರಣರೂಪದ ಸಂಸಾರದಿಂದ ಬಿಡುಗಡೆಯನ್ನು ಹೊಂದಿ), ಕಥಂ–ಹೇಗೆ, ಮೋಕ್ಷಂ–(ಸ್ವಯೋಗ್ಯಪೂರ್ಣಾನಂದಾನುಭವದಿಂದಿರುವ ನಿತ್ಯಸ್ಥಿತಿಯನ್ನು). ಮೋಕ್ಷವನ್ನು, ಅವಾಪ್ಸ್ಯಾಮಿ–ಹೊಂದುವೆನು, ಏವಂ–ಹೀಗೆಂದು,

---

ಹೇಗೆ ಉಂಟಾದೀತು, ಎಂಬ ಚಿಂತೆಗೆ ಒಳಗಾಗಿ, ಬಹುಕಾಲದವರೆಗೆ ಬ್ರಹ್ಮದೇವನು, ನನ್ನನ್ನೇ ಶರಣುಹೊಂದಿ ಯೋಚಿಸಿದನು (೧). ಸರ್ವಜ್ಞತ್ವವನ್ನು ಹೊಂದಿ, ಜನಕನ ಆಜ್ಞೆಯಂತೆ ಸೃಷ್ಟಿಕಾರ್ಯವನ್ನು ನಿರ್ವಹಿಸಿ, ಆತನ ಪ್ರಸಾದದಿಂದ, ನನ್ನ ಸ್ವಯೋಗ್ಯ ಆನಂದಾತಿಶಯಯುಕ್ತವಾದ ಮೋಕ್ಷವನ್ನು[1] ಹೇಗೆ ಹೊಂದುವೆನೆಂದು ಚಿಂತಿಸಿ, ತನ್ನ ಉತ್ಪಾದಕನಾದ ಶ್ರೀವಿಷ್ಣುವನ್ನೇ ಧ್ಯಾನಿಸಿದನು ; ತನ್ನ ಚಿಂತೆಯ ಪರಿಹಾರಕ್ಕೆ ಯೋಗ್ಯವಾದ

ಪ್ರತಿಜೀವರ ಸ್ವರೂಪ, ಪೂರ್ವಕರ್ಮಗಳು, ಅವುಗಳು ಪಕ್ವವಾಗುವ ಕಾಲ, ದೊರೆಯುಬೇಕಾದ ಐಹಿಕಾದಿ ಫಲಗಳು, ಯೋಗ್ಯಜ್ಞಾನಸಾಧನೆಗಳು, ಇತ್ಯಾದಿ ಬಹುವಿಷಯಕ ವಿವರವಾದ ಸ್ಪಷ್ಟ ಜ್ಞಾನವು ಇರಬೇಕಾಗುತ್ತದೆ. ಇದು ಸರ್ವಜ್ಞತೆಯ ವಿನಹ ಅನುಪಪನ್ನವಾಗುತ್ತದೆ.

[1] ಬ್ರಹ್ಮದೇವನು ಏಕಾಂತಭಕ್ತರಲ್ಲಿ ಶ್ರೇಷ್ಠನು ; ತನ್ನ ಸಾಧನದ ಫಲರೂಪವಾಗಿ ಮೋಕ್ಷವನ್ನು ಎಂದೂ ಇಚ್ಛಿಸುವುದಿಲ್ಲ. ಮತ್ತು ಅನಾದಿಕಾಲದಿಂದ, ಪರೋಕ್ಷಜ್ಞಾನಪೂರ್ತಿಯನ್ನೂ, ಬಹುಭಗವದ್ರೂಪಗಳ ಸಾಮಾನ್ಯಾಪರೋಕ್ಷಜ್ಞಾನವನ್ನು (ಅಪರೋಕ್ಷಜ್ಞಾನವನ್ನು) ಹೊಂದಿರುವ ಈತನಿಗೂ (ಈತನ ಗುಂಪಿಗೆ ಸೇರಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿಂತಯತಾ–ಯೋಚಿಸುತ್ತಿರುವ, ತೇನ–ಬ್ರಹ್ಮದೇವನಿಂದ, ಸರ್ವವಿತ್ತಮಃ–ಸರ್ವಜ್ಞಶ್ರೇಷ್ಠನಾದ, ಅಹಂ–ನಾನು, ಸ್ಮೃತಃ–ಧ್ಯಾನಿಸಲ್ಪಟ್ಟೆನು ; ಆತನು ಹೀಗೂ ಚಿಂತೆಯಲ್ಲಿ ನಿಶ್ಚಯಿಸಿದನು: ಇಹ–ಈ ನನ್ನನ್ನಾವರಿಸಿರುವ ಚಿಂತೆಯ ವಿಷಯದಲ್ಲಿ, ಭಗವಾನ್–ಷಡ್ಗುಣ್ಯೈಶ್ವರ್ಯಪೂರ್ಣನಾದ (ಮುಖ್ಯ ಭಗವಚ್ಛಬ್ದವಾಚ್ಯನಾದ), ಸ ಏವ – (ನನ್ನ ಜನಕನಾದ) ಶ್ರೀ ಮಹಾ ವಿಷ್ಣುವೇ, ಮಹ್ಯಂ–ನನಗೆ, ಉಪದೇಷ್ಟುಂ–ಉಪದೇಶಿಸಲಿಕ್ಕೆ, (ಉಪದೇಶದಿಂದ ನನ್ನ ಚಿಂತೆಯನ್ನು ಪರಿಹರಿಸಲಿಕ್ಕೆ), ಅರ್ಹತಿ–ಶಕ್ತನಾಗಿದ್ದಾನೆ; ಮಮ–ನನ್ನ, ಚಿಂತಾಪನೋದಕಂ–ಚಿಂತೆಯನ್ನು ಪರಿಹರಿಸುವ, ಅನ್ಯತ್ ಕಿಂಚಿತ್–ಬೇರೆ ಯಾವುದನ್ನೂ (ಬೇರಾವ ಮಾರ್ಗವನ್ನೂ), ನ ಪ್ರಪಶ್ಯಾಮಿ–ಕಾಣೆನು.

ತತೋ ಹಯಾಸ್ಯರೂಪೇಣ ತತ್ಸಮೀಪೇ ತದೈವ ತು ।
ಆವಿರ್ಭೂತಸ್ತತೋ ಮಾಂ ಸ ದೃಷ್ಟ್ವಾಶ್ಚರ್ಯಸ್ವರೂಪಿಣಂ ॥ ೪ ॥
ವಿಸ್ಮಿತಃ ಪ್ರೇಕ್ಷಮಾಣೋ ಮಾಂ ಕಿಂಚಿನ್ನೈವಾಭ್ಯಪದ್ಯತ ।

ತತಃ–ನಂತರ, ತದೈವ–ಆಗಲೇ (ಬ್ರಹ್ಮನು ಹಾಗೆ ನನ್ನನ್ನು ಧ್ಯಾನಿಸಿದಾಗಲೇ),[1] ತತ್ಸಮೀಪೇ ತು–ಆತನ ಸಮೀಪದಲ್ಲಿಯೇ, ಹಯಾಸ್ಯರೂಪೇಣ–

ಉಪದೇಶವನ್ನು, ನಾನು ಮಾತ್ರ, ಮಾಡಬಲ್ಲೆನೆಂದೂ ಅನ್ಯಮಾರ್ಗವಿಲ್ಲವೆಂದೂ ನಿಶ್ಚಯಿಸಿ, ಧ್ಯಾನಮಗ್ನನಾದನು (೨–೩). ಆಗ ನಾನು ಹಯಗ್ರೀವರೂಪದಿಂದ, ಬ್ರಹ್ಮದೇವನ ಎದುರಿಗೇ ಪ್ರತ್ಯಕ್ಷನಾದೆನು ; ಆಶ್ಚರ್ಯ

ಋಜುಗಣಸ್ಥರಿಗೂ) ಮೋಕ್ಷವು ಸಿದ್ಧವಾಗಿಯೇ ಇದೆ—ಸಾಧನೆಗಳಿಂದ ಮೋಕ್ಷವು ದೊರೆಯಬೇಕಾಗಿಲ್ಲ ; ಆದರೂ, ಈತನ ೧೦೦ ಜನ್ಮಗಳ ಸಾಧನೆಯು, ಮೊದಲೇ ಪೂರ್ಣವಾದ ಜ್ಞಾನಕ್ಕೆ ಅಧಿಕ (ಅತಿಶಯ) ಪೂರ್ಣತ್ವವನ್ನೂ, ಭಗವಂತನ ಅನಂತ ರೂಪಗಳ ಸಾಕ್ಷಾತ್ಕಾರವನ್ನೂ, ಅಪರೋಕ್ಷದಲ್ಲಿ ಅಧಿಕ ಸ್ಪಷ್ಟತೆಯನ್ನೂ ಹೊಂದಿ, ಸುಖಪ್ರಾರಬ್ಧ ಭೋಗದ ಪೂರ್ತಿಗಾಗಿ, ಸತ್ಯಲೋಕಾಧಿಪತ್ಯವನ್ನು ಹೊಂದಿ, ಪ್ರಾರಬ್ಧವನ್ನು ಮುಗಿಸಿ, ಸ್ವಯೋಗ್ಯವಾದ ಮೌಕ್ತಿಕ ಆನಂದಾತಿಶಯವನ್ನು ಸಾಧಿಸಲು ಭಗವಂತನ ವಿಶೇಷ ಪ್ರೀತಿಯನ್ನು ಗಳಿಸಲು ಮಾತ್ರ, ನಿಯತವಾಗಿದೆ; ಸಾಧನೆಗಳಿಂದ ಈತನಿಗೆ ಅನ್ಯಪ್ರಯೋಜನವಾವುದೂ ಇಲ್ಲವೇ ಇಲ್ಲ.

[1] ಭಕ್ತವತ್ಸಲನಾದ್ದರಿಂದ, ತಡಮಾಡದೇ ಪ್ರತ್ಯಕ್ಷನಾದೆನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುದುರೆಮುಖವುಳ್ಳ ರೂಪದಿಂದ (ಹಯಗ್ರೀವ ರೂಪದಿಂದ), ಆವಿರ್ಭೂತಃ- ಪ್ರಕಟನಾದೆನು; ತತಃ-ನಂತರ, ಸಃ-ಆ ಬ್ರಹ್ಮನು, ಆಶ್ಚರ್ಯ ಸ್ವರೂಪಿಣಂ- ಅದ್ಭುತ ಸ್ವರೂಪನಾದ, ಮಾಂ-ನನ್ನನ್ನು, ದೃಷ್ಟ್ವಾ-ಕಂಡು, ಮಾಂ- ನನ್ನನ್ನು, ಪ್ರೇಕ್ಷಮಾಣಃ - ನಿಟ್ಟಿಸಿ ನೋಡುವನಾಗಿ (ರೆಪ್ಪೆ ಮುಚ್ಚದಂತೆ ದೃಷ್ಟಿಸಿ ನೋಡಿ), ವಿಸ್ಮಿತಃ-ಆಶ್ಚರ್ಯಚಕಿತನಾಗಿ, ಕಿಂಚಿತ್-ಏನನ್ನೂ, ನೈವ ಅಭ್ಯಪದ್ಯತ-ಮಾಡಲು ತಿಳಿಯದವನಾದನು (ಕರ್ತವ್ಯ ಮೂಢ ನಾದನು).

ತತ್ರಾಗಮತ್ತದಾ ಸೂತ್ರನಾಮಾ ಪ್ರಾಣಸ್ತದೈವ ಹಿ ॥ ೫ ॥
ತತಸ್ತೌ ಕೃಪಯಾ ವೀಕ್ಷ್ಯ ಪರಾಮೃಶ್ಯ ಚ ಬಾಹುಭಿಃ ।
ತ್ವಚ್ಚಿಂತಾಪರಿಹಾರಾಯ ವಿಷ್ಣುರೇವಾಹಮಾಗತಃ ॥ ೬ ॥
ಇತಿ ಶ್ರುತ್ವಾ ತತೋ ಬ್ರಹ್ಮಾ ಪ್ರಣನಾಮ ಸ ದಂಡವತ್ ।
ತತಃ ಪ್ರಾಣೋಽಪಿ ತತ್ಪತ್ನ್ಯಾ ಸರ್ವೇ ನೇಮುಃ ಪುನಃ ಪುನಃ ॥ ೭ ॥

ತದಾ-ಆಗ (ಹಾಗೆ ನಾನು ಹಯಮುಖನಾಗಿ ಪ್ರಕಟನಾದಾಗ), ತತ್ರ - ಅಲ್ಲಿಗೆ (ನಾನಿದ್ದಲ್ಲಿಗೆ), ಸೂತ್ರನಾಮಾ ಪ್ರಾಣಃ - ಸೂತ್ರನಾಮಕ ಮುಖ್ಯಪ್ರಾಣನು (ವಾಯುದೇವನೂ), ಆಗಮತ್-ಬಂದನು; ತದಾ ಏವ- ಆ ಕೂಡಲೆ, ಕೃಪಯಾ-ಕೃಪೆಯಿಂದ, ತೌ-ಅವರಿಬ್ಬರನ್ನೂ, ವೀಕ್ಷ್ಯ-

---

ಸ್ವರೂಪನಾದ[1] ನನ್ನನ್ನು ಚಕಿತನಾಗಿ, ಎವೆಯಿಕ್ಕದೇ ನೋಡುತ್ತ, ಕರ್ತವ್ಯ ಮೂಢನಾಗಿ ನಿಂತನು (೪). ಬ್ರಹ್ಮದೇವನು ಹಾಗೆ ಆಶ್ಚರ್ಯಚಕಿತನಾಗಿ ನಿಲ್ಲಲು, ವಾಯುದೇವನೂ ಅಲ್ಲಿಗೆ ಬಂದನು; ಆಗ ನಾನು ಆ ಉಭಯ ರನ್ನೂ ಕೃಪಾದೃಷ್ಟಿಯಿಂದ ನೋಡಿ, ನನ್ನ ಭುಜಗಳಿಂದ ಆಲಂಗಿಸಿ, ಬ್ರಹ್ಮ ದೇವನ ಚಿಂತಾಪರಿಹಾರಕ್ಕಾಗಿ ಪ್ರಾಪ್ತನಾಗಿರುವ ಶ್ರೀವಿಷ್ಣುವೇ ನಾನೆಂದು ಹೇಳಿದೆನು; ಆಗ ಬ್ರಹ್ಮನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದನು;

---

1 'ಆಶ್ಚರ್ಯವತ್ಪಶ್ಯತಿ ಕಶ್ಚಿದೇನಂ ...' ಇತ್ಯಾದಿ (ಭಗವದ್ಗೀತೆ) ಯಲ್ಲಿ ಪ್ರಸಕ್ತನಾಗಿರುವ ನನ್ನನ್ನು ಆಶ್ಚರ್ಯನೆಂದೇ ಕಂಡನು; ಮುಕ್ತಜನರಿಗೆ ಆನಂದ ಪ್ರದವಾದ ಶ್ರೀವಿಷ್ಣು ವಿನ ರೂಪವೂ 'ಆಶ್ಚರ್ಯ'ನಾಮಕವಾದುದು. 'ಆಶ್ಚರ್ಯ- ಮಾಶ್ಚರ್ಯಮಹೋ ಮುಹುರ್ಮುಹುಃ' (ಸುಮಧ್ವವಿಜಯ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೋಡಿ, ತತಃ–ನಂತರ, ಬಾಹುಭಿಃ–(ನನ್ನ) ತೋಳುಗಳಿಂದ, ಪರಾಮೃಶ್ಯ–ಆಲಿಂಗಿಸಿ, ತ್ವಚ್ಚಿಂತಾಪರಿಹಾರಾಯ–ಹೇ ಬ್ರಹ್ಮನ್ ! ನಿನ್ನ ಚಿಂತೆಯನ್ನು ಪರಿಹರಿಸಲಿಕ್ಕಾಗಿ, ಆಗತಃ–ಬಂದಿರುವ, ಅಹಂ–ನಾನು, ವಿಷ್ಣು ಏವ–ಸಾಕ್ಷಾತ್ ವಿಷ್ಣುವೇ (ನಿನ್ನ ಜನಕನೇ), ಇತಿ–ಹೀಗೆಂಬ (ನನ್ನ ಮಾತನ್ನು), ಶ್ರುತ್ವಾ–ಕೇಳಿ, ತತಃ–ನಂತರ, ಸಃ ಬ್ರಹ್ಮಾ–ಆ ಬ್ರಹ್ಮದೇವನು, ದಂಡವತ್–ದಂಡದಂತೆ, ಪ್ರಣನಾಮ–ನಮಸ್ಕರಿಸಿದನು (ಸಾಷ್ಟಾಂಗವೆರಗಿದನು ; ದೇಹವನ್ನು ದಂಡದಂತೆ ನನ್ನ ಪಾದಗಳಲ್ಲಿ ಕೆಡವಿದನು) ; ತತಃ – ನಂತರ, ಪ್ರಾಣಃ–ಪ್ರಾಣದೇವನೂ, ತತ್ಪತ್ನ್ಯೌ ಅಪಿ–ಬ್ರಹ್ಮವಾಯುಗಳಿಬ್ಬರ ಪತ್ನಿಯರೂ (ಸರಸ್ವತೀಭಾರತಿಯರೂ) ಸಹ, ಸರ್ವೇ–ಎಲ್ಲರೂ, ಪುನಃ ಪುನಃ–ಮತ್ತೆ ಮತ್ತೆ, ನೇಮುಃ–ನಮಸ್ಕರಿಸಿದರು.

ಲಕ್ಷ್ಮೀರಪ್ಯಭವತ್ತತ್ರ ಸದಾ ಮತ್ಸೇವನೇ ರತಾ ।
ಬ್ರಹ್ಮಾಣಮುಪವೇಶ್ಯಾಗ್ರೇ ಪೃಷ್ಠತೋನ್ಯಾನ್ನಿವೇಶ್ಯ ಚ ॥ ೮ ॥
ವೇದಾಂಶ್ಚೈವೋಪವೇದಾಂಶ್ಚ ಸರ್ವಾನಧ್ಯಾಪಯಂ ಕ್ರಮಾತ್ ।
ಋಚೋ ಯಜೂಂಷಿ ಸಾಮಾನಿ ತಥಾಥರ್ವೋಂಗಿರಾಂಸಿ ಚ ॥೯॥
ಆಯುರ್ವೇದಂ ಧನುರ್ವೇದಂ ಗಾಂಧರ್ವಂ ಚಾರ್ಥಶಾಸ್ತ್ರಕಂ ।
ಚತುರ್ಣಾಮುಪವೇದಾಂಶ್ಚ ತತೋಂಗಾನಿ ಪೃಥಕ್ ಪೃಥಕ್ ॥೧೦॥
ಶಿಕ್ಷಾ ಕಲ್ಪೋ ನಿರುಕ್ತಂ ಚ ಛಂದೋ ವ್ಯಾಕರಣಂ ತಥಾ ।
ಜ್ಯೋತಿಷಂ ಚೇತಿ ಷಟ್ ಪ್ರೋಕ್ತಾನ್ಯಂಗಾನಿ ವಿಧಿವನ್ಮಯಾ ॥೧೧॥

ಸದಾ–ನಿತ್ಯವೂ, ಮತ್ಸೇವನೇ ರತಾ–ನನ್ನ ಸೇವೆಯಲ್ಲಿಯೇ ಆಸಕ್ತಳಾದ (ನನ್ನ ಸೇವೆಯಿಂದಲೇ ಆನಂದಿಸುವ), ಲಕ್ಷ್ಮೀಃ ಅಪಿ – ಲಕ್ಷ್ಮೀದೇವಿಯೂ ಸಹ, ತತ್ರ – ಅಲ್ಲಿ, ಅಭವತ್–ಇದ್ದಳು ; ಅಗ್ರೇ – (ನನ್ನ)

ನಂತರ ವಾಯುದೇವನೂ, ಅವರೀರ್ವರ ಭಾರ್ಯರಾದ ಸರಸ್ವತೀಭಾರತಿಯರೂ, ಸರ್ವರೂ ಪುನಃ ಪುನಃ ನನ್ನನ್ನು ನಮಸ್ಕರಿಸಿದರು (೫–೭). ಬ್ರಹ್ಮಾದಿಗಳು ನಮಸ್ಕರಿಸಿ ನಿಂತಾಗ, ನಿತ್ಯ ನನ್ನ ಸೇವೆಯಲ್ಲಿಯೇ ತೊಡಗಿರುವ ನನ್ನ ಭಾರ್ಯಳೂ (ಶ್ರೀ ಲಕ್ಷ್ಮೀದೇವಿಯೂ ಅಲ್ಲಿಯೇ ಇದ್ದಳು ; ಬ್ರಹ್ಮದೇವನನ್ನು ನನ್ನ ಎದುರಿಗೂ, ಆತನ ಹಿಂದೆ ಪ್ರಾಣದೇವ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎದುರಿಗೆ, ಬ್ರಹ್ಮಾಣಂ–ಬ್ರಹ್ಮದೇವನನ್ನು, ಉಪವೇಶ್ಯ–ಕೂಡಿಸಿ, ಅನ್ಯಾನ್–ಇತರರನ್ನು, ಪುಷ್ಠತಃ–ಆತನ ಹಿಂದೆ, ನಿವೇಶ್ಯ–ಕೂಡಿಸಿ, ವೇದಾನ್–ವೇದಗಳನ್ನೂ, ಉಪವೇದಾನ್ ಚೈವ–ಉಪವೇದಗಳನ್ನೂ, ಕ್ರಮಾತ್–ಕ್ರಮವಾಗಿ (ಒಂದಾದನಂತರ ಒಂದರಂತೆ),[1] ಸರ್ವಾನ್ – ಎಲ್ಲವುಗಳನ್ನೂ, ಅಧ್ಯಾಪಯಂ – ಅಧ್ಯಯನಮಾಡಿಸಿದೆನು;[2] (ಅವು ಯಾವುವೆಂದರೆ) ಋಚಃ – ಋಗ್ವೇದಮಂತ್ರಗಳನ್ನೂ, ಯಜೂಂಷಿ – ಯಜುರ್ವೇದಗಳನ್ನೂ (ನಾನಾ ಶಾಖೆಗಳಲ್ಲಿರುವ ಮಂತ್ರಗಳನ್ನು), ಸಾಮಾನಿ – ಸಾಮಗಳನ್ನೂ,[3]

ಸರಸ್ವತೀಭಾರತಿಯರನ್ನೂ ಕೂಡಿಸಿ, ವೇದ, ಉಪವೇದಗಳನ್ನೆಲ್ಲವನ್ನೂ[1] ಅಧ್ಯಯನಮಾಡಿಸಿದೆನು; ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದಗಳನ್ನೂ, ಆಯುರ್ವೇದ, ಧನುರ್ವೇದಗಳೆಂಬ ವಿದ್ಯೆಗಳನ್ನೂ, ಗಾಂಧರ್ವ ಅರ್ಥಶಾಸ್ತ್ರಗಳನ್ನೂ, ಉಪವೇದಗಳ ಪ್ರಭೇದಗಳನ್ನೂ (ನಾನಾ ವೇದಶಾಖೆಗಳನ್ನೂ), ಕ್ರಮವಾಗಿ ಅಧ್ಯಯನಮಾಡಿಸಿದೆನು; ಹಾಗೂ,

---

1 ಯದ್ಯಪಿ, ಬ್ರಹ್ಮದೇವನು ಯುಗಪತ್ (ಏಕಕಾಲದಲ್ಲಿ) ಎಲ್ಲವನ್ನೂ ಗ್ರಹಿಸಲು ಸಮರ್ಥನೇ ಆಗಿರುವನು; ಅಜ್ಞಲೋಕಶಿಕ್ಷಾರ್ಥವಾಗಿ ಈ ಕ್ರಮದಲ್ಲಿ ಅಧ್ಯಯನಮಾಡಿಸಿದುದೆಂದು–ತಿಳಿಯಬೇಕು.

2 ಅಧ್ಯಯನವೆಂದರೆ ಕೇವಲ ಉಚ್ಚಾರವಲ್ಲ–ಅರ್ಥಜ್ಞಾನಸಹಿತವಾದ ಪಠಣವು.

3 ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ ಮತ್ತು ನಿಧನಗಳು ಐದು ಸಾಮಗಳು—ಸಪ್ತ ವಿಧಗಳೂ ಇವೆ. ಗಾಯತ್ರ, ರಥಂತರ, ವಾಮದೇವಾದಿ ಬಹುವಿಧ ಸಾಮಗಳೂ ಇವೆ; (ವಿವರಗಳಿಗೆ ಛಾಂದೋಗ್ಯ ಉಪನಿಷತ್ತನ್ನು ನೋಡಬಹುದು).

1 'ಮೂಲವೇದಶ್ಚೋಪವೇದಸ್ತಥಾವಾಂತರ ಏವ ಚ | ಶಾಖೋಪಶಾಖಾಭೇದೇನ ವೇದೋಽನೇಕವಿಧೋ ಮತಃ ॥ (ಸ.ರ.ಮಾ.) ಎಂದು ವೇದಗಳಲ್ಲಿರುವ ಬಹುವಿಧಗಳು ನಿರೂಪಿಸಲ್ಪಟ್ಟಿವೆ. ಮೂಲವೇದ, ಉಪವೇದ, ಅವಾಂತರವೇದ ಮತ್ತು ಶಾಖೆ, ಉಪಶಾಖೆಗಳೆಂಬ ವೇದಭಾಗಗಳು, ಹೀಗೆ ವೇದಗಳು ಬಹುವಿಧವಾಗಿವೆ. ಪಂಚರಾತ್ರದಿಂದ ಸಹಿತವಾದ ವೇದವೆಲ್ಲವೂ ಕೃತಯುಗದಲ್ಲಿ ಒಂದೇ ಆಗಿತ್ತು—ಋಗಾದಿರೂಪದಿಂದ ವಿಭಕ್ತವಾಗಿರಲಿಲ್ಲ—ಇದು ಮೂಲವೇದ; ತ್ರೇತಾಯುಗದಲ್ಲಿ ಋಕ್, ಯಜು, ಸಾಮಭೇದದಿಂದ ಮೂರು ಭಾಗಗಳಾದವು—ಇವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಥಾ–ಹಾಗೂ, ಅಥರ್ವಾಂಗಿರಾಂಸಿ ಚ – ಅಥರ್ವವೇದಮಂತ್ರಗಳನ್ನೂ ; ಆಯುರ್ವೇದಂ – ಆ ಯು ರ್ವೇ ದ ವ ನ್ನೂ (ವೈದ್ಯಶಾಸ್ತ್ರದ ಮೂಲ), ಧನುರ್ವೇದಂ–ಧನುರ್ವೇದವನ್ನೂ (ಯುದ್ಧಶಾಸ್ತ್ರ ಮೂಲ), ಗಾಂಧರ್ವಂ–ಗಂಧರ್ವವೇದವನ್ನೂ (ಸಂಗೀತಶಾಸ್ತ್ರದ ಮೂಲ), ಅರ್ಥಶಾಸ್ತ್ರಕಂ–ಅರ್ಥಶಾಸ್ತ್ರವನ್ನೂ, ಚತುರ್ಣಾಂ–ನಾಲ್ಕರ (ನಾಲ್ಕೂವೇದಗಳ), ಉಪವೇದಾನ್ ಚ–ಉಪವೇದಗಳನ್ನೂ ಸಹ ; ತತಃ–ನಂತರ, ಪೃಥಕ್ ಪೃಥಕ್–ಬೇರೆ ಬೇರೆಯಾಗಿ, ಅಂಗಾನಿ–ವೇದಾಂಗಗಳನ್ನೂ (ಅಧ್ಯಾಪಯಂ–ಅಧ್ಯಯನ ಮಾಡಿಸಿದೆನು) ; (ವೇದಾಂಗಗಳು[1] ಯಾವುವೆಂದರೆ) ಶಿಕ್ಷಾ – ಶಿಕ್ಷೆಯು, ಕಲ್ಪಃ–ಕಲ್ಪವು, ನಿರುಕ್ತಂ ಚ–ನಿರುಕ್ತವೂ, ಛಂದಃ–ಛಂದಸ್ಸು, ತಥಾ–ಹಾಗೂ, ವ್ಯಾಕರಣಂ – ವ್ಯಾಕರಣವೂ, ಜ್ಯೋತಿಷಂ ಚೇತಿ – ಜ್ಯೋತಿಷ ಎಂಬುದಾಗಿಯೂ, ಷಟ್–ಆರು, ಅಂಗಾನಿ–ವೇದಾಂಗಗಳು ; ಮಯಾ–ನನ್ನಿಂದ, ವಿಧಿವತ್–ವಿಧ್ಯುಕ್ತ ಕ್ರಮದಿಂದ (ಉಪದೇಶಿಸಲ್ಪಟ್ಟವು).

ಶಿಕ್ಷಾ, ಕಲ್ಪ, ನಿರುಕ್ತ, ಛಂದಸ್ಸು, ವ್ಯಾಕರಣ ಮತ್ತು ಜ್ಯೋತಿಷಗಳೆಂಬ ಆರು ವೇದಾಂಗಗಳನ್ನೂ, ವಿಧ್ಯುಕ್ತಕ್ರಮದಿಂದ ಬೋಧಿಸಿದೆನು (೮–೧೧).

ಉಪವೇದಗಳು ; ಮುಂದೆ ದ್ವಾಪರದಲ್ಲಿ, ಶ್ರೀ.ವೇದವ್ಯಾಸರು, ಆಯಾ ರಾಶಿಗಳಿಂದ ಮಂತ್ರಗಳನ್ನು ತೆಗೆದುಕೊಂಡು, ವಿಂಗಡಿಸಿ, ಋಗಾದಿ ಮೂರು ಮತ್ತು ಅಥರ್ವಣವೆಂಬ ನಾಲ್ಕು ವೇದಗಳನ್ನಾಗಿ ವಿಭಾಗ ಮಾಡಿದರು. ಇವು ಅವಾಂತರವೇದಗಳೆನಿಸುತ್ತವೆ. ಶ್ರೀ ವೇದವ್ಯಾಸರೇ ಈ ನಾಲ್ಕು ವೇದಗಳಲ್ಲಿ, ಅಧಿಕಾರಿಗಳ ಯೋಗ್ಯತೆಯನ್ನು ಲಕ್ಷಿಸಿ, ಋಗ್ವೇದದಲ್ಲಿ ೨೪, ಯಜುರ್ವೇದದಲ್ಲಿ ೧೦೧, ಸಾಮವೇದದಲ್ಲಿ ೧೦೦೦, ಅಥರ್ವಣವೇದದಲ್ಲಿ ೧೨, ಹೀಗೆ ಶಾಖೆಗಳನ್ನೇರ್ಪಡಿಸಿದರೂ, ಈ ಶಾಖೆಗಳಲ್ಲಿ ಸಹ ಋಷಿಗಳು ತಮ್ಮ ಶಿಷ್ಯರಿಗಾಗಿ ವಿಂಗಡಿಸಿ ಅಧ್ಯಯನ ಮಾಡಿಸಿದ ವಿಭಾಗಗಳು ಅವಾಂತರ ಶಾಖೆ ಅಥವಾ ಉಪಶಾಖೆಗಳೆಂದೆನಿಸಿದವು.

[1] **ಶಿಕ್ಷಾ**—ಉಚ್ಚಾರಣ ನಿಯಮಗಳನ್ನು ನಿರೂಪಿಸುವುದು ; **ಕಲ್ಪ**—ವೇದೋಕ್ತ ಕರ್ಮಾಚರಣ ನಿಯಮಗಳನ್ನು ಹೇಳುವುದು ; **ಛಂದಸ್ಸು**—ವರ್ಣಸಂಖ್ಯಾಭೇದದಿಂದ ವೇದಮಂತ್ರಗಳಲ್ಲಿ ವ್ಯವಸ್ಥಿತವಾದ ನಾನಾ ಛಂದಸ್ಸುಗಳನ್ನು ನಿರೂಪಿಸುವುದು; **ವ್ಯಾಕರಣ**— ಶಬ್ದಗಳ ಸಾಧುತ್ವವನ್ನು ಪ್ರತಿಪಾದಿಸುವುದು ; **ನಿರುಕ್ತ**—ಶಬ್ದಗಳ ನಿರ್ವಚನಪ್ರಕಾರವನ್ನು ಶಾಸನಮಾಡುವುದು ; **ಜ್ಯೋತಿಷ**— ಗ್ರಹನಕ್ಷತ್ರಾದಿಗಳ ಸಂಚಾರ ಮತ್ತು ತತ್ಫಲಗಳನ್ನು ನಿರೂಪಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ಬ್ರಹ್ಮಾ ತದನ್ಯೇಪಿ ಯನ್ಮಯೈತದುರೀತಂ ।
ನ ಸಮ್ಯಗ್ವಿವಿದುಃ ಪಶ್ಚಾದ್ಬ್ರಹ್ಮಾಹಂ ಬ್ರಹ್ಮಣಿ ಸ್ಥಿತಃ ॥ ೧೨ ॥
ಪ್ರಾಣೇ ಪ್ರಾಣೋ ಗಿರೌ ವಾಣೀ ಸರಸ್ವತ್ಯಾಂ ಸರಸ್ವತೀ ।

ತದಾ–(ಹೀಗೆ ಹೇಳಿದ ಎಲ್ಲ ವಿದ್ಯೆಗಳನ್ನೂ) ನಾನು ಉಪದೇಶಿಸಿದಾಗ, ಬ್ರಹ್ಮಾ–ಬ್ರಹ್ಮದೇವನೂ, ಅನ್ಯೇಪಿ–ಇತರರೂ ಸಹ, ಮಯಾ–ನನ್ನಿಂದ, ಯತ್–ಯಾವಾಗ, ಏತತ್–ಈ ಶಾಸ್ತ್ರಗಳ (ವೇದಾದಿಗಳ), ತತ್–ಅದನ್ನು (ಉಪದೇಶವನ್ನು), ಸಮ್ಯಕ್–ಪೂರ್ಣವಾಗಿ, ನ ವಿವಿದುಃ–ತಿಳಿಯಲಿಲ್ಲವೋ, ಪಶ್ಚಾತ್–ನಂತರ, ಅಹಂ–ನಾನು, ಬ್ರಹ್ಮಾ–ಬ್ರಹ್ಮದೇವನ ರೂಪದಿಂದ, ಬ್ರಹ್ಮಣಿ–ಬ್ರಹ್ಮನಲ್ಲಿ, ಸ್ಥಿತಃ–ನಿಂತೆನು (ವಿಶೇಷ ಪ್ರಸನ್ನನಾಗಿ ಅಧಿಷ್ಠಾನಭೂತನಾದ ಬ್ರಹ್ಮನಿಗೆ ನನ್ನ ಉಪದೇಶದಿಂದ ಯಥಾಯೋಗ್ಯ ಪೂರ್ಣಜ್ಞಾನವಾಗಲೆಂಬ ಇಚ್ಛಾಯುಕ್ತನಾದೆನು) ; ಪ್ರಾಣೇ–ವಾಯುದೇವನಲ್ಲಿ, ಪ್ರಾಣಃ–ಪ್ರಾಣನಾಮಕರೂಪದಿಂದಲೂ, ಗಿರೌ–ಭಾರತೀದೇವಿಯಲ್ಲಿ, ವಾಣೀ – ವಾಣೀರೂಪದಿಂದಲೂ, ಸರಸ್ವತ್ಯಾಂ – ಸರಸ್ವತೀದೇವಿಯಲ್ಲಿ, ಸರಸ್ವತೀ–ಸರಸ್ವತೀರೂಪದಿಂದಲೂ (ಅಹಂ ಸ್ಥಿತಃ–ನಾನೇ ನಿಂತೆನು).

ನಾನು ಹೀಗೆ ಬ್ರಹ್ಮಾದಿಗಳಿಗೆ ಬೋಧಿಸಿದ ವೇದವೇದಾಂಗಗಳ ಅರ್ಥವಿಶೇಷಗಳನ್ನು ಬ್ರಹ್ಮನು ಗ್ರಹಿಸಲಿಲ್ಲ; (ಇತರರೂ ಹಾಗೆಯೇ ಎಂದು ಹೇಳಲೇನು !) ; ನಂತರ ನಾನು ಅವರ ವಿಶೇಷ ಜ್ಞಾನಸಿದ್ಧಿಗಾಗಿ, ಬ್ರಹ್ಮನಲ್ಲಿ ಬ್ರಹ್ಮರೂಪದಿಂದಲೂ, ಪ್ರಾಣನಲ್ಲಿ ಪ್ರಾಣರೂಪದಿಂದಲೂ, ಭಾರತಿಯಲ್ಲಿ ವಾಣೀರೂಪದಿಂದಲೂ, ಸರಸ್ವತಿಯಲ್ಲಿ ಸರಸ್ವತೀರೂಪದಿಂದಲೂ, ಸ್ಥಿತನಾದೆನು[1] (೧೨). ಬ್ರಹ್ಮವಾಯು ಮೊದಲಾದವರಲ್ಲಿ ಪ್ರವಿಷ್ಟನಾಗಿ ಸ್ಥಿತನಾಗಿರುವಂತೆ, ಪುರುಷದೇಹಗತರಾದ ಸಕಲಜೀವರಲ್ಲಿ, ಎಂದರೆ, ದೇವತೆಗಳು, ಋಷಿಗಂಧರ್ವರು, ಮುಂದೆ ಸೃಷ್ಟರಾಗುವ ಜೀವರಿಗೆ ಬೀಜಭೂತರಾದ

---

1 ಆಯಾ ರೂಪಗಳಿಂದ ಅಂತರ್ಯಾಮಿಯಾಗಿ, ಶ್ರೀವಿಷ್ಣುವು ಬ್ರಹ್ಮಾದಿಗಳಲ್ಲಿದ್ದನು. ಸ್ವಯೋಗ್ಯಪೂರ್ಣಜ್ಞಾನವು ಅವರಿಗೆ ದೊರೆಯಲೆಂಬ ಇಚ್ಛಾರೂಪ ಪ್ರಸನ್ನತೆಯಿಂದ ಯುಕ್ತನಾಗಿ, ಮುಂದೆ ಸ್ಥಿತನಾದನೆಂದರ್ಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತಃ ಪುರುಷದೇಹೇ ತು ಯೇ ಮಯಾ ನಿಹಿತಾಃ ಪುರಾ || ೧೩ ||

ದೇವಾಶ್ಚ ಋಷಿಗಂಧರ್ವಾ ನಾನಾದೇಹಧರಾಶ್ಚ ಯೇ |
ಜಗತಾಂ ಬೀಜಭೂತಾ ಯೇ ಪಶವಃ ಕ್ರಿಮಿಕೀಟಕಾಃ || ೧೪ ||

ವೃಕ್ಷಗುಲ್ಮಲತಾದ್ಯಾಶ್ಚ ತೇಷು ತೇಷು ಪ್ರವಿಷ್ಟವಾನ್ |
ತೈಸ್ತೈರೂಪೈಃ ಸ್ವಯಮಹಂ ತತ್ತನ್ನಾಮಾಖಿಲಾಶ್ರಯಃ || ೧೫ ||

ತತಃ–ಆ ನಂತರ, ಪುರುಷದೇಹೇ ತು-ಪುರುಷದೇಹದಲ್ಲಿಯಾದರೋ (ನನ್ನಿಂದ ಸೃಷ್ಟವಾದ ಪುರುಷದೇಹದಲ್ಲಿ), ಮಯಾ–ನನ್ನಿಂದ, ಪುರಾ–ಮೊದಲು, (ನನ್ನಿಂದ ಸೃಷ್ಟವಾದ ನಾನಾಯೋನಿದೇಹಗಳನ್ನು ಪುರುಷ ದೇಹದಲ್ಲಿ ಪ್ರವೇಶಿಸಿ, ಆ ಪುರುಷದೇಹವನ್ನು ನುಂಗಿ, ಮಾಯಾದೇವಿಯಲ್ಲಿ ಬ್ರಹ್ಮನನ್ನು ಹುಟ್ಟಿಸುವ ಮೊದಲು), ನಿಹಿತಾಃ – ಸ್ಥಾಪಿಸಲ್ಪಟ್ಟ (ಹಾಕಲ್ಪಟ್ಟ), ದೇವಾಃ – ದೇವತೆಗಳು, (ದೇವಾದಿ ಯೋನಿಗಳ ದೇಹ ಗಳೊಂದಿಗೆ, ಸೃಷ್ಟರಾಗಬೇಕಾದ ದೇವಾದಿ ಸಕಲ ಜೀವರನ್ನೂ ಆ ಪುರುಷಾ ಕೃತಿಯಲ್ಲಿ ಪ್ರವೇಶಗೊಳಿಸಿದ್ದನಷ್ಟೆ),[1] ಚ–ಮತ್ತು, ಋಷಿಗಂಧರ್ವಾಃ–ಋಷಿ ಗಳು ಮತ್ತು ಗಂಧರ್ವರೂ, ಚ–ಮತ್ತು, ಯೇ–ಯಾರು, ಜಗತಾಂ ಬೀಜ ಭೂತಾಃ–ಮುಂದೆ ಹುಟ್ಟುವ ಜೀವರಿಗೆ ಬೀಜಪ್ರಾಯರಾಗಿರುವರೋ, ಚ–ಮತ್ತು, ಯೇ–ಯಾರು, ನಾನಾದೇಹಧರಾಃ–ವಿವಿಧವಾದ ದೇಹಗಳನ್ನು ಹೊಂದಿದ್ದರೋ, (ಆ) ಪಶವಃ–ಪಶುಗಳು, ಕ್ರಿಮಿಕೀಟಕಾಃ–ಕ್ರಿಮಿಕೀಟ ಗಳೂ, ಚ – ಮತ್ತು, ವೃಕ್ಷಗುಲ್ಮಲತಾದ್ಯಾಃ – ವೃಕ್ಷಗುಲ್ಮಲತಾದಿಗಳು, ತೇಷುತೇಷು – ತತ್ತದ್ದೇಹಗತಜೀವರಲ್ಲಿ (ಆಯಾ ಯೋನಿಗತಜೀವರಲ್ಲಿ), ಪ್ರವಿಷ್ಟವಾನ್–ಪ್ರವಿಷ್ಟನಾದ (ಅಂತರ್ಯಾಮಿಯಾದ), ಸ್ವಯಂ ಅಹಂ–ನಾನೇ ಸಾಕ್ಷಾತ್ತಾಗಿ, ತೈಃ ತೈಃ ರೂಪೈಃ – ಆಯಾ ರೂಪಗಳಿಂದ,

---

(ಬೀಜಗಳಂತಿರುವ), ನಾನಾದೇಹಗಳನ್ನು ಧರಿಸಿದ್ದ, ಪಶು, ಕ್ರಿಮಿಕೀಟಾದಿ ಗಳು, ವೃಕ್ಷಗುಲ್ಮಲತಾದಿಗಳು ಮೊದಲಾದವರಲ್ಲಿ, ಆಯಾ ರೂಪಗಳಿಂದ ಆಯಾ ನಾಮಗಳುಳ್ಳವನಾಗಿ, ಸರ್ವಾಶ್ರಯರೂಪಗಳಿಂದ ಪ್ರವಿಷ್ಟ ನಾದೆನು (೧೩–೧೫). ಹೀಗೆ ಸ್ವತಂತ್ರನಾಗಿ ಸರ್ವಾಶ್ರಯನಾದ ನಾನು

[1] ಅಧ್ಯಾಯ ೨, ಶ್ಲೋಕಗಳು ೫೩ರಿಂದ ೫೭ರವರೆಗೆ ನೋಡಿಕೊಳ್ಳಿರಿ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ತತ್ತನ್ನಾಮಾ–ಆಯಾ ನಾಮುಗಳುಳ್ಳವನಾಗಿದ್ದು, ಅಖಿಲಾಶ್ರಯಃ–ಸರ್ವಾಶ್ರಯನಾದೆನು (ಆಯಾ ದೇಹಗಳಿಗೂ ತದ್ಗತಜೀವರಿಗೂ ಸರ್ವಪ್ರಕಾರದಿಂದ ನಾನೇ ಸ್ವತಂತ್ರನಾದ ಆಶ್ರಯನು).

ಅತೋ ಮಾಂ ಸರ್ವನಾಮಾನಂ ತಥಾ ಸರ್ವಸ್ವರೂಪಿಣಂ ।
ಸರ್ವೇ ವೇದಾ ವದಂತೀ ಮೇ ತಥಾ ತೈಸ್ತೈಶ್ಚ ನಾಮಭಿಃ ॥ ೧೬ ॥

ಅತಃ– ಈ ಕಾರಣದಿಂದ (ಹೀಗೆ ನಾನು ಪ್ರವಿಷ್ಟನಾದ್ದರಿಂದ), ಮಾಂ–ನನ್ನನ್ನು, ಸರ್ವನಾಮಾನಂ–ಎಲ್ಲ ನಾಮುಗಳಿಂದಲೂ (ಸರ್ವನಾಮುಗಳುಳ್ಳವನೆಂದೂ), ತಥಾ-ಹಾಗೂ, ಸರ್ವಸ್ವರೂಪಿಣಂ-ಸರ್ವರೂಪಗಳುಳ್ಳವನೆಂದೂ, ತಥಾ–ಮತ್ತು, ತೈಃ ತೈಃ–ಆಯಾ, ನಾಮಭಿಃ ಚ–ನಾಮುಗಳಿಂದಲೇ, ಇಮೇ–ಈ, ಸರ್ವೇ ವೇದಾಃ–ಎಲ್ಲ ವೇದಗಳೂ, ವದಂತಿ–ಹೇಳುತ್ತವೆ (ಆಯಾ ಪ್ರಾಣಿಗಳಿಂದಾಗಲಿ–ಜೀವರಿಂದಾಗಲಿ, ಅವರ ದೇಹಗಳಿಂದಾಗಲಿ ಅಭಿನ್ನವಾದ ಸ್ವರೂಪವುಳ್ಳವನೆಂದಲ್ಲ—ಅಲ್ಲಲ್ಲಿ ಆಯಾ ನಾಮರೂಪಗಳಿಂದ ತಾನೇ ತನ್ನ ಬಹುರೂಪಗಳಿಂದ ಪ್ರವಿಷ್ಟನಾಗಿರುವುದರಿಂದ ಸರ್ವನಾಮ, ಸರ್ವಸ್ವರೂಪ ಇತ್ಯಾದಿಯಾಗಿ ವೇದಗಳು ನಿರೂಪಿಸುತ್ತವೆ).

ತತ್ತತ್ಸ್ವರೂಪಂ ಮಾಮೇವ ಪ್ರಣಮಂತಿ ಸ್ತುವಂತಿ ಚ ।
ಮುಖ್ಯತೋ ವೇದವೇದ್ಯೋಽಹಂ ಗೌಣವೃತ್ತ್ಯಾ ತಥಾಪರೇ ॥ ೧೭ ॥
ವಿದ್ವಾಂಸಸ್ತದ್ವಿಜಾನಂತಿ ಮಮ ವಿಷ್ಣೋಃ ಪರಂ ಪದಂ ।
ಸ್ವಾತಂತ್ರ್ಯಪಾರತಂತ್ರ್ಯಾಭ್ಯಾಂ ದಿವಿ ಚಕ್ಷುರಿವಾತತಂ ॥ ೧೮ ॥

ವಿದ್ವಾಂಸಃ–ಜ್ಞಾನಿಗಳು, ತತ್ತತ್ಸ್ವರೂಪಂ–ಆಯಾ ವಸ್ತುಗತವಾದ ಆಯಾ ವಸ್ತುಸದೃಶಸ್ವರೂಪವುಳ್ಳವನಾದ, ಮಾಂ ಏವ – ನನ್ನನ್ನೇ,

---

ಸರ್ವರಲ್ಲಿ ಪ್ರವಿಷ್ಟನಾಗಿರುವ ಕಾರಣದಿಂದಲೇ, ಈ ಎಲ್ಲ ವೇದಗಳೂ ನನ್ನನ್ನು ಸರ್ವನಾಮುಗಳಿಂದ ಕರೆಯುತ್ತವೆ. ಆ ದೇವಋಷಿಗಂಧರ್ವಾದಿ ಸರ್ವರಲ್ಲಿ ಆಯಾ ನಾಮುಗಳಿಂದ, ಆಯಾ ರೂಪಗಳಿಂದ ನಾನೇ ಪ್ರವೇಶ ಮಾಡಿರುವುದರಿಂದ, ಹಾಗೆ ವೇದಗಳು ನನ್ನನ್ನು ಸರ್ವನಾಮ, ಸರ್ವಸ್ವರೂಪನೆಂದು ನಿರೂಪಿಸುತ್ತವೆ—ಅವುಗಳಿಂದ ಅಭಿನ್ನವಾದ ಸ್ವರೂಪವುಳ್ಳವನಾದ್ದರಿಂದ ಅಲ್ಲ (೧೬). ಹೀಗೆ ಸರ್ವವಸ್ತುಗತನೂ ಸರ್ವನಾಮನೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಣಮಂತಿ–ನಮಸ್ಕರಿಸುತ್ತಾರೆ, ಸ್ತುವಂತಿ ಚ–ಸ್ತುತಿಸುತ್ತಾರೆ; ಮುಖ್ಯತಃ–ಮುಖ್ಯವಾಗಿ, ವೇದವೇದ್ಯಃ–ವೇದಗಳಿಂದ ತಿಳಿಯಲ್ಪಡತಕ್ಕವನು (ಹೇಳಲ್ಪಡುವವನು), ಅಹಂ–ನಾನು, ತಥಾ–ಹಾಗೆಯೇ (ವೇದವೇದ್ಯರಾದವರು), ಅಪರೇ–ದೇವಾದಿ ಇತರರು, ಗೌಣವೃತ್ತ್ಯಾ–ಅಮುಖ್ಯವೃತ್ತಿಯಿಂದ (ಪ್ರತಿಪಾದ್ಯರು); ತತ್ – ಈ (ಮುಖ್ಯ ಗೌಣವೃತ್ತಿಗಳಿಂದ ಪ್ರತಿಪಾದ್ಯರೆಂಬ) ರಹಸ್ಯವನ್ನು, ವಿದ್ವಾಂಸಃ–ವೇದಜ್ಞಾನಿಗಳು, ವಿಜಾನಂತಿ–ತಿಳಿಯುತ್ತಾರೆ; ಸ್ವಾತಂತ್ರ್ಯಪಾರತಂತ್ರ್ಯಾಭ್ಯಾಂ–ನನ್ನ (ಪರಮಾತ್ಮನ) ಸ್ವತಂತ್ರತ್ವ ಮತ್ತು ಅನ್ಯರ ಪರಾಧೀನತ್ವಗಳಿಂದ, ವಿಷ್ಣೋಃ–ನನ್ನ (ವೇದಮುಖ್ಯಪ್ರತಿಪಾದ್ಯನಾದ ವಿಷ್ಣುವಿನ), ಚಕ್ಷುಃ–ಸೂರ್ಯನು, ದಿವಿ–ಅಂತರಿಕ್ಷದಲ್ಲಿ, ಆತತಂ ಇವ–ವ್ಯಾಪ್ತನಾಗಿರುವಂತೆ, ಪರಂಪದಂ–(ಸರ್ವತ್ರ ವ್ಯಾಪ್ತವಾದ) ಶ್ರೇಷ್ಠ ಸ್ವರೂಪವನ್ನು, (ವಿಜಾನಂತಿ–ತಿಳಿಯುತ್ತಾರೆ).

ಸರ್ವಸ್ವರೂಪನೂ ಆದ ನನ್ನನ್ನು (ತತ್ತದ್ವಸ್ತುಗತನೂ ಆಯಾ ವಸ್ತು ಸದೃಶರೂಪಗಳುಳ್ಳವನೂ ಆದ ನನ್ನನ್ನೇ), ಎಲ್ಲ ವೇದಗಳೂ ಮುಖ್ಯ ವೃತ್ತಿಯಿಂದ[1] ಪ್ರತಿಪಾದಿಸುತ್ತವೆ; ಇತರ ದೇವತೆಗಳು (ವೇದಭಾಗಗಳಿಂದ)

---

[1] ಶಬ್ದಗಳಿಂದ ಬೋಧ್ಯವಾದ ಅರ್ಥಗಳನ್ನು ತಿಳಿಸುವ ಶಬ್ದಗಳ ವ್ಯಾಪಾರವನ್ನು 'ಶಬ್ದಪ್ರವೃತ್ತಿ' ಎನ್ನುತ್ತಾರೆ. ಶಬ್ದಪ್ರವೃತ್ತಿಗಳು ನಾನಾ ಪ್ರಕಾರವಾಗಿರುತ್ತವೆ. ಪರಮಮುಖ್ಯವೃತ್ತಿಯಿಂದ ಎಲ್ಲ ಶಬ್ದಗಳೂ ಪರಮಾತ್ಮನನ್ನೇ ತಿಳಿಸುತ್ತವೆ; ಶಬ್ದಗಳು ಭಗವದಿತರ ವಸ್ತುವಾಚಕಗಳಾದಾಗ, ಮುಖ್ಯವೃತ್ತಿ ಮೊದಲಾದ ನಾಮಗಳಿಂದ ಕರೆಯಲಾಗುವ ವೃತ್ತಿಗಳುಳ್ಳವೆಂದು ಹೇಳಲಾಗುತ್ತದೆ. ಮುಖ್ಯವೃತ್ತಿಯು, ಯೋಗ, ರೂಢಿಯೋಗ ಮತ್ತು ರೂಢಿ ಎಂದು ಮೂರು ವಿಧ. ಲಕ್ಷಣಾವೃತ್ತಿ, ಗೌಣೀ, ಉಪಚಾರ, ರೂಢೋಪಚಾರ, ರೂಢಿಲಕ್ಷಣ ಎಂದು ಕರೆಯಲಾಗುವ ಶಬ್ದವೃತ್ತಿಗಳೂ ಇವೆ. ಪರಮಮುಖ್ಯವೃತ್ತಿಯನ್ನು ಬಿಟ್ಟು ಇತರ ವೃತ್ತಿಗಳನ್ನು ಅಮುಖ್ಯವೃತ್ತಿಯೆಂದು ಕರೆಯುವುದೂ ಉಂಟು. ಪ್ರಕೃತ ಗೌಣೀವೃತ್ತಿಯೆಂಬುದು ಅಮುಖ್ಯವೃತ್ತಿಗಳಲ್ಲಿ ಒಂದೆಂದು ತಿಳಿಯಬಹುದು. ಮುಖ್ಯವೃತ್ತಿಯಿಂದ ಹೇಳಲ್ಪಡುವ ವಸ್ತುವಿಗೆ ಸದೃಶವಾದ ವಸ್ತುವಿನಲ್ಲಿ ಅದೇ ಶಬ್ದವನ್ನು ಪ್ರಯೋಗಿಸುವುದು ಗೌಣವೃತ್ತಿಯು; ತೇಜಸ್ವಿಯಾದ ವಟುವನ್ನು 'ಅಗ್ನಿ' ಎಂದು ಕರೆಯುವಂತೆ, ವಿವರಗಳನ್ನು ಗುರುಮುಖದಿಂದ ಶಾಸ್ತ್ರವನ್ನು ಅಭ್ಯಸಿಸಿ ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತೋ ಮನನಶೀಲಾಸ್ತೇ ಶ್ರುತಸ್ಯಾರ್ಥಸ್ಯ ಯುಕ್ತಿಭಿಃ ।
ನಿಶ್ಚಿತ್ಯ ಧ್ಯಾನಧಾರಾಯಾಂ ಜಾಯಂತೇ ಮಗ್ನಮಾನಸಾಃ ॥ ೧೯ ॥

ತತಃ—ನಾನೇ ಸಕಲ ವೇದಗಳಿಂದ ಮುಖ್ಯವೇದ್ಯನೆಂದು ತಿಳಿದನಂತರ, ತೇ—ಆ ವಿದ್ವಾಂಸರು (ವೇದಾಧ್ಯಯನ ಸಂಪನ್ನರು), ಮನನಶೀಲಾಃ—ವಿಮರ್ಶಾತ್ಮಕಸ್ವಭಾವದವರಾದ್ದರಿಂದ, ಶ್ರುತಸ್ಯ-ಶ್ರವಣಮಾಡಿದ, ಅರ್ಥಸ್ಯ-ಅರ್ಥದ (ಗುರೂಪದಿಷ್ಟ ಅರ್ಥಗಳನ್ನು), ಯುಕ್ತಿಭಿಃ-ನಾನಾ ಯುಕ್ತಿಗಳಿಂದ, ನಿಶ್ಚಿತ್ಯ – ನಿಶ್ಚಯಿಸಿಕೊಂಡು, ಧ್ಯಾನಧಾರಾಯಾಂ – ಏಕಾಗ್ರಮನೋಧಾರೆಯಲ್ಲಿ, ಮಗ್ನಮಾನಸಾಃ—ಮುಳುಗಿದ ಮನಸ್ಸುಳ್ಳವರು, ಜಾಯಂತೇ—ಆಗುತ್ತಾರೆ.

ಗೌಣವೃತ್ತಿಯಿಂದ ಪ್ರತಿಪಾದಿಸಲ್ಪಡುತ್ತಾರೆ ; ಹೀಗೆ ಪರಮಮುಖ್ಯವೃತ್ತಿಯಿಂದ ವೇದವೇದ್ಯನೆಂದು ವೇದಜ್ಞಾನಿಗಳು ನನ್ನನ್ನು ಸ್ತುತಿಸುತ್ತಾರೆ—ನಮಸ್ಕರಿಸುತ್ತಾರೆ ; ವೇದಪ್ರತಿಪಾದ್ಯರೆಂಬ ಇತರ ದೇವತೆಗಳು ಗೌಣವೃತ್ತಿಯಿಂದ ಪ್ರತಿಪಾದ್ಯರು ; ಸ್ವಾತಂತ್ರ್ಯಪಾರತಂತ್ರ್ಯ ಲಕ್ಷಣಗಳಿಂದ—ಸೂರ್ಯಪ್ರಕಾಶವು ಅಂತರಿಕ್ಷವನ್ನು ವ್ಯಾಪಿಸಿರುವಂತೆ—ಸರ್ವತ್ರವ್ಯಾಪ್ತನಾದ, ಆದ್ದರಿಂದಲೇ ವಿಷ್ಣುಶಬ್ದವಾಚ್ಯನಾದ ನನ್ನ ಸರ್ವೋತ್ಕೃಷ್ಟಸ್ವರೂಪವನ್ನು ವಿದ್ವಾಂಸರು, ನಿಶ್ಚಯಿಸಿ ತಿಳಿದು ಏಕಮಾತ್ರ ಸ್ವತಂತ್ರವಸ್ತುವಾದ ನನ್ನನ್ನೇ ಶರಣುಹೊಂದುತ್ತಾರೆ (೧೭—೧೮). ಸಕಲ ವೇದಗಳು ನನ್ನನ್ನೇ ಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೆಂದು ಗುರುಮುಖೇನ ಶ್ರವಣಮಾಡಿದ ಆ ವಿದ್ವಾಂಸರು, ಹಾಗೆ ಶ್ರವಣಮಾಡಿದ ಅರ್ಥಗಳ ನಿಶ್ಚಯವನ್ನು ಯುಕ್ತಿಗಳಿಂದ ವಿಮರ್ಶಿಸಿ ತಿಳಿದು (ಮನನದಿಂದ ನಿರ್ಣಯವನ್ನು ದೃಢಪಡಿಸಿಕೊಂಡು), ಧ್ಯಾನಧಾರೆಯಲ್ಲಿ ಮಗ್ನರಾಗುತ್ತಾರೆ[1] (೧೯). ಧ್ಯಾನಮಗ್ನವಾದ

---

[1] ಶ್ರವಣ—ಗುರುಮುಖದಿಂದ ಅರ್ಥಜ್ಞಾನಪೂರ್ವಕ ವೇದಗಳನ್ನು ಕೇಳುವುದು ; ಮನನ—ಶ್ರವಣಮಾಡಿದ ಪ್ರಮೇಯಗಳ ನಿಶ್ಚಯವನ್ನು ಯುಕ್ತಿಗಳಿಂದ ವಿಮರ್ಶಿಸಿ ತಿಳಿಯುವುದು ; ಧ್ಯಾನ—ನಿಶ್ಚಯಜ್ಞಾನದಿಂದ ಭಗವಂತನನ್ನು ಚಿಂತಿಸುವುದು (ಭಗವನ್ಮಹಿಮೆಗಳ ಜ್ಞಾನಸಹಿತವಾಗಿ ಭಗವದ್ರೂಪವನ್ನು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಿಸಿಕೊಳ್ಳುವುದು). ನಿರಂತರ ಚಿಂತನೆಯು ಧ್ಯಾನ—ಮಧ್ಯೆ ಮಧ್ಯೆ ಖಂಡಿತವಾದ (ವಿಚ್ಛಿತ್ತಿಯುಳ್ಳ) ಚಿಂತನವು 'ಧಾರಣ'ವೆನಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯತೋ ಯತೋ ಮನೋ ಯಾತಿ ತೇಷಾಂ ಬ್ರಹ್ಮನ್ ಸದೈವ ಹಿ ।
ಧ್ಯಾಯಂತಿ ತತ್ರ ತತ್ರೈವ ಸ್ವಾತಂತ್ರ್ಯಾದಿಗುಣೈರ್ಯುತಂ ॥ ೨೦ ॥

ಯತಃ ಯತಃ – ಹೇಗೆ ಹೇಗೆ (ಯಾವ ಯಾವ ಅನ್ಯವಸ್ತುವಿನಲ್ಲಿ), ತೇಷಾಂ–(ಧ್ಯಾನಿಸುವವರ) ಅವರ, ಮನಃ–ಮನಸ್ಸು, ಯಾತಿ–ಹೋಗುತ್ತದೆಯೋ, ಬ್ರಹ್ಮನ್–ಹೇ ಬ್ರಹ್ಮದೇವ!, ಸದಾ ಏವ–ಯಾವಾಗಲೂ, ತತ್ರ ತತ್ರ ಏವ-ಅಲ್ಲಲ್ಲಿಯೇ (ಆಯಾ ಸ್ಥಾನಗಳಲ್ಲಿ), ಸ್ವಾತಂತ್ರ್ಯಾದಿಗುಣೈಃ-ಸ್ವಾತಂತ್ರ್ಯವೇ ಮೊದಲಾದ ಗುಣಗಳಿಂದ, ಯುತಂ–ಕೂಡಿದ (ಪೂರ್ಣನಾದ) ನನ್ನನ್ನು, ಧ್ಯಾಯಂತಿ–ಧ್ಯಾನಮಾಡುತ್ತಾರೆ.

ಏವಂ ಧ್ಯಾನಪರೀಪಾಕೇ ಜಾತೇ ತೇಷಾಂ ಮಹಾತ್ಮನಾಂ ।
ಸ್ವರೂಪಯೋಗ್ಯಂ ಯತ್ತೇಷಾಂ ತಾದೃಶಂ ರೂಪಮಾಸ್ಥಿತಃ ॥೨೧॥

ಮನಸ್ಸಿನಿಂದ ಭಗವಂತನನ್ನು ಚಿಂತಿಸುತ್ತಿರಲು, ಚಂಚಲವಾದ ಮನಸ್ಸು (ಭಗವದ್ರೂಪವನ್ನೂ, ಆತನ ಗುಣಗಳನ್ನೂ ಚಿಂತಿಸದೇ) ಅನ್ಯತ್ರ ಹೋಗುತ್ತದೆ. ಅದು ಹೇಗೆ ಹೇಗೆ ಅನ್ಯತ್ರ ಧಾವಿಸುತ್ತದೆಯೋ[1] ಹಾಗೆ ಹಾಗೆ (ಅಲ್ಲಲ್ಲಿ) ಸ್ವಾತಂತ್ರ್ಯಾದಿ ಗುಣಪೂರ್ಣನಾದ, ನನ್ನನ್ನೇ ಚಿಂತಿಸುತ್ತ, ಧ್ಯಾನವಂತರು, ಅಪ್ರಯತ್ನವಾಗಿ ತಮ್ಮ ಮನಸ್ಸು ನನ್ನಲ್ಲಿಯೇ ನಿಲ್ಲುವುದೆಂಬ 'ಸಮಾಧಿ'ಸ್ಥಿತಿಯನ್ನು ಹೊಂದುತ್ತಾರೆ (೨೦). ಹೀಗೆ ಧ್ಯಾನಪರಿಪಕ್ವತೆಯನ್ನು ಹೊಂದಿ, ಮನಸ್ಸನ್ನು ಸಮಾಧಿಯಲ್ಲಿ ನಿಲ್ಲಿಸಿದ ಅಧಿಕಾರಿ ಜೀವರಿಗೆ, ಅವರ ಸ್ವರೂಪಯೋಗ್ಯವಾದ ನನ್ನ ರೂಪವನ್ನು (ಆತನ ಬಿಂಬರೂಪವನ್ನು) ತೋರಗೊಡುತ್ತೇನೆ (ನನ್ನ ದಿವ್ಯದರ್ಶನವನ್ನೀಯುತ್ತೇನೆ); ಅಲ್ಲಿಂದ ಮುಂದೆ, ಆ ಭಕ್ತನ ಭಕ್ತಿಯಿಂದ ಪ್ರಸನ್ನನಾದ ನಾನು, ಸ್ವಭಾವತಃ ಅವ್ಯಕ್ತನಾದರೂ, ಆತನು ಧ್ಯಾನಿಸಿದಾಗಲೆಲ್ಲಾ, ಕೃಪೆಯಿಂದ, ವ್ಯಕ್ತನಾಗಿ

---

1 'ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಂ । ತತೋ ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್ ।' (ಗೀತಾ) ಎಂಬಲ್ಲಿ ಈ ಪ್ರಮೇಯದ ವಿಸ್ತಾರವನ್ನು ಕಾಣಬಹುದು. ಗೀತಾ ೬ನೇ ಅಧ್ಯಾಯ (ಧ್ಯಾನಯೋಗ) ವನ್ನು ನೋಡಿರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತ್ಯಕ್ಷವಿಷಯೋ ಹ್ಯೇಷಾಂ ಭವಾಮಿ ಕೃಪಯಾ ತತಃ ।
ಅವ್ಯಕ್ತೋ ವ್ಯಕ್ತತಾಂ ಯಾಮಿ ತದ್ಭಕ್ತ್ಯಾ ತುಷ್ಟಮಾನಸಃ ॥ ೨೨ ॥

ಏವಂ-ಹೀಗೆ, ಧ್ಯಾನಪರೀಪಾಕೇ-ಧ್ಯಾನದ ಪರಿಪಕ್ವತೆಯು (ಮನಸ್ಸಿನ ಸಮಾಧ್ಯವಸ್ಥೆಯು), ಜಾತೇ–ಉಂಟಾಗುತ್ತಿರಲು, ತೇಷಾಂ ಮಹಾತ್ಮನಾಂ– ಆ ಮಹಾತ್ಮರ, ಸ್ವರೂಪಯೋಗ್ಯಂ ಯತ್ – ಸ್ವರೂಪಯೋಗ್ಯವಾದುದು ಯಾವುದೋ (ಯಾವ ರೂಪವೋ), ತಾದೃಶಂ ರೂಪಂ–ಆ ವಿಧದ ರೂಪ ವನ್ನು (ಅಂತಿರುವ ರೂಪವನ್ನು), ಆಸ್ಥಿತಃ–ಹೊಂದಿದವನಾಗಿ, ತೇಷಾಂ– ಅವರಿಗೆ, ಪ್ರತ್ಯಕ್ಷವಿಷಯಃ – ಪ್ರತ್ಯಕ್ಷವಿಷಯನು (ದೃಷ್ಟಿಗೋಚರನು), ಭವಾಮಿ–ಆಗುತ್ತೇನೆ; ತತಃ–ಅಲ್ಲಿಂದ ಮುಂದೆ, ತದ್ಭಕ್ತ್ಯಾ–ಅವರ ಭಕ್ತಿ ಯಿಂದ, ತುಷ್ಟಮಾನಸಃ–ಸಂತುಷ್ಟನಾಗಿ, ಕೃಪಯಾ–(ಅವರ ಮೇಲಿನ) ಕೃಪೆಯಿಂದ, ಏಷಾಂ–ಈ ಅಪರೋಕ್ಷಜ್ಞಾನಿಗಳಿಗೆ (ನನ್ನ ಸಾಕ್ಷಾತ್ ದರ್ಶನ ವನ್ನು ಹೊಂದಿದ ಜ್ಞಾನಿಗಳಿಗೆ), ಅವ್ಯಕ್ತಃ–ಅವ್ಯಕ್ತನಾದ (ಯಾರಿಗೂ ಕಾಣದವನಾದ) ನಾನು, ವ್ಯಕ್ತತಾಂ–ವ್ಯಕ್ತತ್ವವನ್ನು (ಪ್ರತ್ಯಕ್ಷಗೋಚರತ್ವ ವನ್ನು), ಯಾಮಿ–ಹೊಂದುತ್ತೇನೆ.

ನ ಕಶ್ಚಿತ್ ಸ್ವೇಚ್ಛಯಾ ಮಾಂ ಯತ್ ದ್ರಷ್ಟುಮೀಶೋ ಹಿ ವಿದ್ಯತೇ।
ಅವ್ಯಕ್ತಸ್ತದಹಂ ಪ್ರೋಕ್ತೋ ಮದಿಚ್ಛಾತೋ ಯತೋಽಖಿಲಾಃ ॥

ದರ್ಶನವನ್ನು ಕೊಡುತ್ತೇನೆ—ಆತನ ಪ್ರತ್ಯಕ್ಷಕ್ಕೆ ವಿಷಯನಾಗುತ್ತೇನೆ[1] (೨೧–೨೨). ಯಾರೂ ತಮ್ಮ ಇಚ್ಛೆಯಂತೆ ನನ್ನನ್ನು ಕಾಣಲು ಸಮರ್ಥ ರಲ್ಲ—ಆದ್ದರಿಂದ ನಾನು 'ಅವ್ಯಕ್ತ'ನು; ಎಲ್ಲರೂ ನನ್ನ ಇಚ್ಛೆಯಿಂದಲೇ (ಇಚ್ಛಿಸಿ ಅವರಿಗೆ ನನ್ನ ರೂಪವನ್ನು ತೋರಗೊಟ್ಟರೆ ಮಾತ್ರ), ನನ್ನನ್ನು ಕಾಣುತ್ತಾರಾದ್ದರಿಂದ, ವೇದಗಳು ನನ್ನನ್ನು 'ವ್ಯಕ್ತ'ನೆಂದೂ ಹೇಳುತ್ತವೆ[2] (೨೩). ಪುರುಷನನ್ನು ಮೊದಲು ಮಹತ್ತತ್ವದಿಂದ ನಿರ್ಮಿಸಿ, (ತ್ರಿವಿಧ

---

1 ಇದೇ ಬ್ರಹ್ಮದರ್ಶನ, ಅಪರೋಕ್ಷಜ್ಞಾನ, ಬಿಂಬಾಪರೋಕ್ಷ ಇತ್ಯಾದಿ ಶಬ್ದ ಗಳಿಂದ ಹೇಳಲ್ಪಡುತ್ತದೆ. ಹೀಗೆ ಶ್ರೀವಿಷ್ಣುವಿನ ಸಾಕ್ಷಾತ್ಕಾರವನ್ನು ಹೊಂದಿ ದವನೇ ಮುಖ್ಯಾರ್ಥದಲ್ಲಿ ಜ್ಞಾನಿಯು (ಅಪರೋಕ್ಷಜ್ಞಾನಿಯು).

2 ಜ್ಞಾನಿಯು ಸಮಾಧಿಯಲ್ಲಿ ಶ್ರೀಹರಿಯನ್ನು ಕಾಣುವುದು, ಶ್ರೀಹರಿಯು ಇಚ್ಛಿಸಿ ಪ್ರತ್ಯಕ್ಷಗೋಚರನಾದರೆ ಮಾತ್ರ; ರಾಮಕೃಷ್ಣಾದಿ ಅವತಾರರೂಪಗಳೆಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಶ್ಯಂತಿ ಮಾಂ ತತೋ ವೇದೈರ್ಗೀಯೇಽಹಂ ವ್ಯಕ್ತ ಇತ್ಯಪಿ ।

ಯತ್ – ಯಾವ ಕಾರಣದಿಂದ, ಕಶ್ಚಿತ್ – ಯಾರೊಬ್ಬನೂ, ಸ್ವೇಚ್ಛಯಾ–ತನ್ನ ಇಚ್ಛೆಯಂತೆ (ಇಚ್ಛಾನುಸಾರವಾಗಿ), ಮಾಂ–ನನ್ನನ್ನು, ದ್ರಷ್ಟುಂ – ನೋಡುವುದಕ್ಕೆ, ಈಶಃ – ಸಮರ್ಥನು, ನ ವಿದ್ಯತೇ – ಇರುವುದಿಲ್ಲವೋ, ತತ್–ಆ ಕಾರಣದಿಂದ, ಅಹಂ–ನಾನು, ಅವ್ಯಕ್ತಃ–ಅವ್ಯಕ್ತನೆಂದು ಕರೆಯಲ್ಪಡುತ್ತೇನೆ; ಯತಃ–ಯಾವ ಕಾರಣದಿಂದ, ಅಖಿಲಾಃ–ಸರ್ವರೂ, ಮದಿಚ್ಛಾತಃ–ನನ್ನ ಇಚ್ಛೆಯಿಂದಲೇ (ಇಚ್ಛಿಸುವ ಮಾತ್ರವೇ), ಮಾಂ–ನನ್ನನ್ನು, ಪಶ್ಯಂತಿ–ನೋಡುತ್ತಾರೋ, ತತಃ–ಆ ಕಾರಣದಿಂದ, ಅಹಂ – ನಾನು, ವೇದೈಃ – ವೇದಗಳಿಂದ, ವ್ಯಕ್ತಃ – ವ್ಯಕ್ತನು, ಇತ್ಯಪಿ– ಹೀಗೆಂದೂ, ಗೀಯೇ–ಹೇಳಲ್ಪಡುತ್ತೇನೆ.

ಯತೋಽಹಮಖಿಲಂ ನ್ಯಸ್ಯ ಪುರುಷಸ್ಯ ಕಲೇವರೇ ॥ ೨೪ ॥
ಪ್ರಾಕೃತಾನ್ ಜೀವಸಂಘಾಂಶ್ಚ ಲಿಂಗದೇಹೇನ ಸಂಯುತಾನ್ ।
ವಾಸುದೇವೇನ ರೂಪೇಣ ತಾನ್ನಿಗೀರ್ಯ ವಿಸೃಷ್ಟವಾನ್ ॥ ೨೫ ॥
ಮಾಯಾಯಾಂ ಬೀಜರೂಪೇಣ ಯತಃ ಸಾ ತದ್ವ್ಯಜೀಜನತ್ ।
ಜಗತ್ಪಿತಾ ತತೋಽಹಂ ಸ್ಯೈ ಜಗನ್ಮಾತಾ ರಮಾ ತತಃ ॥ ೨೬ ॥

ಅಹಂಕಾರತತ್ವಗಳಿಂದ, ಇಂದ್ರಿಯಾಭಿಮಾನಿ ದೇವತೆಗಳು, ಇಂದ್ರಿಯಗಳು, ಪಂಚಭೂತಗಳು, ದೇವ, ಋಷಿ, ಗಂಧರ್ವ, ಮನುಷ್ಯ, ಪಶು, ಪಕ್ಷಿ, ಜಲಚರಾದಿ ನಾನಾ ಪ್ರಾಣಿದೇಹಗಳನ್ನೂ ಸೃಷ್ಟಿಮಾಡಿ), ಇಂದ್ರಿಯಾಭಿಮಾನಿ ದೇವತೆಗಳು, ಇತರ ಎಲ್ಲ ದೇಹಗಳಲ್ಲಿರಲು ಒಪ್ಪದೇ, ನಾನು ತೋರಿಸಿದ ಪುರುಷದೇಹವನ್ನು ಒಪ್ಪಿಕೊಂಡಿದ್ದರಿಂದ, ಆ ಸರ್ವವನ್ನೂ ಆ ಪುರುಷದೇಹದಲ್ಲಿ ಪ್ರವೇಶಿಸಿ, ಅದನ್ನು ವಾಸುದೇವರೂಪದಿಂದ ನುಂಗಿದೆನು; ನಂತರ ನನ್ನ ಮಾಯಾನಾಮಕ ಭಾರ್ಯಳಲ್ಲಿ ಗರ್ಭಾಧಾನಮಾಡಿ

ಲೋಕಕ್ಕೆಲ್ಲ ಗೋಚರಿಸುವುದೂ ಆತನ ಇಚ್ಛೆಯಿಂದಲೇ—ಆದರೆ ಎಲ್ಲರೂ ಅವತಾರ ರೂಪಗಳನ್ನು ಯಥಾರ್ಥವಾಗಿ (ಸಚ್ಚಿದಾನಂದಸ್ವರೂಪನೆಂದು) ತಿಳಿಯುವುದಿಲ್ಲ; ರೂಪವು ಪ್ರತ್ಯಕ್ಷಕ್ಕೆ ಎಲ್ಲರಿಗೂ ಗೋಚರಿಸುವುದೂ, ಅವ್ಯಕ್ತನಾದ ಶ್ರೀಹರಿಯು ಇಚ್ಛಿಸುವ ಮಾತ್ರದಿಂದಲೇ ಸರಿ—ಅನ್ಯಥಾ ಅಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯತಃ–ಯಾವ ಕಾರಣದಿಂದ, ಅಹಂ–ನಾನು, ಪುರುಷಸ್ಯ–(ನನ್ನಿಂದ ಸೃಷ್ಟವಾದ) ಪುರುಷನ (ಪುರುಷಾಕಾರದ), ಕಲೇವರೇ – ದೇಹದಲ್ಲಿ, ಪ್ರಾಕೃತಾನ್–ಪ್ರಕೃತಿ ನಿರ್ಮಿತಗಳಾದ ಇತರ ದೇಹಗಳನ್ನೂ, ಚ–ಮತ್ತು, ಲಿಂಗದೇಹೇನ – ಲಿಂಗದೇಹದಿಂದ, ಸಂಯುತಾನ್ – ಕೂಡಿರುವ, ಜೀವಸಂಘಾನ್–ಜೀವಗಣಗಳನ್ನೂ, ನ್ಯಸ್ಯ–ಸ್ಥಾಪಿಸಿ (ಇಟ್ಟು), ವಾಸು ದೇವೇನ ರೂಪೇಣ–ವಾಸುದೇವರೂಪದಿಂದ, ನಿಗೀರ್ಯ–(ಆ ಪುರುಷದೇಹ ವನ್ನು) ನುಂಗಿ, ತಾನ್–(ಹಾಗೆ ಒಳಗಿದ್ದ) ಎಲ್ಲರನ್ನೂ, ಮಾಯಾಯಾಂ– ಮಾಯಾನಾಮಕ ಲಕ್ಷ್ಮೀದೇವಿಯಲ್ಲಿ, ಬೀಜರೂಪೇಣ–(ಮುಂದಿನ ಸೃಷ್ಟಿಗೆ) ಬೀಜರೂಪರನ್ನಾಗಿ, ವಿಸೃಷ್ಟವಾನ್–ಸ್ಥಾಪಿಸಿದೆನೋ, ತತಃ–ಆ ಕಾರಣ ದಿಂದ, ಅಹಂ–ನಾನು, ಜಗತ್ಪಿತಾ–ಜಗತ್ತಿನ (ಸರ್ವರ) ತಂದೆಯು; ವೈ– ಹಾಗೆಯೇ, ಯತಃ–ಯಾವ ಕಾರಣದಿಂದ, ಸಾ–ಆ ಮಾಯಾದೇವಿಯು, ತತ್–ಆ ಜಗತ್ತನ್ನು (ಎಲ್ಲ ಯೋನಿಗಳ ಎಲ್ಲ ಜೀವರನ್ನೂ), ವ್ಯಜೀಜನತ್– (ನನ್ನಿಂದ) ಪ್ರಸವಿಸಿದಳೋ, ತತಃ–ಆ ಕಾರಣದಿಂದ, ರಮಾ–ಲಕ್ಷ್ಮೀ ದೇವಿಯು, ಜಗನ್ಮಾತಾ–ಜಗನ್ಮಾತೆಯು (ಸರ್ವರ ತಾಯಿಯು).

ಮಾಯಾಜನ್ಯಮಿದಂ ಸರ್ವಂ ಮಾಯಿಕಂ ಚ ತತಃ ಸ್ಮೃತಂ ।
ಜಂಗಮಾನಾಂ ಸ್ಥಾವರಾಣಾಮೇವಂ ಯೋನಿರ್ಭವೇದ್ರಮಾ ॥೨೭॥

ಅಹಂ ಬೀಜಪ್ರದಸ್ತತ್ರ ಸರ್ವೋತ್ಪತ್ತಿಸ್ತದೋಭವೇತ್ ।
ಏವಂ ಮೇ ಮಹಿಮಾನಂ ಯೋ ವಿಜಾನಾತಿ ಚ ಭಕ್ತಿಮಾನ್ ॥೨೮॥

ಮೊದಲು ಬ್ರಹ್ಮದೇವನನ್ನೂ, ನಂತರ ಕ್ರಮವಾಗಿ ಇತರರನ್ನೂ ಹುಟ್ಟಿಸಿ ದೆನು. ಆದ್ದರಿಂದ ನಾನೇ ಜಗತ್ಪಿತನು—ಮಾಯಾದೇವಿಯೇ ಜಗನ್ಮಾತೆಯು (೨೪–೨೬). ಚೇತನಾಚೇತನಾತ್ಮಕವಾದ ಜಗತ್ತೆಲ್ಲವೂ, ಮಾಯಾನಾಮಕ ಲಕ್ಷ್ಮೀದೇವಿಯಿಂದ ಹುಟ್ಟಿದ ಕಾರಣ, 'ಮಾಯಿಕ'ವೆಂದು ಹೇಳಲ್ಪಡು ತ್ತದೆ; ಜಗತ್ತಿನ ಉತ್ಪತ್ತಿಗೆ ಮಾಯಾದೇವಿಯೇ ಯೋನಿಯು (ಪ್ರಸವಿಸುವ ಸ್ತ್ರೀಯು—ಅಥವಾ ಕ್ಷೇತ್ರವು), ನಾನು ಆಕೆಯಲ್ಲಿ ಗರ್ಭಾಧಾನಮಾಡುವ ಪುರುಷನು—ಕ್ಷೇತ್ರದಲ್ಲಿ ಬೀಜವನ್ನು ಬಿತ್ತುವವನು; ಹೀಗೆ ನನ್ನಿಂದ ಮಾಯಾದೇವಿಯಲ್ಲಿ ಜಗತ್ತು ಹುಟ್ಟಿತೆಂಬ ಪ್ರಮೇಯವನ್ನು ಮನಗಂಡು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ ಏವ ಮಾಂ ಸ್ಫುಟಂ ಪಶ್ಯೇನ್ನ ಲಿಪ್ಯೇತ ತತಃ ಪರಂ ।
ಕ್ರಿಯಮಾಣೈಃ ಪುಣ್ಯಪಾಪೈರ್ಯಾನಿ ಸ್ಯುಃ ಸಂಚಿತಾನಿ ಚ ॥ ೨೯ ॥
ತಾನಿ ಮದ್ದರ್ಶನಾದೇವ ವಹ್ನಿಯೋಗಾದ್ಯಥೈಷಿಕಾಃ ।
ತತ್ಕ್ಷಣಾದ್ಭಸ್ಮತಾಂ ಯಾಂತಿ ಯಾನಿ ಸ್ಯುಃ ಫಲಿತಾನಿ ಚ ॥ ೩೦ ॥

ಸೃಷ್ಟಿಕರ್ತನು ನಾನೇ ಎಂಬ ನನ್ನ ಮಹಿಮೆಯು ಜ್ಞಾನಪೂರ್ವಕವಾಗಿ ನನ್ನಲ್ಲಿ ಭಕ್ತಿಯುಳ್ಳವನಾಗುತ್ತಾನೆಯೋ, ಅವನೇ ನನ್ನ ಪ್ರತ್ಯಕ್ಷ ದರ್ಶನವನ್ನು ಪಡೆಯುತ್ತಾನೆ; ನನ್ನ ದರ್ಶನವಾದಮೇಲೆ ಈ ಜ್ಞಾನಿಯು ಮಾಡುವ ಪುಣ್ಯಪಾಪರೂಪದ ಯಾವ ಕರ್ಮಗಳೂ ಆತನಿಗೆ ಲೇಪಿಸುವುದಿಲ್ಲ—ಅವುಗಳಿಂದ ಆತನು ಯಾವ ಪ್ರಕಾರದ ಮನೋವಿಕಾರವನ್ನೂ ಹೊಂದುವುದಿಲ್ಲ; ನನ್ನ ಸಾಕ್ಷಾತ್ಕಾರದಿಂದ, ಸಂಚಿತರಾಶಿಯ ಕರ್ಮಗಳು,[1] ಅಗ್ನಿಸ್ಪರ್ಶದಿಂದ ಹುಲ್ಲುಕಡ್ಡಿಗಳ ರಾಶಿಯು ತತ್ಕ್ಷಣದಲ್ಲಿ ದಗ್ಧವಾಗಿ ಬೂದಿಯಾಗುವಂತೆ, ಸುಟ್ಟುಹೋಗುತ್ತವೆ; ನನ್ನ ದರ್ಶನಕಾಲಕ್ಕೆ ಫಲವನ್ನು ಕೊಡಲಿಕ್ಕೆ ಆರಂಭವಾಗಿದ್ದ ಕರ್ಮಗಳ[2] ಶುಭಾಶುಭ ಫಲಗಳನ್ನು ಭೋಗಿಸಿ, ಜ್ಞಾನಿಯು

---

1 ಸಂಚಿತಕರ್ಮರಾಶಿಯಲ್ಲಿ ಪುಣ್ಯಪಾಪರೂಪದ ಉಭಯಕರ್ಮಗಳೂ ಇರುತ್ತವೆ. ಅಪರೋಕ್ಷಜ್ಞಾನದಿಂದ, ಸಂಚಿತರಾಶಿಯೊಳಗಿನ ಸರ್ವಪಾಪಕರ್ಮಗಳೂ, ಅನಿಷ್ಟಪುಣ್ಯಕರ್ಮಗಳೂ ದಹಿಸಿಹೋಗುತ್ತವೆ. ಇಷ್ಟಪುಣ್ಯಕರ್ಮಗಳು, ಕಾಮ್ಯ, ಅಕಾಮ್ಯಭೇದದಿಂದ ಎರಡು ವಿಧ. ಅಕಾಮ್ಯಪುಣ್ಯಗಳು ಅಪರೋಕ್ಷದರ್ಶನಕ್ಕೆ ಕಾರಣವಾಗಿ ದರ್ಶನದಲ್ಲಿ ಪರಿಸಮಾಪ್ತಿಗೊಳ್ಳುತ್ತವೆ; ಕಾಮ್ಯಪುಣ್ಯಗಳನ್ನು ಅಪರೋಕ್ಷಜ್ಞಾನಿಯು, ಇಚ್ಛಾನುಸಾರ ತನ್ನನ್ನು ಸೇವಿಸುವವರಿಗೆ ಕೊಡುವುದುಂಟು; ಪಾಪಗಳ ನಾಶವೆಂದರೆ, ಅವುಗಳ ಫಲರೂಪವಾದ ದುಃಖಾದಿಗಳು ಜ್ಞಾನಿಯ ಭೋಗಕ್ಕೆ ಬರದಿರುವುದು; ಆ ದುಷ್ಟಫಲಗಳು, ಆತನ ದ್ವೇಷಿಗಳಿಗೂ, ನಾಶವಾಗುವ ಪುಣ್ಯಫಲಗಳು ಬಂಧುಮಿತ್ರರಿಗೂ, ಯಥಾಯೋಗ್ಯವಾಗಿ ಸಲ್ಲುತ್ತವೆ.

2 ಅಪರೋಕ್ಷಜ್ಞಾನಿಯು ಪ್ರಾರಬ್ಧಕರ್ಮವನ್ನು ಭೋಗದಿಂದ ಕಳೆದುಕೊಳ್ಳುವ ಕಾಲದಲ್ಲಿ ಮಾಡುವ ಕರ್ಮಗಳು ಆಗಾಮಿಗಳೆನಿಸುತ್ತವೆ. ಆಗಾಮಿಕರ್ಮಗಳೂ ಜ್ಞಾನಿಗೆ ಲೇಪಿಸುವುದಿಲ್ಲ. ಭೋಗದಿಂದಲೇ ಕಳೆದುಕೊಳ್ಳಬೇಕಾದ ಪ್ರಾರಬ್ಧಕರ್ಮಕ್ಕೆ ವಿಶೇಷ ಹರಿಪ್ರಸಾದದಿಂದ ಉಪಮರ್ದವೂ ಉಂಟು. ಉಪಮರ್ದವೆಂದರೆ ಫಲದಲ್ಲಿ ಕಡಿಮೆಯಾಗುವುದು; ಫಲದ ತೀವ್ರತೆಯೂ ಕಡಿಮೆಯಾಗುತ್ತದೆ. ಕೆಲವು ಭಾಗದ ಫಲವನ್ನು ಭೋಗಿಸಿ ಅವಶಿಷ್ಟಭಾಗಕ್ಕೇ ಉಪಮರ್ದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ಮಾಣಿ ತಾನಿ ಭುಕ್ತ್ವೈವ ಶುಭಾಶುಭಫಲಾನಿ ವೈ ।
ಕೃತಕೃತ್ಯಾ ಭವೇಯುಸ್ತೇ ಬೋಧಯಂತಿ ಪರಾನಪಿ ॥ ೩೧ ॥

ಇದಂ ಸರ್ವಂ-ಈ ಜಗತ್ತೆಲ್ಲವೂ, ಮಾಯಾಜನ್ಯಂ-ಮಾಯಾನಾಮಕ ಲಕ್ಷ್ಮೀದೇವಿಯಿಂದ ಹುಟ್ಟಿದುದು ; ತತಃ–ಆ ಕಾರಣದಿಂದ, ಮಾಯಿಕಂ–ಮಾಯಿಕವೆಂದು (ಮಾಯಾನಿರ್ಮಿತವೆಂದು), ಸ್ಮೃತಂ–ಹೇಳಲ್ಪಡುತ್ತದೆ (ಮಾಯಾಜನ್ಯವೆಂದರೆ ಇಂದ್ರಜಾಲವೆಂದಾಗಲಿ, ಮಿಥ್ಯಾಭೂತವಾದುದೆಂದಾಗಲಿ, ಅಜ್ಞಾನಕಲ್ಪಿತವಾದುದೆಂದಾಗಲಿ ಅಲ್ಲ) ; ಜಂಗಮಾನಾಂ–ಚರ, ಮತ್ತು ಸ್ಥಾವರಾಣಾಂ–ಅಚರವಸ್ತುಗಳ (ಚೇತನಾಚೇತನರೂಪದ ಸಕಲ ಜಗತ್ತಿನ), ಯೋನಿಃ–ಉತ್ಪತ್ತಿಕಾರಣಳು (ಪ್ರಸವವಾಗುವಾಕೆಯು), ಏವಂ–ಹೀಗೆ, ರಮಾ–ಲಕ್ಷ್ಮೀದೇವಿಯು, ಭವೇತ್–ಆಗುತ್ತಾಳೆ ; ಅಹಂ–ನಾನು, ಬೀಜಪ್ರದಃ–ಗರ್ಭವನ್ನು ಉತ್ಪಾದಿಸುವ ತಂದೆಯು (ಸಸ್ಯಾದಿಗಳ ಉತ್ಪತ್ತಿಗೆ, ಬೀಜ ಮತ್ತು ಕ್ಷೇತ್ರಗಳಂತೆ ನಾನು ಮತ್ತು ರಮಾದೇವಿಯೂ ಇರುವೆವು) ; ತತಃ–ತಚ್ಛಬ್ದವಾಚ್ಯನಾದ ನನ್ನಿಂದ, ತತ್ರ–ಆ ಮಾಯಾ ನಾಮಕ ನನ್ನ ಭಾರ್ಯೆಯಲ್ಲಿ, ಸರ್ವೋತ್ಪತ್ತಿಃ–ಸಕಲ ಜಗತ್ತಿನ ಉತ್ಪತ್ತಿಯು, ಅಭವತ್–ಉಂಟಾಯಿತು ; ಯಃ–ಯಾರು, ಭಕ್ತಿಮಾನ್–(ನನ್ನಲ್ಲಿ) ಭಕ್ತಿಯುಳ್ಳವನಾಗಿ, ಮೇ–ನನ್ನ, ಮಹಿಮಾನಂ–ಮಹಿಮೆಯನ್ನು, ಏವಂ–ಹೀಗೆ, ವಿಜಾನಾತಿ–ತಿಳಿಯುವನೋ, ಸಃ ಏವ–ಆ ಅಧಿಕಾರಿಯೇ, ಮಾಂ–ನನ್ನನ್ನು, ಸ್ಫುಟಂ–ಸ್ಪಷ್ಟವಾಗಿ, ಪಶ್ಯೇತ್–ಕಾಣುತ್ತಾನೆ (ಸಾಕ್ಷಾತ್ ದರ್ಶನವನ್ನು ಹೊಂದುತ್ತಾನೆ) ; ತತಃಪರಂ–ಆ ಮುಂದೆ (ಅಪರೋಕ್ಷಜ್ಞಾನವಾದ ಮೇಲೆ), ಕ್ರಿಯಮಾಣೈಃ–ಮಾಡುವ, ಪುಣ್ಯಪಾಪೈಃ–ಪುಣ್ಯಪಾಪಕರ್ಮಗಳಿಂದ, ನ ಖಿದ್ಯೇತ – ದುಃಖಿಸುವುದಿಲ್ಲ (ಲಿಪ್ತನಾಗುವುದಿಲ್ಲ–ಯಾವ ಮನೋವಿಕಾರಗಳನ್ನು ಹೊಂದುವುದಿಲ್ಲ) ; ಚ-ಮತ್ತು, ಯಾನಿ ಸಂಚಿತಾನಿ-ಯಾವ ಸಂಚಿತಕರ್ಮಗಳು (ಕೂಡಿಬಿದ್ದಿರುವ ಕರ್ಮರಾಶಿಗಳು), ಸ್ಯುಃ-(ಭಗವದ್ದರ್ಶನಕ್ಕೆ ಪೂರ್ವದಲ್ಲಿ) ಯಾವುವು ಇದ್ದವೋ, ತಾನಿ – ಅವು,

---

ಮುಕ್ತನಾಗುತ್ತಾನೆ ; ಸ್ವಾನುಭವಸಿದ್ಧವಾದ ಹಿತನುಡಿಗಳಿಂದ ಸಾಧನೆಯಲ್ಲಿ ತೊಡಗಿರುವ (ಅಪರೋಕ್ಷ ದರ್ಶನವಾಗದಿರುವ) ಜೀವರನ್ನು ಯಥಾಯೋಗ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮದ್ದರ್ಶನಾದೇವ – ನನ್ನ ದರ್ಶನಮಾತ್ರದಿಂದ, ವಹ್ನಿಯೋಗಾತ್ – ಅಗ್ನಿ ಸಂಬಂಧದಿಂದ, ಈಷಿಕಾಃ–ತೃಣಗಳು (ದರ್ಭೆಗಳು), ಯಥಾ–ಹೇಗೋ ಹಾಗೆ, ತತ್ಕ್ಷಣಾತ್ – ತತ್ಕ್ಷಣದಲ್ಲಿ (ಬ್ರಹ್ಮದರ್ಶನವಾದ ಕ್ಷಣದಲ್ಲಿಯೇ), ಭಸ್ಮತಾಂಯಾಂತಿ – ಬೂದಿಯಾಗುತ್ತವೆ; ಯಾನಿಚ ಕರ್ಮಾಣಿ – ಯಾವ ಕರ್ಮಗಳಾದರೋ, ಫಲಿತಾನಿ ಸ್ಯುಃ – ಫಲಕೊಡಲಿಕ್ಕೆ ಆರಂಭವಾಗಿರುತ್ತವೆಯೋ, ತಾನಿ ಶುಭಾಶುಭಫಲಾನಿ – ಅವುಗಳ ಶುಭಾಶುಭಫಲಗಳನ್ನು (ಸುಖದುಃಖರೂಪದ ಅವುಗಳ ಫಲಗಳನ್ನು), ಭುಕ್ತ್ವಾ ಏವ – ಭೋಗ ಮಾಡಿಯೇ (ಅನುಭವಿಸಿಯೇ), ಕೃತಕೃತ್ಯಾಃ–ಕೃತಕೃತ್ಯರು (ಧನ್ಯರು–ಸಾಧನಪರಿಪೂರ್ತಿಯುಳ್ಳವರು–ಮುಕ್ತರು), ಭವೇಯುಃ–ಆಗುತ್ತಾರೆ; ತೇ–ಅವರು (ಈ ಭಗವದ್ದರ್ಶನವನ್ನು ಪಡೆದ ಅಪರೋಕ್ಷಜ್ಞಾನಿಗಳು), ಪರಾನ್–ಇತರರನ್ನು (ಸಾಧಕಜೀವರನ್ನು) ಕುರಿತು, ಬೋಧಯಂತಿ ಅಪಿ–ಯೋಗ್ಯವಾದ ಉಪದೇಶವನ್ನೂ ಮಾಡುತ್ತಾರೆ–ಸ್ವಾನುಭವದಿಂದ ತಿಳಿದ ವಿಷಯಗಳನ್ನು ಉಪದೇಶಿಸಿ ಸಾಧಕರನ್ನು ಎಚ್ಚರಗೊಳಿಸುತ್ತಾರೆ.

ಯಥಾ ಸುಪ್ತೇಷು ಸರ್ವೇಷು ಯದೇಕೋ ಜಾಗ್ರವಾನ್ ಭವೇತ್ ।
ಪರಾನ್ ಸಂಬೋಧಯತ್ಯೇವ ಹ್ಯನರ್ಥೇ ಸಮುಪಸ್ಥಿತೇ ॥ ೩೨ ॥
ತಥೈವ ಸುಪ್ತಾನ್ ಸಂಸಾರೇ ಸ್ವಹಿತಂ ಚಾಪ್ಯಪಶ್ಯತಃ ।
ಪ್ರತಿಪನ್ನಾನ್ ಸ್ವಭಕ್ತಾಂಶ್ಚ ಜಾಗೃವಾಂಸೋ ವಿಮುನ್ಯವಃ ॥ ೩೩ ॥

ವಾಗಿ ಎಚ್ಚರಗೊಳಿಸುತ್ತಾನೆ (೨೭–೩೧). ಎಲ್ಲರೂ ಮಲಗಿರುವಾಗ ಯಾವುದಾದರೂ, ವಿಪತ್ತು ಪ್ರಾಪ್ತವಾದರೆ, ಎಚ್ಚರವಿದ್ದ ಯಾವನೊಬ್ಬನು, ಮಲಗಿದವರನ್ನೆಲ್ಲಾ ಕೃಪಾಯುಕ್ತನಾಗಿ ಎಚ್ಚರಿಸುವಂತೆ, ಶ್ರೀಹರಿಯ ಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಗಳು, ಕ್ರೋಧಾದಿ ದೋಷಗಳಿಲ್ಲದವರಾದ್ದರಿಂದ, ಕೃಪೆಯಿಂದ, ಸಂಸಾರವೆಂಬ ದುಃಖಸಮುದ್ರದಲ್ಲಿ ಮುಳುಗಿ, ಭಗವಂತನ ವಿಷಯಕವಾದ ಜ್ಞಾನವಿಲ್ಲದೇ, ಅಜ್ಞಾನವೆಂಬ ಕತ್ತಲೆಯಲ್ಲಿ ಮಲಗಿ ನಿದ್ರಿಸುತ್ತಿರುವ, ತಮ್ಮನ್ನಾಶ್ರಯಿಸಿದ ಸ್ವಭಕ್ತರನ್ನು, ವೇದಪ್ರತಿಪಾದ್ಯನಾದ ಶ್ರೀವಿಷ್ಣುವಿನ ಸರ್ವೋತ್ತಮತ್ವವನ್ನು ಉಪದೇಶಿಸಿ, ಅಜ್ಞಾನವನ್ನು ಪರಿಹರಿಸಿ, ಜ್ಞಾನಪ್ರಕಾಶವನ್ನು ದೊರಕಿಸುತ್ತಾರೆ; ಜ್ಞಾನಿಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವರೂಪಂ ಪರಮಂ ವಿಷ್ಣೋರ್ಯದ್ವೇದೈಃ ಪ್ರತಿಪಾದಿತಂ ।
ಪ್ರಕಾಶಯಂತಿ ಲೋಕಾನ್ ಹಿ ಗ್ರಸ್ಯಮಾನಾನ್ನಿಮಜ್ಜತಃ ॥ ೩೪ ॥
ಭವೇ ದುಃಖಪಯೋರಾಶೌ ಕೃಪಯಾ ದೀನವತ್ಸಲಾಃ ।

ಯಥಾ – ಹೇಗೆ, ಸರ್ವೇಷು – ಎಲ್ಲರೂ, ಸುಪ್ತೇಷು – ನಿದ್ರೆಮಾಡುತ್ತಿರಲು, ಏಕಃ–ಯಾರೊಬ್ಬನು, ಯತ್–ಯಾವಾಗ, ಜಾಗ್ರವಾನ್–ಎಚ್ಚರವಿದ್ದವನು, ಭವೇತ್–ಆಗುತ್ತಾನೋ (ಆಗ), ಅನರ್ಥೇ–ವಿಪತ್ತು, ಸಮುಪಸ್ಥಿತೇ – ಸನ್ನಿಹಿತವಾಗಿರಲು, ಪರಾನ್ – ಇತರರನ್ನು (ಮಲಗಿದವರನ್ನು), ಸಂಬೋಧಯತ್ಯೇವ – ಎಚ್ಚರಗೊಳಿಸುತ್ತಾನಷ್ಟೆ; ತಥೈವ–ಹಾಗೆಯೇ, ಸ್ವಹಿತಂ ಚ ಅಪಿ–ಸ್ವಹಿತವನ್ನೂ ಸಹ, ಅಪಶ್ಯತಃ–ತಿಳಿಯದ, ಪ್ರತಿಪನ್ನಾನ್ – (ತಮ್ಮನ್ನೇ) ಆಶ್ರಯಿಸಿದ, ಸಂಸಾರೇ – ಸಂಸಾರದಲ್ಲಿ, ಸುಪ್ತಾನ್ – ನಿದ್ರಿಸುತ್ತಿರುವ (ಅಜ್ಞಾನನಿದ್ರೆಯಲ್ಲಿರುವ), ಸ್ವಭಕ್ತಾನ್–ತಮ್ಮ ಭಕ್ತರನ್ನು, ವಿಮನ್ಯವಃ–ಕ್ರೋಧರಹಿತರಾದ, ಜಾಗೃವಾಂಸಃ–ಜ್ಞಾನಿಗಳು (ಅಜ್ಞಾನನಿದ್ರೆಯಿಂದ ಎಚ್ಚರಗೊಂಡವರು), (ಸಂಬೋಧಯಂತಿ–ಎಚ್ಚರಗೊಳಿಸುತ್ತಾರೆ–ತಮ್ಮ ಉಪದೇಶದಿಂದ ಅಜ್ಞಾನವನ್ನು ಪರಿಹರಿಸುತ್ತಾರೆ); ದೀನವತ್ಸಲಾಃ–ಕೃಪಣವತ್ಸಲರಾದ (ದುಃಖಿಗಳಲ್ಲಿ ದಯಾವಂತರಾದ) ಜ್ಞಾನಿಗಳು, ಭವೇ–ಸಂಸಾರದಲ್ಲಿ, ನಿಮಜ್ಜತಃ–ಮುಳುಗುತ್ತಿರುವ,

---

ಸ್ವಯಂ ನಿದ್ರೆಯಿಲ್ಲದವರು—ಸದಾ ಜಾಗೃತರಾಗಿರುತ್ತಾರೆ[1] (೩೨–೩೪). ನಾನು, ಈ ಹಿಂದೆ ಹೇಳಿದಂತೆ, ಯಾವಾಗ ಬ್ರಹ್ಮ, ವಾಯು, ಸರಸ್ವತೀ, ಮತ್ತು ಭಾರತೀ, ಇವರಲ್ಲಿ ಪ್ರವಿಷ್ಟನಾಗಿ ನಿಂತೆನೋ, ಆಗ ಆ ಮುಂದಿನ

---

[1] ಇದೇ ಅಧ್ಯಾಯದ ೧೮ನೇ ಶ್ಲೋಕಭಾಗವನ್ನೂ ಇಲ್ಲಿ ನೋಡಬೇಕು. 'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ । ದಿವೀವ ಚಕ್ಷುರಾತತಂ । ತದ್ವಿಪ್ರಾಸೋ ವಿಮನ್ಯವೋ ಜಾಗೃವಾಂಸಃ ಸಮಿಂಧತೇ ॥' (ಪುರುಷಸೂಕ್ತ) ದಲ್ಲಿ ಹೇಳಲಾದ ಪ್ರಮೇಯವೇ ಇಲ್ಲಿ ಹೇಳಲಾಗಿದೆ. ಬ್ರಹ್ಮದರ್ಶನವನ್ನು ಪಡೆದ ಜ್ಞಾನಿಗಳಿಗೆ ಅಜ್ಞಾನಿಗಳ ರಾತ್ರಿಯೇ ಹಗಲು; ಅವರ ಹಗಲೇ ಜ್ಞಾನಿಗಳ ರಾತ್ರಿಯು, ಎಂದು 'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ । ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ।' (ಭಗವದ್ಗೀತೆಯಲ್ಲಿ ಜ್ಞಾನಿಯು ಭಗವದ್ವಿಷಯದಲ್ಲಿ ನಿತ್ಯಜಾಗೃತನೆಂದು ಹೇಳಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದುಃಖಪಯೋರಾಶೌ–ದುಃಖಸಮುದ್ರದಲ್ಲಿ, ಗ್ರಸ್ಯಮಾನಾನ್–ಸಿಕ್ಕು ನುಂಗಲ್ಪಡುತ್ತಿರುವ, ಲೋಕಾನ್–ಅಜ್ಞಾನಿಗಳನ್ನು ಕುರಿತು, ಕೃಪಯಾ–ಕೃಪೆಯಿಂದ, ವೇದೈಃ – ವೇದಗಳಿಂದ, ಪ್ರತಿಪಾದಿತಂ – ಪ್ರತಿಪಾದಿಸಲ್ಪಡುವ, ಯತ್–ಯಾವ, ವಿಷ್ಣೋಃ–ಶ್ರೀ ಮಹಾವಿಷ್ಣುವಿನ, ಪರಮಂ–ಸರ್ವೋತ್ಕೃಷ್ಟವಾದ, ಸ್ವರೂಪಂ–ಸ್ವರೂಪವೋ ಅದನ್ನು, ಪ್ರಕಾಶಯಂತಿ–ಪ್ರಕಾಶಪಡಿಸುತ್ತಾರೆ–ಉಪದೇಶದಿಂದ ವಿಷ್ಣುಸ್ವರೂಪಮಾಹಾತ್ಮ್ಯೆಯನ್ನು ತಿಳಿಸಿಕೊಡುತ್ತಾರೆ.

ಯದಾ ಪ್ರವಿಷ್ಟೋ ಬ್ರಹ್ಮಾಣಂ ತಥಾ ಪ್ರಾಣಂ ಸರಸ್ವತೀಂ || ೩೫ ||
ವಾಣೀಂ ಚಾಪಿ ತತೋ ಬ್ರಹ್ಮಾ ಮನ್ಮಯೋಽಭೂದ್ವಿಶೇಷತಃ |
ಅನ್ಯೇಽಪಿ ಮನ್ಮಯಾ ಜಾತಾಸ್ತತೋ ಯನ್ಮದುದೀರಿತಂ || ೩೬ ||
ಚಿಂತಯಿತ್ವಾ ವಿದುಃ ಸಮ್ಯಕ್ ತದರ್ಥಂ ಸರ್ವಮೇವ ಹಿ |

ಯದಾ–ಯಾವಾಗ, ಬ್ರಹ್ಮಾಣಂ–ಬ್ರಹ್ಮದೇವನನ್ನೂ, ತಥಾ–ಹಾಗೂ, ಪ್ರಾಣಂ–ವಾಯುದೇವನನ್ನೂ, ಸರಸ್ವತೀಂ–ಸರಸ್ವತಿಯನ್ನೂ, ವಾಣೀಂ ಚಾಪಿ–ಭಾರತಿಯನ್ನೂ ಸಹ, ಪ್ರವಿಷ್ಟಃ–(ನಾನು) ಪ್ರವೇಶಮಾಡಿದೆನೋ,[1] ನನ್ನ ಉಪದೇಶಗಳ ವಿಶೇಷ ರಹಸ್ಯಗಳನ್ನೂ ಯಥಾರ್ಥವಾಗಿ ಗ್ರಹಿಸುವುದರಲ್ಲಿ ಸಮರ್ಥರಾದರು; ನನ್ನಿಂದ ಶ್ರವಣಮಾಡಿದ್ದನ್ನು ಚಿಂತನೆಮಾಡಿ, ಸ್ಪಷ್ಟವಾಗಿ ಬಹುರಹಸ್ಯಾರ್ಥಗಳನ್ನು ತಿಳಿದರು (೩೫–೩೬). ಅಂಗಸಹಿತ ವೇದಗಳನ್ನೂ ಉಪವೇದಾದಿಗಳನ್ನೂ ತಿಳಿದರೂ ಸಹ, ಬ್ರಹ್ಮ–ವಾಯು–ಸರಸ್ವತೀ–ಭಾರತಿಯರು, ತಮ್ಮ ಜ್ಞಾನವು ಅಪೂರ್ಣವೆಂದೇ ಭಾವಿಸಿದರು;[2] ಬ್ರಹ್ಮದೇವನು, 'ಹೇ ಸ್ವಾಮಿ! ನಿನ್ನ ಅನುಗ್ರಹದಿಂದ, ನಿನ್ನ ಉಪದೇಶವೆಂಬ ಅಂಜನಲೇಪದಿಂದ, ನನ್ನ ಜ್ಞಾನದೃಷ್ಟಿಯು, ತೆರೆಯಿತು; ಆದರೂ

---

[1] ಇಲ್ಲಿ ಇದೇ ಅಧ್ಯಾಯದ ೧೨-೧೩ನೇ ಶ್ಲೋಕಭಾಗಗಳ ವಿವರಣೆಯನ್ನು ಓದಿಕೊಳ್ಳಿರಿ.

[2] ಸ್ವಯೋಗ್ಯಜ್ಞಾನಪೂರ್ತಿಯನ್ನು (ಸರ್ವಜ್ಞತ್ವವನ್ನು), ಬ್ರಹ್ಮಾದಿಗಳು ಹೊಂದಿದರೂ, ಅವರು ಸರ್ವಜೀವಸಮುದಾಯಕ್ಕಿಂತ ಶ್ರೇಷ್ಠಜ್ಞಾನಿಗಳೆನಿಸಿದರೂ, ಅವರೂ ಸಹ ಶ್ರೀವಿಷ್ಣುವನ್ನು ಪೂರ್ಣವಾಗಿ ತಿಳಿಯಲಾರರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತಃ–ಆಗ, ಬ್ರಹ್ಮಾ–ಬ್ರಹ್ಮನು, ವಿಶೇಷತಃ–ವಿಶೇಷವಾಗಿ (ಅಧಿಕವಾಗಿ), ಮನ್ಮಯಃ–ನನ್ನನ್ನೇ ಪ್ರಧಾನವಾಗಿ ಉಳ್ಳವನು (ನನ್ನ ಪ್ರಸಾದದಿಂದ ನನ್ನ ಉಪದೇಶದ ವಿಶೇಷ ಜ್ಞಾನದಲ್ಲಿ ಸಮರ್ಥನು), ಅಭೂತ್–ಆದನು; ಅನ್ಯೇಪಿ–ಮುಖ್ಯಪ್ರಾಣಾದಿ ಇತರ ಶ್ರೋತೃಗಳೂ, ಮನ್ಮಯಾಃ ಜಾತಾಃ–ಮನ್ಮಯರು (ನನ್ನ ಸರ್ವೋತ್ತಮತ್ವ ವಿಶೇಷಜ್ಞಾನದಲ್ಲಿ ಸಮರ್ಥರು), ಆದರು; ತತಃ–ಆ ನಂತರ, ಯತ್–ಯಾವುದು (ಯಾವ ಪ್ರಮೇಯ ರಹಸ್ಯಗಳು), ಮದುದೀರಿತಂ–ನನ್ನಿಂದ ನಿರೂಪಿಸಲ್ಪಟ್ಟಿತೋ (ಹೇಳಲ್ಪಟ್ಟವೋ), ತದರ್ಥಂ—ಅದರ ಅರ್ಥವನ್ನು (ಅಭಿಪ್ರಾಯವನ್ನು), ಸರ್ವಂ ಏವ ಹಿ–ಪೂರ್ಣವಾಗಿ (ಅನ್ಯ ಸರ್ವಜೀವರಕಿಂತ ಅತಿಶಯವಾಗಿ), ಸಮ್ಯಕ್–ಸ್ಪಷ್ಟವಾಗಿ (ಯಥಾರ್ಥವಾಗಿ), ಚಿಂತಯಿತ್ವಾ – ಯೋಚಿಸಿ (ಮನನಮಾಡಿಕೊಂಡು), ವಿದುಃ–ತಿಳಿಸಿದರು.

ವಿದಿತೇ ಸಾಂಗವೇದಾರ್ಥೇ ಹ್ಯುಪವೇದಾರ್ಥ ಏವ ಚ ॥ ೩೭ ॥
ಅಪೂರ್ಣಂ ಮೇನಿರೇತ್ಮಾನಂ ಚತ್ವಾರಸ್ತೇ ಪುನಃ ಪುನಃ ।
ಮಾಮುವಾಚ ತತೋ ಬ್ರಹ್ಮಾ ಸ್ವಾಮಿನ್ ಭವದನುಗ್ರಹಾತ್ ॥
ಉನ್ಮೀಲಿತಂ ಜ್ಞಾನಚಕ್ಷುರ್ಭವದ್ವಾಗಂಜನೇನ ಮೇ ।
ತಥಾಪಿ ಮನ್ಯೇ ಹ್ಯಾತ್ಮಾನಮಪೂರ್ಣಂ ತದ್ವದಸ್ವ ಮೇ ॥ ೩೯ ॥

ಸಾಂಗವೇದಾರ್ಥೇ–ಅಂಗಗಳಿಂದ ಸಹಿತವಾದ ವೇದಗಳ ಅರ್ಥವೂ, ಚ–ಮತ್ತು, ಉಪವೇದಾರ್ಥೇ ಏವ–ಉಪವೇದಗಳ ಅರ್ಥವೂ, ವಿದಿತೇ–(ಹೀಗೆ) ತಿಳಿಯಲ್ಪಡುತ್ತಿರಲಾಗಿ, ತೇ–ಆ, ಚತ್ವಾರಃ–ನಾಲ್ಕುಮಂದಿ (ಬ್ರಹ್ಮಾ, ವಾಯು, ಸರಸ್ವತೀಭಾರತಿಯರು), ತ್ಮಾನಂ[1] – ತನ್ನನ್ನು

ಯಾವ ಕಾರಣದಿಂದ, ಅಪೂರ್ಣತ್ವದ ಭಾವನೆಯು ಮನಸ್ಸಿಗೆ ಉಂಟಾಗಿದೆಯೋ ಅದನ್ನು ತಿಳಿದ ನೀನು, ಅವಶಿಷ್ಟರಹಸ್ಯವಿಶೇಷಗಳನ್ನು ಉಪದೇಶಿಸಿ, ನನ್ನ ಯೋಗ್ಯತೆಗೆ ತಕ್ಕುದಾದ ಸರ್ವಜ್ಞತ್ವವನ್ನು ದೊರಕಿಸಿಕೊಡು,'

---

[1] ಆತ್ಮನ್=ತ್ಮನ್; ತ್ಮನ್ ಎಂಬುದು ಛಾಂದಸವು, ಎಂದರೆ ವೈದಿಕ ಪ್ರಯೋಗವು. ಈ ಗ್ರಂಥವೂ ವೇದತುಲ್ಯವೆಂಬುದರ ಸೂಚನೆಗಾಗಿ ಈ ವಿಧ ಪ್ರಯೋಗಗಳೆಂದು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಒಬ್ಬೊಬ್ಬರೂ ತಮ್ಮನ್ನು), ಅಪೂರ್ಣಂ–ಅಪೂರ್ಣನನ್ನಾಗಿ (ಸರ್ವಜ್ಞನಲ್ಲ ವೆಂದು), ಮೇನಿರೇ–ತಿಳಿದರು ; ತತಃ–ಆನಂತರ, ಬ್ರಹ್ಮಾ–ಬ್ರಹ್ಮದೇವನು, ಮಾಂ–ನನ್ನನ್ನು ಕುರಿತು, ಪುನಃ ಪುನಃ–ಮತ್ತೆ ಮತ್ತೆ, ಸ್ವಾಮಿನ್–ಹೇ ಸ್ವಾಮಿ !, ಭಗವದನುಗ್ರಹಾತ್–ನಿನ್ನ ಅನುಗ್ರಹದಿಂದ, ಭವದ್ವಾಗಂಜನೇನ–ನಿನ್ನ ಉಪದೇಶನುಡಿ ಎಂಬ ಅಂಜನದಿಂದ, ಮೇ–ನನ್ನ, ಜ್ಞಾನಚಕ್ಷುಃ–ಜ್ಞಾನವೆಂಬ ಕಣ್ಣು (ಜ್ಞಾನದೃಷ್ಟಿಯು), ಉನ್ಮೀಲಿತಂ–ತೆರೆಯಲ್ಪಟ್ಟಿತು ; ತಥಾಪಿ–ಹೀಗಿದ್ದರೂ, ಹಿ–ಯಾವ ಕಾರಣದಿಂದ, ಆತ್ಮಾನಂ–ನನ್ನನ್ನು, ಅಪೂರ್ಣಂ–ಅಪೂರ್ಣನೆಂದು, ಮನ್ಯೇ–ತಿಳಿಯುತ್ತಿರುವೆನೋ, ತತ್–ಅದನ್ನು (ತಿಳಿಯಬೇಕಾದ ಅವಶಿಷ್ಟರಹಸ್ಯವನ್ನು), ಮೇ–ನನಗೆ, ವದಸ್ವ–ಹೇಳು, ಉವಾಚ–(ಹೀಗೆಂದು) ನುಡಿದನು.

ತ್ವಂ ಮೇ ಮಾತಾಪಿತಾ ಬಂಧುರ್ಗುರುಃ ಸ್ವಾಮೀ ಚ ನಿತ್ಯಶಃ ।
ಸರ್ವಜ್ಞಃ ಸರ್ವಕರ್ತಾ ಚ ಮಿಥ್ಯಾಜ್ಞಾನತಮೋಪಹಃ ॥ ೪೦ ॥
ಅತಸ್ತ್ವಾಂ ಪರಿಪೃಚ್ಛಾಮಿ ಯತ್ತನ್ಮೇ ಕೃಪಯಾ ವದ ।
ವಕ್ತವ್ಯಮವಶಿಷ್ಟಂ ಕಿಂ ಯೇನಾತ್ಮಾ ಮೇ ನ ತುಷ್ಯತಿ ॥ ೪೧ ॥

ತ್ವಂ–ನೀನು, ಮೇ–ನನ್ನ, ಮಾತಾ–ತಾಯಿಯು, ಪಿತಾ–ತಂದೆಯು, ಬಂಧುಃ–ಬಂಧುವು, ಗುರುಃ–ಗುರುವು, ಸ್ವಾಮೀ–ಸ್ವಾಮಿಯು, ನಿತ್ಯಶಃ ಚ–ಸದಾ ಈ ಎಲ್ಲವೂ ನೀನೇ ಆಗಿರುತ್ತೀ ; ಸರ್ವಜ್ಞಃ–ಸರ್ವಜ್ಞನೂ, ಸರ್ವಕರ್ತಾ ಚ–ಸ್ವತಂತ್ರನಾಗಿ ಸರ್ವವನ್ನೂ ಮಾಡತಕ್ಕವನು, ಚ–ಮತ್ತು,

---

ಎಂಬುದಾಗಿ ಪರಿಪರಿಯಿಂದ ನನ್ನನ್ನು ಪ್ರಾರ್ಥಿಸಿದನು (೩೭–೩೯). ಹೇ ಸ್ವಾಮಿ ! ನೀನೇ ನನಗೆ ಸರ್ವಕಾಲದಲ್ಲಿ, ತಾಯಿ, ತಂದೆ, ಬಂಧು, ಗುರು, ಸ್ವಾಮಿ, ಎಲ್ಲವೂ ಆಗಿರುವಿ ; ಸರ್ವಜ್ಞನೂ ಸರ್ವಕರ್ತನೂ ಆದ ನಿನಗೆ ತಿಳಿಯದುದು ಯಾವುದೂ ಇಲ್ಲ ; ಮಿಥ್ಯಾಜ್ಞಾನರೂಪದ ಅಂಧಕಾರವನ್ನೂ ನಾಶಪಡಿಸುವ ಸೂರ್ಯನಾಗಿರುವಿ ; (ಯದ್ಯಪಿ, ಬ್ರಹ್ಮಾದಿಗಳಲ್ಲಿ ಮಿಥ್ಯಾಜ್ಞಾನಲೇಶಕ್ಕೂ ಎಡೆಯಿಲ್ಲ—ಕೈಮುತ್ಯಾರ್ಥದಲ್ಲಿ ಮಿಥ್ಯಾಜ್ಞಾನ ನಾಶಕತ್ವ ಮಹಿಮೆಯು ಉಕ್ತವಾಗಿದೆ.) ಎಲ್ಲವನ್ನೂ ಶ್ರವಣಮಾಡಿದರೂ, ನನ್ನ ಮನಸ್ಸಿಗೆ ತೃಪ್ತಿಯಾಗದಿರಲು ಕಾರಣವಾಗಬಹುದಾದ ಹೇಳಬೇಕಾದ್ದರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಿಥ್ಯಾಜ್ಞಾನ ತಮೋಪಹಃ – ಮಿಥ್ಯಾಜ್ಞಾನವೆಂಬ ಅಂಧಕಾರವನ್ನು ಪರಿಹರಿಸುವವನೂ (ಆಗಿರುವಿ) ; ಅತಃ – ಆದ್ದರಿಂದ, ತ್ವಾಂ – ನಿನ್ನನ್ನು, ಪರಿಪೃಚ್ಛಾಮಿ–ಪರಿಪರಿಯಿಂದ ಪ್ರಾರ್ಥಿಸುತ್ತಿರುವೆನು ; ವಕ್ತವ್ಯಂ–ಹೇಳಬೇಕಾದುದು, ಕಿಂ–ಏನು, ಅವಶಿಷ್ಟಂ–ಉಳಿದಿದೆ ; ಯೇನ–ಯಾವುದರಿಂದ, ಮೇ – ನನ್ನ, ಆತ್ಮಾ – ಮನಸ್ಸು, ನ ತುಷ್ಯತಿ – ತೃಪ್ತಿಯನ್ನು ಹೊಂದುವುದಿಲ್ಲವೋ, ತತ್–ಅದನ್ನು, ಕೃಪಯಾ–ಕೃಪೆದೋರಿ, ಮೇ–ನನಗೆ, ವದ–ಹೇಳು.

ಅಪೂರ್ಣಂ ಮನುತೇ ಕಸ್ಮಾತ್ ಕಸ್ಮಿನ್ ಜ್ಞಾತೇ ಚ ಪೂರ್ಣತಾಂ ।
ಭವೇಯಂ ತದ್ವದಾಶು ತ್ವಂ ಯೇನಾಹಂ ಸರ್ವವಿತ್ತಮಃ ॥ ೪೨ ॥
ಸರ್ವಪೂಜ್ಯಃ ಸರ್ವಗುರುಸ್ತವ ಭಕ್ತೋತ್ತಮೋ ವಿಶೇಷತಃ ।
ಭವೇಯಂ ಕೃತಕೃತ್ಯಶ್ಚ ನಾನ್ಯಥಾಹಂ ಸುಖಂ ಲಭೇ ॥ ೪೩ ॥

ಉಳಿದುದು ಏನಾದರೂ ಇದ್ದರೆ, ಅದನ್ನು ಕೃಪೆಮಾಡಿ ಉಪದೇಶಿಸು (೪೦–೪೧). ಯಾವುದರ ಅಭಾವದಿಂದ ನನ್ನ ಮನಸ್ಸು ಅಪೂರ್ಣವೆಂದು ಭಾವಿಸುತ್ತದೆಯೋ, ಯಾವುದನ್ನು ತಿಳಿಯುವುದರಿಂದ (ಯಾವ ಅವಶಿಷ್ಟ ವಿಶೇಷಜ್ಞಾನದಿಂದ), ಪೂರ್ಣತ್ವವನ್ನು ಹೊಂದಿ ತೃಪ್ತಿಗೊಳ್ಳುವುದೋ ಮತ್ತು ಯಾವ ಪೂರ್ಣಜ್ಞಾನದಿಂದ ಶ್ರೇಷ್ಠ ಸರ್ವಜ್ಞನೂ, ಸರ್ವರಿಂದ ಪೂಜ್ಯನೂ, ಜಗದ್ಗುರುವೂ,[1] ಎಲ್ಲಕ್ಕೂ ಹೆಚ್ಚಾಗಿ ನಿನ್ನ ಉತ್ತಮ ಭಕ್ತನೆನಿಸುವೆನೋ ಹಾಗೂ ಮುಕ್ತನಾಗಿ ನಿನ್ನ ನಿತ್ಯಸೇವೆಯಲ್ಲಿರುವೆನೋ,

---

[1] ಮುಕ್ತಿಯೋಗ್ಯಜೀವರು ಸಾಧನಪರಿಪಕ್ವತೆಯನ್ನು ಹೊಂದಿ, ಸ್ವಯೋಗ್ಯವಾದ ಪೂರ್ಣಜ್ಞಾನವುಳ್ಳವರಾಗುವರು—ಒಂದು ವಿವಕ್ಷೆಯಿಂದ ಈ ಎಲ್ಲರೂ ಸರ್ವಜ್ಞರೇ. ಜೀವೋತ್ತಮರಾದ ಬ್ರಹ್ಮವಾಯುಗಳು ಸರ್ವಜ್ಞಶ್ರೇಷ್ಠರು—ಅವರಿಗಿಂತ ಪೂರ್ಣಜ್ಞಾನಿಗಳು ಜೀವರಾಶಿಗಳಲ್ಲಿ ಅನ್ಯರಾರೂ ಇಲ್ಲ. ಇವರ ಸರ್ವಜ್ಞತ್ವಕ್ಕೆ ಸ್ವಲ್ಪ ಕಡಿಮೆಯಾದ ಸರ್ವಜ್ಞರು ರುದ್ರೇಂದ್ರಾದಿದೇವತೆಗಳು 'ಸರ್ವಜ್ಞಕಲ್ಪ'ರು. ಬ್ರಹ್ಮದೇವರು ಹೀಗೆ ಸರ್ವಜ್ಞಶ್ರೇಷ್ಠನು ಮಾತ್ರವಲ್ಲ—ಜಗದ್ಗುರುವೂ ಆಗಿದ್ದಾನೆ. ಸರ್ವರ ಚಿತ್ತಾಭಿಮಾನಿಯಾಗಿದ್ದಾನೆ. ಪ್ರತಿ ಜೀವನಿಗೂ ಸ್ವಯೋಗ್ಯ ಗುರುವಿನಿಂದ ಆಗುವ ಉಪದೇಶವನ್ನು, ಗ್ರಹಿಸುವಂತೆ ಮಾಡುವವನು, ಚಿತ್ತಸ್ಥನಾದ ಬ್ರಹ್ಮದೇವನೇ—ಆದ್ದರಿಂದ ಈತನೇ ಸರ್ವರ ಗುರುವು—ಜಗದ್ಗುರುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಸ್ಮಾತ್–ಯಾವುದರಿಂದ, ಅಪೂರ್ಣಂ–ಅಪೂರ್ಣವೆಂದು, ಮನುತೇ–(ನನ್ನ ಮನಸ್ಸು) ಭಾವಿಸುತ್ತದೆ; ಚ – ಮತ್ತು ಕಸ್ಮಿನ್ – ಯಾವುದು, ಜ್ಞಾತೇ–ತಿಳಿಯಲ್ಪಡುತ್ತಿರಲು, ಪೂರ್ಣತಾಂ–ಪೂರ್ಣತ್ವವನ್ನು (ಮನುತೇ–ತಿಳಿಯುತ್ತದೆಯೋ), ಮತ್ತು, ಯೇನ–ಯಾವುದರಿಂದ, ಅಹಂ–ನಾನು, ಸರ್ವವಿತ್ತಮಃ–ಶ್ರೇಷ್ಠ ಸರ್ವಜ್ಞನು, ಭವೇಯಂ–ಆಗುವೆನೋ, ತತ್–ಅದನ್ನು, ತ್ವಂ–ನೀನು, ಆಶು–ಜಾಗ್ರತೆಯಾಗಿ (ತಡಮಾಡದೆ), ವದ–ಹೇಳು (ಉಪದೇಶಿಸು) ; ಸರ್ವಪೂಜ್ಯಃ–(ಜಗತ್ತಿನಲ್ಲಿ) ಎಲ್ಲರಿಂದ ಪೂಜ್ಯನೂ, ಸರ್ವಗುರುಃ–ಸರ್ವರ ಗುರುವೂ (ಜಗದ್ಗುರುವೂ–ಸರ್ವರ ಜ್ಞಾನೋಪದೇಶಕನೂ), ವಿಶೇಷತಃ–ಇದಕ್ಕಿಂತ ಹೆಚ್ಚಾಗಿ, ತವ–ನಿನ್ನ, ಭಕ್ತಃ–ಶ್ರೇಷ್ಠ ಭಕ್ತನೂ, ಚ–ಮತ್ತು, ಕೃತಕೃತ್ಯಃ–ಧನ್ಯನೂ (ಮುಕ್ತನೂ), ಭವೇಯಂ–ಆಗುವೆನೋ (ತದ್ವದ–ಅದನ್ನು ಹೇಳು) ; ಅನ್ಯಥಾ–ಹಾಗಲ್ಲದೇ (ಅವಶಿಷ್ಟ ಜ್ಞಾನರಹಸ್ಯದ ಉಪದೇಶವಿಲ್ಲದೇ), ಅಹಂ–ನಾನು, ಸುಖಂ ನ ಲಭೇ–ಸುಖಿಯಾಗುವುದಿಲ್ಲ.

ಇತ್ಯುಕ್ತೋಽಹಂ ತದಾ ಬ್ರಹ್ಮನ್ ಪುರುಷೇಣ ಮಹಾತ್ಮನಾ ।
ಗುಹ್ಯಾದ್ಗುಹ್ಯತಮಂ ಜ್ಞಾನಂ ಕೃಪಯೈತದವಾದಿಷಂ ॥ ೪೪ ॥

ಬ್ರಹ್ಮನ್ – ಹೇ ಬ್ರಹ್ಮದೇವ!, ಮಹಾತ್ಮನಾ – ಮಹಾತ್ಮನಾದ, ಪುರುಷೇಣ–ಪುರುಷನಾಮಕ ಬ್ರಹ್ಮನಿಂದ, ಇತ್ಯುಕ್ತಃ–ಹೀಗೆ ಹೇಳಲ್ಪಟ್ಟ, ಅಹಂ–ನಾನು (ಶ್ರೀವಿಷ್ಣುವು), ತದಾ–ಆಗ, ಕೃಪಯಾ–ಕೃಪೆಯಿಂದ, ಗುಹ್ಯಾತ್–ರಹಸ್ಯಕ್ಕಿಂತ, ಗುಹ್ಯತಮಂ–ಅತ್ಯಂತ ರಹಸ್ಯವಾದ, ಏತತ್–ಈ

ಅದನ್ನು ಕೃಪೆಮಾಡಿ ಉಪದೇಶಿಸು–ಅದಿಲ್ಲದೇ ನಾನು ಸುಖಿಯಾಗಲಾರೆನು (೪೨–೪೩). ಹಿಂದೆ ಪುರುಷನಾಮಕಬ್ರಹ್ಮನಾಗಿದ್ದ ನಿನಗೇ ಇದೇ ರೀತಿಯಿಂದ ಪ್ರಶ್ನಿಸಲ್ಪಟ್ಟು, ಆಗ ಉಪದೇಶಿಸಿದ ಅತ್ಯಂತಗೋಪ್ಯವಾದ ಪ್ರಮೇಯಗಳನ್ನೇ (ಅವುಗಳ ಸಂಬಂಧವಾದ ಜ್ಞಾನವನ್ನು) ಈ ಮುಂದೆ ನಿನಗೆ ಹೇಳುತ್ತೇನೆ (೪೪).

ವೇದವಿದ್ಯೋಪದೇಶವೆಂಬ ಮೂರನೇ ಅಧ್ಯಾಯುವು ಮುಗಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮುಂದೆ ಹೇಳುವ), ಜ್ಞಾನಂ–ಜ್ಞಾನವನ್ನು, ಅವಾದಿಷಂ–ಹೇಳಿದೆನು। (ಅದನ್ನೇ ಮುಂದೆ ನಿನಗೆ ಹೇಳುತ್ತೇನೆ).

ಅಧ್ಯಾಯ ೪

ಶ್ರೀ ಹಯಗ್ರೀವ ಉವಾಚ—

ವ್ಯಾಪಕತ್ವಾದಹಂ ವಿಷ್ಣುರ್ವಿಶಿಷ್ಟಪ್ರಾಣನಾದಿತಃ ।
ವಿಶಿಷ್ಟಸುಖವತ್ವಾದೇರಪಿ ವಿಷ್ಣುರಹಂ ಶ್ರುತಃ ॥ ೧ ॥

ಅಹಂ–ನಾನು, ವ್ಯಾಪಕತ್ವಾತ್–ವ್ಯಾಪ್ತನಾದ್ದರಿಂದ (ಸರ್ವವನ್ನೂ ವ್ಯಾಪಿಸಿರುವುದರಿಂದ), ವಿಷ್ಣುಃ–ವಿಷ್ಣುವು (ವಿಷ್ಣು ಎಂಬ ನಾಮವುಳ್ಳವನು); ವಿಶಿಷ್ಟಪ್ರಾಣನಾದಿತಃ – ಸರ್ವ ಚೇಷ್ಟಕನಾದ್ದರಿಂದಲೂ, ವಿಶಿಷ್ಟಸುಖವತ್ವಾದೇಃ–ಪೂರ್ಣಸುಖಸ್ವರೂಪನಾದ್ದರಿಂದಲೂ, ಅಪಿ–ಸಹ, ಅಹಂ–ನಾನು, ವಿಷ್ಣುಃ–ವಿಷ್ಣುವೆಂದು, ಶ್ರುತಃ–(ವೇದಾದಿಗಳಲ್ಲಿ ಸಹ) ಪ್ರಸಿದ್ಧನಾಗಿರುವೆನು.

ಸರ್ವವ್ಯಾಪಕನಾದ್ದರಿಂದ ನಾನು ವಿಷ್ಣುವು; ಸರ್ವಜಗಚ್ಚೇಷ್ಟಕನಾದ್ದರಿಂದ ಮತ್ತು (ಅಲೌಕಿಕ) ಪೂರ್ಣಾನಂದವನ್ನು ನಿತ್ಯವೂ ಅನುಭವಿಸುವನಾದ್ದರಿಂದಲೂ, ನಾನು ವಿಷ್ಣುಶಬ್ದವಾಚ್ಯನು (ವಿಷ್ಣುಶಬ್ದವು ಈ ನನ್ನ ಮಹಿಮೆಗಳನ್ನು ಹೇಳುತ್ತದೆ) ; ಹೀಗೆಂದು ವೇದಾದಿಗಳಲ್ಲಿ ನಾನು ಪ್ರಸಿದ್ಧ

---

1 ಅಧ್ಯಾಯ ೧, ಶ್ಲೋಕ ೧೫-೧೬-೧೭ ಗಳನ್ನು ಇಲ್ಲಿ ಓದಿಕೊಳ್ಳಬೇಕು. ಆದಿ (ಸೂಕ್ಷ್ಮ) ಸೃಷ್ಟಿಯಲ್ಲಿ ಶ್ರೀವಿಷ್ಣುವು ಮೊದಲಿಗೆ ಪುರುಷಾಕಾರದ ಪುರುಷನಾಮಕಬ್ರಹ್ಮನನ್ನು ಸೃಷ್ಟಿಮಾಡಿದನು; ಅವನಿಗೆ ಆಗ ಮಾಡಿದ ಉಪದೇಶವನ್ನು, ನಂತರ ಆ ಪುರುಷನನ್ನು ನುಂಗಿ, ಮಾಯಾದೇವಿಯಲ್ಲಿ ಬ್ರಹ್ಮನನ್ನು ಹುಟ್ಟಿಸಿ, ಹಾಗೂ ಸಂಕರ್ಷಣಪ್ರದ್ಯುಮ್ನರೂಪಗಳಿಂದ ಸೃಷ್ಟರಾದ ವಾಯುದೇವ, ಸರಸ್ವತೀ ಭಾರತಿಯರಿಗೆ ವೇದವೇದಾಂಗಾದಿಗಳನ್ನು ಉಪದೇಶಿಸುತ್ತಿರುವಾಗ, ಬ್ರಹ್ಮನ ಪ್ರಶ್ನೆಗಳನ್ನು, ಹಯಗ್ರೀವರೂಪದಿಂದ ಶ್ರೀವಿಷ್ಣುವೇ ಉಪದೇಶಿಸುತ್ತಿದ್ದಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೃಷ್ಟಿಕಾಲೇ ಮಯಾ ಸೃಷ್ಟಂ ವಿಶ್ವಂ ಸ್ಥಾವರಜಂಗಮಂ ।
ತಸ್ಯಾಹಂ ವ್ಯಾಪಕತ್ವಾಚ್ಚ ಬಹಿರಂತರ್ವ್ಯವಸ್ಥಿತಃ ॥ ೨ ॥

ಸೃಷ್ಟಿಕಾಲೇ–ಸೃಷ್ಟಿಕಾಲ ಬಂದಾಗ, ಮಯಾ–ನನ್ನಿಂದ, ಸ್ಥಾವರ ಜಂಗಮಂ–ಸ್ಥಾವರ (ಅಚರ) ಜಂಗಮ (ಚರ) ರೂಪದ, ವಿಶ್ವಂ–ಜಗತ್ತು, ಸೃಷ್ಟಂ–ಸೃಜಿಸಲ್ಪಟ್ಟಿತು (ನಿರ್ಮಿತವಾಯಿತು); ಅಹಂ–ನಾನು, ತಸ್ಯ–ಆ ವಿಶ್ವದ, ಬಹಿರಂತಃ–ಹೊರಗೂ ಒಳಗೂ, ವ್ಯವಸ್ಥಿತಃ–ಇದ್ದವನಾಗಿ, ವ್ಯಾಪಕತ್ವಾತ್–ವ್ಯಾಪಕನಾದ್ದರಿಂದ (ವಿಶ್ವವನ್ನು ಒಳಹೊರಗೆ ವ್ಯಾಪಿಸಿರುವುದರಿಂದ), (ವಿಷ್ಣುವೆನಿಸಿರುವೆನು); ಅಥವಾ, ತಸ್ಯ – ಆ ವಿಶ್ವದ, ವ್ಯಾಪಕತ್ವಾತ್ – ವ್ಯಾಪಕನಾದ್ದರಿಂದ, ಬಹಿರಂತಃ ವ್ಯವಸ್ಥಿತಃ – (ಅದರ) ಹೊರಗೂ ಒಳಗೂ ಸ್ಥಿತನಾಗಿದ್ದೇನೆ.

ಅಪರಿಚ್ಛಿನ್ನರೂಪೋऽತಃ ಪರಿಚ್ಛಿನ್ನ ಇವಾಭವಂ ।
ಭೂಯೋऽನಿರುದ್ಧರೂಪೇಣ ತತ್ತದ್ವಸ್ತುವಿಚೇಷ್ಟಕಃ ॥ ೩ ॥

ಅತಃ–(ನನ್ನ ವ್ಯಾಪ್ತಿಯು) ಹೀಗಿರುವುದರಿಂದ, ಅಪರಿಚ್ಛಿನ್ನರೂಪಃ–ವ್ಯಾಪ್ತವಾದ ರೂಪವುಳ್ಳ ನಾನು, ಪರಿಚ್ಛಿನ್ನಃ ಇವ–ಪರಿಮಿತಿಯುಳ್ಳ ನಾನಾ

ನಾಗಿದ್ದೇನೆ[1] (೧). ಸೃಷ್ಟಿಕಾಲಬರಲು, ನಾನು ಸ್ಥಾವರಜಂಗಮಾತ್ಮಕವಾದ ವಿಶ್ವವನ್ನು ನಿರ್ಮಿಸಿದೆನು; ಈ ವಿಶ್ವದ ಹೊರಗೂ ಒಳಗೂ ಸಹ ನಾನೇ ಇರುವುದರಿಂದ, ನಾನು ವಿಶ್ವವ್ಯಾಪಕನು; ಆದ್ದರಿಂದ ನಾನು ವಿಷ್ಣುವೆನಿಸುತ್ತೇನೆ (೨). ಹೀಗೆ ಜಗತ್ತನ್ನು ಒಳಹೊರಗೆ ವ್ಯಾಪಿಸಿರುವ ರೂಪವುಳ್ಳ ನಾನು, ಪ್ರತಿಪದಾರ್ಥದಲ್ಲಿರುವ ನನ್ನ ಅನಂತರೂಪಗಳಿಂದ ಅಭಿನ್ನನಾಗಿದ್ದರೂ, ಪರಿಮಿತಿಯುಳ್ಳ (ಆಯಾ ವಸ್ತುಸದೃಶ ಪರಿಮಿತಿಯುಳ್ಳ) ವನಂತೆ, ಆಯಾ ವಸ್ತುಗಳಲ್ಲಿ ಸ್ಥಿತನಾಗಿದ್ದೇನೆ. ಅನಿರುದ್ಧರೂಪದಿಂದ

---

[1] ವಿಷಲ್ಯ-ವ್ಯಾಪ್ತೌ, ಎಂದಿರುವುದರಿಂದ, ವ್ಯಾಪ್ತನಾದ್ದರಿಂದ ವಿಷ್ಣು, 'ವಿ' ಎಂದರೆ ವಿಶಿಷ್ಟ; 'ವಿಶಿಷ್ಟ' ಎಂದರೆ ಉತ್ತಮ-ಪೂರ್ಣ; 'ಷ'ಕಾರವು ಚೇಷ್ಟಕ ಶಕ್ತಿಯನ್ನು, 'ಣ'ಕಾರವು (ಣಶ್ಚನಿರ್ವೃತಿವಾಚಕಃ) ಸುಖವನ್ನೂ ಹೇಳುತ್ತವೆ; ಆದ್ದರಿಂದ ಸರ್ವಚೇಷ್ಟಕಶಕ್ತಿಯುಳ್ಳವನೂ ಪೂರ್ಣಾನಂದವುಳ್ಳವನೂ, ಎಂಬರ್ಥವನ್ನು, ವಿಷ್ಣುಶಬ್ದವು ಹೇಳುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೂಪಗಳುಳ್ಳವನಂತೆ, ಅಭವಂ–ಆಗಿರುವೆನು, ಭೂಯಃ–ಪುನಃ (ಅಥವಾ ಅತಿಶಯವಾಗಿ), ಅನಿರುದ್ಧರೂಪೇಣ – (ನನ್ನ) ಅನಿರುದ್ಧರೂಪದಿಂದ, ತತ್ತದ್ವಸ್ತುವಿಚೇಷ್ಟಕಃ–ಆಯಾ ವಸ್ತುಗಳ (ಪ್ರತಿಯೊಂದು ಪದಾರ್ಥದ) ಚೇಷ್ಟಕನೂ (ಅವುಗಳ ವಿವಿಧ ಸರ್ವಕ್ರಿಯೆಗಳಿಗೂ ಕಾರಣನು) ಆಗಿರುವೆನು.

ತತ್ತಚ್ಛಕ್ತಿಪ್ರದೋ ನಿತ್ಯಂ ತತ್ತತ್ಕರ್ಮಾನುಸಾರತಃ ।
ಸರ್ವತ್ರಾವಸ್ಥಿತೇರೇವಮನಿರುದ್ಧ ಇತಿ ಸ್ಮೃತಃ ॥ ೪ ॥

ತತ್ತತ್ಕರ್ಮಾನುಸಾರತಃ–ಅವರವರ ಕರ್ಮಾನುಸಾರವಾಗಿ, ತತ್ತಚ್ಛಕ್ತಿಪ್ರದಃ–ಅವರವರ ಶಕ್ತಿಗಳನ್ನು (ಜ್ಞಾನಕ್ರಿಯಾದಿ ಶಕ್ತಿಗಳನ್ನು) ಕೊಡತಕ್ಕವನು (ಉದ್ಬೋಧಿಸಿ ಅವರಿಂದ ನಾನಾ ವ್ಯಾಪಾರಗಳನ್ನು ಮಾಡಿಸುವವನು); ಸರ್ವತ್ರಾವಸ್ಥಿತೇಃ – ಹೀಗೆ ಸರ್ವವಸ್ತುಗಳಲ್ಲಿ ಸ್ಥಿತನಾಗಿರುವುದರಿಂದಲೇ (ಆಯಾ ವಸ್ತುಗಳ ಸಹಜಶಕ್ತಿಗಳನ್ನು ಸ್ವತಂತ್ರನಾಗಿ ಪ್ರೇರಿಸುವುದರಿಂದಲೇ), ಏವಂ – ಹೀಗೆ (ನನ್ನ ಅಚಿಂತ್ಯಶಕ್ತಿಗೆ ತಡೆಯಿಲ್ಲದಿರುವುದರಿಂದಲೇ), ಅನಿರುದ್ಧಃ ಇತಿ ಸ್ಮೃತಃ – ಅನಿರುದ್ಧನೆಂದು ಜ್ಞಾನಿಗಳಿಂದ ತಿಳಿಯಲ್ಪಟ್ಟಿರುವೆನು.

ಘಟಾಕಾರಂ ಭವತ್ಯೇವ ಘಟಸ್ಥಂ ಸಲಿಲಂ ಯಥಾ ।
ತತ್ತದಾಕಾರವಾನ್ ವಿಷ್ಣುಃ ತತ್ತದ್ವಸ್ತುಸ್ಥಿತಸ್ತಥಾ ॥ ೫ ॥

ಯಥಾ–ಹೇಗೆ, ಘಟಸ್ಥಂ–ಘಟದಲ್ಲಿರುವ (ಕೊಡ ಮೊದಲಾದ ಪಾತ್ರೆಯಲ್ಲಿರುವ), ಸಲಿಲಂ–ನೀರು, ಘಟಾಕಾರಂ–ಪಾತ್ರೆಯ ಆಕಾರವುಳ್ಳದ್ದು, ಭವತಿ ಏವ–ತಪ್ಪದೇ ಆಗುತ್ತದೆಯೋ, ತಥಾ–ಹಾಗೆ, ತತ್ತದ್ವಸ್ತುಸ್ಥಿತಃ–

ಸಕಲ (ಚೇತನಾಚೇತನ) ಪದಾರ್ಥಗಳ ಸರ್ವವಿಧ ಚೇಷ್ಟೆಗಳಿಗೂ (ಕ್ರಿಯೆಗಳಿಗೂ) ನಾನು ಕಾರಣನಾಗಿದ್ದೇನೆ (೩). ಆಯಾ ದೇವಾದಿ ಸರ್ವಚೇತನರ ಕರ್ಮಾನುಸಾರವಾಗಿ, ಅವರವರ ಸ್ವಾಭಾವಿಕಶಕ್ತಿಗಳನ್ನು ಉದ್ಬೋಧಿಸಿ ಅವರವರ ನಾನಾ ಕ್ರಿಯೆಗಳಿಗೆ ಅವಶ್ಯಕವಾದ ಶಕ್ತಿಪ್ರದನಾಗಿ, ಸ್ವತಂತ್ರನಾಗಿ ಸರ್ವವಸ್ತುಸ್ಥಿತನಾದ್ದರಿಂದಲೇ ನಾನು ಅನಿರುದ್ಧನಾಮವುಳ್ಳವನಾಗಿರುವೆನು (೪). ಘಟದಲ್ಲಿರುವ ಜಲವು, ಘಟಸದೃಶವಾದ ರೂಪವನ್ನೇ ಹೊಂದಿರುವಂತೆ, ಸಕಲಪದಾರ್ಥಗಳಲ್ಲಿರುವ ವಿಷ್ಣುರೂಪಗಳೂ ಆಯಾ ವಸ್ತುಸದೃಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಯಾ ವಸ್ತುಗಳಲ್ಲಿರುವ, ವಿಷ್ಣುಃ–ಶ್ರೀವಿಷ್ಣುವೂ, ತತ್ತದಾಕಾರವಾನ್–ಆಯಾ ವಸ್ತುಗಳ ಆಕಾರವುಳ್ಳವನೇ ಆಗಿರುತ್ತಾನೆ.

ತಥಾವಿಧಂ ಮಾಂ ಜಾನಂತಿ ಪಶ್ಯಂತ್ಯಥಪರೋಕ್ಷತಃ ।
ಅನಂತಶಕ್ತಿಮೀಶಾನಂ ಕಥಯಂತ್ಯಪಿ ವೈ ಮಿಥಃ ॥ ೬ ॥

ಮಾಂ–ನನ್ನನ್ನು (ವಿದ್ವಾಂಸಃ–ಜ್ಞಾನಿಗಳು, ಎನೇ ಶ್ಲೋಕದಿಂದ ಕರ್ತೃಪದವನ್ನು ಯೋಜಿಸಿಕೊಳ್ಳಬಹುದು), ತಥಾವಿಧಂ–ಆ ಪ್ರಕಾರವಿರುವವನನ್ನಾಗಿ (ತತ್ತದ್ವಸ್ತುಗಳಲ್ಲಿ ತದಾಕಾರನಾಗಿರುತ್ತಾನೆಂದು), ಜಾನಂತಿ–ತಿಳಿಯುತ್ತಾರೆ; ಅಥ–ಹಾಗೂ, ಪರೋಕ್ಷತಃ–ಶಾಸ್ತ್ರಾಭ್ಯಾಸಾದಿಗಳಿಂದ, ಪಶ್ಯಂತಿ – ನಿಶ್ಚಯಜ್ಞಾನವುಳ್ಳವರಾಗುತ್ತಾರೆ (ಸರ್ವತ್ರ ಶ್ರೀವಿಷ್ಣುವನ್ನೇ ಕಾಣುತ್ತಾರೆ); ಅಪಿ–ಮತ್ತು, ಮಿಥಃ–ಪರಸ್ಪರವಾಗಿ, ಈಶಾನಂ–ಸರ್ವನಿಯಾಮಕನಾದ ನನ್ನನ್ನು, ಅನಂತಶಕ್ತಿಂ–ಅಪರಿಮಿತ ಸಾಮರ್ಥ್ಯವುಳ್ಳವನೆಂದು, ಕಥಯಂತಿ–ಹೇಳಿಕೊಳ್ಳುತ್ತಾರೆ.

ಶಿಕ್ಷಯಂತಿ ಸ್ವಶಿಷ್ಯೇಷು ಪ್ರಪನ್ನೇಷ್ವಪಿ ನಿತ್ಯಶಃ ।
ದಯಾಲವಃ ಪದಂ ವಿಷ್ಣೋಸ್ತ್ವೀದೃಶಂ ಸದಸತ್ಪರಂ ॥ ೭ ॥

ರೂಪವುಳ್ಳವುಗಳೇ ಆಗಿರುತ್ತವೆ (೫). ಹೀಗೆ ಸಕಲವಸ್ತುಗಳಲ್ಲಿ ತತ್ತದಾಕಾರನಾಗಿ ನಾನಿರುವೆನೆಂದು ವಿದ್ವಾಂಸರು ತಿಳಿಯುತ್ತಾರೆ; ಆ ಅನುಸಂಧಾನದಿಂದ ಎಲ್ಲ ವಸ್ತುಗಳನ್ನು ನೋಡುತ್ತಾರೆ—ಅಲ್ಲಿ ನನ್ನನ್ನೇ ಕಾಣುತ್ತಾರೆ; ಪರಸ್ಪರ ಅನಂತಶಕ್ತಿಯುತನಾದ ನನ್ನನ್ನು ಸರ್ವನಿಯಾಮಕನೆಂದು ಹೇಳುತ್ತಾ ಆನಂದಿಸುತ್ತಾರೆ (೬). ಅಜ್ಞಾನವೆಂಬ ನಿದ್ರೆಗೆ ವಶರಾಗದ, ಅತಏವ, ನಿತ್ಯಜಾಗ್ರತರಾದ, ದಯಾಳುಗಳಾದ, ಜ್ಞಾನಿಗಳು, ತಮ್ಮ ಆಶ್ರಿತಜನರಿಗೂ, ಶಿಷ್ಯರಿಗೂ, ಶ್ರೀವಿಷ್ಣುಸ್ವರೂಪವನ್ನು, ಕಾರ್ಯಕಾರಣವಸ್ತುಗಳಿಂದ ಭಿನ್ನವೆಂದೂ,[1] ಆಕಾಶದಲ್ಲಿ ಸೂರ್ಯಪ್ರಕಾಶದಂತೆ, ಸರ್ವತ್ರ

[1] ಸತ್ವರಜಸ್ತಮೋಗುಣಾತ್ಮಕಪ್ರಕೃತಿಯಿಂದ ಮೊದಲು ಸೃಷ್ಟವಾದ ಮಹತ್ತತ್ವವು, ಪ್ರಕೃತಿಕಾರ್ಯವು – ಪ್ರಕೃತಿಯು ಕಾರಣವು; ಮಹತ್ತತ್ವದಿಂದ (ಅದರ ವಿಕಾರದಿಂದ) ಹುಟ್ಟಿದ ಅಹಂಕಾರತತ್ವವು, ಮಹತ್ತತ್ವದ ಕಾರ್ಯವು—ಮಹತ್ತತ್ವವು ಅದರ ಕಾರಣವು; ಹೀಗೆ ಎಲ್ಲ ತತ್ವಗಳನ್ನೂ ಕಾರ್ಯಕಾರಣಾತ್ಮಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾಗೃವಾಂಸೋಽಥ ವಿದ್ವಾಂಸೋ ದಿವಿ ಚಕ್ಷುರಿವಾತತಂ ।
ತನ್ಮೂಢಾ ನೈವ ಜಾನಂತಿ ಮಾಯಾಮುಷಿತಚಕ್ಷುಷಃ ॥ ೮ ॥

(ಆ ಜ್ಞಾನಿಗಳು), ಪ್ರಪನ್ನೇಷು – ತಮ್ಮನ್ನಾಶ್ರಯಿಸಿದವರಲ್ಲಿ, ಸ್ವಶಿಷ್ಯೇಷು–ತಮ್ಮ ಶಿಷ್ಯರಲ್ಲಿಯೂ, ನಿತ್ಯಶಃ–ನಿತ್ಯವೂ, ಶಿಕ್ಷಯಂತಿ–(ಹೀಗೆಂದೇ) ಉಪದೇಶಿಸುತ್ತಾರೆ; ಜಾಗೃವಾಂಸಃ–ನಿತ್ಯಜಾಗ್ರತರಾಗಿರುವ (ಅಜ್ಞಾನವೆಂಬ ನಿದ್ರೆಯಿಲ್ಲದ), ದಯಾಲವಃ – ದಯಾಳುಗಳಾದ, ವಿದ್ವಾಂಸಃ–ಜ್ಞಾನಿಗಳು, ದಿವಿ–ಆಕಾಶದಲ್ಲಿ, ಚಕ್ಷುಃ ಇವ–ಸೂರ್ಯನಂತೆ, ಆತತಂ – ವ್ಯಾಪ್ತನೂ, ಸದಸತ್ಪರಂ – ಸತ್ (ಕಾರ್ಯ) ಅಸತ್ (ಕಾರಣ) ಗಳಿಂದ ಭಿನ್ನನೂ ಶ್ರೇಷ್ಠನೂ ಆದ, ವಿಷ್ಣೋಃ–ಶ್ರೀವಿಷ್ಣುವಿನ, ಪದಂ–ಸ್ವರೂಪವನ್ನು, ಈದೃಶಂ–ಈ ಪ್ರಕಾರ ಸರ್ವತ್ರ ಇದ್ದು ಸರ್ವನಿಯಾಮಕ ಅನಂತಶಕ್ತಿಯುಳ್ಳದ್ದೆಂದು, (ಶಿಕ್ಷಯಂತಿ–ಅಧಿಕಾರವಾಣಿಯಿಂದ ಉಪದೇಶಿಸುತ್ತಾರೆ); ತತ್–(ಈ ಮುಖ್ಯ ಪ್ರಮೇಯವನ್ನು) ಹೀಗೆಂಬುದನ್ನು, ಮಾಯಾ-ಮುಷಿತಚಕ್ಷುಷಃ–ಮಾಯಾಮೋಹಿತವಾದ ದೃಷ್ಟಿಯುಳ್ಳವರಾದ (ವಿಷ್ಣುವಿನ ಇಚ್ಛೆಯಿಂದ ಮೋಹಿತರಾದ ಅಥವಾ ಆತನ ಅಧೀನವಾದ ಮಾಯಾನಾಮಕ ಲಕ್ಷ್ಮೀದೇವಿಯಿಂದಲೂ ಆಕೆಯಿಂದ ಅಭಿಮನ್ಯಮಾನವಾದ ಪ್ರಕೃತಿಯಿಂದಲೂ ಯಥಾರ್ಥವನ್ನರಿಯುವ ಸಾಮರ್ಥ್ಯರಹಿತರಾದ), ಮೂಢಾಃ–ಅಜ್ಞಾನಿಗಳು, ನೈವ ಜಾನಂತಿ–ತಿಳಿಯುವುದಿಲ್ಲ.

ದೇಹೇಹಂಭಾವಿನೋಽನ್ಯತ್ರ ಮಮತಾಬುದ್ಧಯಃ ಸದಾ ।
ಅನಿಚ್ಛಂತೋಽಪಿ ಭುಂಜಂತಿ ದುಃಖಾನಿ ವಿವಿಧಾನ್ಯಪಿ ॥ ೯ ॥

ವ್ಯಾಪ್ತವೆಂದೂ, ಸರ್ವವಸ್ತುನಿಯಾಮಕವಾದ ತತ್ತದ್ವಸ್ತುಸದೃಶ ಆಕಾರಗಳುಳ್ಳ ಅನಂತರೂಪಗಳಿಂದ ಅಂತರ್ಯಾಮಿಯಾಗಿದ್ದು ಸರ್ವನಿಯಾಮಕನಾದ ಅನಂತಶಕ್ತಿಯುಳ್ಳದ್ದೆಂದೂ, ಉಪದೇಶಿಸುತ್ತಾರೆ; ವಿಷ್ಣುಮಾಯಾಮೋಹಿತರಾದ ಅಜ್ಞಾನಿಗಳು ಮಾತ್ರ ಹೀಗೆಂಬುದನ್ನು ತಿಳಿಯುವುದಿಲ್ಲ (೭–೮). ದೇಹವನ್ನೇ ಆತ್ಮನೆಂದು ತಿಳಿಯುವವರೂ, (ದೇಹಾತ್ಮೈಕ್ಯವಾದಿಗಳೂ), ದಾರಾಪುತ್ರಗೃಹೈಶ್ವರ್ಯಾದಿಗಳು ತಮ್ಮವೆಂದೂ (ತಮ್ಮ ಯತ್ನ

ಗಳೆಂದು ತಿಳಿಯಬೇಕು. ಇವುಗಳಿಂದ ಪರನಾದವನು (ಭಿನ್ನನೂ ; ನಿಯಾಮಕನೂ—ಸೃಷ್ಟಿಕರ್ತನೂ ಆದ್ದರಿಂದ, ಉತ್ತಮನೂ ಆದವನು) ಶ್ರೀವಿಷ್ಣುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಹೇ–(ತನ್ನ) ದೇಹದಲ್ಲಿ, ಸದಾ–ನಿರಂತರವೂ, ಅಹಂಭಾವಿನಃ– ನಾನೇ ಎಂಬ ಜ್ಞಾನವುಳ್ಳವರು (ದೇಹವೇ ತಾನೆಂದು) ತಿಳಿಯುವವರು, ಮತ್ತು, ಅನ್ಯತ್ರ–(ದೇಹಭಿನ್ನವಾದ) ಪತ್ನೀ ಪುತ್ರ ಗೃಹಾದಿಗಳಲ್ಲಿ, ಮಮತಾಬುದ್ಧಯಃ– ಮಮತ್ವ (ನನ್ನವು–ತನ್ನ ಅಧೀನಗಳೆಂಬ) ಬುದ್ಧಿ ಯುಳ್ಳವರು, ಅನಿಚ್ಛಂತಃ ಅಪಿ– ಅವರು ಇಚ್ಛಿಸದಿದ್ದರೂ (ಅವರ ಇಚ್ಛೆಗೆ ವಿರುದ್ಧವಾಗಿ), ವಿವಿಧಾನಿ–ನಾನಾ ಪ್ರಕಾರದ, ದುಃಖಾನಿ ಅಪಿ–ದುಃಖ ಗಳನ್ನೂ ಸಹ, ಭುಂಜಂತಿ–ಅನುಭವಿಸುತ್ತಾರೆ.

ಸುಖಾನಿ ಪ್ರಾರ್ಥ್ಯಮಾನಾನಿ ನಾಪ್ನುವಂತಿ ನಿಜೇಚ್ಛಯಾ ।
ಪ್ರತಿಕ್ಷಣಂ ಪ್ರಪಶ್ಯಂತಿ ಸರ್ವೇಽಪ್ಯೇವ ಪರಾತ್ಮತಾಂ ॥ ೧೦ ॥

ನಿಜೇಚ್ಛಯಾ – ತಮ್ಮ ಇಚ್ಛೆಯಂತೆ, ಪ್ರಾರ್ಥ್ಯಮಾನಾನಿ–(ಅವರು ಕೋರುವ) ಅಪೇಕ್ಷಿಸುವ, ಸುಖಾನಿ–ಸುಖಗಳನ್ನು, ನಾಪ್ನುವಂತಿ–ಹೊಂದು ವುದಿಲ್ಲ; ಪ್ರತಿಕ್ಷಣಂ–ಪ್ರತಿಕ್ಷಣದಲ್ಲಿ, ಪರಾತ್ಮತಾಂ–ಅನ್ಯಾಧೀನತ್ವವನ್ನು (ದೇಹಾದಿಗಳೆಲ್ಲವೂ ಪರಮಾತ್ಮನ ಅಧೀನಗಳೆಂಬುದನ್ನು), ಸರ್ವೇ–ಎಲ್ಲರೂ (ಲೋಕದ ಎಲ್ಲ ಪ್ರಜರೂ), ಪ್ರಪಶ್ಯಂತಿ ಏವ–ಸ್ಪಷ್ಟವಾಗಿ ತಿಳಿಯುತ್ತಾರೆ (ಇದು ಸರ್ವರ ಅನುಭವಸಿದ್ಧವೇ ಇದೆ).

ಸ್ವಾತಂತ್ರ್ಯಂ ಮನ್ಯತೇ ಚಾಪಿ ಮಹಾಮೋಹಸ್ಯ ಜೃಂಭಣಂ ।
ವಿದಿತ್ವಾಪಿ ನ ಜಾನಾತಿ ಪಶ್ಯನ್ನಪಿ ನ ಪಶ್ಯತಿ ॥ ೧೧ ॥

ದಿಂದ ಸಂಪಾದಿತವಾದ ತಮ್ಮ ಅಧೀನವಸ್ತುಗಳೆಂದೂ) ತಿಳಿಯುವವರೂ (ಅಹಂಮಮಕಾರಗಳುಳ್ಳವರು), ತಮ್ಮ ಇಚ್ಛೆಗೆ ವಿರೋಧವಾಗಿ ನಾನಾವಿಧ ದುಃಖಗಳನ್ನು ಅನುಭವಿಸುತ್ತಾರೆ(೯). ತಾವು ಇಚ್ಛಿಸುವಂತೆ, ಅಪೇಕ್ಷಿಸುವ ಸುಖಗಳು ದೊರೆಯುವುದಿಲ್ಲ; ಎಲ್ಲರೂ ಪ್ರತಿಕ್ಷಣದಲ್ಲಿ ಅಹಂಮಮಕಾರಗಳಿಗೆ ವಿಷಯಗಳಾದ ದೇಹಗೃಹಾದಿ ಸರ್ವವೂ, ತಮ್ಮ ಅಧೀನಗಳಲ್ಲವೆಂದು (ಪರಾಧೀನಗಳೆಂದು, ವಿವೇಕಿಗಳು ಪರನಾಮಕ ಶ್ರೀಹರಿಯ ಅಧೀನಗಳೆಂದು) ತಿಳಿಯುತ್ತಾರೆ (೧೦). ಪ್ರತಿಕ್ಷಣದಲ್ಲಿ ಉಂಟಾಗುವ ಅಸ್ವಾತಂತ್ರ್ಯದ ಅನುಭವವನ್ನು ತಿರಸ್ಕರಿಸಿ ತಾನೇ ಸ್ವತಂತ್ರನೆಂದು, ತಿಳಿಯುವುದು ಆತ್ಮ ವಂಚನೆಯೇ ಸರಿ; ತಿಳಿದೂ ತಿಳಿಯದವನು, ಕಂಡೂ ಕಾಣದ ಕುರುಡನಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಪಿ – ಹೀಗಿದ್ದರೂ (ಪರಾಧೀನತೆಯು ಪ್ರತಿಕ್ಷಣದಲ್ಲಿ ಅನುಭವಕ್ಕೆ ಬರುತ್ತಿದ್ದರೂ), ಸ್ವಾತಂತ್ರ್ಯಂ – ತನ್ನ ಸ್ವಾತಂತ್ರ್ಯವನ್ನು (ತಾನು ಸ್ವತಂತ್ರನೆಂದು), ಮನ್ಯತೇ – ತಿಳಿಯುತ್ತಾನೆ; (ಅಪಿ – ಇದಾದರೋ), ಮಹಾಮೋಹಸ್ಯ – ಮಹಾಮೋಹದ (ಅಧಿಕವಾದ ಆತ್ಮವಂಚನೆಯ), ಜೃಂಭಣಂ–ವಿಜೃಂಭಣವೇ (ತಲೆಎತ್ತಿ ಮೆರೆಯುವುದೇ) ಆಗಿದೆ; ವಿದಿತ್ವಾಪಿ– ತಿಳಿದೂ ಸಹ, ನ ಜಾನಾತಿ – ತಿಳಿಯುವುದಿಲ್ಲ; ಪಶ್ಯನ್ನಪಿ – ಕಂಡೂ ಸಹ, ನ ಪಶ್ಯತಿ–ಕಾಣುವುದಿಲ್ಲ (ಕುರುಡನಂತಿರುತ್ತಾನೆ).

ನ ಶೃಣೋತಿ ತಥಾ ಶೃಣ್ವನ್ ಶಿಕ್ಷಮಾಣೋ ನ ಶಿಕ್ಷತೇ ।
ಯತ್ತನ್ಮಾಯಾಬಲಂ ವಿಷ್ಣೋರ್ಮಹಾಶಕ್ತೇರ್ಮಹಾತ್ಮನಃ ॥ ೧೨ ॥

ತಥಾ–ಹಾಗೂ, ಶೃಣ್ವನ್–ಕೇಳಿದರೂ, ನ ಶೃಣೋತಿ–ಕೇಳುವುದಿಲ್ಲ (ಕಿವುಡನೇ ಸರಿ); ಶಿಕ್ಷಮಾಣಃ–ಕಲಿಸಲ್ಪಟ್ಟರೂ, ನ ಶಿಕ್ಷತೇ–ಕಲಿಯುವುದಿಲ್ಲ (ಹಿರಿಯರ ಉಪದೇಶಗಳನ್ನೇ ಕಿವಿಯಲ್ಲಿ ಹಾಕಿಕೊಳ್ಳುವುದಿಲ್ಲ–ಅವರ ಅನುಭವದ ನುಡಿಗಳಿಂದ ಪಾಠಕಲಿಯುವುದಿಲ್ಲ); ಯತ್ – ಹೀಗಿರುವುದೆಂಬುದು ಯಾವುದೋ, ತತ್–ಅದು, ಮಹಾಶಕ್ತೇಃ–ಅದ್ಭುತಶಕ್ತಿಯುತನಾದ, ಮಹಾತ್ಮನಃ – ಅನಂತಮಹಿಮನಾದ, ವಿಷ್ಣೋಃ – ಶ್ರೀವಿಷ್ಣುವಿನ, ಮಯಾಬಲಂ–ಇಚ್ಛಾಶಕ್ತಿಯಿಂದಾದುದು.[1]

ಬೋಧಯಂತಃ ಪರಾನ್ಯೇತು ಸ್ವಯಂ ಮುಗ್ಧಾ ಭವಂತ್ಯುತ ।
ಯತ್ತನ್ಮಾಯಾಬಲಂ ವಿಷ್ಣೋರ್ಮಹಾಶಕ್ತೇರ್ಮಹಾತ್ಮನಃ ॥ ೧೩ ॥

---

(೧೧). ಕೇಳಿಯೂ ಕೇಳದಿರುವವನು ಕಿವುಡನೇ ಸರಿ; ಶಿಕ್ಷಿಸಿದರೂ ಉಪದೇಶವನ್ನು ಗ್ರಹಿಸದವನು, ಮೂಢನೇ—ಹೀಗಾಗುವುದಕ್ಕೆ, ಅಚಿಂತ್ಯಶಕ್ತಿಯುತನೂ ಅನಂತಮಹಿಮನೂ ಆದ ಶ್ರೀವಿಷ್ಣುವಿನ ಇಚ್ಛಾಬಲವೇ ಕಾರಣ

(೧೨). ಅನ್ಯರಿಗೆ ಉಪದೇಶಮಾಡುವವರು, ಸ್ವಯಂ ತದ್ವಿಷಯಕ ಮೋಹ

[1] ಮಾಯಾ–ಇಚ್ಛಾಶಕ್ತಿ; ಮಾಯಾ-ಲಕ್ಷ್ಮೀದೇವಿ ಮತ್ತು ಆಕೆಯಿಂದ ಅಭಿಮನ್ಯಮಾನವಾದ ಸತ್ವಾದಿಗುಣಾತ್ಮಕಪ್ರಕೃತಿ; ಶ್ರೀಹರಿಯ ಇಚ್ಛೆಯು, ಲಕ್ಷ್ಮೀ ಮತ್ತು ಪ್ರಕೃತಿಗಳ ದ್ವಾರಾ, ಜೀವರ ಪೂರ್ವ ಕರ್ಮಗಳನ್ನು ನಿಮಿತ್ತ ಮಾಡಿಕೊಂಡು, ಬುದ್ಧಿ ಮೋಹಾದಿಗಳನ್ನುಂಟುಮಾಡುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೇತು – ಯಾರು, ಪರಾನ್ – ಅನ್ಯರನ್ನು ಕುರಿತು (ಅನ್ಯರಿಗೆ), ಬೋಧಯಂತಃ – ಉಪದೇಶಮಾಡುವವರಾದರೂ, ಸ್ವಯಂ – ತಾವೇ, ಮುಗ್ಧಾಃ–ಮುಗ್ಧರು (ತಾವು ಉಪದೇಶಿಸುವ ವಿಷಯಕ ಅಜ್ಞಾನಿಗಳು) ಭವಂತಿ ಉತ – ಆಗಿರುತ್ತಾರೆಂಬುದು ಅನುಭವಸಿದ್ಧವಲ್ಲವೇ !, ಯತ್– ಹೀಗೆಂಬ, ತತ್–ಅದು, ಮಹಾಶಕ್ತೇಃ, ಮಹಾತ್ಮನಃ ವಿಷ್ಣೋಃ ಮಾಯಾ– ಬಲಂ–ಅದ್ಭುತಶಕ್ತಿಯುತನೂ ಮಹಾಮಹಿಮನೂ ಆದ ಶ್ರೀವಿಷ್ಣುವಿನ ಮಾಯಾಬಲವಲ್ಲದೇ ಬೇರೆಯಲ್ಲ.

ಪರೇಷಾಂ ಹಾನಿಲಾಭಾದಿವೇತ್ತಾರಃ ಸ್ವಂ ನ ಜಾನತೇ ।
ಯತ್ತನ್ಮಾಯಾಬಲಂ ವಿಷ್ಣೋರ್ಮಹಾಶಕ್ತೇರ್ಮಹಾತ್ಮನಃ ॥ ೧೪ ॥
ಪರೇಷಾಂ ರೋಗಹರ್ತಾರಃ ಸ್ವರೋಗಂ ನ ವಿಜಾನತೇ ।
ಯತ್ತನ್ಮಾಯಾಬಲಂ ವಿಷ್ಣೋರ್ಮಹಾಶಕ್ತೇರ್ಮಹಾತ್ಮನಃ ॥ ೧೫ ॥
ಪರೇಷಾಮಭಿಚಾರಾದಿ ಕುರ್ವಂತಃ ಸ್ವಂ ನ ಜಾನತೇ ।
ಯತ್ತನ್ಮಾಯಾಬಲಂ ವಿಷ್ಣೋರ್ಮಹಾಶಕ್ತೇರ್ಮಹಾತ್ಮನಃ ॥ ೧೬ ॥
ಅಧೀಯಾನೇಷು ಸರ್ವೇಷು ಜಾಯಂತೇ ಚಿತ್ರಬುದ್ಧಯಃ ।
ಯತ್ತನ್ಮಾಯಾಬಲಂ ವಿಷ್ಣೋರ್ಮಹಾಶಕ್ತೇರ್ಮಹಾತ್ಮನಃ ॥ ೧೭ ॥

ವುಳ್ಳವರಾಗಿರುತ್ತಾರೆ ; ಇದೂ ಶ್ರೀವಿಷ್ಣುವಿನ ಮಾಯಾಬಲವೇ ಸರಿ (೧೩). ಅನ್ಯರ ಹಾನಿ ಲಾಭಗಳನ್ನು ತಿಳಿಯುವವರು ತಮ್ಮ ಹಾನಿ ಲಾಭಗಳನ್ನು ತಿಳಿಯುವುದಿಲ್ಲ ; ಇತರರ ರೋಗಗಳನ್ನು ಪರಿಹರಿಸುವವರು (ವೈದ್ಯರೇ ಮೊದಲಾದವರು) ತಮ್ಮ ರೋಗಗಳಿಗೆ ಪರಿಹಾರವನ್ನು ತಿಳಿಯರು ; ಅನ್ಯರ ಮೇಲೆ ಅಭಿಚಾರಗಳನ್ನು ಪ್ರಯೋಗಿಸಿ (ಮಂತ್ರಮಾಟಗಳನ್ನು ಮಾಡಿ) ಪೀಡಿಸುವವರು, ತಮ್ಮ ಮೇಲೆ ಅನ್ಯರು ಪ್ರಯೋಗಿಸಬಹುದಾದ ಅಭಿಚಾರ ಗಳನ್ನು ತಿಳಿಯುವುದಿಲ್ಲ (ಅವುಗಳಿಗೆ ಪರಿಹಾರವನ್ನೂ ತಿಳಿಯುವುದಿಲ್ಲ) ; ಒಬ್ಬ ಗುರುವಿನಲ್ಲಿ ಅಧ್ಯಯನಮಾಡುವ ಬಹುಜನರು (ಏಕೋದರಭ್ರಾತೃ ಗಳು ಸಹ), ವಿಭಿನ್ನಬುದ್ಧಿಯುಳ್ಳವರಾಗುತ್ತಾರೆ (ಏಕಪ್ರಕಾರದ ವಿದ್ಯಾವಂತ ರಾಗುವುದಿಲ್ಲ) ; ಈ ಎಲ್ಲಕ್ಕೂ, ಅಚಿಂತ್ಯಶಕ್ತಿಯುತನೂ, ಅಪಾರಮಹಿಮನೂ ಆದ ಶ್ರೀ ಮಹಾವಿಷ್ಣುವಿನ ಇಚ್ಛೆಯೇ ಮುಖ್ಯಕಾರಣವು (೧೪–೧೭).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರೇಷಾಂ–ಅನ್ಯರ, ಹಾನಿಲಾಭಾದಿ–ನಷ್ಟಲಾಭಗಳನ್ನು, ವೇತ್ತಾರಃ–ತಿಳಿಯುವವರು, ಸ್ವಂ – ತಮ್ಮದನ್ನು (ತಮ್ಮ ನಷ್ಟ ಲಾಭಗಳನ್ನು), ನ ಜಾನತೇ – ತಿಳಿಯುವುದಿಲ್ಲ; ಯತ್‌ತತ್ – ಯಾವುದರಿಂದ ಹೀಗಾಗುವುದೋ ಅದು, ಮಹಾಶಕ್ತೇಃ, ಮಹಾತ್ಮನಃ ವಿಷ್ಣೋಃ – ಅಚಿಂತ್ಯಶಕ್ತಿಯುತನೂ ಮಹಾಮಹಿಮನೂ ಆದ ಶ್ರೀವಿಷ್ಣುವಿನ, ಮಾಯಾಬಲಂ–ಇಚ್ಛಾಶಕ್ತಿಯಿಂದಾದುದು.

ಪರೇಷಾಂ–ಇತರರ, ರೋಗಹರ್ತಾರಃ–ರೋಗಗಳನ್ನು ಪರಿಹರಿಸುವವರು, ಸ್ವರೋಗಂ–ತಮ್ಮ ರೋಗವನ್ನು, ನ ವಿಜಾನತೇ–ತಿಳಿಯುವುದಿಲ್ಲ; ಹೀಗೆಂಬುದು ಶ್ರೀವಿಷ್ಣುವಿನ ಮಾಯಾಬಲದಿಂದ (ಹಿಂದಿನ ಶ್ಲೋಕಗಳಲ್ಲಿ ಈ ಉತ್ತರಾರ್ಧಶ್ಲೋಕದ ಅರ್ಥವನ್ನು ಹೇಳಿರುವಂತೆ ಇಲ್ಲಿಯೂ ತಿಳಿಯಬೇಕು).

ಪರೇಷಾಂ–ಇತರರಿಗೆ, ಅಭಿಚಾರಾದಿ–ಅಭಿಚಾರಾದಿಗಳನ್ನು (ಮಾಟ ಮಂತ್ರಾದಿ ವಾಮಾಚಾರಗಳಿಂದ ಪೀಡೆಗಳನ್ನು), ಕುರ್ವಂತಃ – ಮಾಡುವವರು, ಸ್ವಂ–ತಮ್ಮದನ್ನು (ಅನ್ಯರು ತಮ್ಮಲ್ಲಿ ಪ್ರಯೋಗಿಸುವ ಅಭಿಚಾರಗಳನ್ನು), ನ ಜಾನತೇ–ತಿಳಿಯುವುದಿಲ್ಲ; ಉತ್ತರಾರ್ಧದ ಅರ್ಥವನ್ನು ಹಿಂದಿನಂತೆ ತಿಳಿಯಬೇಕು); ಸರ್ವೇಷು–ಎಲ್ಲರೂ (ಬಹುಜನರು ಒಬ್ಬ ಗುರುವಿನಲ್ಲಿ), ಅಧೀಯಾನೇಷು-ಅಧ್ಯಯನಮಾಡುತ್ತಿರಲು (ಓದುತ್ತಿರಲು), ಚಿತ್ರಬುದ್ಧಯಃ– ವಿವಿಧವಾದ ಬುದ್ಧಿಯುಳ್ಳವರು (ವಿಭಿನ್ನ ಜ್ಞಾನವುಳ್ಳವರು), ಜಾಯಂತೇ–ಆಗುತ್ತಾರೆ; ಉತ್ತರಾರ್ಧ ಮೊದಲಿನಂತೆ.

ಅಚೇತನಸ್ಯ ವೃಕ್ಷಾದೇಃ ಸೂರ್ಯಾದೇರ್ದರ್ಶನಾದಿನಾ ।
ಯತ್ ಸ್ಯಾತ್ ಪತ್ರವಿಕಾಸಾದಿ ಸಾ ಮಾಯಾ ಪರಮಾ ಮಮ ॥
ಅಚೇತನೋಽಪಿ ದೇಹೋಽಯಂ ನಾನಾಚೇಷ್ಟಾಃ ಕರೋತಿ ವೈ ।
ಸ್ವಪಾತಂ ನೈವ ಜಾನಾತಿ ಸಾ ಮಾಯಾ ಪರಮಾ ಮಮ ॥ ೧೯ ॥

ಅಚೇತನಗಳಾದ ವೃಕ್ಷಾದಿಗಳಿಗೆ, ಸೂರ್ಯಕಿರಣಗಳ ದರ್ಶನದಿಂದ (ಸೂರ್ಯಕಿರಣಾದಿಗಳ ಸಂಗದಿಂದ) ಎಲೆಗಳು ಹುಟ್ಟುತ್ತವೆ–ಪುಷ್ಪಾದಿಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಕರೋಗೇಷು ದೇಹೇಷು ಏಕಮೇವ ಹಿ ಚೌಷಧಂ ।
ಕರೋತಿ ಫಲಭೇದಂ ಯತ್ ಸಾ ಮಾಯಾ ಪರಮಾ ಮಮ ॥೨೦॥

ಗೋಮಯಾದೇರ್ಹಿ ಜಾಯಂತೇ ನಾನಾ ಜೀವಾಃ ಸಹಸ್ರಶಃ ।
ವಿನಾ ಮಾತಾಪಿತೃಭ್ಯಾಂ ಯತ್ ಸಾ ಮಾಯಾ ಪರಮಾ ಮಮ ॥

ಗವಾದಿ ಭಕ್ಷಿತಂ ವಸ್ತು ಕ್ಷೀರರಕ್ತಾದಿ ಭೇದತಃ ।
ಭಜತೇ ಪರಿಣಾಮಂ ಯತ್ ಸಾ ಮಾಯಾ ಪರಮಾ ಮಮ ॥ ೨೧ ॥

ದೇಹಸ್ಥಾನವಿಶೇಷೇಷು ನಖಲೋಮಾದಿಕಂ ಹಿ ಯತ್ ।
ಜಾಯತೇ ಸ್ವೇಚ್ಛಯಾ ನೈವ ಸಾ ಮಾಯಾ ಪರಮಾ ಮಮ॥೨೨॥

ಬೀಜಮಂಕುರತಾಂ ಯಾತಿ ಕಾಚಿಚ್ಛಾಖಾ ಪ್ರರೋಹತಿ ।
ನ ಪ್ರರೋಹತಿ ಕಿಂಚಿಚ್ಚ ಸಾ ಮಾಯಾ ಪರಮಾ ಮಮ ॥ ೨೩ ॥

ಜೀವಾದಿನಾ ವಿನೈವಾನ್ಯದ್ಭ್ರಮೇರ್ವಾ ಸಲಿಲಾದಪಿ ।
ಜಾಯತೇ ಸ್ವೇಚ್ಛಯಾ ನೈವ ಸಾ ಮಾಯಾ ಪರಮಾ ಮಮ॥೨೪॥

ರಜಸ್ವಲಾಯಾಂ ಭಾರ್ಯಾಯಾಂ ರೇತಃ ಸೇಕೇ ಕೃತೇಽಪಿ ಹಿ ।
ನೈವೋತ್ಪತ್ತಿರ್ಹಿ ಗರ್ಭಸ್ಯ ಸಾ ಮಾಯಾ ಪರಮಾ ಮಮ ॥ ೨೫ ॥

ಶುಕ್ರಶೋಣಿತಸಂಬಂಧಾದ್ಗರ್ಭೋತ್ಪತ್ತಿರ್ಹಿ ಜಾಯತೇ ।
ತಥಾವಯವಸಂಸ್ಥಾನಂ ಸಾ ಮಾಯಾ ಪರಮಾ ಮಮ ॥ ೨೬ ॥

ಶುಕ್ರಶೋಣಿತಸಂಬಂಧಾತ್ ಸ್ತ್ರೀಪುಂಕ್ಲೀಬಾದಿಭೇದತಃ ।
ಜಾಯತೇ ಗರ್ಭನಿಷ್ಪತ್ತಿಃ ಸಾ ಮಾಯಾ ಪರಮಾ ಮಮ ॥ ೨೭ ॥

ವಿಕಾಸ ಹೊಂದುತ್ತವೆ;[1] ಅಚೇತನಗಳಾದ ನಾನಾಪ್ರಾಣಿದೇಹಗಳು ವಿವಿಧವಾಗಿ ಚಲನಾದಿ ಚೇಷ್ಟೆಗಳನ್ನು ಮಾಡುತ್ತವೆ—ಆದರೆ ಒಂದು ಕಾಲಕ್ಕೆ ನಿಶ್ಚೇಷ್ಟಗಳಾಗುತ್ತವೆ; ಬಹು ದೇಹಗಳಲ್ಲಿ ಗುರ್ತಿಸಬಹುದಾದ ಒಂದೇ ರೋಗಕ್ಕೆ, ಒಂದೇ ಔಷಧಿಯನ್ನು ಪ್ರಯೋಗಿಸಿದರೂ, ಅದು ವಿವಿಧವಾದ

[1] 'ವೃಕ್ಷಾದಿ' ಎಂಬಲ್ಲಿನ ಆದಿಶಬ್ದದಿಂದ ಲತಾಗುಲ್ಮಾದಿ ಪುಷ್ಪಗಳನ್ನು ಬಿಡುವ ಸಸ್ಯಗಳನ್ನು ಇಟ್ಟುಕೊಳ್ಳಬೇಕು; ವೃಕ್ಷಾದಿಗಳು, (ತದ್ಗತ) ಅವುಗಳಲ್ಲಿರುವ ವೃಕ್ಷಾದಿಜೀವರುಗಳ ದೇಹಗಳು; ಮನುಷ್ಯದೇಹದಲ್ಲಿ ಜೀವನಿದ್ದರೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಚೇತನಸ್ಯ–ಅಚೇತನಗಳಾದ, ವೃಕ್ಷಾದೇಃ – ವೃಕ್ಷ ಮೊದಲಾದವುಗಳಿಗೆ ಸೂರ್ಯಾದೇಃ – ಸೂರ್ಯಾದಿಗಳ, ದರ್ಶನಾದಿನಾ – ದರ್ಶನ ಮೊದಲಾದ ಕಾರಣಗಳಿಂದ, ಪತ್ರವಿಕಾಸಾದಿ–ಎಲೆಹುಟ್ಟುವುದು ; (ಅರಳುವಿಕೆ ಮೊದಲಾದ ವಿಕಾರಗಳು, ಯತ್ಸ್ಯಾತ್–ಯಾವುವು ಉಂಟಾಗುತ್ತವೆಯೋ, ಸಾ ಮಾಯಾ – ಆ ಶಕ್ತಿಯು, ಮಮ – ನನ್ನದು, ಮತ್ತು ಪರಮಾ–ಶ್ರೇಷ್ಠವಾದುದು (ಅಚಿಂತ್ಯವಾದುದು).

ಅಯಂ ದೇಹಃ – ಈ ದೇಹವು (ಪ್ರತ್ಯಕ್ಷಕ್ಕೆ ಗೋಚರಿಸುವುದು), ಅಚೇತನಃ ಅಪಿ – (ಸ್ವಯಂ ಚೇಷ್ಟಾಶಕ್ತಿರಹಿತವಾದುದಾದರೂ), ಜಡವಾದರೂ, ನಾನಾ ಚೇಷ್ಟಾಃ – ಬಹುವಿಧ ವ್ಯಾಪಾರಗಳನ್ನು (ಚಲನಾದಿಗಳನ್ನು), ಕರೋತಿ ವೈ–ಮಾಡುತ್ತದಷ್ಟೆ; ಸ್ವಪಾತಂ–ತಾನು ಯಾವಾಗ ಬಿದ್ದುಹೋಗುವುದೆಂಬುದನ್ನು (ಯಾವಾಗ ಚೇಷ್ಟಿಸಲು ಅಸಮರ್ಥವಾಗುತ್ತದೆಂಬುದನ್ನು), ನೈವ ಜಾನಾತಿ – ತಿಳಿಯುವುದೇ ಇಲ್ಲ ; ಸಾ ಮಾಯಾ-

---

ಪರಿಣಾಮಗಳನ್ನುಂಟುಮಾಡುತ್ತದೆ ; [3] ಗೋಮಯಾದಿಗಳಿಂದ ಸಹಸ್ರಾರು

ಆ ದೇಹವು ಸ್ವತಃ ಪ್ರವೃತ್ತಿಶೂನ್ಯವಾದ ಜಡವಷ್ಟೆ—. ಅದರಂತೆ ವೃಕ್ಷಾದಿಗಳನ್ನು ಇಲ್ಲಿ ಅಚೇತನಗಳೆಂದು ನಿರೂಪಿಸಲಾಗಿದೆ. ಸೂರ್ಯಕಿರಣಗಳಿಂದ ಕಮಲವು ಅರಳಿದರೆ, ಚಂದ್ರಕಿರಣಗಳಿಂದ ಅದು ಮುಕುಳಿತವಾಗುತ್ತದೆ — ನೈದಿಲೆಯು (ಕುಮುದ ಪುಷ್ಪವು) ಅರಳುತ್ತದೆ. ಅಚೇತನವಸ್ತುಗಳ ಚೇಷ್ಟೆಗಳು, ಆ ದೇಹಧಾರಿ ಜೀವರ ಶಕ್ತಿಯಿಂದಾಗುವ ವ್ಯಾಪಾರಗಳಲ್ಲ—'ತೇನ ವಿನಾ ತೃಣಮಪಿ ನ ಚಲತಿ'—ಶ್ರೀಹರಿಯನ್ನುಳಿದು ಒಂದು ಹುಲ್ಲುಕಡ್ಡಿಯೂ ಅಲುಗಾಡುವುದಿಲ್ಲವೆಂದು ಶ್ರುತಿಯು ಸಾರುತ್ತದೆ.

2 ಒಂದು ರೋಗಕ್ಕೆ ಪ್ರಯೋಗಿಸಲಾಗುವ ಒಂದೇ ಔಷಧಿಯಿಂದ ಒಬ್ಬನಿಗೆ ರೋಗವು ಗುಣವಾದರೆ ಮತ್ತೊಬ್ಬನಿಗೆ ರೋಗವು ಉಲ್ಬಣವಾಗುತ್ತದೆ—ಅನ್ಯನಿಗೆ ಏನೂ ಪರಿಣಾಮವೇ ಆಗುವುದಿಲ್ಲ—ಬೇರೊಬ್ಬನೂ ಅದೇ ಔಷಧಿಯಿಂದ ಮೃತನೂ ಆಗುತ್ತಾನೆ. ಪೆನ್ಸಿಲಿನ್ ಮೊದಲಾದವುಗಳ ಪ್ರಯೋಗದ ವಿವಿಧ ಪರಿಣಾಮಗಳನ್ನು ಎಲ್ಲರೂ ಕಂಡಿದಾರೆ—ಕೇಳಿಯೂ ಇದ್ದಾರೆ. ಇವುಗಳಿಗೆ ಕಾರಣಗಳನ್ನು ಆ ಕಾರಣಗಳ ಕಾರಣಗಳನ್ನೂ ವೈದ್ಯಶಾಸ್ತ್ರಾದಿಗಳಂತೆ ಅನ್ವೇಷಮಾಡುತ್ತ ಹೋಗುವುದು ಅನವಸ್ಥೆಯಲ್ಲಿ ಪರ್ಯವಸಾನಗೊಳ್ಳುತ್ತದೆಂಬುದನ್ನೂ ವಿವೇಕಿಗಳು ಗಮನಿಸಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಮಾ ಮಮ—ಹಿಂದಿನ ಶ್ಲೋಕದಂತೆ ಇಲ್ಲಿಯೂ ಮತ್ತು ೪೦ನೇ ಶ್ಲೋಕದ ವರೆಗಿನ ಮುಂದಿನ ಶ್ಲೋಕಗಳಲ್ಲಿ ಸಹ ಈ ಶಬ್ದಗಳ ಅರ್ಥವನ್ನು ತಿಳಿಯ ಬೇಕು).

ಏಕರೋಗೇಷು—ಒಂದೇ ವಿಧವಾದ ರೋಗವುಳ್ಳ, ದೇಹೇಷು—ಬಹು ದೇಹಗಳಲ್ಲಿ, ಏಕಮೇವ—ಒಂದೇ, ಔಷಧಂ—ಔಷಧಿಯು, ಫಲಭೇದಂ—ಫಲ ವ್ಯತ್ಯಾಸವನ್ನು, ಕರೋತಿ ವೈ – ಮಾಡುತ್ತದೆಂಬುದು ಅನುಭವಸಿದ್ಧವಷ್ಟೆ; (ಸಾ ಮಾಯಾ—ಅದಕ್ಕೆ ಕಾರಣವಾದಶಕ್ತಿಯು—ಹಿಂದಿನಂತೆ).

ಗೋಮಯಾದೇಃ – ಗೋಮಯ (ಶಗಣಿ) ಮೊದಲಾದವುಗಳಿಂದ, ಸಹಸ್ರಶಃ—ಸಹಸ್ರಾರು, ನಾನಾಜೀವಾಃ—ವಿವಿಧ ಪ್ರಾಣಿಗಳು, ಜಾಯಂತೇ ಹಿ—ಹುಟ್ಟುತ್ತವೆಯಷ್ಟೆ; ಮಾತಾಪಿತೃಭ್ಯಾಂ—ತಾಯಿತಂದೆಗಳಿಂದ, ವಿನಾ—ರಹಿತವಾಗಿ (ಮಾತಾಪಿತೃಗಳಿಲ್ಲದೇ, ಯತ್ – ಯಾವ ಈ ಪ್ರಾಣಿಗಳ ಉತ್ಪತ್ತಿಯೋ, (ಅದು ಸಾ ಮಾಯಾ ಇತ್ಯಾದಿ).

ಗವಾದಿ ಭಕ್ಷಿತಂ ವಸ್ತು—ಗೋ (ಹಸು) ಮೊದಲಾದ ಪಶುಗಳಿಂದ ಭಕ್ಷಿಸಲ್ಪಡುವ ವಸ್ತುವು (ಹುಲ್ಲು ಮೊದಲಾದ ಪದಾರ್ಥಗಳು), ಕ್ಷೀರರಕ್ತಾದಿ ಭೇದತಃ—ಹಾಲು, ರಕ್ತ ಮೊದಲಾದ ಭಿನ್ನರೂಪವುಳ್ಳದ್ದಾಗಿ, ಯತ್ ಪರಿಣಾಮಂ—ಯಾವ ಪರಿಣಾಮವನ್ನು (ವಿಕಾರವನ್ನು), ಭಜತೇ—ಹೊಂದುತ್ತದೆಯೋ, ಅದು (ಸಾ ಮಾಯಾ ಇತ್ಯಾದಿ).

ಕ್ರಿಮಿಕೀಟಾದಿ ಪ್ರಾಣಿಗಳು ಹುಟ್ಟುತ್ತವೆ—ಅವುಗಳಿಗೆ ತಾಯಿತಂದೆಗಳೇ ಇಲ್ಲ; ಗೋ ಮೊದಲಾದ ಪಶುಗಳು ಭಕ್ಷಿಸುವ ತೃಣಾದಿ (ಹುಲ್ಲು ನೀರು ಮೊದಲಾದ) ಪದಾರ್ಥಗಳು, ಹಾಲು, ರಕ್ತ ಮೊದಲಾದ ವಸ್ತುರೂಪವಾಗಿ ಪರಿಣಾಮ (ವಿಕಾರ) ಗೊಳ್ಳುತ್ತವೆ; ದೇಹದಲ್ಲಿ ಕೆಲವು ಸ್ಥಳಗಳಲ್ಲಿ ಮಾತ್ರ ಉಗುರು ಕೂದಲು ಬೆಳೆಯುತ್ತವೆ—ಎಲ್ಲ ಸ್ಥಳಗಳಲ್ಲಿ ಅಲ್ಲ—ಎಲ್ಲರಿಗೂ ಏಕಪ್ರಕಾರವಾಗಿಯೂ ಅಲ್ಲ)—ನಮ್ಮ ಇಚ್ಛಾನುಸಾರ ಬೆಳೆಯುವುದಿಲ್ಲ—ನಿಲ್ಲುವುದೂ ಇಲ್ಲ; ಬಿತ್ತಿದ ಬಹುಬೀಜಗಳಲ್ಲಿ ಕೆಲವು ಮಾತ್ರ ಅಂಕುರಿಸುತ್ತವೆ—ಅಂಕುರಗಳಲ್ಲಿ ಕೆಲವು ಮಾತ್ರ ಬೆಳೆದು ಶಾಖೆಗಳು ಕಾಣುತ್ತವೆ—ಮತ್ತೆ ಕೆಲವು ಅಂಕುರಿಸುವುದೇ ಇಲ್ಲ—ಶಾಖೆಗಳು ಕಂಡರೂ ಬೆಳೆದು ಗಿಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಹಸ್ಥಾನವಿಶೇಷೇಷು – ದೇಹದ ಗೊತ್ತಾದ ಸ್ಥಾನಗಳಲ್ಲಿಯೇ, ನಖಲೋಮಾದಿಕಂ – ಉಗುರು ರೋಮಾದಿಗಳು, ಜಾಯತೇ ಹಿ–ಹುಟ್ಟುತ್ತವಷ್ಟೆ; ಸ್ವೇಚ್ಛಯಾ ನೈವ–ನಮ್ಮ ಇಚ್ಛೆಯಂತೆ ಬೆಳೆಯುವುದೇ ಇಲ್ಲ (ಅನ್ಯಸ್ಥಳಗಳಲ್ಲಿ ಇಚ್ಛಿಸಿದರೂ ಬೆಳೆಯುವುದಿಲ್ಲ), ಯತ್–ಹೀಗೆಂಬುದೂ, ಸಾಮಾಯಾ ಇತ್ಯಾದಿ.

ಬೀಜಂ–ಬೀಜವು, ಅಂಕುರತಾಂ–ಅಂಕುರಿಸುವಿಕೆಯನ್ನು, ಯಾತಿ–ಹೊಂದುತ್ತದೆ (ಅಂಕುರವಾಗುತ್ತದೆ) ; (ಕೆಲವು ಬೀಜಗಳು ಅಂಕುರಿಸುವುದೇ ಇಲ್ಲ) ; ಕಾಚಿತ್ – (ಅಂಕುರಗಳಲ್ಲಿಯೂ) ಯಾವುದೋ ಒಂದು, ಶಾಖಾ–ಶಾಖೆಯಾಗಿ, ಪ್ರರೋಹತಿ – ಬೆಳೆಯುತ್ತದೆ ; ಕಿಂಚಿತ್ ಚ – ಬೇರೊಂದು ಶಾಖೆಯು, ನ ಪ್ರರೋಹತಿ–ಬೆಳೆದು ಗಿಡವಾಗುವುದಿಲ್ಲ ; ಇದು ಸಾ ಮಾಯಾ ಇತ್ಯಾದಿ.

ಅನ್ಯತ್–ಬೇರೊಂದು (ಸಸ್ಯವಿಶೇಷಗಳು), ಬೀಜಾದಿನಾ ವಿನೈವ–ಬೀಜಾದಿಗಳಿಲ್ಲದೇ (ತೋರುವ ಯಾವ ಕಾರಣವೂ ಇಲ್ಲದೇ), ಭೂಮೇಃ–ಭೂಮಿಯಿಂದ, ವಾ–ಅಥವಾ, ಸಲಿಲಾದಪಿ–ನೀರಿನಿಂದ ಸಹ, ಜಾಯತೇ–ಹುಟ್ಟುತ್ತದೆ, ಸ್ವೇಚ್ಛಯಾ–ನಮ್ಮ (ತನ್ನ) ಇಚ್ಛೆಯಿಂದ, ನೈವ–ಅಲ್ಲವೇ ಅಲ್ಲ; ಸಾ ಮಾಯಾ ಇತ್ಯಾದಿ.

ವಾಗುವುದಿಲ್ಲ ; ಇನ್ನು ಕೆಲವು ಲತಾದಿ ಸಸ್ಯಗಳು, ಬೀಜವೇ ಇಲ್ಲದೇ ಭೂಮಿಯಿಂದಲೂ, ನೀರಿನಿಂದಲೂ ಹುಟ್ಟುತ್ತವೆ—ನಾವು ಇಚ್ಛಿಸುವ ಮಾತ್ರದಿಂದ ಅವು ಬೆಳೆಯುವುದಿಲ್ಲ ; ರಜಸ್ವಲೆಯಾದ ಸ್ತ್ರೀಯಲ್ಲಿ (ಭಾರ್ಯೆಳಲ್ಲಿ ಸಹ) ರೇತಸ್ಸೇಚನಮಾಡಿದರೂ ಗರ್ಭೋತ್ಪತ್ತಿಯಾಗುವುದಿಲ್ಲ—ರೇತಸ್ಸೇಚನದಿಂದ ಎಲ್ಲ ಸ್ತ್ರೀಯರಲ್ಲಿ ಗರ್ಭಧಾರಣೆಯಾಗುವುದಿಲ್ಲ (ಬಂಜೆಯರಲ್ಲಿ ಮಾತ್ರ ಗರ್ಭಧಾರಣವಿಲ್ಲೆಂದು ಅಲ್ಲ) ; ಶುಕ್ರಶೋಣಿತಸಂಬಂಧದಿಂದ (ಕೆಲವು ಸನ್ನಿವೇಶಗಳಲ್ಲಿ ಮಾತ್ರ) ಗರ್ಭಧಾರಣೆಯಾಗುತ್ತದೆ ಮತ್ತು ಆ ಗರ್ಭಕ್ಕೆ ಕರಚರಣಾದಿ ಅವಯುವಗಳು ಮೂಡಿ ಬೆಳೆಯುತ್ತವೆ; ನಿರ್ದಿಷ್ಟ ಸ್ತ್ರೀ-ಪುರುಷರ ಮಿಥುನದಿಂದ (ಶುಕ್ರಶೋಣಿತ ಸಂಯೋಗದಿಂದ), ಹುಟ್ಟುವ ಗರ್ಭವು, ಸ್ತ್ರೀ, ಪುರುಷ, ನಪುಂಸಕಗಳೆಂಬ ಲಿಂಗಭೇದಗಳುಳ್ಳದ್ದಾಗುತ್ತವೆ; ಈ ಮೊದಲಾದ ಘಟನೆಗಳೆಲ್ಲವೂ ನನ್ನ ಅಚಿಂತ್ಯವಾದ ಇಚ್ಛಾಶಕ್ತಿಯಿಂದಲೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜಸ್ವಲಾಯಾಂ–ರಜಸ್ವಲೆಯಾದ (ಋತುಸ್ನಾತಳಾದ ಅಥವಾ ಋತು ದರ್ಶನವುಳ್ಳ) ಭಾರ್ಯಾಯಾಂ–ಹೆಂಡತಿಯಲ್ಲಿ (ಸ್ತ್ರೀಯಲ್ಲಿ), ರೇತಃ ಸೇಕೇ– ರೇತಃಸೇಚನವು (ರೇತೋವಿಸರ್ಜನವು), ಕೃತೇ ಅಪಿ – ಮಾಡಲ್ಪಟ್ಟರೂ ಸಹ, ಗರ್ಭಸ್ಯ–ಗರ್ಭದ, ಉತ್ಪತ್ತಿಃ–ಉತ್ಪತ್ತಿಯು, ನೈವ–ಆಗುವುದೇ ಇಲ್ಲ, ಇದು ಸಾ ಮಾಯಾ ಇತ್ಯಾದಿ.

ಶುಕ್ರಶೋಣಿತಸಂಬಂಧಾತ್–ಶುಕ್ರ (ಪುರುಷ ರೇತಸ್ಸು) ಶೋಣಿತ (ಸ್ತ್ರೀ ವೀರ್ಯವೂ) ಸಂಬಂಧದಿಂದ (ಕೂಡುವುದರಿಂದ), ಗರ್ಭೋತ್ಪತ್ತಿಃ– ಗರ್ಭದ ಉತ್ಪತ್ತಿಯು, ಜಾಯತೇ ಹಿ–ಆಗುವುದಷ್ಟೆ (ಶುಕ್ರಶೋಣಿತಗಳ ಕೂಡುವಿಕೆಯು ಗರ್ಭೋತ್ಪತ್ತಿಗೆ ನಿಮಿತ್ತಕಾರಣವಲ್ಲವೇ!), ಇದಕ್ಕೂ (ಗರ್ಭೋತ್ಪತ್ತಿಗೂ), ತಥಾ–ಮತ್ತು, ಅವಯವ ಸಂಸ್ಥಾನಂ – ಗರ್ಭಕ್ಕೆ (ಕರಚರಣಾದಿ) ಅವಯವಗಳ ರಚನೆ ಮತ್ತು ರಕ್ಷಣೆಯು, (ಜಾಯತೇ ಹಿ– ಉಂಟಾಗುವುದಷ್ಟೆ), ಸಾ ಮಾಯಾ ಇತ್ಯಾದಿ.

ಶುಕ್ರಶೋಣಿತಸಂಬಂಧಾತ್–(ಅದೇ) ಶುಕ್ರಶೋಣಿತಗಳ (ಪುರುಷ ಸ್ತ್ರೀ ವೀರ್ಯಗಳ) ಸಂಬಂಧದಿಂದ, ಸ್ತ್ರೀಪುಂಕ್ಲೀಬಾದಿಭೇದತಃ – ಸ್ತ್ರೀ, ಪುರುಷ, ನಪುಂಸಕ ಎಂಬ ಭೇದದಿಂದ (ಭಿನ್ನರೂಪದ), ಗರ್ಭನಿಷ್ಪತ್ತಿಃ– ಗರ್ಭದ ರಚನೆಯು, ಜಾಯತೇ–ಉಂಟಾಗುತ್ತದೆ; ಇದಕ್ಕೆ ಕಾರಣವಾದುದು ಸಾ ಮಾಯಾ ಇತ್ಯಾದಿ.

ಸಂಭವಿಸುತ್ತವೆ.[1] (ಸ್ವತಂತ್ರವಾದ ನನ್ನ ಇಚ್ಛಾಶಕ್ತಿಯ ಅಧೀನಗಳಾದ ಮಾಯಾನಾಮಕ ಪ್ರಾಕೃತ ವಸ್ತುಗಳು ಮತ್ತು ಅವುಗಳ ನಿಯಾಮಕಳಾದ ನನ್ನ ಭಾರ್ಯೆ ಶ್ರೀ ರಮಾದೇವಿಯೂ, ಸರ್ವಪ್ರಕಾರದಿಂದ ನನ್ನ ಅಧೀನರಾಗಿ

[1] ಈ ಮೇಲಿನ ಶ್ಲೋಕಗಳಲ್ಲಿಯೂ ಮತ್ತು ಮುಂದೆ ೪೦ನೇ ಶ್ಲೋಕದ ವರೆಗೂ ನಿರೂಪಿಸಲಾಗುವ ಲೋಕಾನುಭವಸಿದ್ಧ ಘಟನೆಗಳಿಗೆ, ಊಹಾಪೋಹ ಗಳಿಂದ ಸಹಕೃತವಾದ ಯುಕ್ತಿಗಳಿಂದ ಕಾರಣಗಳನ್ನು ವೈಜ್ಞಾನಿಕ ಪ್ರವೀಣರು ಮತ್ತು ವೈದ್ಯಶಾಸ್ತ್ರನಿಪುಣರು ಹೇಳಲು ಯತ್ನಿಸಿದರೂ, ಸಮರ್ಪಕಪರಿಹಾರರೂಪದ ಉತ್ತರಗಳು ದೊರೆಯುವುದಿಲ್ಲವೆಂಬುದನ್ನು ದೀರ್ಘವಿಮರ್ಶೆಯಿಂದ ಮನಗಾಣ ಬಹುದು ಇದೇ ಗ್ರಂಥಕರ್ತನಿಂದ ರಚಿತವಾದ 'ನಾಸ್ತಿಕ್ಯನಿರಾಸ'ದ ಪುಟ ೪೨ರಿಂದ ೫೬ರವರೆಗೆ ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗರ್ಭಸ್ಥಸ್ಯಾಪಿ ಜೀವಸ್ಯ ಕಾಣಖಂಜಾದಿದೋಷತಃ ।
ತಥಾವಯವದಾರ್ಢ್ಯಾದಿ ಸಾ ಮಾಯಾ ಪರಮಾ ಮಮ ॥ ೨೯ ॥

ಭಕ್ಷಣೇನ ವಿನೈವೈಷ ಶ್ವಾಸರೋಧಾದಿ ಪೀಡನಾತ್ ।
ಜೀವತ್ಯೇವ ಮೃದುರ್ಗರ್ಭಃ ಸಾ ಮಾಯಾ ಪರಮಾ ಮಮ ॥೩೦॥

ಮಾತುರ್ಜಠರದಾಹೇನ ಪೀಡ್ಯಮಾನೋಽಪ್ಯಧೋಮುಖಃ ।
ಜೀವತ್ಯೇವ ಮೃದುರ್ಗರ್ಭಃ ಸಾ ಮಾಯಾ ಪರಮಾ ಮಮ ॥೩೧॥

ಅಪಕ್ವೋಽಪಿ ಪತತ್ಯೇಷಃ ಪಕ್ವೋಽಪಿ ನ ಪತತ್ಯಯಂ ।
ಬಹಿರ್ನ್ಯೈವೇಚ್ಛಯಾ ಯಾತಿ ಸಾ ಮಾಯಾ ಪರಮಾ ಮಮ ॥೩೨॥

ಆಯಾತಿ ಋಜುಮಾರ್ಗೇಣ ಮಾರ್ಗಮನ್ಯಂ ವಿಶತ್ಯಪಿ ।
ಅನೃಜುರ್ಜಾಯತೇ ವಾಪಿ ಸಾ ಮಾಯಾ ಪರಮಾ ಮಮ ॥ ೩೩ ॥

ಜಾತಮಾತ್ರಃ ಪಿಬತ್ಯೇಷಃ ಸ್ತನಂ ರೋರೂಯತೇ ಹಿ ತತ್ ।
ನಾನಾಚೇಷ್ಟಾಶ್ಚ ಕುರುತೇ ಸಾ ಮಾಯಾ ಪರಮಾ ಮಮ ॥ ೩೪ ॥

ಈ ವಿಷಯಗಳಲ್ಲಿ ಪ್ರವೃತ್ತಿಸುತ್ತಾರೆ.) (೧೮–೨೮). ಗರ್ಭಸ್ಥಜೀವರ ಕರ್ಮಾನುಸಾರವಾದ, ಒಂದು ಕಣ್ಣು ಇಲ್ಲದಿರುವಿಕೆ, ಹೆಳವತನ, ಇತ್ಯಾದಿ ದೋಷಗಳನ್ನು ಅನುಸರಿಸಿ, ಗರ್ಭದಲ್ಲಿ ಆಯಾ ಕಣ್ಣು ಕಾಲು ಮೊದಲಾದ ಅವಯವಗಳು ಏರ್ಪಡುತ್ತವೆ; ತಾಯಿಯ ಹೊಟ್ಟೆಯಲ್ಲಿರುವ ಕೋಮಲವಾದ ಗರ್ಭವು, ಆಹಾರ ಭಕ್ಷಣಾದಿಗಳಿಲ್ಲದೆ, ಉಸಿರು ಕಟ್ಟಿಕೊಂಡು ಮೃತವಾಗದೇ ಬದುಕಿರುತ್ತದೆ; ತಾಯಿಯ ಜಠರಾಗ್ನಿಯ ತಾಪದಿಂದ ಪೀಡಿತವಾದರೂ ಮುಖ ಕೆಳಗೆ ಮಾಡಿ ಬಿದ್ದುಕೊಂಡು ಜೀವಿಸಿಯೇ ಇರುತ್ತದೆ; ಅಕಾಲದಲ್ಲಿ ಅಪಕ್ವವಾದ ಗರ್ಭವು ಹೊರಗೆ ಬೀಳುತ್ತದೆ (ಗರ್ಭಪಾತವಾಗುತ್ತದೆ); ಪೂರ್ಣಮಾಸಗಳು ತುಂಬಿದ್ದರೂ ಪ್ರಸವವಾಗುವುದೇ ಇಲ್ಲ; ಗರ್ಭವು ಸರಿಯಾದ ಮಾರ್ಗದಲ್ಲಿ (ಪ್ರಸವಕಾಲದಲ್ಲಿ) ಹೊರಗೆ ಬರುತ್ತದೆ— ಅನ್ಯಮಾರ್ಗವನ್ನು ಹಿಡಿದು, ಅಡ್ಡವಾಗಿ ತಲೆಕೆಳಗಾಗಿ ಇತ್ಯಾದಿ ತಪ್ಪು ಮಾರ್ಗದಲ್ಲಿ ಬಂದು ವಿಪತ್ತುಗಳಿಗೆ ಕಾರಣವಾಗುವುದೂ ಇದೆ; ಹುಟ್ಟಿದೊಡನೆ ಆ ಶಿಶುವು ಅಳುತ್ತದೆ; ತಾಯಿಯ ಸ್ತನ್ಯಪಾನ ಮಾಡುತ್ತದೆ; (ಈ ಕ್ರಿಯೆಗಳನ್ನು ಯಾರ ಮಾರ್ಗಪ್ರದರ್ಶನವೂ ಇಲ್ಲದೇ ಆಗತಾನೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೃಕ್ಷಾದಿಪತ್ರಪುಷ್ಪಾದೌ ಚಿತ್ರಾಕಾರೋ ಹಿ ಜಾಯತೇ ।
ವಿಚಿತ್ರವರ್ಣಗಂಧಾದಿ ಸಾ ಮಾಯಾ ಪರಮಾ ಮಮ ॥ ೩೫ ॥

ಕಾಷ್ಠಭಾರೋ ಮಹಾನೇಷಃ ಸ್ವಯಂ ತರತಿ ತಾರಯೇತ್ ।
ಮಜ್ಜಯೇಚ್ಚ ಶಿಲಾಖಂಡಂ ಸಾ ಮಾಯಾ ಪರಮಾ ಮಮ ॥ ೩೬ ॥

ನ ಪಶ್ಯಂತಿ ಜಲೇ ಕೇಚಿತ್ ಜೀವಾ ನಿರ್ಮಗ್ನಚಕ್ಷುಷಃ ।
ಸ್ಥಲೇ ಕೇಚಿನ್ನ ಪಶ್ಯಂತಿ ಸಾ ಮಾಯಾ ಪರಮಾ ಮಮ ॥ ೩೭ ॥

ರಾತ್ರೌ ಕೇಚಿನ್ನ ಪಶ್ಯಂತಿ ದಿವಾ ಕೇಚಿತ್ತಥಾಪರೇ ।
ಸ್ಥಲೇ ಜಲೇನ್ಯೇ ಪಶ್ಯಂತಿ ಸಾ ಮಾಯಾ ಪರಮಾ ಮಮ ॥ ೩೮ ॥

ಉಡ್ಡೀಯಂತೇ ಪಕ್ಷಹೀನಾ ಮಹಾಪಕ್ಷಾಸ್ತಥಾಪರೇ ।
ನೈವೋಡ್ಡನಂ ಪ್ರಕುರ್ವಂತಿ ಸಾ ಮಾಯಾ ಪರಮಾ ಮಮ ॥ ೩೯ ॥

ಸ್ಥಲೇ ವಾಪಿ ಜಲೇ ವಾಪಿ ತತ್ತತ್ಸ್ಥಾನವಿಶೇಷತಃ ।
ಜಾಯತೇ ವಿವಿಧಂ ವಸ್ತು ಸಾ ಮಾಯಾ ಪರಮಾ ಮಮ ॥ ೪೦ ॥

ಹುಟ್ಟಿದ ಶಿಶುವು ಮಾಡುತ್ತದೆ); ವೃಕ್ಷ ಲತಾ ಗುಲ್ಮಾದಿಗಳಲ್ಲಿ ವಿವಿಧವಾದ ಆಕಾರಗಳುಳ್ಳ ಪತ್ರಗಳೂ ಪುಷ್ಪಗಳೂ, ವಿಚಿತ್ರವಾದ ಬಣ್ಣ ಮತ್ತು ವಾಸನೆಗಳುಳ್ಳವೂ, ಹುಟ್ಟುತ್ತವೆ; ಭಾರವಾದ ಮರದ ಶಾಖೆಗಳು (ತೊಲೆಗಳು) ನೀರಲ್ಲಿ ತೇಲುತ್ತವೆ; ಅವುಗಳನ್ನು ಆಶ್ರಯಿಸಿದ ಇತರ ಪ್ರಾಣಿಗಳನ್ನು ತೇಲಿಸುತ್ತವೆ; (ಅವುಗಳನ್ನು ಆಶ್ರಯಿಸಿ, ನದೀ ಮೊದಲಾದವುಗಳನ್ನು ದಾಟಬಹುದು); ಚಿಕ್ಕದೂ ಹಗುರವೂ ಆದ ಕಲ್ಲುತುಂಡುಗಳು ಮುಳುಗಿ ಹೋಗುತ್ತದೆ; ಕೆಲವು ಪ್ರಾಣಿಗಳು ನೀರಲ್ಲಿ ಕಣ್ಣು ಬಿಡಲಾರವು—ಮುಚ್ಚಿಕೊಳ್ಳುತ್ತವೆ—ಏನೂ ಕಾಣುವುದಿಲ್ಲ; ಮತ್ತೆ ಕೆಲವು ಪ್ರಾಣಿಗಳಿಗೆ ಭೂಮಿಯ ಮೇಲೆ ಸಹ ಕಣ್ಣು ಕಾಣಿಸುವುದಿಲ್ಲ; ಕೆಲವು ರಾತ್ರಿಯಲ್ಲಿ ನೋಡಲಾರವು—ಇನ್ನೂ ಕೆಲವು ಹಗಲಲ್ಲಿಯೇ ಕಾಣಲಾರವು; ಕೆಲವು ಪ್ರಾಣಿಗಳಂತೂ ಸ್ಥಲಜಲಗಳಲ್ಲಿ (ಭೂಮಿಯ ಮೇಲೆ ಮತ್ತು ನೀರೊಳಗೆ ಸಹ) ನೋಡಬಲ್ಲವು; ಕೆಲವು ಪ್ರಾಣಿಗಳು ರೆಕ್ಕೆಗಳಿಲ್ಲದೇ ಹಾರುತ್ತವೆ; ಮತ್ತೆ ಕೆಲವು ಬಹು ದೊಡ್ಡ ರೆಕ್ಕೆಗಳಿದ್ದರೂ ಅಷ್ಟು ದೂರ ಅಥವಾ ಎತ್ತರದಲ್ಲಿ ಹಾರಲಾರವು; ಭೂಮಿಯಲ್ಲಿ ಮತ್ತು ಜಲದಲ್ಲಿ ಆಯಾ ಸ್ಥಾನವಿಶೇಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗರ್ಭಸ್ಥಸ್ಯ–(ಮಾತೃ) ಗರ್ಭದಲ್ಲಿರುವ, ಜೀವಸ್ಯ–ಜೀವನ, ಕಾಣ-ಖಂಜಾದಿದೋಷತಃ – ಕಾಣ (ಒಕ್ಕಣ್ಣು) ಖಂಜ (ಹೆಳವ) ಮೊದಲಾದ (ಪಾಪನಿಮಿತ್ತಕ) ದೋಷಗಳಿಂದ, ತಥಾ – ಹಾಗೆ ಹಾಗೆ, ಅವಯವ ದಾರ್ಢ್ಯಾದಿ–ಕಣ್ಣು ಕಾಲುಗಳ ದಾರ್ಢ್ಯ (ದೃಢವಾಗಿರುವಿಕೆ ಅಥವಾ ಊನತ್ವ) ಮೊದಲಾದವುಗಳು, [ಜಾಯತೇ–(ಹಿಂದಿನ ಶ್ಲೋಕದಿಂದ ಅನುಕರ್ಷಮಾಡಿ ಕೊಳ್ಳಬೇಕು.) ಉಂಟಾಗುವುದೋ] ಸಾ ಮಾಯಾ ಇತ್ಯಾದಿ ;

ಏಷಃ–ಈ, ಮೃದುಃ–ಕೋಮಲವಾದ, ಗರ್ಭಃ–ಗರ್ಭವು, ಭಕ್ಷಣೇನ ವಿನಾಏವ – (ಆಹಾರಾದಿ) ಭಕ್ಷಣವಿಲ್ಲದೇ, ಶ್ವಾಸರೋಧಾದಿ ಪೀಡನಾತ್– ಉಸಿರು ಕಟ್ಟುವ ಮೊದಲಾದ ಹಿಂಸೆಯಿಂದ ಸಹ, ಜೀವತ್ಯೇವ–ಬದುಕಿಯೇ ಇರುತ್ತದೆ (ಉಸಿರುಗಟ್ಟಿ ಸಾಯದೇ ಬದುಕಿರುವುದೂ ಸಹ, ಸಾ ಮಾಯಾ ಇತ್ಯಾದಿ) ;

ಮೃದುಃ ಗರ್ಭಃ – ಮೃದುವಾದ ಗರ್ಭವು, ಮಾತುಃ – ತಾಯಿಯ, ಜಠರದಾಹೇನ – ಜಠರಾಗ್ನಿಯ ತಾಪದಿಂದ, ಪೀಡ್ಯಮಾನೋಪಿ – ಪೀಡಿಸಲ್ಪಟ್ಟರೂ, ಅಧೋಮುಖಃ–ಮುಖ ಕೆಳಗೆಮಾಡಿ ಮಲಗಿ, ಜೀವತಿ ಏವ– ಬದುಕಿಯೇ ಇರುತ್ತದೆ; ಇದು ಸಾ ಮಾಯಾ ಇತ್ಯಾದಿ ;

ಏಷಃ–ಈ ಗರ್ಭವು, ಅಪಕ್ವಃ ಅಪಿ–ಪಕ್ವವಾಗದಿದ್ದರೂ (ಪೂರ್ತಿ ಬೆಳೆಯದಿದ್ದರೂ ಕಾಲಕ್ಕೆ ಮೊದಲೇ), ಪತತಿ–(ಹೊರಗೆ) ಬೀಳುತ್ತದೆ; ಅಯಂ–ಅದು, ಪಕ್ವಃ ಅಪಿ–ಪಕ್ವವಾಗಿದ್ದರೂ (ಹತ್ತುತಿಂಗಳು ಅಥವಾ ನಿರ್ದಿಷ್ಟಕಾಲಾವಧಿಯು ಮುಗಿದಿದ್ದರೂ), ನ ಪತತಿ–ಹೊರಗೆ ಬರುವುದಿಲ್ಲ (ಪ್ರಸವವಾಗುವುದಿಲ್ಲ) ; ಇಚ್ಛಯಾ - ನಮ್ಮ ಇಚ್ಛೆಯಿಂದ (ತಾಯಿಯ ಇಚ್ಛೆಯಂತೆ), ಬಹಿಃ ನೈವ ಯಾತಿ–ಹೊರಗೆ ಬರುವುದೇ ಇಲ್ಲ ; ಇದು, ಸಾ ಮಾಯಾ ಇತ್ಯಾದಿ ;

ಗಳನ್ನನುಸರಿಸಿ, ವಿಚಿತ್ರವಾದ ಬಹುವಸ್ತುಗಳು ಹುಟ್ಟುತ್ತವೆ ; ಈ ಎಲ್ಲವೂ ನನ್ನ ಮಾಯಾಬಲದಿಂದ ಸಂಭವಿಸುತ್ತವೆ ; ಆ ಮಾಯಾಬಲವು ಅಚಿಂತ್ಯವಾದುದು, ಸರ್ವೋತ್ಕೃಷ್ಟವಾದುದು (೫–೪೦). ಹೇ ಬ್ರಹ್ಮ ! ನನ್ನಿಂದ ಸೃಷ್ಟವಾದ ಯಾವುದೊಂದು ವಸ್ತುವನ್ನು ವಿಮರ್ಶಿಸಿದರೂ, ಅದ್ಭುತವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಅದೇ ಗರ್ಭವು), ಋಜುಮಾರ್ಗೇಣ–ಸರಿಯಾದ ಮಾರ್ಗದಿಂದ, ಆಯಾತಿ–ಹೊರಗೆ ಬರುತ್ತದೆ; ಅಪಿ – ಮತ್ತು, ಅನ್ಯಂ ಮಾರ್ಗಂ – ಬೇರೆ ಮಾರ್ಗವನ್ನೂ, ವಿಶತಿ–ಹೊಂದುತ್ತದೆ; ಅಪಿ–ಮತ್ತೂ (ಎಷ್ಟೋ ವೇಳೆ), ಅನೃಜುಃ – ನೇರವಾದ (ಸರಿಯಾದ) ಮಾರ್ಗವನ್ನು ಬಿಟ್ಟು ಅಮಾರ್ಗದಲ್ಲಿ (ತಲೆಕೆಳಗಾಗಿ, ಕಾಲುಮುಂದಾಗಿ), ಜಾಯತೇ–ಹೊರಗೆ ಬರುತ್ತದೆ; ಇದು, ಸಾ ಮಾಯಾ ಇತ್ಯಾದಿ;

ಏಷಃ–ಪ್ರಸವವಾದ ಗರ್ಭವು (ಹುಟ್ಟಿದ ಶಿಶುವು), ಜಾತಮಾತ್ರಃ–ಹುಟ್ಟಿದಕೂಡಲೆ (ಅನ್ಯಶಿಕ್ಷಾದಿಗಳಿಲ್ಲದೇ, ಯಾರೂ ಹೇಳಿಕೊಡದೇ), ಸ್ತನಂ–(ತಾಯಿಯ) ಮೊಲೆಯನ್ನು, ಪಿಬತಿ–ಕುಡಿಯುತ್ತದೆ, ತತ್–ಆ ಕಾರಣಕ್ಕಾಗಿ (ತಸ್ಮಾತ್), ರೋರೂಯತೇ ಹಿ – ಅಳುವುದೆಂಬುದೂ ಲೋಕಸಿದ್ಧವೇ; ನಾನಾಚೇಷ್ಟಾಶ್ಚ – ವಿವಿಧವಾದ ಚಲನಾದಿ ಕ್ರಿಯೆಗಳನ್ನೂ, ಕುರುತೇ – ಮಾಡುತ್ತದೆ; ಇದು, ಸಾ ಮಾಯಾ ಇತ್ಯಾದಿ;

ವೃಕ್ಷಾದಿ ಪತ್ರಪುಷ್ಪಾದೌ – ವೃಕ್ಷಾದಿಗಳ ಪತ್ರ (ಎಲೆ) ಪುಷ್ಪಗಳಲ್ಲಿ, ಚಿತ್ರಾಕಾರಃ – ಬಹುವಿಧದ ಆಕಾರಗಳು, ಮತ್ತು, ವಿಚಿತ್ರವರ್ಣಗಂಧಾದಿ–ಚಿತ್ರವಿಚಿತ್ರಗಳಾದ ಬಣ್ಣ ಮತ್ತು ಗಂಧ (ವಾಸನೆ) ಗಳು, ಜಾಯತೇ – ಉಂಟಾಗುತ್ತವೆ; ಇದು, ಸಾ ಮಾಯಾ ಇತ್ಯಾದಿ;

ಏಷಃ – ಈ, ಕಾಷ್ಠಭಾರಃ – ಬಹುತೂಕದ (ಭಾರವಾದ) ಕಾಷ್ಠವು, (ಮರದ ಕೊಂಬೆ ಮೊದಲಾದವು), ಸ್ವಯಂ – ತಾನೂ, ತರತಿ – (ಜಲಾಶಯಾದಿಗಳನ್ನು) ತೇಲಿಕೊಂಡುಹೋಗಿ ದಾಟುತ್ತದೆ; ತಾರಯೇತ್ – (ಅದನ್ನಾಶ್ರಯಿಸಿದ ಅನ್ಯರನ್ನೂ) ದಾಟಿಸುತ್ತದೆ; ಶಿಲಾಖಂಡಂ – ಕಲ್ಲುಹರಳು (ಅತಿಚಿಕ್ಕದೂ ಹಗುರವೂ ಆಗಿದ್ದರೂ), ಮಜ್ಜಯೇತ್ ಚ – ಮುಳುಗಿಯೇ ಹೋಗುತ್ತದೆ; ಇದು, ಸಾ ಮಾಯಾ ಇತ್ಯಾದಿ;

ಕೇಚಿತ್‌ಜೀವಾಃ–ಕೆಲವು ಪ್ರಾಣಿಗಳು, ನಿರ್ಮಗ್ನಚಕ್ಷುಷಃ–(ನೀರಲ್ಲಿ ಮುಳುಗಿ) ಕಣ್ಣುಮುಚ್ಚಿಕೊಂಡು, ಜಲೇ – ನೀರಲ್ಲಿ, ನ ಪಶ್ಯಂತಿ–ನೋಡ

ಆಗಿರುತ್ತದೆ; ಏಕೆಂದರೆ, ಅನ್ಯರಾರೂ ಅಂಥ ವಸ್ತುಸಮುದಾಯವನ್ನು— ಅವುಗಳಲ್ಲಿ ಯಾವುದೊಂದನ್ನಾಗಲಿ, ಸೃಷ್ಟಿಮಾಡಲು ಶಕ್ತರಲ್ಲ; ಸೃಷ್ಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಾರವು; ಕೇಚಿತ್–ಮತ್ತೆ ಕೆಲವು ಪ್ರಾಣಿಗಳು, ಸ್ಥಲೇ–ಸ್ಥಲದಲ್ಲಿ (ನೀರಿನ ಮೇಲೆ–ಭೂಮಿಯಲ್ಲಿದ್ದು), ನ ಪಶ್ಯಂತಿ–ಕಾಣುವುದಿಲ್ಲ (ನೋಡಲಾರವು; ಇದು, ಸಾಮಾಯಾ ಇತ್ಯಾದಿ; ಕೇಚಿತ್–ಕೆಲವು ಪ್ರಾಣಿಗಳು, ರಾತ್ರೌ–ರಾತ್ರಿಯಲ್ಲಿ (ಕತ್ತಲಲ್ಲಿ), ನ ಪಶ್ಯಂತಿ – ಕಾಣುವುದಿಲ್ಲ (ನೋಡಲಾರವು); ಅಪರೇ–ಮತ್ತೆ ಕೆಲವು ಪ್ರಾಣಿಗಳು, ದಿವಾ – ಹಗಲಲ್ಲಿ, ತಥಾ – ನೋಡಲಾರವು; ಅನ್ಯೇ – ಇನ್ನೂ ಕೆಲವು ಪ್ರಾಣಿಗಳು, ಸ್ಥಲೇಜಲೇ – ಭೂಮಿಯಲ್ಲಿಯೂ ಜಲದಲ್ಲಿಯೂ ಪಶ್ಯಂತಿ – (ಕಣ್ಣಿಂದ) ನೋಡಬಲ್ಲವು; ಇದು, ಸಾ ಮಾಯಾ ಇತ್ಯಾದಿ;

ಪಕ್ಷಹೀನಾಃ–ರೆಕ್ಕೆಗಳಿಲ್ಲದ ಕೆಲವು ಪ್ರಾಣಿಗಳು, ಉಡ್ಡೀಯಂತೇ–ಹಾರಬಲ್ಲವು; ತಥಾಪರೇ – ಬೇರೆ ಕೆಲವು ಪ್ರಾಣಿಗಳು, ಮಹಾಪಕ್ಷಾಃ – ದೊಡ್ಡ ರೆಕ್ಕೆಗಳುಳ್ಳವಾದರೂ, ಉಡ್ಡನಂ – (ರೆಕ್ಕೆಗಳಿಲ್ಲದ ಪ್ರಾಣಿಗಳು ಹಾರುವಷ್ಟು ಸಹ) ಹಾರುವುದನ್ನು, ನೈವ ಪ್ರಕುರ್ವಂತಿ–ಮಾಡುವುದಿಲ್ಲ; ಇದು ಸಾ ಮಾಯಾ ಇತ್ಯಾದಿ;

ಸ್ಥಲೇವಾಪಿ – ಭೂಮಿಯಲ್ಲಿ ಆಗಲಿ, ಜಲೇವಾಪಿ – ನೀರಿನಲ್ಲಾಗಲಿ, ತತ್ತತ್ಸ್ಥಾನವಿಶೇಷತಃ – ಆಯಾ ಸ್ಥಾನವಿಶೇಷದಿಂದ (ಆಯಾ ಸ್ಥಾನದ ಪ್ರಭಾವವ್ಯತ್ಯಾಸಗಳನ್ನನುಸರಿಸಿ), ವಿವಿಧಂ–ಬಹುವಿಧಗಳಾದ, ವಸ್ತು–ವಸ್ತುಸಮುದಾಯಗಳು, ಜಾಯತೇ–ಉತ್ಪನ್ನವಾಗುತ್ತವೆ; ಈ ಶಕ್ತಿಯು ಸಾ ಮಾಯಾ ಇತ್ಯಾದಿ.

ವಿಚಾರಿತೇಽಖಿಲಂ ವಸ್ತು ಯದ್ಯತ್ಸೃಷ್ಟಂ ಮಯಾ ವಿಧೇ ।
ವಿಚಿತ್ರಮೇವ ಮನ್ಯಸ್ವ ಯತಃ ಶಕ್ತೋ ನ ಹೀತರಃ ॥ ೪೦ ॥
ಕರ್ತುಂ ಚೇಷ್ಟಯಿತುಂ ವಾಪಿ ಕಥಂ ವಾಪಿ ಮಯಾ ಕೃತಂ ।
ಜಾನಾತಿ ನೈವ ಮೂಢೋಽಯಂ ವೃಥಾ ಪಂಡಿತಮಾನವಾನ್ ॥೪೨॥

ಮಾಡುವುದಿರಲಿ! ಈ ಪಂಡಿತಂಮನ್ಯನಾದ ಮೂಢನು ನಾನು ಹೇಗೆ ಸೃಷ್ಟಿಸುವೆನೆಂಬುದನ್ನೇ ತಿಳಿಯನು; ಸದೃಶ ಸೃಷ್ಟಿಯಲ್ಲಿ ಪೂರ್ಣ ಅಸಮರ್ಥನಾದ ಈ ಅಜ್ಞನು, ಸೃಷ್ಟವಾದ ವಸ್ತುಗಳನ್ನು ನನ್ನಂತೆ ಚೇಷ್ಟಿಸುವುದಕ್ಕೆ (ಅವುಗಳಿಂದ ನಾನಾ ಕ್ರಿಯೆಗಳನ್ನು ಮಾಡಿಸಲು) ಸಮರ್ಥರಾಗಬಹುದೇ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಧೇ – ಹೇ ಬ್ರಹ್ಮ!, ಮಯಾ – ನನ್ನಿಂದ, ಯದ್ಯತ್ – ಯಾವು ಯಾವುದು, ಸೃಷ್ಟಂ–ಸೃಷ್ಟವಾದುದೋ, ಅಖಿಲಂವಸ್ತು–ಆ ಸಮಸ್ತ ವಸ್ತು ಸಮುದಾಯವೂ (ಪ್ರತಿಯೊಂದೂ), ವಿಚಾರಿತೇ – (ಆಳವಾಗಿ) ವಿಮರ್ಶೆ ಮಾಡಿದರೆ, ವಿಚಿತ್ರಂ ಏವ–ಆಶ್ಚರ್ಯಕರವಾದುದೆಂದೇ, ಮನ್ಯಸ್ವ–ತಿಳಿಯುವವನಾಗು (ತಿಳಿಯುತ್ತೀಯೆ) ; ಯತಃ – ಏಕೆಂದರೆ, ಇತರಃ – (ನನ್ನನ್ನು ಬಿಟ್ಟು) ಮತ್ತೊಬ್ಬನು, ನ ಶಕ್ತಃ ಹಿ–(ನನ್ನ ಸೃಷ್ಟಿಸದೃಶವಾದ) ಯಾವುದೊಂದನ್ನು ಸೃಷ್ಟಿಸಲೂ ಸಮರ್ಥನಲ್ಲವೆಂಬುದು ಅನುಭವಸಿದ್ಧವಾಗಿದೆ.

ವೃಥಾಪಂಡಿತಮಾನವಾನ್ – ವ್ಯರ್ಥವಾಗಿ (ತನ್ನನ್ನು) ಪಂಡಿತನೆಂದು ತಿಳಿದುಕೊಳ್ಳುವ, ಅಯಂ ಮೂಢಃ– ಈ ಮೂರ್ಖನು, ಮಯಾ–ನನ್ನಿಂದ, ಕಥಂವಾ–ಹೇಗೆ, ಕೃತಂ – (ನಾನಾವಸ್ತುಗಳು) ಮಾಡಲ್ಪಟ್ಟವು (ನಿರ್ಮಿಸಲ್ಪಟ್ಟವು), ಅಪಿ–ಮತ್ತು, ಕರ್ತುಂ–(ತಾನು ಹಾಗೆ) ನಿರ್ಮಿಸಲಿಕ್ಕೂ, ವಾ–ಅಥವಾ, ಚೇಷ್ಟಯಿತುಂ–(ಆಯಾ ವಸ್ತುಗಳಿಂದ) ನಾನಾಕ್ರಿಯೆಗಳನ್ನು ಮಾಡಿಸಲಿಕ್ಕೂ, ನ ಜಾನಾತಿ ಏವ–ತಿಳಿಯುವುದೇ ಇಲ್ಲ (ಇದು ನಿಶ್ಚಿತವು).

ಸರ್ವೇಷಾಮಪಿ ವಿದ್ಯಾನಾಂ ಸರ್ವಶಿಲ್ಪಾದಿಕಸ್ಯ ಚ ।
ಅಹಮೇವ ಗುರುರ್ಮುಖ್ಯಸ್ತತ್ತದ್ವಿದ್ಯಾಪ್ರದರ್ಶನಾತ್ ॥ ೪೩ ॥

ನಾನಾರೂಪಧರೋ ಲೋಕೇ ನಾನಾಜೀವೇಷು ಸಂಸ್ಥಿತಃ ।
ದರ್ಶಯಾಮ್ಯಖಿಲಾ ವಿದ್ಯಾಸ್ತಥಾ ಶಿಲ್ಪಾನ್ಯನೇಕಶಃ ॥ ೪೪ ॥

ಅತೋ ಮಹಾಗುರುರಹಂ ಸ್ವತಂತ್ರಃ ಪೂರ್ಣಶಕ್ತಿಮಾನ್ ।
ಪೂರ್ಣಾನಂದಃ ಪೂರ್ಣತನುಃ ಪೂರ್ಣಜ್ಞಾನೋಽಖಿಲಾತ್ಮಕಃ ॥೪೫॥

ಸರ್ವಥಾ ಇಲ್ಲ (೪೧–೪೨). ಜಗತ್ತಿನಲ್ಲಿ ಸಕಲ ವಿದ್ಯೆಗಳನ್ನೂ ಸರ್ವವಿಧದ ಶಿಲ್ಪಕಲೆಗಳನ್ನೂ ಪ್ರದರ್ಶನಮಾಡುವವನಾದ್ದರಿಂದ, ನಾನೇ ಸರ್ವರ (ಸರ್ವ ವಿದ್ಯೆಗಳ ಮತ್ತು ಶಿಲ್ಪಗಳ ಉಪದೇಶಕನು) ಮುಖ್ಯಗುರುವು; ಆ ವಿದ್ಯೆ ಮತ್ತು ಶಿಲ್ಪಗಳ ಪ್ರವರ್ತಕರೆಂದು ತೋರುವ ಆಯಾ ಜನರಲ್ಲಿ ಅನಂತರೂಪಿಯಾದ ನಾನು, ತತ್ತದ್ರೂಪದಿಂದ ಅಂತರ್ಯಾಮಿಯಾಗಿ ನಿಂತು, ಸರ್ವವಿದ್ಯೋಪದೇಶಕನಾಗಿರುವೆನು; ಆದ್ದರಿಂದ ನಾನೇ ಮಹಾಗುರುವು— ಸ್ವತಂತ್ರನು (ನನಗೊಬ್ಬ ಗುರುವಿಲ್ಲ); ನಾನು ಅನಂತಶಕ್ತಿಯುತನು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೇಷಾಂ–ಎಲ್ಲಾ, ವಿದ್ಯಾನಾಂ ಅಪಿ–ವಿದ್ಯೆಗಳಿಗೂ, ಚ–ಮತ್ತು, ಸರ್ವಶಿಲ್ಪಾದಿಕಸ್ಯ – ಎಲ್ಲ ವಿಧದ ಶಿಲ್ಪಕಲೆಗಳಿಗೂ, ತತ್ತದ್ವಿದ್ಯಾಪ್ರದರ್ಶನಾತ್ – ಆಯಾ ವಿದ್ಯೆಗಳನ್ನು (ಜಗತ್ತಿನಲ್ಲಿ) ಪ್ರದರ್ಶನಮಾಡಿರುವುದರಿಂದ, ಅಹಂಏವ–ನಾನೇ, ಮುಖ್ಯಃ–ಮುಖ್ಯನಾದ, ಗುರುಃ–ಗುರುವು ;

ನಾನಾರೂಪಧರಃ–ಬಹುರೂಪಗಳುಳ್ಳ ನಾನು, ಲೋಕೇ–ಲೋಕದಲ್ಲಿ ನಾನಾಜೀವೇಷು – ವಿವಿಧ ಜೀವರಲ್ಲಿ, ಸಂಸ್ಥಿತಃ – (ತತ್ತದಾಕಾರನಾಗಿ ಅಂತರ್ಯಾಮಿಯಾಗಿ) ನಿಂತು, ಅಖಿಲಾಃ ವಿದ್ಯಾಃ – ಸಮಸ್ತವಿದ್ಯೆಗಳನ್ನು, ತಥಾ–ಹಾಗೂ, ಅನೇಕಶಃ–ಬಹುಪ್ರಕಾರದ, ಶಿಲ್ಪಾನಿ–ಶಿಲ್ಪಕಲೆಗಳನ್ನು, ದರ್ಶಯಾಮಿ–ತಿಳಿಸಿಕೊಡುತ್ತೇನೆ ;

ಅತಃ–ಆದ್ದರಿಂದ, ಅಹಂ – ನಾನು, ಸ್ವತಂತ್ರಃ – ಸ್ವತಂತ್ರನಾದ, ಮಹಾಗುರುಃ–ಮಹಾಗುರುವು, ಪೂರ್ಣಶಕ್ತಿಮಾನ್ – ಅನಂತಸಾಮರ್ಥ್ಯವುಳ್ಳವನು, ಪೂರ್ಣಾನಂದಃ–ಪೂರ್ಣಾನಂದಸ್ವರೂಪನು, ಪೂರ್ಣತನುಃ–ಅನಂತರೂಪಿಯು, ಪೂರ್ಣಜ್ಞಾನಃ – ಸರ್ವಜ್ಞನು (ಅನಂತಜ್ಞಾನಮೂರ್ತಿಯು), ಅಖಿಲಾತ್ಮಕಃ–ಸರ್ವಸ್ವಾಮಿಯು (ಸರ್ವಾಂತರ್ಯಾಮಿಯು) (ಆಗಿರುವೆನು).

ಸರ್ವಾಕಾರಃ ಸರ್ವರೂಪಃ ಸರ್ವನಾಮಾಖಿಲೇಷ್ಟದಃ ।
ನಾನಾ ವೇದಾಃ ಸ್ತುವಂತೀತ್ಥಂ ನಾನಾಕಾರಂ ಜಗದ್ಗುರುಂ ॥ ೪೬ ॥

(ಅಹಂ–ನಾನು), ಸರ್ವಾಕಾರಃ – ಎಲ್ಲ ರೂಪಗಳುಳ್ಳವನು (ಅನಂತರೂಪನು–ಪೂರ್ಣಸ್ವರೂಪನು–ಎಲ್ಲ ರೂಪಗಳೂ ಪೂರ್ಣಗಳೇ–ಅನಂತಗುಣಪೂರ್ಣಗಳೇ), ಸರ್ವರೂಪಃ–ಎಲ್ಲ ಕಾಲದಲ್ಲಿ ಎಲ್ಲ ವಸ್ತುಗಳ ಸ್ವರೂಪ

ಪೂರ್ಣಾನಂದನು, ಅನಂತರೂಪನು, ಸರ್ವಜ್ಞನು, ಸರ್ವಾಂತರ್ಯಾಮಿಯೂ, ಸರ್ವಸ್ವಾಮಿಯೂ ಆಗಿರುವೆನು (೪೩–೪೫). ನಾನೇ ಸರ್ವವಸ್ತುಗಳಲ್ಲಿ ತತ್ತದಾಕಾರನಾಗಿ ಅಂತರ್ಯಾಮಿಯಾಗಿ ನಿಂತು, ಸಕಲರ ಸರ್ವಾಭೀಷ್ಟಪ್ರದನಾಗಿರುವೆನು ; ಅನಂತರೂಪನಾದ ನಾನು ಸರ್ವನಾಮಗಳಿಂದ ಕರೆಯಲ್ಪಡುವವನೂ ಸರ್ವನಾಮಗಳಿಂದ ಬೋಧ್ಯವಾದ ಸರ್ವಮಹಿಮೆಗಳುಳ್ಳವನೂ ಆಗಿರುವೆನು ; ಅನಂತರೂಪಿಯೂ ಜಗದ್ಗುರುವೂ ಆದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಕ್ಷಕನು ; ಸರ್ವನಾಮಾ – ಎಲ್ಲ ವಸ್ತುಗಳ ಎಲ್ಲ ನಾಮಗಳೂ ನನ್ನವೇ (ಸರ್ವಶಬ್ದವಾಚ್ಯನು) ; ಅಖಿಲೇಷ್ಟದಃ – ಸರ್ವತ್ರ ಸರ್ವರ ಸಕಲಾಭೀಷ್ಟಗಳನ್ನು ಕೊಡುವವನು ನಾನೇ ; ಇತ್ಥಂ–ಹೀಗೆಂದು, ನಾನಾಕಾರಂ–ಅನಂತ ರೂಪನಾದ, ಜಗದ್ಗುರುಂ–ಜಗದ್ಗುರುವಾದ ನನ್ನನ್ನು, ನಾನಾವೇದಾಃ–ಅನಂತವೇದಗಳು, ಸ್ತುವಂತಿ–ಸ್ತುತಿಸುತ್ತವೆ.

ನಾನಾನಾಮಾನಮೀಶಾನಂ ಸ್ವಾತಂತ್ರ್ಯಾದಿಗುಣೈರ್ಯುತಂ ।
ಸ್ವಸ್ವಜ್ಞಾನಾನುಸಾರೇಣ ಸರ್ವೇ ಮಾಂ ಹಿ ವಿಜಾನತೇ ॥ ೪೭ ॥

ಸ್ವಾತಂತ್ರ್ಯಾದಿಗುಣೈಃ – ಸ್ವಾತಂತ್ರ್ಯ ಮೊದಲಾದ ಗುಣಗಳಿಂದ, ಯುತಂ–ಕೂಡಿರುವ, ನಾನಾನಾಮಾನಂ–ಅನಂತ ನಾಮಗಳುಳ್ಳ (ಸರ್ವಶಬ್ದವಾಚ್ಯನಾದ), ಈಶಾನಂ–ಸರ್ವನಿಯಾಮಕನಾದ, ಮಾಂ–ನನ್ನನ್ನು, ಸರ್ವೇ – ಎಲ್ಲರೂ, ಸ್ವಸ್ವಜ್ಞಾನಾನುಸಾರೇಣ – ತಂತಮ್ಮ ಜ್ಞಾನಾನುಸಾರವಾಗಿ (ಸ್ವಯೋಗ್ಯಜ್ಞಾನಕ್ಕೆ ತಕ್ಕಷ್ಟು), ವಿಜಾನತೇ–ತಿಳಿಯುತ್ತಾರೆ.

ಭಜಂತಿ ಸ್ವಾನುರೂಪೇಣ ಪ್ರಾಪ್ನುವಂತಿ ಫಲಂ ತಥಾ ।
ಯ ಇದಂ ಮಮ ಚಾರಿತ್ರಂ ಚಿತ್ರಂ ಮಾಯಾವಿಜೃಂಭಿತಂ ॥ ೪೮ ॥
ಶೃಣುಯಾದ್ವಾ ಪಠೇದ್ವಾಪಿ ಸ ಭಕ್ತಿಂ ಮಯಿಂ ವಿಂದತಿ ।
ಗರ್ಭದುಃಖಂ ಚ ನಾಪ್ನೋತಿ ಲಭತೇ ಚ ಧನಂ ಸುತಾನ್ ॥ ೪೯ ॥
ಅಂತೇ ಮಲ್ಲೋಕಮಾಪ್ನೋತಿ ಸತ್ಯಂ ಸತ್ಯಂ ವದಾಮಿ ತೇ ॥ ೫೦ ॥

ನನ್ನನ್ನು ಹೀಗೆಂದು, ಸಕಲ ವೇದಗಳೂ ಸ್ತುತಿಸುತ್ತಿವೆ (೪೬). ಎಲ್ಲ ಶಬ್ದಗಳೂ ಶ್ರೀವಿಷ್ಣುವಿನ ನಾಮಗಳೇ—ಆತನ ಮಹಿಮೆಗಳನ್ನೇ ಹೇಳುತ್ತವೆ; ಸರ್ವನಾಮನೂ, ಸ್ವಾತಂತ್ರ್ಯ ಮೊದಲಾದ (ಜ್ಞಾನ ಆನಂದಾದಿ) ಅನಂತ ಗುಣಪೂರ್ಣನೂ, ಸರ್ವನಿಯಾಮಕನೂ ಆದ ನನ್ನನ್ನು, ಎಲ್ಲರೂ ತಂತಮ್ಮ ಜ್ಞಾನವಿದ್ದಷ್ಟು ತಿಳಿಯುತ್ತಾರೆ—ನನ್ನನ್ನು ಪೂರ್ಣವಾಗಿ ತಿಳಿಯುವವರು ಯಾರೂ ಎಲ್ಲಿಯೂ ಯಾವ ಕಾಲಕ್ಕೂ ಇಲ್ಲವೇ ಇಲ್ಲ (೪೭). ಸರ್ವ ಮುಕ್ತಿಯೋಗ್ಯಸ್ವರೂಪದ ಜೀವರೂ ನನ್ನನ್ನು ಸ್ವಯೋಗ್ಯತಾನುಸಾರವಾಗಿ ಸೇವಿಸುತ್ತಾರೆ ಮತ್ತು ಸೇವಾನುಸಾರವಾದ ಫಲವನ್ನೂ ಹೊಂದುತ್ತಾರೆ; ಸ್ವೇಚ್ಛಾನುಸಾರ ವಿಜೃಂಭಿಸುವ ನನ್ನ ಈ ಅದ್ಭುತವಾದ ಲೀಲೆಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸರ್ವೇ – ಎಲ್ಲರೂ), ಸ್ವಾನುರೂಪೇಣ – ಸ್ವಯೋಗ್ಯತೆಯಂತೆ, ಭಜಂತಿ–(ನನ್ನನ್ನು) ಸೇವಿಸುತ್ತಾರೆ; ತಥಾ–ಹಾಗೆ (ಭಜನಾನುಸಾರವಾಗಿ), ಫಲಂ–ಫಲವನ್ನು, ಪ್ರಾಪ್ನುವಂತಿ–ಹೊಂದುತ್ತಾರೆ; ಮಾಯಾವಿಜೃಂಭಿತಂ–ನನ್ನ ಇಚ್ಛೆಯಿಂದ ವಿಜೃಂಭಿಸುವ (ನನ್ನ ಇಚ್ಛಾನುಸಾರವಾದ ವೃದ್ಧಿಯುಳ್ಳ–ಇಚ್ಛಾನುಸಾರವ್ಯಕ್ತಗೊಂಡು ವಿರಾಜಿಸುವ), ಚಿತ್ರಂ – ಆಶ್ಚರ್ಯಕರವಾದ (ಅದ್ಭುತವಾದ), ಇದಂ – ಈ, ಮಮ – ನನ್ನ, ಚಾರಿತ್ರಂ – ಚರಿತ್ರೆಯನ್ನು (ಲೀಲೆಯನ್ನು), ಯಃ–ಯಾವ ಅಧಿಕಾರಿಯು (ಮುಕ್ತಿಯೋಗ್ಯಜೀವನು), ಶೃಣುಯಾತ್–(ಗುರುಮುಖದಿಂದ) ಶ್ರವಣಮಾಡುವನೋ, ವಾ–ಮತ್ತು, ಪಠೇತ್ ವಾಪಿ – ಪಠನವನ್ನೂ ಮಾಡುತ್ತಾನೋ (ಮನನಾರ್ಥವಾಗಿ ಪಾರಾಯಣಾದಿರೂಪದಿಂದ ಪಠಿಸುವನೋ), ಸಃ–ಆತನು, ಮಯಿ–ನನ್ನಲ್ಲಿ, ಭಕ್ತಿಂ–ಭಕ್ತಿಯನ್ನು, ವಿಂದತಿ–ಹೊಂದುತ್ತಾನೆ; ಧನಂ–ಐಶ್ವರ್ಯವನ್ನು, ಚ–ಮತ್ತು, ಸುತಾನ್–(ಯೋಗ್ಯ) ಸಂತಾನವನ್ನೂ, ಲಭತೇ–ಹೊಂದುತ್ತಾನೆ, ಗರ್ಭದುಃಖಂ ಚ – (ಮಾತೃ)ಗರ್ಭವಾಸದ ದುಃಖವನ್ನೂ, ನ ಆಪ್ನೋತಿ–ಹೊಂದುವುದಿಲ್ಲ; ಅಂತೇ–ಕೊನೆಗೆ (ಹೀಗೆ ಐಹಿಕ ಸುಖಭೋಗಗಳನ್ನೂ ಹೊಂದಿದ ನಂತರ), ಪ್ರಾರಬ್ಧಭೋಗಾನಂತರ, ಮಲ್ಲೋಕಂ–ನನ್ನ (ವೈಕುಂಠ ಮೊದಲಾದ) ಮುಕ್ತಸ್ಥಾನವನ್ನು, ಆಪ್ನೋತಿ–ಹೊಂದುತ್ತಾನೆ; ತೇ – ನಿನಗೆ, (ಹೇ ಬ್ರಹ್ಮ!), ಸತ್ಯಂ ಸತ್ಯಂ – ಆದರಪೂರ್ವಕ ಯಥಾರ್ಥವನ್ನೇ (ನಿಜವನ್ನೇ), ವದಾಮಿ–ಹೇಳುತ್ತೇನೆ.

ಶ್ರವಣಮಾಡುವ ಮತ್ತು ಪಠನಮಾಡುವ ಪ್ರತಿಯೊಬ್ಬ ಅಧಿಕಾರಿಜೀವನೂ, ನನ್ನಲ್ಲಿ ಶ್ರೇಷ್ಠಭಕ್ತಿಯನ್ನು ಹೊಂದುತ್ತಾನೆ; ಐಶ್ವರ್ಯ ಸಂತಾನಾದಿ ನಾನಾ ಸುಖಭೋಗಗಳನ್ನು ಅನುಭವಿಸಿ, ಭಕ್ತಿಲಭ್ಯವಾದ ನನ್ನ ಪ್ರಸಾದದಿಂದ, ಗರ್ಭವಾಸದುಃಖರಹಿತನಾಗಿ (ಪುನಃ ಸಂಸಾರಕ್ಕೆ ಬರದೇ—ಜನನಮರಣ ರೂಪದ ಸುಳಿವಿನಲ್ಲಿ ಸಿಕ್ಕದೇ), ವೈಕುಂಠಾದಿ ಲೋಕಗಳನ್ನು ಹೊಂದುತ್ತಾನೆ (೪೮–೫೦).

ಮಾಯಾಚರಿತ್ರಕಥನವೆಂಬ ನಾಲ್ಕನೇ ಅಧ್ಯಾಯವು ಮುಗಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ೫

ಬ್ರಹ್ಮೋವಾಚ—

ಪೂರ್ಣಾನಂದೋಽಪಿ ಭಗವಾನ್ ಕಿಮರ್ಥಂ ಸೃಷ್ಟಿಮಾತನೋತ್ ।
ಪ್ರಾಪ್ತವಾನ್ ಕಿಂ ನು ಸೃಷ್ಟ್ವಾ ಸ ಕಥಂ ಪೂರ್ಣಸ್ತಥಾ ಸತಿ ॥ ೧ ॥

ಭಗವಾನ್—ಭಗವಂತನು (ಶ್ರೀವಿಷ್ಣುವು), ಪೂರ್ಣಾನಂದಃ ಅಪಿ—ಆನಂದಪೂರ್ಣನಾದರೂ, ಕಿಮರ್ಥಂ—ಯಾವ ಪ್ರಯೋಜನಕ್ಕಾಗಿ, ಸೃಷ್ಟಿಂ—ಸೃಷ್ಟಿಯನ್ನು, ಆತನೋತ್ – ಮಾಡಿದನು?, ಸೃಷ್ಟ್ವಾ – ಸೃಷ್ಟಿಯಿಂದ (ಸೃಷ್ಟಿಮಾಡಿದ್ದರಿಂದ), ಕಿಂ ನು—ಏನನ್ನು (ಯಾವ ಪ್ರಯೋಜನವನ್ನು), ಪ್ರಾಪ್ತವಾನ್—ಹೊಂದಿದನು?, ತಥಾ ಸತಿ—ಹಾಗೆ ಅದರಿಂದ ಏನಾದರೂ ಪ್ರಯೋಜನವನ್ನು ಹೊಂದಿದ್ದರೆ, ಸಃ – ಆತನು, ಪೂರ್ಣಃ – ಪೂರ್ಣನು, ಕಥಂ—ಹೇಗೆ? (ಹೊಸ ಪ್ರಯೋಜನವನ್ನು ಹೊಂದಿದರೆ ಆ ಮೊದಲು—ಸೃಷ್ಟಿಗೆ ಮೊದಲು ಅಪೂರ್ಣನೆಂದಾಗುವುದಿಲ್ಲವೇ?).

ಶ್ರೀ ಹಯಗ್ರೀವ ಉವಾಚ—

ಯ ಏವ ಆನಂದವಾನ್ ಲೋಕೇ ಸ ಕ್ರೀಡಾಂ ತನುತೇ ಭೃಶಂ ।
ಅತಿ ಚಿತ್ರಾಣಿ ಕರ್ಮಾಣಿ ಸ ಏವ ತನುತೇ ಯತಃ ॥ ೨ ॥

ಲೋಕೇ—ಲೋಕದಲ್ಲಿ, ಯಃ—ಯಾವಾತನು, ಆನಂದವಾನ್—ಆನಂದವುಳ್ಳವನೋ, ಸಃ ಏವ—ಆತನೇ, ಭೃಶಂ—ಅತಿಶಯವಾಗಿ, ಕ್ರೀಡಾಂ—ಕ್ರೀಡೆಯನ್ನು (ಲೀಲೆಗಾಗಿ ನಾನಾ ಚೇಷ್ಟೆಗಳನ್ನು), ತನುತೇ—ಮಾಡುತ್ತಾನೆ;

ಪೂರ್ಣಾನಂದನಾದ ಶ್ರೀವಿಷ್ಣು ಜಗತ್ತನ್ನೇಕೆ ಸೃಷ್ಟಿಸಿದನು? ಅದರಿಂದ ಆತನು ಏನಾದರೂ ಪ್ರಯೋಜನವನ್ನು ಹೊಂದಿದನೆಂದರೆ, ಸೃಷ್ಟಿ ಪೂರ್ವದಲ್ಲಿ ಹೊಂದಬೇಕಾದ ಪ್ರಯೋಜನವುಳ್ಳವನಾದ್ದರಿಂದ (ಪ್ರಾಪ್ತವ್ಯ ಪ್ರಯೋಜನವುಳ್ಳವನಾದ್ದರಿಂದ) ಅಪೂರ್ಣನೆಂದು ಸಿದ್ಧನಾಗುವುದಿಲ್ಲವೇ? (೧). ಲೋಕದಲ್ಲಿ ಆನಂದವುಳ್ಳವನೇ ಕ್ರೀಡಿಸುವುದನ್ನು ಕಾಣುತ್ತೇವೆ; ಆತನೇ ಬಹುಪರಿಯ ಆಶ್ಚರ್ಯಕರ ಕೃತಿಗಳಲ್ಲಿ ತೊಡಗುತ್ತಾನೆ—ಅನ್ಯರಲ್ಲ (೨).

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಯತಃ – ಯಾವ ಕಾರಣದಿಂದ (ಆನಂದವುಳ್ಳವನಾದ ಕಾರಣದಿಂದಲೇ), ಅತಿ ಚಿತ್ರಾಣಿ–ಬಹುಪ್ರಕಾರದ (ಆಶ್ಚರ್ಯಕರಗಳಾದ), ಕರ್ಮಾಣಿ–ಕೃತಿಗಳನ್ನು. ಸಃ ಏವ–ಆತನೇ, ತನುತೇ–ಮಾಡುತ್ತಾನೆ (ಸುಖಿಗಳಲ್ಲದವರಲ್ಲ.)

ನರಾ ಅಶ್ವಾಶ್ಚ ಗೋಜಾವಿಮುಖಾ ಯೇ ಪಶವೋಽಪಿ ಹಿ ।
ಕ್ರೀಡಂತ್ಯಾನಂದತೋ ಲೋಕೇ ಪೂರ್ಣಾನಂದೋ ಹರಿಃ ಕಿಮು ॥
ಚಿಂತಾಮಗ್ನೋ ಜ್ವರೇಣಾರ್ತಃ ಸ್ವಪ್ತುಂ ಶಕ್ನೋತಿ ನೋ ಸುಖಂ ।
ಯಃ ಸ ಕಿಂ ಕ್ರೀಡತೇ ತಸ್ಯ ಯತಃ ಸರ್ವಂ ವಿಷಾಯತೇ ॥ ೪ ॥
ಯಥಾನಂದಸ್ತಥಾ ಕ್ರೀಡಾ ಯಥಾನಂದಸ್ತಥೋದ್ಯಮಃ ।
ಮಹಾನಂದಸ್ಯ ಮಹತೀ ತಥಾ ಕ್ರೀಡೇಯಮೀರಿತಾ ॥ ೫ ॥

ನರಾಃ–ಮನುಷ್ಯರು, ಗೋಜಾವಿಮುಖಾಃ–ಗೋವು, ಮೇಕೆ, ಕುರಿ ಮುಂತಾದ, ಯೇ–ಯಾವ, ಪಶವಃ ಅಪಿ–ಪಶುಗಳು ಸಹ, ಲೋಕೇ–ಲೋಕದಲ್ಲಿ, ಆನಂದತಃ–ಆನಂದದಿಂದಲೇ (ಆನಂದದಿಂದ ಇರುವಾಗಲೇ), ಕ್ರೀಡಂತಿ ಹಿ–ಕ್ರೀಡಿಸುತ್ತವೆಯಷ್ಟೆ (ಆಟಪಾಟವಿಹಾರಗಳಲ್ಲಿ ತೊಡಗುತ್ತವೆ); ಪೂರ್ಣಾನಂದಃ – ಪೂರ್ಣಾನಂದವುಳ್ಳ, ಹರಿಃ – ಶ್ರೀಹರಿಯು, ಕಿಮು–ಆಶ್ಚರ್ಯಕರವಾಗಿ ಕ್ರೀಡಿಸುತ್ತಾನೆಂದು ಹೇಳಲೇನಿದೆ? (ಆನಂದದ ಉದ್ರೇಕದಿಂದಲೇ ಜಗತ್ತಿನ ಸೃಷ್ಟಿ ಮೊದಲಾದ ಕ್ರೀಡೆಯು ಸಂಭವಿಸುತ್ತದೆ) ;

ಲೋಕದಲ್ಲಿ, ಮನುಷ್ಯರು—ಅಷ್ಟೇಕೆ, ಹಸು ಮೇಕೆ ಕುರಿ ಮೊದಲಾದ ಪಶುಗಳು ಸಹ, ಆನಂದದಿಂದಿರುವಾಗ ಮಾತ್ರ ಕ್ರೀಡಿಸುತ್ತವೆ; ಚಿಂತೆಯಲ್ಲಿ ಮುಳುಗಿದವನೂ, ಜ್ವರಾದಿಗಳಿಂದ ನರಳುವ (ದುಃಖಿಸುವ) ಮನುಷ್ಯನೂ, ಸುಖದಿಂದ ನಿದ್ರಿಸಲು ಸಹ ಅಸಮರ್ಥನಾಗಿರುವುದು ಕಂಡುಬರುತ್ತದೆ; ಅಂಥವನು ಯಾವ ಕ್ರೀಡೆಯಲ್ಲಿ ತೊಡಗಬಹುದು? ಯಾವ ಆಟವನ್ನು ಆಡಬಹುದು? ಆತನಿಗೆ (ಹಾಗೆ ದುಃಖಿಯಾದವನಿಗೆ) ಕ್ರೀಡಾದಿಗಳು ಯಾವುವೂ (ಅಷ್ಟೇಕೆ ಆಹಾರ ವಿಹಾರಗಳು ಸಹ) ವಿಷಪ್ರಾಯವಾಗುತ್ತವೆ; ಆದ್ದರಿಂದ ಆನಂದವು ಅಧಿಕವಾದಂತೆ, ಕ್ರೀಡಾದಿಗಳಲ್ಲಿ ಆಸಕ್ತಿಯೂ ಹೆಚ್ಚುವುದೆಂದು ಸಿದ್ಧವಾಗುತ್ತದೆ; ಸರ್ವೋತ್ಕೃಷ್ಟವಾದ ಪೂರ್ಣಾನಂದ ಸ್ವರೂಪನೇ ಆದ, ದುಃಖಲೇಶಸ್ಪರ್ಶವು, ಎಂದೂ ಇಲ್ಲದ ಶ್ರೀಹರಿಯಿಂದಲೇ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿಂತಾಮಗ್ನಃ—ಚಿಂತೆಯಲ್ಲಿ ಮುಳುಗಿದವನು, ಜ್ವರೇಣ—ಜ್ವರದಿಂದ, ಆರ್ತಃ—ದುಃಖಪಡುವವನೂ, ಸುಖಂ—ಸುಖವಾಗಿ, ಸ್ವಪ್ತುಂ—ನಿದ್ರಿಸಲೂ, ನೋ ಶಕ್ನೋತಿ—ಶಕ್ತನಾಗುವುದಿಲ್ಲ; ಯಃ—ಯಾವ, ಸಃ—ಈತನು, ಕಿಂ ಕ್ರೀಡತೇ – ಆಟವನ್ನೇನು ಆಡುತ್ತಾನೆ? (ಕ್ರೀಡಿಸಲು ಅಸಮರ್ಥನೇ ಸರಿ); ಯತಃ—ಏಕೆಂದರೆ, ತಸ್ಯ—ಆತನಿಗೆ (ದುಃಖವುಳ್ಳವನಿಗೆ), ಸರ್ವಂ—ಎಲ್ಲವೂ, ವಿಷಾಯತೇ – ವಿಷದಂತೆ ಬೇಡವಾಗುತ್ತದೆ; (ಆದ್ದರಿಂದ), ಯಥಾ – ಹೇಗೆ ಹೇಗೆ, ಆನಂದಃ – ಆನಂದವೋ (ಆನಂದವು ಎಷ್ಟೆಷ್ಟು ಅಧಿಕವೋ), ತಥಾ – ಹಾಗೆ ಹಾಗೆ (ಅಷ್ಟಷ್ಟು), ಕ್ರೀಡಾ – ಕ್ರೀಡೆಯಲ್ಲಿ ಆಸಕ್ತಿಯು ಇರುತ್ತದೆ; (ಶಕ್ತಿಯು ಇರುತ್ತದೆ); ಯಥಾ ಆನಂದಃ—ಆನಂದದ ಆಧಿಕ್ಯತೆಗೆ ಅನುಗುಣವಾಗಿ, ಉದ್ಯಮಃ—ಕ್ರಿಯಾ ಸಾಮರ್ಥ್ಯವೂ (ಇರುತ್ತದೆ); ತಥಾ—ಹೀಗೆ, (ಈ ಲೋಕಾನುಭವವನ್ನಾಶ್ರಯಿಸುವ ಯುಕ್ತಿಯಿಂದ), ಮಹಾನಂದಸ್ಯ – ಸರ್ವೋತ್ಕೃಷ್ಟವಾದ ಆನಂದವುಳ್ಳವನ (ಅಪಾರವಾದ ಆನಂದ ಸ್ವರೂಪನೇ ಆದ ಶ್ರೀಹರಿಯು), ಮಹತೀ – ಅತ್ಯದ್ಭುವಾದ, ಕ್ರೀಡಾ—ಕ್ರೀಡೆಯು, ಇಯಂ—ಈ ಜಗತ್ಸೃಷ್ಟ್ಯಾದಿವ್ಯಾಪಾರಗಳು, ಈರಿತಾ—ಎಂದು (ವೇದಾದಿಗಳಲ್ಲಿ) ಹೇಳಲ್ಪಡುತ್ತದೆ.

ಇಯಂ ಹಿ ಸಕಲಾ ಸೃಷ್ಟಿಃ ತಸ್ಯಾನಂದಸ್ಯ ಲೇಶತಃ ।
ಅನಂತಾನಂದಪೂರ್ಣಸ್ಯ ಹ್ಯನುರೂಪಾ ಕಥಂ ಭವೇತ್ ॥ ೬ ॥

ಈ ಅತ್ಯದ್ಭುತವಾದ ಜಗತ್ಸೃಷ್ಟ್ಯಾದಿ ಕ್ರೀಡೆಗಳು ಸಂಭವಿಸುತ್ತವೆಂದು ಸಿದ್ಧವಾಗುತ್ತದೆ (೩–೫). ಆನಂದಕ್ಕೆ (ಆನಂದದ ಪರಿಮಾಣ—ಅಳತೆಗೆ) ತಕ್ಕಷ್ಟು (ಯೋಗ್ಯವಾಗುವಷ್ಟು) ಕ್ರೀಡೆಯು ಲೋಕಾನುಭವದಿಂದ ಕಂಡು ಬರುತ್ತದೆ; ಈ ವಿಶ್ವದ ಸೃಷ್ಟಿ, ಸ್ಥಿತಿ, ಲಯಾದಿ ಕೃತಿಗಳು ಅತ್ಯದ್ಭುತ ವಾಗಿವೆ; ಅಚಿಂತ್ಯವಾದ ಅನಂತಶಕ್ತಿಯುಳ್ಳವನಿಂದಲೇ ಸಾಧ್ಯವಾದ ಈ ರೂಪದ ಕ್ರೀಡೆಗಳು ಸಹ, ಅನಂತಾನಂದ ಪೂರ್ಣಸ್ವರೂಪನಾದ ಶ್ರೀಹರಿಯು, ಪೂರ್ಣಾನಂದಕ್ಕೆ ಯೋಗ್ಯವಾದ ಕ್ರೀಡೆಗಳಾಗುವುದಿಲ್ಲ; ಕಿಂತು, ಆತನ ಆನಂದದ ಏಕದೇಶಕ್ಕೆ ಮಾತ್ರ ಯೋಗ್ಯವೆನಿಸುತ್ತವೆ; ಆ ಪ್ರಕಾರದ ಲೋಕವಿಲಕ್ಷಣವಾದ, ಅಪರಿಮಿತವಾದ, ದುಃಖಲೇಶಸ್ಪರ್ಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಕಲಾ – ಸಮಸ್ತವಾದ, ಇಯಂ ಸೃಷ್ಟಿಃ – ಈ ಸೃಷ್ಟಿಯು, ತಸ್ಯ– ಆತನ (ಶ್ರೀಹರಿಯ), ಆನಂದಸ್ಯ–ಆನಂದದ, ಲೇಶತಃ–ಅತ್ಯಲ್ಪಾಂಶಮಾತ್ರದಿಂದ (ಆದುದು), ಹಿ – ಹೀಗೆಯೇ ಸರಿ (ಏಕೆಂದರೆ), ಅನಂತಾನಂದಪೂರ್ಣಸ್ಯ–ಅನಂತವಾದ ಆನಂದದಿಂದ ಪೂರ್ಣನಾದ ಶ್ರೀಹರಿಯ ಅಪಾರವಾದ ಆನಂದಕ್ಕೆ, ಅನುರೂಪಾ – ಅನುರೂಪವಾದುದು (ಪೂರ್ಣವಾಗಿ ಅನುಗುಣವಾದುದು), ಕಥಂ ಭವೇತ್–ಹೇಗಾದೀತು !

ಬ್ರಹ್ಮಾಂಡಾದೇಃ ಪರಿಚ್ಛಿನ್ನಾ ಸೃಷ್ಟಿರೇಷೇತಿ ಹಿ ಶ್ರುತಿಃ ।
ಪೂರ್ಣಾನಂದೋ ನ ಚೇತ್ ಸ ಸ್ಯಾತ್ಕಥಂ ಸೃಷ್ಟಿರ್ಭವೇದಿಯಂ ॥

ಏಷಾ–ಈ, ಬ್ರಹ್ಮಾಂಡಾದೇಃ–ಬ್ರಹ್ಮಾಂಡ ಮೊದಲಾದುದರ (ಆದಿ ಶಬ್ದದಿಂದ ಬಹಿರಾವರಣಗಳನ್ನೂ, ಬ್ರಹ್ಮಾಂಡದೊಳಗಿನ ಅನಂತ ಜಡಚೇತನಗಳ ಸೃಷ್ಟಿಯನ್ನೂ ಗ್ರಹಿಸಬೇಕು), ಸೃಷ್ಟಿಃ–ಸೃಷ್ಟಿಯು, ಪರಿಚ್ಛಿನ್ನಾ–ಪರಿಮಿತಿಯುಳ್ಳದ್ದು, ಇತಿ – ಎಂದು, ಶ್ರುತಿಃ ಹಿ – ಶ್ರುತಿಯು ಹೇಳುತ್ತದೆ; (ಈ ಕಾರಣದಿಂದ ಶ್ರೀಹರಿಯ ಆನಂದದ ಲೇಶಾಂಶದಿಂದ ಮಾತ್ರ ಸೃಷ್ಟ್ಯಾದಿ ಕ್ರೀಡೆಗಳೆಂದು ಸಿದ್ಧವಾಗುತ್ತದೆ) ; ಸಃ–ಆತನು (ಶ್ರೀಹರಿಯು), ಪೂರ್ಣಾನಂದಃ–ಪೂರ್ಣಾನಂದನು (ದುಃಖಲೇಶರಹಿತನು), ನ ಚೇತ್–ಅಲ್ಲದಿದ್ದರೆ, ಇಯಂ – ಈ (ಸೃಷ್ಟ್ಯಾದಿರೂಪದ) ಕ್ರೀಡೆಯಾದ, ಸೃಷ್ಟಿಃ – ಸೃಷ್ಟಿಯು, ಕಥಂ–ಹೇಗೆ, ಭವೇತ್–ಸಂಭವಿಸುತ್ತದೆ ?

ಕೋಹ್ಯೇವಾನ್ಯಾಚ್ಚ ಕಃ ಪ್ರಾಣಾತ್ ಸ್ಫುಟಮಿತ್ಯಾಹ ಹಿ ಶ್ರುತಿಃ ।
ತಸ್ಮಾದಾನಂದಪೂರ್ಣಾಬ್ಧೇರ್ವೀಚೀಬುದ್ಬುದಲೇಶವತ್ ॥ ೮ ॥

ವಿಲ್ಲದ, ಆನಂದಪೂರ್ಣನು–ಶ್ರೀಹರಿ (೬). ಬ್ರಹ್ಮಾಂಡಾದಿಗಳ ಸೃಷ್ಟಿಯು, ಪರಿಮಿತಿಯುಳ್ಳದ್ದೆಂದು ಶ್ರುತಿಯು ಹೇಳುವುದರಿಂದ, ಶ್ರೀಹರಿಯ ಆನಂದದ ಲೇಶದಿಂದ (ಆನಂದಸಾಗರದ ಒಂದು ಬಿಂದುಮಾತ್ರದಿಂದ), ಸೃಷ್ಟ್ಯಾದಿ ಕ್ರೀಡೆಯು ಸಂಭವಿಸುತ್ತದೆಂದು ತಿಳಿಯಬೇಕು. ಶ್ರೀಹರಿಯು ಆನಂದಮಾತ್ರ ದೇಹಿಯಲ್ಲದಿದ್ದರೆ (ದುಃಖಲೇಶದ ಮಿಶ್ರವೂ ಇರದಂತೆ ಇಲ್ಲದಿದ್ದರೆ), ಸೃಷ್ಟಿರೂಪದ ಕ್ರೀಡೆಯೇ ಯುಕ್ತಿಯುಕ್ತವಾಗುವುದಿಲ್ಲ (೭). ಆನಂದಪೂರ್ಣನಲ್ಲದ ಯಾರೊಬ್ಬನೂ, ಈ ಜಗತ್ತನ್ನು ಸೃಷ್ಟಿಸಲು ಮತ್ತು ಯಥಾಯೋಗ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಏಕೆಂದರೆ), ಶ್ರುತಿಃ–ಶ್ರುತಿಯು, ಸ್ಫುಟಂ–ಸ್ಪಷ್ಟವಾಗಿ, ಕಃ ಏವ ಹಿ–ಯಾರುತಾನೇ, ಅನ್ಯಾತ್–(ಈ ಜಗತ್ತನ್ನು ಚೇಷ್ಟಿಸಲು ಶಕ್ತನಾದಾನು?, ಕಃ – ಯಾರೊಬ್ಬನು, ಪ್ರಾಣ್ಯಾತ್ – ಸರ್ವಪ್ರೇರಕನಾದಾನು? (ಯ ಏಷ ಆನಂದೋ ನ ಸ್ಯಾತ್ – ಯಾವ ಈತನು ಆನಂದಪೂರ್ಣನಲ್ಲದಿದ್ದರೆ, ಜಗಚ್ಚೇಷ್ಟಕನಾಗಲಾರನು), ಇತಿ ಆಹ–ಹೀಗೆಂದು ಹೇಳುತ್ತದೆ, ತಸ್ಮಾತ್–ಈ ಕಾರಣದಿಂದ, ಆನಂದಪೂರ್ಣಾಬ್ಧೇಃ–ಆನಂದವೆಂಬ ಅಪಾರಸಮುದ್ರದ, ವೀಚೀಬುದ್ಬುದಲೇಶವತ್ – ಅಲೆಯೊಂದರ ಮೇಲಿನ ಬುರುಗಿನ (ಬುದ್ಬುದ) ಅಲ್ಪಭಾಗದಂತೆ, (ಏಷಾ ಅಖಿಲಾ ಸೃಷ್ಟಿಃ–ಈ ಸಮಸ್ತ ಜಗತ್ತಿನ ಸೃಷ್ಟಿಯು, ಎಂದು ಮುಂದಿನ ಶ್ಲೋಕದಿಂದ ಅನ್ವಯಪೂರ್ತಿಯನ್ನು ತಿಳಿಯಬೇಕು).

ಸೃಷ್ಟಿರೇಷಾಖಿಲಾ ಬ್ರಹ್ಮನ್ ಅನ್ಯದಪ್ಯವಧಾರಯ ।
ಅನಾದಿಕರ್ಮಣಾ ಬದ್ಧಾ ಜೀವಾ ನಿತ್ಯಾ ಹ್ಯನೇಕಶಃ ॥ ೯ ॥
ಲಿಂಗದೇಹಯುತಾಃ ಸರ್ವೇ ಪತಿತಾ ಮೂರ್ಛಿತಾ ಇವ ।
ಯದಿ ತೇ ಸ್ಥೂಲದೇಹೇನ ಯುತಾ ನ ಸ್ಯುರಿಮೇಽಖಿಲಾಃ ॥ ೧೦ ॥

ವಾಗಿ ಕಾಲಕಾಲದಲ್ಲ ಅದನ್ನು ಚೇಷ್ಟಿಸಲು (ಈ ಜಡಚೇತನಾತ್ಮಕ ವಿಶ್ವದಿಂದ ಬಹುಪ್ರಕಾರದ ಕ್ರಿಯೆಗಳನ್ನು ಮಾಡಿಸಲು) ಸರ್ವಥಾ ಶಕ್ತನಾಗಲಾರನೆಂಬ ಯುಕ್ತಿಪೂರ್ವಕವಾಗಿ ಶ್ರುತಿಯು, ಸೃಷ್ಟಿಯ ಸಂಭವವನ್ನು ನಿರೂಪಿಸುತ್ತದೆ ಮತ್ತು ಈ ವಿಶ್ವಸೃಷ್ಟಿಯು (ಸೃಷ್ಟಿ ಮೊದಲಾದ ಕ್ರೀಡೆಗಳು), ಆನಂದಸಮುದ್ರನೇ ಆದ ಶ್ರೀಹರಿಯು, ಆನಂದಸಾಗರದ ಒಂದು ಕೆರೆಯ ಬುರುಗಿನ (ನೊರೆಯ) ಏಕಾಂಶದಿಂದ ಎಂದು ಸಿದ್ಧವಾಗುತ್ತದೆ (೮). ಜಗತ್ಸೃಷ್ಟ್ಯಾದಿರೂಪ ಕ್ರೀಡೆಯಿಂದ ಶ್ರೀವಿಷ್ಣುವಿಗೆ ಯಾವ ಪ್ರಯೋಜನವೂ ಇಲ್ಲವೇ ಇಲ್ಲ; ಹೀಗಿದ್ದರೂ ಈ ಕ್ರೀಡೆಯಿಂದ ಅನಾದಿ ಕರ್ಮದಿಂದ ಬದ್ಧರೂ ಲಿಂಗದೇಹಯುತರಾಗಿ ಮೂರ್ಛಿತರಂತೆ ಬಿದ್ದಿರುವ ಜೀವರಿಗೆ ಮಹಾಪ್ರಯೋಜನವಿದೆ–ಈ ಅಂಶವನ್ನು ಚೆನ್ನಾಗಿ ಗಮನದಲ್ಲಿಡು. ಈ ಅನಂತ ಜೀವರಾಶಿಗಳಲ್ಲಿ ಮುಕ್ತಿಯೋಗ್ಯರಾದ ಜೀವರಿಗೆ ಸೃಷ್ಟಿಯಿಲ್ಲದಿದ್ದರೆ, ಸ್ಥೂಲದೇಹ (ಸಾಧನೆಗೆ ಯೋಗ್ಯವಾದ) ದೊರೆಯದಿದ್ದರೆ, ಸ್ವಸ್ವರೂಪದ ಆವಿರ್ಭಾವವಾಗಲು, ಅವಶ್ಯಕವಾಗಿ ಕಳೆದುಕೊಳ್ಳಬೇಕಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥಂ ಕರ್ಮಾಣಿ ಕುರ್ವೀರನ್ ವಿಷ್ಣುಭಕ್ತಿಪರಾಯಣಾಃ ।
ಅಪೂರ್ಣಭಕ್ತಯಸ್ತೇ ವಾ ಕಥಂ ಮೋಕ್ಷಮವಾಪ್ನುಯುಃ ॥ ೧೧ ॥

(ಏಷಾ ಅಖಿಲಾ ಸೃಷ್ಟಿಃ – ಎಂಬ ಪದಗಳು ಹಿಂದಿನ ಶ್ಲೋಕದಲ್ಲಿ ಅನ್ವಯಗೊಂಡಿವೆ); ಬ್ರಹ್ಮನ್–ಹೇ ಬ್ರಹ್ಮ!, ಅನ್ಯದಪಿ–(ಈ ವಿಷಯಕ್ಕೆ ಸಂಬಂಧಿಸಿದ) ಬೇರೊಂದು ಪ್ರಮೇಯವನ್ನೂ (ತಿಳಿಯಬೇಕಾದ ವಿಷಯವನ್ನೂ), ಅವಧಾರಯ-ಮನಸ್ಸಿನಲ್ಲಿ ನಿಶ್ಚಯವಾಗಿ ತಿಳಿ; ಅನಾದಿಕರ್ಮಣಾ-ಅನಾದಿಕರ್ಮದಿಂದ, ಬದ್ಧಾಃ–ಬಂಧಿತರಾದ, ಅನೇಕಶಃ ಜೀವಾಃ–ಅಸಂಖ್ಯ ಜೀವರು (ಬಹುಪ್ರಕಾರದ–ಬಹುಭಿನ್ನ ಯೋಗ್ಯತೆಯ ಜೀವರು), ನಿತ್ಯಾಃ ಹಿ–ನಿತ್ಯರಾಗಿರುವರಷ್ಟೆ; ಸರ್ವೇ–ಈ ಎಲ್ಲರೂ, ಲಿಂಗದೇಹಯುತಾಃ – ಲಿಂಗದೇಹದಿಂದ ಆಚ್ಛಾದಿತ ಸ್ವರೂಪವುಳ್ಳವರಾಗಿ, ಮೂರ್ಛಿತಾಃ ಇವ–ಮೂರ್ಛೆಯನ್ನು ಹೊಂದಿದವರಂತೆ, ಪತಿತಾಃ – ಬಿದ್ದಿರುವರು; ತೇ ಅಖಿಲಾಃ – ಆ ಎಲ್ಲರೂ (ಸರ್ವರೂ ಸ್ವಗತಿಪ್ರಾಪ್ತಿಗಾಗಿ ಮುಕ್ತಿಯೋಗ್ಯರು ವಿಶೇಷವಾಗಿ), ಯದಿ–ಒಂದು ಪಕ್ಷ, ಸ್ಥೂಲದೇಹೇನ–ಸ್ಥೂಲದೇಹದಿಂದ, ಯುತಾಃ–ಕೂಡಿದವರು, ನ ಸ್ಯುಃ–ಆಗದಿದ್ದರೆ, ಕಥಂ–ಹೇಗೆ, ವಿಷ್ಣುಭಕ್ತಿಪರಾಯಣಾಃ–ವಿಷ್ಣುಭಕ್ತಿಪರಾಯಣರಾಗಿ, ಕಥಂ–ಹೇಗೆ, ಕರ್ಮಾಣಿ–ಕರ್ಮಗಳನ್ನು, ಕುರ್ವೀರನ್–ಮಾಡಲು ಶಕ್ತರಾದಾರು? ಅಪೂರ್ಣಭಕ್ತಯಃ ತೇ–(ಸ್ವವಿಹಿತ ಕರ್ಮಗಳನ್ನಾಚರಿಸಿ ಶ್ರೀಹರಿಯನ್ನು ಪೂಜಿಸಿ–ಅರ್ಪಿಸಿ) ಸ್ವಯೋಗ್ಯಪೂರ್ಣ ಭಕ್ತಿಯನ್ನು ದೊರಕಿಸಿಕೊಳ್ಳದ ಅವರು, ಕಥಂ ವಾ – ಹೇಗೆ ತಾನೇ, ಮೋಕ್ಷಂ – (ನಿತ್ಯಾನಂದ ಸ್ಥಿತಿರೂಪದ – ನಿತ್ಯಸ್ವರೂಪಾವಿರ್ಭಾವವೆಂಬ) ಮೋಕ್ಷವನ್ನು, ಆವಾಪ್ನುಯುಃ–ಹೊಂದಿಯಾರು?

ಅನಾದಿ ಕರ್ಮಾದಿಗಳ ಬಂಧಪರಿಹಾರಕ್ಕಾಗಿ ಆಚರಿಸಬೇಕಾದ ಕರ್ಮಗಳೇ ಸಂಭವಿಸುವುದಿಲ್ಲ; ಸ್ವಯೋಗ್ಯ ವಿಹಿತ ಕರ್ಮಗಳನ್ನಾಚರಿಸಿ, ಶ್ರೀಹರಿಗೆ ಅರ್ಪಿಸಿ, ಆತನ ಪ್ರಸನ್ನತೆಯನ್ನು ಸಂಪಾದಿಸದಿದ್ದರೆ, ವಿಷ್ಣುಭಕ್ತಿಪರಾಯಣರಾಗುವುದಿಲ್ಲ; ವಿಷ್ಣುಭಕ್ತಿಯಿಲ್ಲದೇ ಅವರಿಗೆ ಎಂದೂ, ಮೋಕ್ಷವು (ಬಂಧದ ಬಿಡುಗಡೆ ಮತ್ತು ಸ್ವರೂಪಾವಿರ್ಭಾವದ ನಿತ್ಯನಿರ್ದುಃಖಸ್ಥಿತಿಯು) ದೊರೆಯುವುದಿಲ್ಲ (೯–೧೧). ಹೀಗೆ ಜೀವರ ಮೇಲಿನ ದಯೆಯಿಂದಲೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತಿ ತೇಷಾಂ ತು ಕಾರುಣ್ಯಾತ್ ದಯಾಲುರ್ಭಗವಾನಿದಂ ।
ಸೃಷ್ಟ್ಯಾದಿ ಕುರುತೇ ಸರ್ವಮನ್ಯಥಾ ತದ್ದಯಾಲುತಾ ॥ ೧೨ ॥
ವ್ಯಾಹನ್ಯೇತ ತಥಾಪ್ಯನ್ಯಾನ್ ಜೀವಾನ್ ಮಧ್ಯಮತಾಮಸಾನ್ ।
ಸೃಜತ್ಯವತಿ ಹಂತ್ಯೇವ ಭಕ್ತಾನಾಂ ಭಕ್ತಿವೃದ್ಧಯೇ ॥ ೧೩ ॥
ಏವಂ ಸಾತ್ವಿಕಮಧ್ಯಸ್ಥತಾಮಸಾಂಸ್ತ್ರಿವಿಧಾನಪಿ ।
ಸೃಜತ್ಯವತಿ ಹಂತೀಶೋ ಲೀಲಯಾ ಭಕ್ತವತ್ಸಲಃ ॥ ೧೪ ॥

ಇತಿ–ಹೀಗೆ, ತೇಷಾಂ–ಅವರ (ಜೀವರ ಮೇಲಿನ), ಕಾರುಣ್ಯಾತ್ ತು–ಕರುಣೆಯಿಂದಲೇ, ದಯಾಲುಃ–ದಯಾಳುವಾದ, ಭಗವಾನ್–ಶ್ರೀವಿಷ್ಣುವು, ಇದಂ – ಈ (ಈ ಜಗತ್ತಿನ), ಸೃಷ್ಟ್ಯಾದಿ – ಸೃಷ್ಟಿ ಮೊದಲಾದವುಗಳನ್ನು, ಕುರುತೇ–ಮಾಡುತ್ತಾನೆ; ಅನ್ಯಥಾ–ಹಾಗಲ್ಲದಿದ್ದರೆ (ಜೀವರ ಪ್ರಯೋಜನಕ್ಕಾಗಿ ಸೃಷ್ಟ್ಯಾದಿಗಳನ್ನು ಮಾಡದಿದ್ದರೆ), ತದ್ದಯಾಲುತಾ – ಆತನ (ಶ್ರೀವಿಷ್ಣುವಿನ) ದಯಾಲುತ್ವವು (ಕೃಪಾಪೂರ್ಣನೆಂಬುದು), ವ್ಯಾಹನ್ಯೇತ–

ಶ್ರೀಹರಿಯು, ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುತ್ತಾನೆ; ಸೃಷ್ಟ್ಯಾದಿಗಳನ್ನು ಮಾಡದಿದ್ದರೆ ಆತನು ದಯಾಳುವೆಂಬ ಮಾತು (ವೇದಗಳ ನುಡಿಯು) ಅರ್ಥವಿಲ್ಲದುದಾಗುತ್ತದೆ; ಶ್ರೀಹರಿಯು ಭಕ್ತವತ್ಸಲನಾದ್ದರಿಂದ, ತ್ರಿವಿಧ ಜೀವರನ್ನೂ ಸೃಷ್ಟಿಸಿ, ರಕ್ಷಿಸಿ ಸಂಹರಿಸುತ್ತಾನೆ—ರಾಜಸ ತಾಮಸರಾದ (ಮಧ್ಯಮ, ಅಧಮ) ಜೀವರ ಸೃಷ್ಟ್ಯಾದಿಗಳಿಂದ ಸಹ ಸ್ವಭಾವದಿಂದಲೇ ಭಕ್ತರಾದ ಸಾತ್ವಿಕರ ಭಕ್ತಿಯು ಅಭಿವೃದ್ಧಿ ಹೊಂದುತ್ತದೆ) ; [1] ಸಕಲ ಜೀವರು ತಂತಮ್ಮ ಅಂತಿಮಗತಿಗಳನ್ನು ಸಾಧಿಸಿಕೊಳ್ಳುವ ಮಹಾಪ್ರಯೋಜನ

---

[1] ದುಃಖಪ್ರಚುರವಾದ, ಜನನ ಮರಣ ರೂಪದ ಸಂಸಾರದಲ್ಲಿ, ಸುತ್ತುತ್ತ, ದುಃಖಪಡುವ ಜೀವರನ್ನೂ, ಶ್ರೀಹರಿ ಮತ್ತು ಹರಿಭಕ್ತರ ದ್ವೇಷಾದಿಗಳಿಂದ, ವಿವಿಧ ನರಕಗಳಲ್ಲಿ ದುಃಖವನ್ನನುಭವಿಸಿ, ಅಂತ್ಯಕ್ಕೆ ಅಂಧತಮಸ್ಸನ್ನೇ (ನಿತ್ಯನರಕವನ್ನೇ) ಹೊಂದುವರೆಂಬ ಶಾಸ್ತ್ರಜ್ಞಾನ ನಿಶ್ಚಯದಿಂದಲೂ, ಸಾತ್ವಿಕರಾದ ಮುಕ್ತಿಯೋಗ್ಯ ಜೀವರ ವಿಷ್ಣುಭಕ್ತ್ಯಾದಿ ಗುಣಗಳು ವೃದ್ಧಿ ಹೊಂದುತ್ತವೆ. ಅತಏವ ಮಧ್ಯಮ ಮತ್ತು ಅಧಮ ಜೀವರ ಸೃಷ್ಟ್ಯಾದಿಗಳೂ ಭಕ್ತರ ಭಕ್ತಿಯನ್ನು ವೃದ್ಧಿಗೊಳಿಸುವುದೆಂದೂ, ಅವರನ್ನು ಸೃಷ್ಟಿಸುವುದರಿಂದ, ಅವರ ಗತಿಗಳನ್ನು ಹೊಂದಿಸುವುದರೊಂದಿಗೆ, ಇದೂ ಒಂದು ಮಹಾ ಪ್ರಯೋಜನವಿರುತ್ತದೆಂದೂ ಹೇಳಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯರ್ಥವಾದೀತು (ಇಲ್ಲದ್ದನ್ನು ಹೇಳುವ ವಿರುದ್ಧವಚನವಾಗುತ್ತದೆ); ತಥಾಪಿ–ಹೀಗಿದ್ದರೂ, (ಆತನ ದಯಾಲುತ್ವವು ಸತ್ಯವಾದರೂ—ದಯಾ ಸಮುದ್ರನೇ ಆದರೂ), ಮಧ್ಯಮತಾಮಸಾನ್–ಮಧ್ಯಮರು (ರಾಜಸರು) ತಾಮಸರೆಂಬ, ಅನ್ಯಾನ್ ಜೀವಾನ್–ಇತರ ಜೀವರನ್ನು, ಭಕ್ತಾನಾಂ–ಸ್ವಭಾವಭಕ್ತರಾದ ಸಾತ್ವಿಕಜೀವರ, ಭಕ್ತಿವೃದ್ಧಯೇ–ಭಕ್ತಿಯ ಅಭಿವೃದ್ಧಿಗಾಗಿ, ಸೃಜತಿ–ಸೃಷ್ಟಿಸುತ್ತಾನೆ, ಅವತಿ–ರಕ್ಷಿಸುತ್ತಾನೆ, ಹಂತಿ ಏವ–ಸಂಹಾರವನ್ನು ಮಾಡುತ್ತಾನೆ; ಏವಂ–ಹೀಗೆ (ಕ್ರೀಡೆಯಿಂದ, ಜೀವರನ್ನು ಅವರವರ ಗತಿಗಳನ್ನು ಹೊಂದಿಸುವುದೆಂಬ ಜೀವರ ಪ್ರಯೋಜನಕ್ಕಾಗಿ), ತ್ರಿವಿಧಾನ್–ಮೂರು ವಿಧರಾದ, ಸಾತ್ವಿಕ ಮಧ್ಯಸ್ಥ ತಾಮಸಾನ್–ಸಾತ್ವಿಕರು, ರಾಜಸರು ಮತ್ತು ತಾಮಸರನ್ನು, ಈಶಃ–ಶ್ರೀವಿಷ್ಣುವು, ಭಕ್ತವತ್ಸಲಃ–ಭಕ್ತವತ್ಸಲನಾದ ತಾನು, ಲೀಲಯಾ–ಲೀಲೆಯಿಂದ (ಕ್ರೀಡಿಸುವವನಾಗಿ), ಸೃಜತಿ–ಅವತಿ–ಹಂತಿ–ಸೃಷ್ಟಿಸುತ್ತಾನೆ–ರಕ್ಷಿಸುತ್ತಾನೆ–ಸಂಹರಿಸುತ್ತಾನೆ.

ನಕಾಚಿದಧಿಕಾಲಬ್ಧಿರನಯಾ ಸೃಷ್ಟಿಲೀಲಯಾ ।
ನ ಹಾನಿಶ್ಚಾಪಿ ಸಂಹಾರಾತ್ ಪೂರ್ಣಾನಂದಸ್ಯ ಸರ್ವದಾ ॥ ೧೫ ॥
ಅನಾದಿಕಾಲತಸ್ತ್ವೇವ ಸಂಕಲ್ಪೋ ಜಗದೀಶಿತುಃ ।
ಅತಃ ಸೃಷ್ಟ್ಯಾದಿಕಾ ಲೀಲಾ ಯಥಾ ಕಾಲಂ ಭವಂತಿ ಹಿ ॥ ೧೬ ॥
ಇತಿ ಬ್ರಹ್ಮಂಸ್ತವಾಖ್ಯಾತಂ ಯನ್ಮಾಂ ತ್ವಂ ಪರಿಪೃಷ್ಟವಾನ್ ।
ಸಂಮತಂ ಸರ್ವವೇದಾನಾಂ ಕಿಮನ್ಯತ್ ಶ್ರೋತುಮಿಚ್ಛಸಿ ॥ ೧೭ ॥

ಪೂರ್ಣಾನಂದಸ್ಯ-ಪೂರ್ಣಾನಂದಸ್ವರೂಪನಾದ ಶ್ರೀಹರಿಗೆ, ಸರ್ವದಾ-ಎಂದೂ (ಯಾವ ಕಾಲಕ್ಕೂ), ಅನಯಾ–ಈ ಸೃಷ್ಟಿಲೀಲಯಾ–ಸೃಷ್ಟ್ಯಾದಿ

ವುಳ್ಳದ್ದು—ಶ್ರೀಹರಿಯ ಸೃಷ್ಟ್ಯಾದಿ ಲೀಲೆ (೧೩–೧೪). ಪೂರ್ಣಾನಂದ ಸ್ವರೂಪನೇ ಆದ ಶ್ರೀಹರಿಗೆ, ಈ ಜಗತ್ತಿನ ಸೃಷ್ಟ್ಯಾದಿ ರೂಪಲೀಲೆಯಿಂದ, ಯಾವ ಅಧಿಕ ಲಾಭವೂ, ಎಂದೂ ಇಲ್ಲದೇ ಇಲ್ಲ; ಸಂಹಾರದಿಂದ ಆತನ ಪೂರ್ಣಾನಂದಾದಿ ಗುಣಗಳಿಗೆ ಯಾವ ಹಾನಿಯೂ (ಕೊರತೆಯಾಗಲಿ–ಹ್ರಾಸವಾಗಲಿ) ಇಲ್ಲ; ಹೀಗೆ ಸದಾ ಕ್ರೀಡಿಸುತ್ತ, ಅಸಂಖ್ಯ ಜೀವರನ್ನು ಅವರವರ ಗತಿಕಾಣಿಸುವೆನೆಂಬುದು ಶ್ರೀಹರಿಯ ಅನಾದಿ ಸಂಕಲ್ಪವು—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರೀಡೆಯಿಂದ, ಕಾಚಿತ್ ಅಪಿ–ಎಷ್ಟು ಅಲ್ಪಮಾತ್ರವೂ, ಅಧಿಕಾ–ಹೆಚ್ಚಿನ, ಲಬ್ಧಿಃ–ಲಾಭವು (ಹೊಂದಲ್ಪಡಬೇಕಾದ ಯಾವ ಆಧಿಕ್ಯವೂ–ಪೂರ್ಣತ್ವ ಸಾಧಕ ಪ್ರಯೋಜನವೂ), ನ–ಇಲ್ಲ; ಸಂಹಾರಾತ್–ಜಗತ್ತನ್ನು ಸಂಹಾರ ಮಾಡುವುದರಿಂದ, (ಸಂಹಾರರೂಪಕ್ರೀಡೆಯಿಂದ), ಹಾನಿಃ ಚ ಅಪಿ–ಯಾವ ಹಾನಿಯೂ (ಕೊರತೆಯೂ ಅಥವಾ ಇದ್ದುದರ ನಾಶವೂ, ಆನಂದಹ್ರಾಸವೂ), ನ–ಇಲ್ಲವು; ಅನಾದಿಕಾಲತಃ ತು ಏವ – ಅನಾದಿಕಾಲದಿಂದಲೇ, ಜಗದೀಶಿತುಃ–ಜಗನ್ನಿಯಾಮಕನಾದ ಶ್ರೀವಿಷ್ಣುವಿನ, ಸಂಕಲ್ಪಃ–ಸಂಕಲ್ಪವು (ಹೀಗೆ ಕ್ರೀಡಿಸಿ ಜೀವರನ್ನು ಅವರವರ ಗತಿಹೊಂದಿಸಬೇಕೆಂಬ ಇಚ್ಛೆಯು ಅನಾದಿಯಾದುದು); ಅತಃ–ಆದ್ದರಿಂದಲೇ, ಸೃಷ್ಟ್ಯಾದಿಕಾ–ಸೃಷ್ಟ್ಯಾದಿ ರೂಪದ, ಲೀಲಾ–ಕ್ರೀಡೆಯು, ಯಥಾಕಾಲಂ–ಆಯಾ ಕಾಲದಲ್ಲಿ, ಭವಂತಿ ಹಿ–ಸಂಭವಿಸುತ್ತವೆಂದು (ಅಪೌರುಷೇಯ) ವೇದಪ್ರಸಿದ್ಧಿಯಿದೆ, ಬ್ರಹ್ಮನ್–ಹೇ ಬ್ರಹ್ಮದೇವ!, ಇತಿ–ಹೀಗೆ, ಸರ್ವವೇದಾನಾಂ – ಸಕಲ ವೇದಗಳಿಗೆ, ಸಂಮತಂ – ಸಮ್ಮತವಾದ (ಏಕಾಭಿಪ್ರಾಯವಾದ), ಪ್ರಮೇಯಗಳನ್ನು, (ಈವರೆಗೆ), ತವ–ನಿನಗೆ, ತ್ವಂ–ನೀನು, ಮಾಂ–ನನ್ನನ್ನು, ಯತ್ ಪರಿಪೃಷ್ಟವಾನ್ – ಯಾವುದನ್ನು ಪ್ರಶ್ನಿಸಿದೆಯೋ, (ಅದು), ಆಖ್ಯಾತಂ – ಹೇಳಲ್ಪಟ್ಟಿತು; ಅನ್ಯತ್ ಕಿಂ–ಬೇರೇನನ್ನು, ಶ್ರೋತುಂ–ಕೇಳಲು, ಇಚ್ಛಸಿ–ಅಪೇಕ್ಷಿಸುವಿ?

ಅತಏವ ಆಯಾ ಕಾಲದಲ್ಲಿ ಜಗತ್ತಿನ ಸೃಷ್ಟ್ಯಾದಿಗಳು ಸಂಭವಿಸುತ್ತವೆ. ಹೀಗೆಂದು ಅಪೌರುಷೇಯ ಶ್ರುತಿಗಳು (ಸ್ವತಃ ಪ್ರಮಾಣಗಳಾದ ವೇದಗಳು) ಸಾರುತ್ತವೆ (೧೫–೧೭).

ಸೃಷ್ಟ್ಯಾದಿ ಕಾರಣಕಥನವೆಂಬ ಐದನೇ ಅಧ್ಯಾಯವು ಮುಗಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ೬

ಬ್ರಹ್ಮೋವಾಚ—

ಯದಿ ಸಾಕ್ಷಾನ್ಮಹಾವಿಷ್ಣುರ್ಜೀವಾನ್ ಕರ್ಮಾನುಸಾರತಃ ।
ಸೃಜತ್ಯವತಿ ಹಂತೀಶಃ ಸ್ವಾತಂತ್ರ್ಯಂ ತಸ್ಯ ತತ್ಕಥಂ ॥ ೧ ॥

ಈಶಃ – ಸರ್ವಶಕ್ತನಾದ, ಮಹಾವಿಷ್ಣುಃ – ಶ್ರೀ ಮಹಾವಿಷ್ಣುವು, ಸಾಕ್ಷಾತ್–ಸ್ವಯಂ (ತಾನೇ), ಜೀವಾನ್–ಜೀವರನ್ನು, ಕರ್ಮಾನುಸಾರತಃ–ಅವರವರ ಪೂರ್ವಕರ್ಮಾನುಸಾರವಾಗಿ, ಯದಿ–ಒಂದು ಪಕ್ಷ, ಸೃಜತಿ–ಸೃಷ್ಟಿಸುತ್ತಾನೆ (ಸ್ಥೂಲದೇಹಗಳನ್ನು ಹೊಂದಿಸುತ್ತಾನೆ), ಅವತಿ – ರಕ್ಷಿಸುತ್ತಾನೆ ಮತ್ತು ಹಂತಿ – ಸಂಹರಿಸುತ್ತಾನೆ, ಎಂದಾದರೆ, ತಸ್ಯ – ಆತನಿಗೆ (ಶ್ರೀವಿಷ್ಣುವಿಗೆ), ತತ್ ಸ್ವಾತಂತ್ರ್ಯಂ–ಆ ಸ್ವಾತಂತ್ರ್ಯವೆಂಬುದು, ಕಥಂ–ಹೇಗೆ ಯುಕ್ತವಾಗುತ್ತದೆ; (ಪೂರ್ವಕರ್ಮಕ್ಕೆ ಅಧೀನನೆಂದಾಗುವುದಿಲ್ಲವೇ?)

ಸ್ವೇಚ್ಛಯೈವ ಯದಾ ಕುರ್ಯಾಜ್ಜೀವಾನಾಂ ಸರ್ಜನಾದಿಕಂ ।
ಕಥಂ ತರ್ಹಿ ವಿಚಿತ್ರಾ ಸ್ಯಾತ್ ಸೃಷ್ಟಿರೇಷಾ ಸನಾತನೀ ॥ ೨ ॥

ಸ್ವೇಚ್ಛಯಾ ಏವ – ತನ್ನ ಇಚ್ಛೆಗೆ ಬಂದಂತೆಯೇ, ಜೀವಾನಾಂ – ಜೀವರುಗಳ, ಸರ್ಜನಾದಿಕಂ–ಸೃಷ್ಟ್ಯಾದಿಗಳನ್ನು, ಯದಾ ಕುರ್ಯಾತ್–ಮಾಡುವ ಪಕ್ಷದಲ್ಲಿ, ತರ್ಹಿ–ಆಗ, ಏಷಾ–ಈ ಸನಾತನೀ–ಸನಾತನವಾದ (ಪ್ರವಾಹರೂಪದಿಂದ ಅನಾದಿಯಿಂದ ನಡೆಸುತ್ತಿರುವ, ಮುಂದೆ ನಡೆಯುವುದೆಂದು ವೇದಾದಿಗಳು ಹೇಳುವ), ಸೃಷ್ಟಿಃ–ಸೃಷ್ಟಿಯು, ಕಥಂ–ಹೇಗೆ, ವಿಚಿತ್ರಾ ಸ್ಯಾತ್–ವಿಚಿತ್ರವಾದುದು (ಬಹುಪ್ರಕಾರದ ಭೇದಗಳುಳ್ಳದ್ದು) ಹೇಗಾಗುತ್ತದೆ?

ಶ್ರೀ ಮಹಾವಿಷ್ಣುವು, ತಾನು, ಜೀವರ ಪೂರ್ವಕರ್ಮಗಳಿಗನುಸಾರವಾಗಿಯೇ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ನಡೆಸುವುದಾದರೆ, ಆತನು ಸ್ವತಂತ್ರನೆಂಬುದು ಹೇಗೆ ಕೂಡುತ್ತದೆ? (೧). ಹಾಗಲ್ಲದೇ (ಕರ್ಮಾನುಸಾರವಾಗಿ ಅಲ್ಲದೇ) ತನ್ನ ಇಚ್ಛೆಬಂದಂತೆ ಈ ಜೀವರ ಸೃಷ್ಟ್ಯಾದಿಗಳನ್ನು ಮಾಡುತ್ತಾನೆಂದರೆ, ಸನಾತನವಾದ ಈ ಸೃಷ್ಟಿಯಲ್ಲಿ ಬಹುಪ್ರಕಾರದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವರ್ಗಂ ವಾ ನರಕಂ ವಾಪಿ ಮೋಕ್ಷಂ ವಾಪ್ಯಥವಾ ಸೃತಿಂ ।
ಭಜೇಯುರೇವಮೀಶಸ್ಯ ವೈಷಮ್ಯಂ ನ ಕಥಂ ಭವೇತ್ ॥ ೩ ॥

ನಾಸ್ತಿ ತಸ್ಯ ರಿಪುಃ ಕಶ್ಚಿತ್ ನ ಮಿತ್ರಂ ವಾ ಕಥಂಚನ ।
ಪೂರ್ಣಾನಂದಸ್ಯ ತಸ್ಯೈತೇ ಭವೇಯುರ್ದೇಹಿನಃ ಸಮಾಃ ॥ ೪ ॥

ಅತ್ರ ಮೇ ಸಂಶಯಸ್ತಾತ ತಂ ಭವಾನ್ ಛೇತ್ತುಮರ್ಹಸಿ ।

ಸ್ವರ್ಗಂ–ಸ್ವರ್ಗಲೋಕವನ್ನು, ವಾ–ಅಥವಾ, ನರಕಂ–ನರಕವನ್ನೂ, ವಾ–ಅಥವಾ, ಮೋಕ್ಷಂ–ಮೋಕ್ಷವನ್ನು, ಅಥವಾ–ಅದಿಲ್ಲದಿದ್ದರೆ, ಸೃತಿಂ–ಸಂಸಾರವನ್ನಾಗಲಿ, ಭಜೇಯುಃ–(ಜೀವರು) ಹೊಂದುವರು; ಏವಂ–ಹೀಗೆ (ಜೀವರು ಭಿನ್ನಭಿನ್ನ ಗತಿಗಳನ್ನು ಹೊಂದಿದರೆ), ಈಶಸ್ಯ – ಶ್ರೀವಿಷ್ಣುವಿಗೆ, ವೈಷಮ್ಯಂ – ಭೇದಭಾವವು (ಪಕ್ಷಪಾತರೂಪದ ದೋಷವು) ಕಥಂ – ಹೇಗೆ, ನ ಭವೇತ್ – ಉಂಟಾಗುವುದಿಲ್ಲ? (ವೈಷಮ್ಯವುಳ್ಳವನೆಂದೇ ಪ್ರಾಪ್ತವಾಗುತ್ತದೆ); (ಏಕೆಂದರೆ), ತಸ್ಯ–ಆತನಿಗೆ, ಕಶ್ಚಿತ್ – ಯಾರೊಬ್ಬ ಜೀವನೂ, ರಿಪುಃ–ಶತ್ರುವು, ನಾಸ್ತಿ–ಇರುವುದಿಲ್ಲ (ಶ್ರೀಹರಿಗೆ ಶತ್ರುವೆಂಬುವನು ಯಾರೂ ಇಲ್ಲ—ಆತನು ಯಾರನ್ನೂ ಶತೃವೆಂದು ಭಾವಿಸುವುದಿಲ್ಲ); ವಾ – ಅಥವಾ, ಕಥಂಚನ – ಯಾವ ಪ್ರಕಾರದಿಂದಲೂ, ನ ಮಿತ್ರಂ–(ಸ್ವಭಾವದಿಂದಲೇ—ನಿರ್ನಿಮಿತ್ತವಾಗಿ) ಮಿತ್ರನೆಂಬುವನೂ ಇಲ್ಲ; ಪೂರ್ಣಾನಂದಸ್ಯ – ಪೂರ್ಣಾನಂದವುಳ್ಳವನಾದ, ತಸ್ಯ – ಭಗವಂತನಿಗೆ, ಏತೇ – ಈ, ದೇಹಿನಃ – ಎಲ್ಲ

ಭೇದಗಳಿರಲು ಕಾರಣವೇನು? (೨). ಸೃಷ್ಟಿಸಲ್ಪಟ್ಟ ಜೀವರಲ್ಲಿ, ಕೆಲವರು ಸ್ವರ್ಗವನ್ನೂ ಕೆಲವರು ನರಕವನ್ನೂ, ಮತ್ತೆ ಕೆಲವರು (ಅಲ್ಪಸಂಖ್ಯೆಯವರು) ಮೋಕ್ಷವನ್ನೂ, ಇನ್ನೂ ಕೆಲವರು ಸಂಸಾರವನ್ನೂ, ಹೊಂದುತ್ತಾರೆ; ಈ ಪ್ರಕಾರದ ವಿಭಿನ್ನಗತಿಗಳಿಂದ ಶ್ರೀವಿಷ್ಣುವಿನಲ್ಲಿ ವೈಷಮ್ಯ (ಪಕ್ಷಪಾತ) ವಿರುವುದೆಂದು ತಿಳಿಯುವುದಿಲ್ಲವೇ? ಆತನಿಗೆ ಸ್ವಾಭಾವಿಕವಾಗಿ ಎಲ್ಲರೂ ಸಮರೇ ಆಗಿರುವರು; ಆತನಿಗೆ ಕೆಲವರು ಶತ್ರುಗಳು, ಅನ್ಯರು ಮಿತ್ರರು (ಹೀಗೆಯೇ ಮತ್ತಿತರರು ಉದಾಸೀನರು) ಎಂಬುವರಿಲ್ಲವಷ್ಟೆ? ಆತನು ಸರ್ವಸಮನಲ್ಲವೇ? ಶ್ರೀಹರಿಯ ಸರ್ವಸಮತ್ವ ವಿಷಯದಲ್ಲಿ ನನಗೆ ಪ್ರಾಪ್ತವಾಗಿರುವ ಈ ಸಂಶಯವನ್ನು, ಹೇ ತಂದೆ! ಪರಿಹರಿಸಿ ರಕ್ಷಿಸು (೩–೪).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೀವರೂ (ಸೃಷ್ಟಿಯಲ್ಲಿ ಶ್ರೀಹರಿಯಿಂದಲೇ ದೇಹಗಳನ್ನು ಹೊಂದುವ ಈ ಎಲ್ಲರೂ), ಸಮಾಃ–ಸಮಾನರು (ಸಮಭಾವಕ್ಕೆ ಪಾತ್ರರು) ಭವೇಯುಃ–ಆಗಿರುವರು; ತಾತ–ಹೇ ತಂದೆ!, ಮೇ–ನನಗೆ, ಅತ್ರ–ಈ ವಿಷಯದಲ್ಲಿ (ಶ್ರೀಹರಿಯ ಸರ್ವಸಮತ್ವವಿಷಯದಲ್ಲಿ), ಸಂಶಯಃ–ಸಂದೇಹವಿದೆ; ತಂ–ಅದನ್ನು, ಭವಾನ್ – ನೀನು, ಛೇತ್ತುಂ – ಕತ್ತರಿಸಿಹಾಕಲು (ಸಂಶಯವನ್ನು ಪರಿಹರಿಸಲು), ಅರ್ಹಸಿ–ಸಮರ್ಥನಾಗಿರುತ್ತೀ (ಯೋಗ್ಯಸ್ಥಾನದಲ್ಲಿರುವಿ).

ಶ್ರೀ ಹಯಗ್ರೀವ ಉವಾಚ—

ಯಥೈವ ಲೋಕೇ ಭೂಪಾಲಾಃ ಶಿಕ್ಷಯಂತಿ ನಿಜಾನ್ ಜನಾನ್ ॥

ಮಮ ಸೇವಾಮಿಮಾಂ ಕುರ್ಯಾಶ್ಚೇದ್ಧನಂ ತ್ವಮಿತಂ ತತಃ ।
ದಾಸ್ಯಾಮಿ ನೋ ಚೇನ್ನೋದದ್ಯಾಮಥ ತ್ವಂ ಸ್ತೇಯಕರ್ಮ ಚೇತ್॥

ಕರೋಷಿ ವಾಥ ಮೇ ದಾಸ್ಯಾದನ್ಯಥಾ ವರ್ತಸೇ ಯದಿ ।
ದಂಡನೀಯೋ ಮಯಾ ನೂನಂ ಮಮ ದ್ವೇಷಂ ಕರೋಷಿ ಚೇತ್ ॥

ಶಿರಚ್ಛೇದಾದಿನಾ ತ್ವಾಂ ಹಿ ಯೋಜಯಿಷ್ಯಾಮಿ ನಾನ್ಯಥಾ ।
ಅಥಾನನ್ಯಮನಸ್ತ್ವೇನ ಮಮ ಭಕ್ತಿಂ ಕರೋಷಿ ಚೇತ್ ॥ ೮ ॥

ಹೇಗೆ ಲೋಕದಲ್ಲಿ ರಾಜರು (ಅಧಿಕಾರಿಗಳು), ತಮ್ಮ ಸೇವಕರನ್ನು ಕುರಿತು, 'ನೀನು ಈ ನನ್ನ ಸೇವೆಯನ್ನು ಮಾಡಿದರೆ ನಿನಗೆ ಅಧಿಕ ಧನವನ್ನು ಕೊಡುತ್ತೇನೆ, ಅದನ್ನು ಮಾಡದಿದ್ದರೆ, ಧನವನ್ನು ಕೊಡುವುದಿಲ್ಲವೆಂದು ಮಾತ್ರವಲ್ಲ; ವಂಚನಾದಿಗಳನ್ನು ಮಾಡಿದರೆ ಅಥವಾ ಅನ್ಯರ ಸೇವೆಯಲ್ಲಿ ಆಸಕ್ತನಾದರೆ, ನಿನಗೆ ಯೋಗ್ಯ ಶಿಕ್ಷೆ ಮಾಡುತ್ತೇನೆ; ನನ್ನನ್ನು ದ್ವೇಷಿಸಿದರೆ, ನಿನ್ನ ಶಿರಚ್ಛೇದಮಾಡಿಸುತ್ತೇನೆ; ಹಾಗಲ್ಲದೇ ನನ್ನಲ್ಲಿ ವಿಶೇಷ ಪ್ರೇಮವುಳ್ಳವನಾಗಿ ನನ್ನನ್ನೇ ಆಶ್ರಯಿಸಿದರೆ (ನನ್ನಲ್ಲಿ 'ಭಕ್ತಿ'ಮಾಡಿದರೆ), ಕಾಲಕಾಲದಲ್ಲಿ ನಿನಗೆ ಅಧಿಕವೇತನವನ್ನು ಕೊಡುತ್ತೇನೆ (ಅಧಿಕವಾಗಿ ಅಭೀಷ್ಟಗಳನ್ನು ಸಲ್ಲಿಸುತ್ತೇನೆ); ನನ್ನ ಸಂಕಲ್ಪಿತ ನಿಯಮವು ಹೀಗಿರುವುದರಿಂದ ಹೇಗೆ ಹೇಗೆ ನಿಷ್ಠೆಯಿಂದ ನನ್ನನ್ನು ಸೇವಿಸುವಿಯೋ ಅದಕ್ಕನುಸಾರವಾದ ಅಧಿಕ ಫಲಗಳನ್ನು ಹೊಂದುತ್ತೀ' ಎಂದು ವಿಧಿಸಿ, ಭೃತ್ಯರನ್ನು ಅನುಗ್ರಹಿಸುತ್ತಾರೆಯೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿನೇ ದಿನೇ ಕರಿಷ್ಯಾಮಿ ತವ ವೇತನವರ್ಧನಂ ।
ಏವಂ ಸತಿ ಯಥಾ ಕುರ್ಯಾಸ್ತಥಾಫಲಮವಾಪ್ಸ್ಯಸಿ ॥ ೯ ॥

ನ ಚ ಮಿತ್ರಂ ನ ವಾ ಶತ್ರುರಸಿ ತ್ವಂ ಮೇ ಸ್ವಭಾವತಃ ।
ಯಥಾ ಭಾವಯಸೇ ಮಾಂ ತ್ವಂ ತಥಾ ತ್ವಾಂ ಭಾವಯಾಮ್ಯಹಂ ॥

ಲೋಕೇ–ಲೋಕದಲ್ಲಿ, ಭೂಪಾಲಾಃ–ರಾಜರು, ನಿಜಾನ್–ತಮ್ಮ, ಜನಾನ್ – ಪ್ರಜೆಗಳನ್ನು (ಅಥವಾ ಭೃತ್ಯವರ್ಗದ ಜನರನ್ನು), ಯಥೈವ–ಹೇಗೆ, ಶಿಕ್ಷಯಂತಿ–ಶಾಸನಮಾಡುತ್ತಾರೆಯೋ, (ಆಜ್ಞಾಪಿಸಿ, ಸರಿಯಾದ ಮಾರ್ಗದಲ್ಲಿಡುತ್ತಾರೊ), (ತಥಾ – ಹಾಗೆಯೇ ಶ್ರೀ ಹ ರಿ ಯೂ ಜೀವರ ಶಾಸಕನು – ಆಳುವ ಪ್ರಭುವಾಗಿದ್ದಾನೆ), ಹೇಗೆಂದರೆ :— ಇಮಾಂ – ಈ, ಮಮಸೇವಾಂ–ನನ್ನ ಸೇವೆಯನ್ನು, ಕುರ್ಯಾಃ ಚೇತ್–ಮಾಡುವಿಯಾದರೆ, ತತಃ–ಆದರಿಂದ (ಪ್ರೀತನಾಗಿ), ಅಮಿತಂ – ಅಧಿಕವಾದ, ಧನಂ ತು – ಧನವನ್ನೂ ಸಹ, ದಾಸ್ಯಾಮಿ–(ನಿನಗೆ) ಕೊಡುತ್ತೇನೆ; ನೋ ಚೇತ್–ಹಾಗೆ ಸೇವೆಯನ್ನು ಮಾಡದಿದ್ದರೆ, ನೋ ದದ್ಯಾಂ – (ಧನವನ್ನು) ಕೊಡುವುದಿಲ್ಲ; ಅಥ–ಮತ್ತು, ತ್ವಂ–ನೀನು, ಸ್ತೇಯ ಕರ್ಮ–ಕಳ್ಳತನವನ್ನು (ನನ್ನ ಆಜ್ಞೆಯನ್ನು ಪಾಲಿಸುವುದರಲ್ಲಿ ವಂಚಕತನವನ್ನು) ಕರೋಷಿ ಚೇತ್–ಮಾಡಿದರೆ, ವಾ–ಅಥವಾ, ಅಥ – ಅನಂತರ (ನನ್ನಸೇವೆಯನ್ನು ಬಿಟ್ಟನಂತರ), ಮೇ–ನನ್ನ, ದಾಸ್ಯಾತ್–ಸೇವೆಯ ದೆಶೆಯಿಂದ, ಅನ್ಯಥಾ–ಬೇರೆ ಕೆಲಸದಲ್ಲಿ, ಯದಿ ವರ್ತಸೇ–ತೊಡಗಿದವನಾದರೆ, ಮಯಾ–ನನ್ನಿಂದ, ನೂನಂ–ನಿಶ್ಚಯವಾಗಿ (ತಪ್ಪದೇ) ದಂಡನೀಯಃ – ಶಿಕ್ಷಿಸಲ್ಪಡುವಿ; ಮಮ – ನನ್ನ, ದ್ವೇಷಂ ಕರೋಷಿ ಚೇತ್ – ದ್ವೇಷವನ್ನೇ ಮಾಡುವಿಯಾದರೆ, ಶಿರಚ್ಛೇದಾದಿನಾ–

ಹಾಗೆ, ಶ್ರೀಹರಿಯೂ ತನ್ನ ಭೃತ್ಯರಾದ ಜೀವರಿಗೆ ಆಜ್ಞೆಮಾಡಿ (ಶಾಸನ ಮಾಡಿ), ಅವರಿಂದ ಸೇವೆಗೊಂಡು ಸೇವಾನುಗುಣವಾದ ಫಲಗಳನ್ನಿತ್ತು ಅನುಗ್ರಹಿಸುತ್ತಾನೆ. ಶ್ರೀಹರಿಗೆ ಸ್ವಭಾವದಿಂದಲೇ ಯಾವ ಜೀವನೂ, ಮಿತ್ರನೂ ಅಲ್ಲ, ಶತ್ರುವೂ ಅಲ್ಲ—ಆತನು ಸರ್ವ ಸಮನು; ಜೀ ವ ರು ಆತನಲ್ಲಿ ಯಾವ ಯಾವ ಭಾವಗಳುಳ್ಳವರಾಗುತ್ತಾರೆಯೋ, ಶ್ರೀಹರಿಯೂ ಅವರಲ್ಲಿ ಆಯಾ ಭಾವಗಳಿಗೆ ಅನುಗುಣವಾದ ಭಾವಗಳನ್ನೇ ಹೊಂದುವವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿರಚ್ಛೇದ (ತಲೆಕತ್ತರಿಸುವ) ಮೊದಲಾದ ಶಿಕ್ಷೆಯಿಂದ, ತ್ವಾಂ – ನಿನ್ನನ್ನು, ಯೋಜಯಿಷ್ಯಾಮಿ–ಸೇರಿಸುತ್ತೇನೆ (ಶಿಕ್ಷೆಗೆ ಭಾಗಿಯನ್ನಾಗಿಮಾಡುತ್ತೇನೆ); ಅನ್ಯಥಾ ನ – ಬೇರೆಯಲ್ಲ (ಬೇರೆ ವಿಧದಿಂದ ನಿನ್ನನ್ನು ರಕ್ಷಿಸುವುದಿಲ್ಲ); ಅಥ–ಮತ್ತು (ಹಾಗಲ್ಲದೇ), ಅನನ್ಯಮನಸ್ತ್ವೇನ–ಅನನ್ಯವಾದ ಮನಸ್ಸಿನಿಂದ (ನಾನೇ ಸರ್ವೋತ್ತಮನೆಂಬ ಭಾವದಿಂದ), ಮಮಭಕ್ತಿಂ – ನನ್ನ (ನನ್ನಲ್ಲಿ) ಭಕ್ತಿಯನ್ನು, ಕರೋಷಿಚೇತ್–ಮಾಡುವಿಯಾದರೆ, ದಿನೇದಿನೇ–ದಿನದಿನದಲ್ಲಿ (ಅಲ್ಪಕಾಲಾವಧಿಗಳಲ್ಲಿ), ತವ – ನಿನ್ನ, ವೇತನವೃದ್ಧಿಂ ಕರಿಷ್ಯಾಮಿ–ಸಂಬಳವನ್ನು ಹೆಚ್ಚುಮಾಡುತ್ತೇನೆ; (ನೀನು ಮಾಡುವ ಸೇವೆಗೆ ಅಧಿಕಫಲಗಳನ್ನು ಕೊಡುತ್ತೇನೆ); ಏವಂ ಸತಿ – ಹೀಗಿರುವುದರಿಂದ, ಯಥಾ–ಹೇಗೆ, ಕುರ್ಯಾಃ–(ನನ್ನ ಸೇವೆಯನ್ನು) ಮಾಡುವೆಯೋ, ತಥಾ–ಹಾಗೆ (ಸೇವಾನುಗುಣವಾಗಿ), ಫಲಂ – ಫಲವನ್ನು, ಅವಾಪ್ಸ್ಯಸಿ–ಹೊಂದುತ್ತೀ; ತ್ವಂ–ನೀನು, ಮೇ–ನನಗೆ, ಸ್ವಭಾವತಃ–ಸ್ವಭಾವದಿಂದಲೇ, ಮಿತ್ರಂ ನ ಚ ಅಸಿ – ಮಿತ್ರನೂ ಅಲ್ಲ; ನ ವಾ ಶತ್ರುಃ ಅಸಿ – ಶತೃವೂ ಅಲ್ಲದವನು ಆಗಿರುವಿ; ತ್ವಂ – ನೀನು, ಮಾಂ – ನನ್ನನ್ನು, ಯಥಾ – ಹೇಗೆ (ಶತ್ರು, ಮಿತ್ರ, ಸ್ವಾಮಿ, ಬಂಧು ಮೊದಲಾದ ಯಾವ ಯಾವ ಭಾವದಿಂದ), ಭಾವಯಸೇ–ಭಾವಿಸುತ್ತೀಯೋ (ಚಿಂತಿಸಿ ನಡೆದುಕೊಳ್ಳುವಿಯೋ), ತಥಾ–ಹಾಗೆ (ಆ ಭಾವಗಳಿಂದ), ತ್ವಾಂ–ನಿನ್ನನ್ನು, ಭಾವಯಾಮಿ–ತಿಳಿಯುತ್ತೇನೆ.

ಅನಾದಿಕಾಲತಸ್ತ್ವೇವಂ ಸಂಕಲ್ಪಃ ಸ್ವಯಮೇವ ಹಿ ।
ಕುತೋಽಸ್ತಿ ತೇನ ನೈವ ಸ್ಯಾತ್ ಸ್ವಾತಂತ್ರ್ಯಸ್ಯ ವಿಘಾತನಂ ॥ ೧೧ ॥

ಏವಂ–ಈ ರೀತಿಯಾದ, ಸಂಕಲ್ಪವು, ಅನಾದಿಕಾಲತಃ ತು–ಅನಾದಿಕಾಲದಿಂದಲೇ, ಹಿ – ಯಾವ ಕಾರಣದಿಂದ, ಸ್ವಯಂ ಏವ – ತನ್ನದೇ

ನಾಗುತ್ತಾನೆ (೫-೧೦). ಶ್ರೀಹರಿಯ ಸಂಕಲ್ಪವು ಅನಾದಿಕಾಲದಿಂದ ಹೀಗಿರುವುದರಿಂದ, ಶ್ರೀಹರಿಗೆ ವೈಷಮ್ಯವೆಲ್ಲಿಂದ ಬಂದೀತು? (ಶತ್ರುಮಿತ್ರ ಭಾವಗಳಿಲ್ಲದ ಸರ್ವಸಮಭಾವವುಳ್ಳ ಶ್ರೀಹರಿಯಲ್ಲಿ ಪಕ್ಷಪಾತವನ್ನು ಆರೋಪಿಸಲು ಅವಕಾಶವೇ ಇಲ್ಲ) ಮತ್ತು ಸ್ವಸಂಕಲ್ಪಾನುಸಾರವಾಗಿ ಜೀವರ ವಿಷಯದಲ್ಲಿ ವರ್ತಿಸುತ್ತಾನಾದ್ದರಿಂದ ಆತನ ಸ್ವಾತಂತ್ರ್ಯಕ್ಕೂ ಹಾನಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಶ್ರೀವಿಷ್ಣುವಿನದೇ) ಆಗಿದೆಯೋ ; ತೇನ – ಅದರಿಂದ, ಕುತಃ ಅಸ್ತಿ– (ವೈಷಮ್ಯವು) ಎಲ್ಲಿದೆ?, ಸ್ವಾತಂತ್ರ್ಯಸ್ಯ–(ಶ್ರೀವಿಷ್ಣುವಿನ) ಸ್ವಾತಂತ್ರ್ಯದ, ವಿಘಾತನಂ–ನಾಶವು (ಹಾನಿಯು), ನೈವ ಸ್ಯಾತ್–ಉಂಟಾಗುವುದೇ ಇಲ್ಲ.

ಶ್ರುತಿಸ್ಮೃತೀ ಮಮೈವಾಜ್ಞೇ ಕುರ್ಯಾತ್ತದನುಸಾರತಃ ।
ಸತ್ಕರ್ಮಾಣಿ ದದಾಮ್ಯಸ್ಮೈ ಫಲಂ ಕರ್ಮಾನುಸಾರತಃ ॥ ೧೨ ॥
ನಿಷಿದ್ಧಾನಿ ತು ಯಃ ಕುರ್ಯಾದಜ್ಞಾನಾದ್ಧಾರ್ಷ್ಟ್ಯತೋಽಪಿ ವಾ ।
ವಿಹಿತಂ ಚ ನ ಕುರ್ವೀತ ತಂ ಕುರ್ಯಾನ್ನರಕೇ ಸ್ಥಿತಂ ॥ ೧೩ ॥

ಶ್ರುತಿಸ್ಮೃತೀ–ಶ್ರುತಿಸ್ಮೃತಿಗಳು, ಮಮ–ನನ್ನ, ಆಜ್ಞೇ ಏವ–ಆಜ್ಞೆಗಳೇ ; ತದನುಸಾರತಃ–ಅವುಗಳನ್ನನುಸರಿಸಿ, ಸತ್ಕರ್ಮಾಣಿ–ವಿಹಿತ ಕರ್ಮಗಳನ್ನು, ಕುರ್ಯಾತ್–ಮಾಡತಕ್ಕದ್ದು ; ಅಸ್ಮೈ–ಈತನಿಗೆ (ಸತ್ಕರ್ಮಗಳನ್ನು ಮಾಡುವವನಿಗೆ), ಕರ್ಮಾನುಸಾರತಃ – ಕರ್ಮಾನುಸಾರವಾಗಿ, ಫಲಂ–ಫಲವನ್ನು, ದದಾಮಿ–ಕೊಡುತ್ತೇನೆ ; ಯಃ–ಯಾವನೊಬ್ಬನು, ನಿಷಿದ್ಧಾನಿ – (ಶ್ರುತಿಸ್ಮೃತಿಗಳಲ್ಲಿ ನಿಷೇಧಿಸಲ್ಪಟ್ಟಿರುವ) ಕರ್ಮಗಳನ್ನು, ಅಜ್ಞಾನಾತ್ – ಅಜ್ಞಾನದಿಂದಾಗಲಿ (ವಿಧಿನಿಷೇಧಗಳನ್ನು ತಿಳಿಯದೇ), ಅಪಿವಾ–ಅಥವಾ, ಧಾರ್ಷ್ಟ್ಯತಃ–(ತಿರಸ್ಕಾರಭಾವದಿಂದ ಹುಟ್ಟಿದ) ಹುಚ್ಚು ಧೈರ್ಯದಿಂದಲಾಗಲಿ, ಕುರ್ಯಾತ್ – ಮಾಡುವನೋ, ಚ – ಮತ್ತು, ವಿಹಿತಂ–ವಿಹಿತವಾದ (ಮಾಡಲೇಬೇಕಾದುದೆಂದು ವಿಧಿಸಲ್ಪಟ್ಟ) ಕರ್ಮವನ್ನು, ನ ಕುರ್ವೀತ–ಮಾಡುವುದಿಲ್ಲವೋ, ತಂ–ಅಂಥವನನ್ನು, ನರಕೇ–ನರಕದಲ್ಲಿ, ಸ್ಥಿತಂ–ಇರುವವನನ್ನಾಗಿ, ಕುರ್ಯಾಂ–ಮಾಡುವೆನು.

ಯಿಲ್ಲ (೧೧). ಶ್ರುತಿಸ್ಮೃತಿಗಳು ನನ್ನ ಆಜ್ಞೆಗಳೇ ಆಗಿವೆ. ಅವುಗಳನ್ನು ಅನುಸರಿಸಿ, ಸತ್ಕರ್ಮಗಳನ್ನು ಮಾಡಬೇಕು ; ಸತ್ಕರ್ಮಗಳನ್ನು ಮಾಡುವವರಿಗೆ, ಅವರವರ ಕರ್ಮಾನುಸಾರವಾಗಿ ಫಲವನ್ನು ಕೊಡುತ್ತೇನೆ ; ಅಜ್ಞಾನದಿಂದಾಗಲಿ, ಧಾರ್ಷ್ಟ್ಯದಿಂದಾಗಲಿ, ವಿಧಿನಿಷೇಧ (ನನ್ನ ಆಜ್ಞೆ) ಗಳನ್ನು ತಿಳಿಯದೇ, ಯಾವನು ನಿಷಿದ್ಧಕರ್ಮಗಳನ್ನು ಮಾಡುವನೋ ಮತ್ತು ವಿಹಿತ ಸತ್ಕರ್ಮಗಳನ್ನು ಮಾಡುವುದಿಲ್ಲವೋ, ಅವನನ್ನು ನರಕದಲ್ಲಿ ಹಾಕುತ್ತೇನೆ (೧೨–೧೩). ಶ್ರವಣ ಮನನ ಧ್ಯಾನಗಳಿಂದ ಯಾರು ನನ್ನನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಸ್ತಸ್ಮೈ ಮೋಕ್ಷದಾತಾಹಂ ಯೋ ದ್ವೇಷ್ಟಿ ಸತತಂ ಹಿ ಮಾಂ ॥
ತಮೋಂಧೇ ಪಾತಯಿಷ್ಯಾಮಿ ನಿವೃತ್ತಿರ್ನಯತೋ ಭವೇತ್ ।
ತಮೋ ನಾರಂಭಣಂ ವಪ್ರಮನಂತಂ ಪಂಚಕಷ್ಟದಂ ॥ ೧೫ ॥

ಯಃ—ಯಾವಾತನು, ಶ್ರವಣಂ—ಶ್ರವಣವನ್ನು, ಮನನಂ—ಮನನವನ್ನು, ಧ್ಯಾನಂ—ಧ್ಯಾನವನ್ನು, ಕುರ್ವನ್—ಮಾಡುವವನಾಗಿ, ಮಾಂ—ನನ್ನನ್ನು, ಸಾಕ್ಷಾತ್ಕರೋತಿ-ಪ್ರತ್ಯಕ್ಷವಾಗಿ ನೋಡುತ್ತಾನೆಯೋ (ಪ್ರತ್ಯಕ್ಷವಿಷಯನನ್ನಾಗಿ ಮಾಡಿಕೊಳ್ಳುತ್ತಾನೋ), ತಸ್ಮೈ-ಅವನಿಗೆ, ಅಹಂ-ನಾನು, ಮೋಕ್ಷದಾತಾ-ಮೋಕ್ಷವನ್ನು ಕೊಡುವವನು (ಆಗುತ್ತೇನೆ); ಯಃ—ಯಾರು, ಮಾಂ-ನನ್ನನ್ನು, ಸತತಂ—ನಿತ್ಯವೂ, ದ್ವೇಷ್ಟಿ—ದ್ವೇಷಿಸುತ್ತಾನೆಯೋ, (ಅವನನ್ನು), ತಮೋಂಧೇ—ಅಂಧತಮಸ್ಸಿನಲ್ಲಿ, ಪಾತಯಿಷ್ಯಾಮಿ—ಹಾಕುವೆನು; ಯತಃ—ಯಾವುದರಿಂದ, ನಿವೃತ್ತಿಃ — ಬಿಡುಗಡೆಯು (ತಿರಿಗಿ ಬರೋಣವು),

---

ಪ್ರತ್ಯಕ್ಷೀಕರಿಸಿಕೊಳ್ಳುವನೋ,[1] ಅವನಿಗೆ ತಪ್ಪದೇ ಮೋಕ್ಷವನ್ನು ಕೊಡುತ್ತೇನೆ; ಯಾರು ನನ್ನನ್ನು ನಿರಂತರವಾಗಿ ದ್ವೇಷಿಸುವನೋ ಅವನನ್ನು ಪುನರಾವೃತ್ತಿರಹಿತವಾದ ಅಂಧತಮಸ್ಸಿನಲ್ಲಿ ಹಾಕುತ್ತೇನೆ; ಆ ತಮಸ್ಸು (ನರಕವು) ವ್ಯಾಪ್ತವಾದುದು; ನಿತ್ಯವಾದುದು; ಪಂಚಜ್ಞಾನೇಂದ್ರಿಯಗಳಿಗೆ ನಿರಂತರವಾದ ತೀವ್ರದುಃಖವನ್ನು ಕೊಡತಕ್ಕದ್ದು, ವಪ್ರವೆಂದೂ ಕರೆಯಲ್ಪಡು

---

[1] ಭಗವಂತನ ಸಾಕ್ಷಾತ್ಕಾರಕ್ಕೆ ಶ್ರವಣ ಮನನ ಧ್ಯಾನಗಳು ಪ್ರಧಾನ ಸಾಧನಗಳು. ಶ್ರವಣ—ಗುರುಮುಖದಿಂದ, ಅರ್ಥಜ್ಞಾನಪೂರ್ವಕವಾಗಿ, ವೇದಾದಿ ಸಚ್ಛಾಸ್ತ್ರಗಳನ್ನು ಶ್ರವಣಮಾಡುವುದು (ಕೇಳುವುದು); ಮನನ—ಕೇಳಿದುದರ ನಿಶ್ಚಯಕ್ಕಾಗಿ, ವಿಮರ್ಶೆಯಿಂದ ಸಂಶಯಗಳನ್ನು ಪರಿಹರಿಸುವ ಚಿಂತನೆಯು; ಧ್ಯಾನ—ನಿಶ್ಚಯಜ್ಞಾನದಿಂದಲೇ ಸಾಧ್ಯವಾದ ಶ್ರೀಹರಿಚಿಂತನೆ-ಮನಸ್ಸನ್ನು ಏಕಾಗ್ರ ಮಾಡಿಕೊಂಡು, ಯೋಗ್ಯವಾದ ಆಸನಾದಿಗಳ ಸಿದ್ಧತೆಯಿಂದ, ಶ್ರೀಹರಿಮೂರ್ತಿಯನ್ನು ಧ್ಯಾನಿಸಿ, ಸಮಾಧಿಯಲ್ಲಿ ಮನಸ್ಸನ್ನು ನಿಲ್ಲಿಸುವುದು. ಧ್ಯಾನಸಿದ್ಧಿಯಿಂದ ಶ್ರೀಹರಿಯು ಪ್ರಸನ್ನನಾಗಿ, ತನ್ನ ಸಂದರ್ಶನವನ್ನು ಅನುಗ್ರಹಿಸುತ್ತಾನೆ—ಇದೇ ಬ್ರಹ್ಮಸಾಕ್ಷಾತ್ಕಾರವು—ಅಪರೋಕ್ಷಜ್ಞಾನವು. ಈ ಪ್ರಧಾನಸಾಧನಗಳಾದ ಶ್ರವಣಾದಿಗಳು, ನಿರಂತರ ಶಾಸ್ತ್ರಾಭ್ಯಾಸರೂಪದ ಭಗವದುಪಾಸನೆಯಿಂದಲೂ ಅನುಷ್ಠಿತಗಳಾಗುವುದರಿಂದ, ಆದರಿಂದ ಸಹ ಅಪರೋಕ್ಷವು ಲಭಿಸುತ್ತದೆ. ಇಲ್ಲಿ ೩ನೇ ಅಧ್ಯಾಯದ ೧೯ನೇ ಶ್ಲೋಕದ ಟಿಪ್ಪಣಿಯನ್ನು ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನ ಭವೇತ್-ಇಲ್ಲವೋ, ಅನಾರಂಭಣಂ-ಆರಂಭವಿಲ್ಲದ (ಸರ್ವತ್ರ ಏಕಪ್ರಕಾರಕ ಸಾಂದ್ರತೆಯುಳ್ಳ), ಅನಂತಂ-ನಿತ್ಯವಾದ (ವಿಸ್ತಾರವಾದ), ಪಂಚಕಷ್ಟದಂ-ಪಂಚಜ್ಞಾನೇಂದ್ರಿಯಗಳಿಗೂ ಬಹುದುಃಖಪ್ರದವಾದ, ವಪ್ರಂ-ವಪ್ರನಾಮಕ, ತಮಃ-ತಮಸ್ಸು-ನರಕವು, ಅದು.

ತನ್ಮಧ್ಯೇ ಪತಿತೋ ಜಾತು ನ ಬಹಿರ್ಗಂತುಮರ್ಹತಿ ।
ನ ಹಿ ಪ್ರೀಣಾಮ್ಯಹಂ ಕಂಚಿನ್ನಹಿ ದ್ವೇಷ್ಮಿ ಚ ಕಂಚನ ॥ ೧೬ ॥

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ।
ಸತ್ಯಸಂಕಲ್ಪತಸ್ತಸ್ಮಾದನ್ಯಥಾ ನ ಕರೋತ್ಯಯಂ ॥ ೧೭ ॥

ತನ್ಮಧ್ಯೇ-ಆ ಅಂಧತಮಸ್ಸಿನ ಮಧ್ಯದಲ್ಲಿ; ಪತಿತಃ-ಬಿದ್ದ ಜೀವನು, ಜಾತು-ಎಂದೂ, ಬಹಿಃ-ಹೊರಗೆ, ಗಂತುಂ-ಹೋಗುವುದಕ್ಕೆ, ನ ಅರ್ಹತಿ-ಸಮರ್ಥನಾಗುವುದಿಲ್ಲ; (ಹೀಗೆ ಆಯಾ ಜೀವರು ತಮ್ಮ ಸ್ವರೂಪಯೋಗ್ಯವಾದ ಗತಿಗಳನ್ನೇ ಹೊಂದುವರು), ಹಿ-ಆ ಕಾರಣದಿಂದ, ಅಹಂ-ನಾನು, ಕಂಚಿತ್-ಯಾರೊಬ್ಬನನ್ನೂ, ಪ್ರೀಣಾಮಿ-(ನಿರ್ನಿಮಿತ್ತವಾಗಿ) ಪ್ರೀತಿಸುವುದಿಲ್ಲ, ಚ-ಮತ್ತು, ಕಂಚನ-ಯಾರನ್ನೂ, ನ ಹಿ ದ್ವೇಷ್ಮಿ-ದ್ವೇಷಿಸುವುದಿಲ್ಲ (ಎಂಬುದು ಸಿದ್ಧವಾಗುತ್ತದೆ); (ಮತ್ತೇನೆಂದರೆ), ಯೇ-ಯಾರು, ಯಥಾ-ಹೇಗೆ, ಮಾಂ-ನನ್ನನ್ನು, ಪ್ರಪದ್ಯಂತೇ-ಹೊಂದುತ್ತಾರೆಯೋ (ಸ್ನೇಹಾದಿ ಭಾವಗಳಿಂದ ನನ್ನನ್ನು ಸೇವಿಸುವರೋ), ತಾನ್-ಅವರನ್ನು, ಅಹಂ-ನಾನು, ತಥಾ ಏವ-ಹಾಗೆಯೇ (ಆಯಾ ಭಾವಗಳಿಂದಲೇ ಯುಕ್ತನಾಗಿ ಅವರಲ್ಲಿ ಸ್ನೇಹಾದಿಗಳುಳ್ಳವನಾಗಿ), ಭಜಾಮಿ-(ಅವರ ಸೇವೆಗೆ) ಫಲವನ್ನು ಕೊಡುತ್ತೇನೆ; ಅಯಂ-(ನಾನು) ಈ ಭಗವಂತನು, ಸತ್ಯಸಂಕಲ್ಪತಃ-ಸತ್ಯಸಂಕಲ್ಪ

ತ್ತದೆ (೧೪-೧೫). ಹೀಗೆ ಅಂಧತಮಸ್ಸಿನಲ್ಲಿ ಬಿದ್ದ ಜೀವನು ಅಲ್ಲಿಂದ ಹೊರಗೆ ಬರಲು, ಎಂದೂ ಶಕ್ತನಾಗುವುದಿಲ್ಲ; ನಾನು ಸರ್ವಸಮನು—ಸ್ವಭಾವದಿಂದಲೇ ಪ್ರಿಯರು ಮತ್ತು ದ್ವೇಷಿಗಳೆಂಬುವರಿಲ್ಲ. ಯಾರು ನನ್ನಲ್ಲಿ ಯಾವ ಭಾವನೆಯುಳ್ಳವರಾಗುತ್ತಾರೆಯೋ, ಅವರು ನನ್ನಿಂದ ಅದೇ ಭಾವನೆಯನ್ನು ತಮ್ಮ ವಿಷಯಕ್ಕೆ ಹೊಂದುತ್ತಾರೆ. ಈ ಸಂಕಲ್ಪವನ್ನು ಭಗವಂತನು ಎಂದಿಗೂ ಬದಲುಗೊಳಿಸುವುದಿಲ್ಲ. ಆದ್ದರಿಂದ ಆತನು ಸರ್ವಸಮನೆಂದು ಸಿದ್ಧವಾಗು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾದ್ದರಿಂದ (ತನ್ನ ಸಂಕಲ್ಪವನ್ನು ವ್ಯತ್ಯಾಸಗೊಳಿಸುವುದಿಲ್ಲವಾದ್ದರಿಂದ), ತಸ್ಮಾತ್–ಆಯಾ ಗತಿಗಳನ್ನು ಹೊಂದಿಸುವುದರಿಂದ, ಅನ್ಯಥಾ–ಬೇರೆ ವಿಧವಾಗಿ, ನ ಕರೋತಿ–ಮಾಡುವುದಿಲ್ಲ.

ಅನ್ಯಃ ಕೋಽಪಿ ನ ಚಾಸ್ತ್ಯೇವ ತತ್ಸಂಕಲ್ಪವಿಘಟ್ಟಕಃ ।
ಸತ್ಯಸಂಕಲ್ಪತಸ್ತಸ್ಮಾಜ್ಜಾಯತೇ ಸರ್ವದೈವ ಹಿ ॥ ೧೮ ॥
ಜೀವಸೃಷ್ಟ್ಯಾದಿಕಂ ಸರ್ವದೋಷಶಂಕಾಪಿ ತತ್ರ ನ ।

ತತ್ಸಂಕಲ್ಪವಿಘಟ್ಟಕಃ – (ಭಗವಂತನ) ಆ ಸಂಕಲ್ಪಕ್ಕೆ ವಿರೋಧವನ್ನುಂಟುಮಾಡಬಲ್ಲವನು (ತದ್ವಿರುದ್ಧವಾಗಿ ಆಗುವಂತೆ ಮಾಡಲು ಶಕ್ತನೆಂಬುವನು), ಅನ್ಯಃ – ಮತ್ತೊಬ್ಬನು, ಕಃ ಅಪಿ – ಯಾವನೂ ಸಹ, ನ ಅಸ್ತ್ಯೇವ–ಇರುವುದೇ ಇಲ್ಲ; ಸತ್ಯಸಂಕಲ್ಪತಃ–ಸತ್ಯಸಂಕಲ್ಪತ್ವವಿರುವುದರಿಂದಲೇ, ತಸ್ಮಾತ್-ಆತನಿಂದ (ಶ್ರೀವಿಷ್ಣುವಿನಿಂದಲೇ), ಜೀವಸೃಷ್ಟ್ಯಾದಿಕಂ-ಜೀವರುಗಳ ಸೃಷ್ಟಿ ಮೊದಲಾದವುಗಳೆಲ್ಲವೂ, ಸರ್ವದಾ ಏವ–ಎಲ್ಲ ಕಾಲದಲ್ಲಿಯೂ, ಜಾಯತೇ-ಉಂಟಾಗುತ್ತದೆ; ತತ್ರ-ಈ ವಿಷಯದಲ್ಲಿ (ಸೃಷ್ಟ್ಯಾದಿಗಳನ್ನು ನಿರ್ವಹಿಸುವುದರಲ್ಲಿ), ಸರ್ವದೋಷಶಂಕಾ ಅಪಿ–ಸರ್ವಪ್ರಕಾರದ ದೋಷಶಂಕೆಯು (ವೈಷಮ್ಯಾದಿ ಸಂಶಯುಗಳಿಗೆ) ಸಹ, ನ–ಇರುವುದಿಲ್ಲ.

ಬ್ರಹ್ಮೋವಾಚ—

ಕರ್ಮೈವಾಸ್ತು ತತಃ ಕಿಂ ನು ಕಾರ್ಯಮಸ್ಮಾಕಮೀಶ್ವರಾತ್ ॥೧೯॥

ತ್ತದೆ (೧೬–೧೭). ಶ್ರೀಹರಿಯ ಸಂಕಲ್ಪಕ್ಕೆ ವಿಘ್ನವನ್ನುಂಟುಮಾಡಲು (ಬೇರೆ ವಿಧವಾಗಿ ಸೃಷ್ಟ್ಯಾದಿಗಳನ್ನು ನಡೆಯುವಂತೆ ಮಾಡಬಲ್ಲವನು) ಮತ್ತೊಬ್ಬನು ಯಾರೂ ಯಾವ ಕಾಲಕ್ಕೂ ಇಲ್ಲ; ಶ್ರೀವಿಷ್ಣುವು ಹೀಗೆ ಸತ್ಯಸಂಕಲ್ಪನಾದ್ದರಿಂದ, ಜೀವರ ಸೃಷ್ಟ್ಯಾದಿಗಳು ಅನಂತಭವಿಷ್ಯಕಾಲದಲ್ಲಿ ಸಹ, ಏಕಪ್ರಕಾರವಾಗಿಯೇ ನಡೆಯುತ್ತವೆ; ಹೀಗಿರುವುದರಿಂದ, ಶ್ರೀವಿಷ್ಣುವಿನಲ್ಲಿ, ವೈಷಮ್ಯಾದಿ ದೋಷಗಳ ಸಂಶಯಕ್ಕೆ ಸಹ ಎಷ್ಟೂ ಅವಕಾಶವಿಲ್ಲ (೧೮). ಕರ್ಮಾನುಸಾರವಾದ ಗತಿಗಳನ್ನು ಜೀವರಿಗೆ ಶ್ರೀಹರಿಯು ಕೊಡುತ್ತಾನೆಂದರೆ, ಕರ್ಮಗಳೇ ಸಾಕು, ನಮಗೆ ಸರ್ವಶಕ್ತನೆಂಬ ಶ್ರೀವಿಷ್ಣುವಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯತ ಏವ ಭವೇನ್ನೃಣಾಮೂರ್ಧ್ವಾಧೋಗಮನಂ ಸದಾ ।

ತತಃ–(ಅವರವರ ಪೂರ್ವಕರ್ಮಾನುಸಾರವಾಗಿ ಜೀವರ ಸೃಷ್ಟ್ಯಾದಿಗಳು ನಡೆಯುವುದರಿಂದ) ಆ ಕಾರಣದಿಂದ, ಕರ್ಮ ಏವ – ಕರ್ಮವೇ, ಅಸ್ತು–ಇರಲಿ (ಕರ್ಮವೇ ಕಾರಣವಾಗಲಿ) ; ಅಸ್ಮಾಕಂ–ನಮಗೆ (ಜೀವರಿಗೆ), ಈಶ್ವರಾತ್ – (ಸರ್ವಶಕ್ತನೆಂಬ) ಶ್ರೀವಿಷ್ಣುವಿನಿಂದ, ಕಿಂ ನು ಕಾರ್ಯಂ–ಆಗತಕ್ಕ ಕೆಲಸವೇನಿದೆ? ಯತಃ ಏವ–ಯಾವ ಕರ್ಮಗಳಿಂದಲೇ (ಪೂರ್ವಕರ್ಮ, ಮತ್ತು ಅದರಿಂದ (ಅದರ ಸಂಸ್ಕಾರಬಲದಿಂದ ಈಗ ಸಂಭವಿಸುವ ಕರ್ಮಗಳಿಂದ) ಲೇ, ನೃಣಾಂ – ಮನುಷ್ಯರಿಗೆ (ಸಾಧನ ದೇಹದಲ್ಲಿರುವ ಜೀವರಿಗೆ), ಸದಾ – ಯಾವಾಗಲೂ, ಊರ್ಧ್ವಾಧೋಗಮನಂ – ಮೇಲೆ ಕೆಳಗಿನ ಗತಿಗಳು, (ಸ್ವರ್ಗನರಕಾದಿಲೋಕಗಳಿಗೆ ಹೋಗುವುದು), ಭವೇತ್ – ಉಂಟಾಗುತ್ತದೆಯೋ (ಆ ಕರ್ಮಗಳೇ ಯಥಾಯೋಗ್ಯ ಫಲಗಳನ್ನು ದೊರಕಿಸಲು ಸಾಕು—ಈಶ್ವರನೇಕೆ?).

ಶ್ರೀ ಹಯಗ್ರೀವ ಉವಾಚ—

ಚೌರ್ಯಂ ವಾ ಪಾರದಾರ್ಯಂ ವಾಥವಾನ್ಯದಪರಾಧನಂ ॥ ೨೦ ॥

ಕರೋತಿ ಕಶ್ಚಿತ್ತತ್ಕರ್ಮ ತನ್ನ ದಂಡಯತಿ ಸ್ವಯಂ ।
ಕಿಂತು ರಾಜಾ ನರಸ್ಯಾಸ್ಯ ವಿದಿತ್ವಾ ಕರ್ಮ ಪಾಪಕಂ ॥ ೨೧ ॥

ದಂಡಂ ಕರೋತಿ ಶಾಸ್ತ್ರೋಕ್ತಂ ಸ್ವೇಚ್ಛಯೈವಾತ್ರ ಪೂರುಷೇ ।
ಏವಂ ಹಿ ಕಶ್ಚಿತ್ ಸ್ವಗೃಹೇ ನಿರ್ಜನೇ ವಾಥವಾ ವನೇ ॥ ೨೨ ॥

ನಿಂದೇನು? ಕರ್ಮಗಳಿಂದಲೇ ಸ್ವರ್ಗನರಕಾದಿ ಲೋಕಗಳು ಜೀವರಿಗೆ ದೊರೆಯುತ್ತದಷ್ಟೆ (೧೯). ಒಬ್ಬನು ಮಾಡಿದ ಕಳ್ಳತನ, ಪರಸ್ತ್ರೀ ಗಮನಾದಿ ಯಾವುದೊಂದು ಅಪರಾಧಕ್ಕೆ ಯೋಗ್ಯ ಶಿಕ್ಷೆಯು, ಆ ಅಪರಾಧರೂಪದ ಕರ್ಮದಿಂದ ದೊರೆಯುವುದಿಲ್ಲ—ಕರ್ಮವೇ ಸಾಕ್ಷಾತ್ತಾಗಿ ಶಿಕ್ಷೆಯನ್ನು ಮಾಡುವುದಿಲ್ಲ—ಅದನ್ನು (ಆ ಅಪರಾಧವನ್ನು) ತಿಳಿದ ರಾಜನು—ಅಧಿಕಾರಿಯು ಆಯಾ ಅಪರಾಧಕ್ಕೆ ಯೋಗ್ಯವಾದ ಶಿಕ್ಷೆಯನ್ನು ವಿಧಿಸುತ್ತಾನೆ (ಶಾಸನಗಳಲ್ಲಿ—ಧರ್ಮಶಾಸ್ತ್ರಗಳಲ್ಲಿ ಉಕ್ತವಾದ ದಂಡವನ್ನೇ ವಿಧಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರೋತಿ ಧಾವನಾದೀನಿ ತತ್ಫಲಂ ನ ಸಮಶ್ನುತೇ ।
ತಾದೃಕ್ ಚ ಧಾವನಾದೀನಿ ಭೂಪಸ್ಯಾಗ್ರೇ ಕರೋತಿ ಚೇತ್ ॥೨೩॥

ತುಷ್ಟಃ ಸ ಏವ ದದ್ಯಾಚ್ಚ ತತ್ತತ್ಕರ್ಮಾನುಸಾರತಃ ।
ಏವಂ ಕರ್ಮ ಜಡಂ ನೈವ ಫಲಂ ದಾತುಮಲಂ ಸ್ವಯಂ ॥ ೨೪ ॥

ತತ ಏವಾಸ್ತ್ಯಪೇಕ್ಷಾತ್ರ ಫಲದಾನೇ ಮಹೇಶಿತುಃ ।

ಕಶ್ಚಿತ್–ಯಾರೊಬ್ಬನು, ಚೌರ್ಯಂ–ಕಳ್ಳತನವನ್ನು, ವಾ–ಅಥವಾ, ಪಾರದಾರ್ಯಂ – ಪರಸ್ತ್ರೀಗಮನವನ್ನು (ಅನ್ಯನ ಭಾರ್ಯಾಸಂಗವನ್ನು), ತ್ತಾನೆ) ; [1] ಯಾರೊಬ್ಬನು, ತನ್ನ ಮನೆಯಲ್ಲಿ ಅಥವಾ ನಿರ್ಜನ ವನದಲ್ಲಿ ತನ್ನ ಸಾಮರ್ಥ್ಯಪ್ರದರ್ಶಕ ಧಾವನಾದಿ ಕೃತಿಗಳನ್ನು ಆಚರಿಸಿದರೆ, ಅವುಗಳ ಫಲವನ್ನು (ಬಹುಮಾನ–ಪ್ರಶಸ್ತಿ ಮೊದಲಾದವುಗಳನ್ನು) ಪಡೆಯುವುದಿಲ್ಲ; ಅದೇ ರಾಜನೆದುರಿಗೆ (ಅಥವಾ ಇತರ ಉದಾರಿಗಳಾದ ಶ್ರೀಮಂತರ ಎದುರಿಗೆ) ಆ ಕೃತಿಗಳನ್ನು ಪ್ರದರ್ಶನ ಮಾಡಿದರೆ, ಅವರು ಮೆಚ್ಚಿ ಯೋಗ್ಯ ಬಹುಮಾನ ಮಾಡುತ್ತಾರೆ. ಈ ಮೊದಲಾದ ನಿದರ್ಶನಗಳಿಂದ, ಜಡವಾದ ಕರ್ಮವು ಸ್ವಯಂ ಫಲದಾನದಲ್ಲಿ ಅಸಮರ್ಥವೆಂದು ಸಿದ್ಧವಾಗುತ್ತದೆ; ಆದ್ದರಿಂದ ಕರ್ಮಾನುಸಾರವಾಗಿ ಜೀವರ ಸೃಷ್ಟ್ಯಾದಿಗಳನ್ನು ನಡೆಸಲಿಕ್ಕೂ, ಸರ್ವಜ್ಞನೂ, ಸರ್ವಶಕ್ತನೂ, ಸ್ವತಂತ್ರನೂ ಆದ, ಮಹೇಶ್ವರನೊಬ್ಬನು

[1] ಲೌಕಿಕ ರಾಜಾದಿ ಅಧಿಕಾರಿಗಳು ಅಪರಾಧವನ್ನು ವಿಚಾರಣೆಯಿಂದ ನಿರ್ಧರಿಸಿ ಕೊಳ್ಳುತ್ತಾರೆ; ಅವರ ತೀರ್ಮಾನಗಳು ಬುದ್ಧಿದೌರ್ಬಲ್ಯಾದಿಗಳಿಂದ ತಪ್ಪಾಗಿರ ಬಹುದು ಮತ್ತು ಪಕ್ಷಪಾತಾದಿ ಕಾರಣಗಳಿಂದ ಯೋಗ್ಯದಂಡವನ್ನು ವಿಧಿಸಲಿಕ್ಕಿಲ್ಲ; ಆದರೆ ಸರ್ವಸಮನೂ ಸರ್ವಜ್ಞನೂ ಆದ ಶ್ರೀಹರಿಯು ಜೀವರ ಕರ್ಮಗಳಿಗೆ ಕೊಡುವ ವಿವಿಧ ಫಲಗಳಲ್ಲಿ ಹೀಗೆ ವ್ಯತ್ಯಾಸವಾಗಲು ಅವಕಾಶವೇ ಇಲ್ಲ. ಆತನ ಆಜ್ಞೆಗಳೇ ಶ್ರುತಿಸ್ಮೃತಿಗಳು—ತದನುಸಾರವಾದ ಫಲಗಳನ್ನೇ ಕೊಡುತ್ತಾನೆ. ಅಪರಾಧಗಳಿಗೆ ಶಾಸನದಲ್ಲಿ ಸೂಚಿಸಲ್ಪಟ್ಟ ಶಿಕ್ಷೆಗಳನ್ನು ವಿಧಿಸುವುದರಲ್ಲಿ ಲೌಕಿಕ ಅಧಿಕಾರಿಗಳಿಗೆ ಹೇಗೆ, ಶಿಕ್ಷೆಯ ಪರಿಮಾಣದಲ್ಲಿ ಯೋಗ್ಯವಿತರಣೆ ಮಾಡುವ ಸ್ವಾತಂತ್ರ್ಯ (Discretion) ಇರುತ್ತದೆಯೋ, ಹಾಗೆಯೇ ಪೂರ್ಣಸ್ವತಂತ್ರನಾದ ಶ್ರೀಹರಿಯು, ದಂಡವನ್ನು ವಿಧಿಸುವುದರಲ್ಲಿ (ಹಾಗೆಯೇ ಪುಣ್ಯಕರ್ಮಗಳ ಫಲಕೊಡುವುದ ರಲ್ಲಿಯೂ) ಯುಕ್ತಾಯುಕ್ತ ವಿವೇಚನೆಯಿಂದ, ಪ್ರವೃತ್ತಿಸುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾ – ಮತ್ತು, ಅನ್ಯದಪರಾಧನಂ – ಬೇರೆ ಅಪರಾಧವನ್ನು, ಕರೋತಿ– ಮಾಡುತ್ತಾನೆ; ತತ್ಕರ್ಮ–ಆ ಕರ್ಮವು, ಸ್ವಯಂ–ತಾನೇ, ತಂ–ಆತನನ್ನು (ಆ ಕರ್ಮಮಾಡಿದವನನ್ನು), ನ ದಂಡಯತಿ – ಶಿಕ್ಷಿಸುವುದಿಲ್ಲ; ಕಿಂತು– ಮತ್ತೇನೆಂದರೆ, ರಾಜಾ – ರಾ ಜ ನು (ಅಧಿಕಾರಿಯು), ಅಸ್ಯ ನರಸ್ಯ – ಈ ಮನುಷ್ಯನ, ಪಾಪಕಂ ಕರ್ಮ–ಪಾಪರೂಪದ ಕರ್ಮವನ್ನು, ವಿದಿತ್ವಾ– ತಿಳಿದು (ವಿಮರ್ಶೆಯಿಂದ ನಿಶ್ಚಯಿಸಿ), ಸ್ವೇಚ್ಛಯಾ ಏವ–ತನ್ನ ಇಚ್ಛಾನು ಸಾರವಾಗಿಯೇ, ಅತ್ರ ಪೂರುಷೇ–ಆ ಅಪರಾಧಿಗೆ, ಶಾಸ್ತ್ರೋಕ್ತಂ-ಧರ್ಮಶಾಸ್ತ್ರ ಗಳಲ್ಲಿ ವಿಧಿಸಲ್ಪಟ್ಟ, ದಂಡಂ–ಶಿಕ್ಷೆಯನ್ನು, ಕರೋತಿ–ಮಾಡುತ್ತಾನೆ; ಏವಂ ಹಿ–ಹೀಗೆಯೇ, (ಕರ್ಮದಿಂದಲೇ) ಕಶ್ಚಿತ್–ಒಬ್ಬ ಪುರುಷನು, ಸ್ವಗೃಹೇ– ತನ್ನ ಮನೆಯಲ್ಲಿ, ಅಥವಾ, ನಿರ್ಜನೇ ವನೇ – ಜನರಿಲ್ಲದ ಕಾಡಿನಲ್ಲಿ, ಧಾವನಾದೀನಿ–ಓಡುವುದೇ ಮೊದಲಾದುವನ್ನು (ತನ್ನ ಸಾಮರ್ಥ್ಯಪ್ರಕಾಶಕ ಕರ್ಮಗಳನ್ನು) ಕರೋತಿ–ಮಾಡುತ್ತಾನೆ; ತತ್ಫಲಂ–ಅದಕ್ಕೆ ಯೋಗ್ಯವಾದ ಫಲವನ್ನು ನ ಸಮಶ್ನುತೇ – ಹೊಂದುವುದಿಲ್ಲ; ತಾದೃಕ್ ಧಾವನಾದೀನಿ ಚ – ಆ ವಿಧದ ಸಾಮರ್ಥ್ಯಪ್ರದರ್ಶನವನ್ನೇ, ಭೂಪಸ್ಯ ಅಗ್ರೇ – ರಾಜನ ಎದುರಿಗೆ, ಕರೋತಿ ಚೇತ್–ಮಾಡುವವನಾದರೆ, ತುಷ್ಟಃ ಸ ಏವ–ತೃಪ್ತ ನಾದ ಆ ರಾಜನೇ, ತತ್ತತ್ ಕರ್ಮಾನುಸಾರತಃ–ಆಯಾ (ಬಲಪ್ರದರ್ಶಕ) ಕರ್ಮಗಳಿಗೆ ತಕ್ಕಂತೆ, ದದ್ಯಾತ್–(ಫಲವನ್ನು–ಬಹುಮಾನಾದಿಗಳನ್ನು) ಕೊಡುತ್ತಾನೆ; ಏವಂ – ಹೀಗೆಯೇ, ಜಡಂ ಕರ್ಮ – ಜಡವಾದ (ಸ್ವತಃ ಕ್ರಿಯಾಶಕ್ತಿರಹಿತವಾದ – ಸ್ವತಃ ಪ್ರವೃತ್ತಿ ಇಲ್ಲದ) ಕರ್ಮವು, ಸ್ವಯಂ – ತಾನೇ, ಫಲಂ–ಫಲವನ್ನು, ದಾತುಂ–ಕೊಡಲಿಕ್ಕೆ, ನೈವ ಅಲಂ–ಸಮರ್ಥ ವಲ್ಲ; ತತಃ ಏವ – ಅದ್ದರಿಂದಲೇ (ಕರ್ಮವು ಹೀಗೆ ಜಡವಾದ್ದರಿಂದಲೇ), ಅತ್ರ ಫಲದಾನೇ – ಕ ರ್ಮ ಗ ಳಿ ಗೆ ಫಲಕೊಡುವುದರಲ್ಲಿ, ಮಹೇಶಿತುಃ – ಮಹೇಶ್ವರನ (ಭಗವಂತನ), ಅಪೇಕ್ಷಾ–ಅವಶ್ಯಕತೆಯು, ಅಸ್ತಿ–ಇರುತ್ತದೆ.

ಅವಶ್ಯಕವೇ ಸರಿ (೨೦–೨೪). ಶ್ರೀವಿಷ್ಣುವು, ಜೀವರ ಕರ್ಮಾದಿಗಳಿಂದ ತುಷ್ಟನಾದರೆ (ಪ್ರೀತನಾದರೆ), ಅವರ ಪಾಪವನ್ನು ಸುಟ್ಟುಹಾಕುತ್ತಾನೆ; [1]

---

[1] ಪುಣ್ಯಪಾಪಗಳ ಫಲಗಳಾದ ಸುಖದುಃಖಗಳನ್ನು ಅನುಭವಿಸುವುದರಿಂದ ಆ ಕರ್ಮಗಳು ನಷ್ಟವಾಗುತ್ತವೆಂಬುದು ಸಾಮಾನ್ಯ ನಿಯಮ. ಭಕ್ತರ ಬಹುಪಾಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಷ್ಟಃ ಪಾಪಂ ದಹೇದೇಷ ರುಷ್ಟಃ ಪುಣ್ಯಂ ದಹೇದಪಿ ॥ ೨೫ ॥

ತಸ್ಮೈವ ತಚ್ಚರೇದ್ಭಕ್ತಿಂ ನ ಚ ದ್ವೇಷಂ ಮನಾಗಪಿ ।
ಇತಿ ತೇ ಸರ್ವಮಾಖ್ಯಾತಂ ಯತ್ ಪೃಷ್ಟಂ ಮೇ ತ್ವಯಾನಘ॥೨೬॥

ಇದಾನೀಂ ಕಥಯಿಷ್ಯಾಮಿ ಯೇನ ಪೂರ್ಣಂ ಭವೇನ್ಮನಃ ।
ಶೃಣುಷ್ವಾವಹಿತೋ ಬ್ರಹ್ಮನ್ ಪರಂ ಗುಹ್ಯಂ ವದಾಮಿ ತೇ ॥ ೨೭ ॥

ಕುಪಿತನಾದರೆ ಅವರ ಪುಣ್ಯಗಳನ್ನು ಸುಡುತ್ತಾನೆ; ಆತನು ಜೀವರು ತನ್ನಲ್ಲಿ ಮಾಡುವ ಭಕ್ತಿಯಿಂದ ತುಷ್ಟನಾಗುತ್ತಾನೆ—ದ್ವೇಷದಿಂದ ರುಷ್ಟ (ಕುಪಿತ) ನಾಗುತ್ತಾನೆ; ಆದ್ದರಿಂದ ಆತನಲ್ಲಿ ಸದಾ ಭಕ್ತಿಯನ್ನೇ ಮಾಡಬೇಕು;

ಗಳನ್ನು ಭಕ್ತರ ಭೋಗಕ್ಕೆ ಹಚ್ಚಗೊಡದೇ, ಹಾಗೆಯೇ ನಾಶಮಾಡುತ್ತಾನೆ. ಪಾಪಗಳ ಈ ನಾಶವು ಎರಡು ವಿಧವಾಗಿರುತ್ತವೆ:—ಒಂದು, ಪಾಪದ ಫಲವಾದ ದುಃಖದ ಉಪಶಮನ ಮಾಡುವುದು - ತೀವ್ರತೆಯನ್ನು ತಗ್ಗಿಸುವುದು ಅಥವಾ ಉಪಮರ್ದ; ಎರಡು - ದುಃಖಲೇಶದ ಅನುಭವವಾಗದಂತೆ, ಪಾಪವನ್ನು ಪೂರಾ ನಿರ್ವೀರ್ಯಗೊಳಿಸಿ, ಭಕ್ತರನ್ನು ಅನುಗ್ರಹಿಸುವುದು; ಎರಡನೇ ವರ್ಗಕ್ಕೆ ಸೇರುವ ಪಾಪಗಳು ಅಧಿಕವಾಗಿರುತ್ತವೆ. ಶಾಸ್ತ್ರವಿಧಿಗಳನ್ನು ಪಾಲಿಸದಿರುವುದು ಮತ್ತು ನಿಷೇಧಗಳನ್ನಾಚರಿಸುವುದು, ಉಭಯವೂ ಪಾಪವೇ ಮತ್ತು ಆಚರಿಸುವ ಕರ್ಮಗಳಲ್ಲಿ, ಕರ್ಮಾಂಗಗಳಲ್ಲಿ ನ್ಯೂನಾತಿರಿಕ್ತದೋಷಗಳು ಬಹುವಾಗಿರುತ್ತದೆ—ಶುದ್ಧವಾದ ನಿರ್ದುಷ್ಟಕರ್ಮಗಳನ್ನಾಚರಿಸಲು ಬ್ರಹ್ಮದೇವನೊಬ್ಬನೇ ಸಮರ್ಥನು. ಅನ್ಯರ 'ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ । (ಗೀತಾ) ಎಲ್ಲ ಕರ್ಮಗಳು, ಅಗ್ನಿಯು ಹೊಗೆಯಿಂದ ಆವರಿಸಲ್ಪಡುವಂತೆ, ದೋಷಗಳಿಂದ ಕೂಡಿಯೇ ಇರುತ್ತವೆ. ಈ ವಿಧದ ಎಲ್ಲ ಪಾಪಗಳನ್ನೂ ಅಜ್ಞಾನಾವಸ್ಥೆಯಲ್ಲಿ ಮಾಡಿದ ಸರ್ವ ಪಾಪಗಳನ್ನು, ಶ್ರೀಹರಿಯು ದಹಿಸುತ್ತಾನೆ—ಭಕ್ತರ ಪ್ರಾರ್ಥನೆಯನ್ನು ಮನ್ನಿಸಿ; ಹಾಗೆ ಕ್ಷಮಿಸಿ ಉದ್ಧರಿಸದಿದ್ದರೆ, 'ಅಪರಾಧಸಹಸ್ರಾಣಿ ಕ್ರಿಯಂತೇಽಹರ್ನಿಶಿ ಮಯಾ। ತಾನಿ ಸರ್ವಾಣಿ ಮೇ ದೇವ ಕ್ಷಮಸ್ವ ಪುರುಷೋತ್ತಮ॥' ಎಂಬ ಪ್ರಾರ್ಥನೆಯು ವ್ಯರ್ಥವಲ್ಲವೇ? ಮಾಡಿದ ಕರ್ಮಗಳನ್ನೆಲ್ಲಾ ಭೋಗಿಸಿಯೇ ತೀರಬೇಕೆಂಬ ನಿಯಮವಿದ್ದರೆ, (ಕ್ಷಮಿಸುವ ಶಕ್ತಿಯೇ ಇಲ್ಲದವನನ್ನು ಪ್ರಾರ್ಥಿಸುವುದು) ಪ್ರಾರ್ಥನೆಯು ವ್ಯರ್ಥವಲ್ಲವೇ? ಹೀಗೆಯೇ ಭಕ್ತರ ಕಾಮ್ಯಪುಣ್ಯಕರ್ಮಗಳ ಫಲಗಳನ್ನು ನಾಶಮಾಡಿ ಶೀಘ್ರವಾಗಿ ಜ್ಞಾನದ್ವಾರಾ ಮೋಕ್ಷಕ್ಕೆ ಅವಕಾಶವನ್ನು ಕಲ್ಪಿಸಿ ಅನುಗ್ರಹಿಸುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಷಃ–ಈತನು (ಶ್ರೀವಿಷ್ಣುವು), ತುಷ್ಟಃ–ತೃಪ್ತನಾದರೆ (ಜೀವನ ವಿಷಯದಲ್ಲಿ, ಅವನ ಭಕ್ತಿ, ಕರ್ಮಾದಿಗಳಿಂದ ಸಂತುಷ್ಟನಾದರೆ), ಪಾಪಂ–(ಆ ಜೀವನ) ಪಾಪವನ್ನು, ದಹೇತ್ – ಸುಟ್ಟುಬಿಡುತ್ತಾನೆ; ರುಷ್ಟಃ – (ಹೀಗೆಯೇ) ಕುಪಿತನಾದರೆ (ಆ ಜೀವನು ತನ್ನಲ್ಲಿ ಮಾಡುವ ದ್ವೇಷಾದಿ ಅತ್ಯಲ್ಪದ್ವೇಷದ ಮಿಶ್ರಣವೂ ಆ ಭಕ್ತಿಯಲ್ಲಿರಕೂಡದು ;[1] ಹೇ ಬ್ರಹ್ಮ! ನೀನು ನನ್ನಲ್ಲಿ ಮಾಡಿದ ಪ್ರಶ್ನೆಗಳೆಲ್ಲವನ್ನೂ ಉತ್ತರಿಸಿದ್ದೇನೆ; ಹೇ ನಿಷ್ಪಾಪನೇ! ನಿನ್ನ ಮನಸ್ಸು ಪೂರ್ಣತ್ವವನ್ನು ಹೊಂದಿತೆಂಬ ತೃಪ್ತಿಯು ನಿನಗುಂಟಾಗಬೇಕಾದರೆ,[2] ಇನ್ನು ಕೆಲವು ರಹಸ್ಯಗಳ ಜ್ಞಾನ

---

[1] ನವವಿಧಭಕ್ತಿಗಳು :—'ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ' (ಭಾಗ) (೧) ಹರಿ ಮಹಿಮೆಗಳ ಶ್ರವಣ (೨) ಕೀರ್ತನ (೩) ಸ್ಮರಣೆ (೪) ಹರಿಪಾದಸೇವೆ (೫) ಹರಿ ಮೂರ್ತಿಗಳ ಪೂಜೆ (೬) ನಮಸ್ಕಾರ (೭) ಹರಿದಾಸನೆಂಬ ನಿತ್ಯಭಾವನೆ (೮) ನಿತ್ಯ ಸಖನೆಂಬ ಚಿಂತನೆ (೯) ಆತ್ಮಸಮರ್ಪಣೆ—ಎಲ್ಲ ಪ್ರಕಾರದಿಂದ, ಸ್ವರೂಪದಿಂದ ಸಹ ಶ್ರೀಹರಿಯು ನಿತ್ಯಾಧೀನನೆಂಬ ಅನುಸಂಧಾನ. ನವವಿಧದ್ವೇಷಗಳು :—, ಜೀವಾಭೇದೋ ನಿರ್ಗುಣತ್ವಂ ಅಪೂರ್ಣ ಗುಣತಾ ತಥಾ । ಸಾಮ್ಯಾಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವ ಚ । ಪ್ರಾದುರ್ಭಾವ ವಿಪರ್ಯಾಸಃ ತದ್ಭಕ್ತದ್ವೇಷ ಏವ ಚ । ತತ್ಪ್ರಮಾಣಸ್ಯ ನಿಂದಾಚ ದ್ವೇಷಾ ಏತೇಽಖಿಲಾ ಮತಾಃ ॥' (ಭಾರತ–ತಾ.) (೧) ಜೀವನು ಶ್ರೀಹರಿಯಿಂದ ಅಭಿನ್ನನೆಂದು ತಿಳಿಯುವುದು ; (೨) ಶ್ರೀಹರಿಯನ್ನು ಆನಂದಾದಿ ಗುಣಶೂನ್ಯನೆಂಬ ಜ್ಞಾನ (೩) ಅಪೂರ್ಣಗುಣನೆಂಬ ಜ್ಞಾನ (೪) ಶ್ರೀಹರಿಗೆ ಸಮರೂ ಅಧಿಕರೂ ಇರುವರೆಂಬ ಜ್ಞಾನ (೫) ಶ್ರೀಹರಿಯ ಅನಂತ ರೂಪಗಳಿಗೆ ಪರಸ್ಪರವಾಗಿಯೂ (೬) ಒಂದೊಂದು ರೂಪದ ಕರಚರಣಾದ್ಯವಯವಗಳಿಗೂ ಆ ರೂಪಕ್ಕೂ ಭೇದವನ್ನು ತಿಳಿಯುವುದು ; (೭) ಶ್ರೀಹರಿಯ ಅವತಾರಗಳನ್ನು ಸಾಮಾನ್ಯ ಮನುಷ್ಯ ಅಥವಾ ಪ್ರಾಕೃತದೇಹಗಳುಳ್ಳವೆಂದು ತಿಳಿಯುವುದು; (೮) ಹರಿಭಕ್ತರನ್ನು ದ್ವೇಷಿಸುವುದು—ನಿಂದಿಸುವುದು ಇತ್ಯಾದಿ (೯) ವೇದಾದಿ ಪ್ರಮಾಣಗಳನ್ನು ನಿಂದಿಸುವುದು—ಅಪ್ರಮಾಣವೆಂದು ತಿರಸ್ಕರಿಸುವುದು ಮತ್ತು ಹಾಗೆಂದು ವಾದಿಸುವುದು.

[2] ಅಧ್ಯಾಯ ೩ರ ಶ್ಲೋಕ ೪೧–೪೨ನ್ನು ಇಲ್ಲಿ ನೋಡಿಕೊಳ್ಳಿರಿ. ಮನಸ್ಸಿನ ಅತೃಪ್ತಿಗೆ ಕಾರಣವಾದ ಅಪೂರ್ಣತ್ವವನ್ನು ಪರಿಹರಿಸಬೇಕೆಂಬುದು ಬ್ರಹ್ಮದೇವನ ಪ್ರಾರ್ಥನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಿಂದಲೂ ದುಷ್ಟಕರ್ಮಗಳಿಂದಲೂ ಸಿಟ್ಟಾದರೆ), ಪುಣ್ಯ ಅಪಿ–ಪುಣ್ಯವನ್ನು ಸಹ, ದಹೇತ್–ಸುಡುತ್ತಾನೆ; ತತ್–ಆದ್ದರಿಂದ, ತಸ್ಯೈವ–ಆತನ (ಶ್ರೀಹರಿಯ) ಪ್ರೀತ್ಯರ್ಥವಾಗಿಯೇ, ಭಕ್ತಿಂ–(ಆತನಲ್ಲಿ) ಭಕ್ತಿಯನ್ನು, ಚರೇತ್–ಮಾಡತಕ್ಕದ್ದು (ಅಧಿಕಾರಿಯು ಆತನ ಮಾಹಾತ್ಮ್ಯಜ್ಞಾನದಿಂದ ಆತನಲ್ಲಿ ಸ್ನೇಹಭಾವವನ್ನು ವೃದ್ಧಿಪಡಿಸಿಕೊಳ್ಳಬೇಕು); ಮನಾಕ್ ಅಪಿ–ಸ್ವಲ್ಪವಾದರೂ (ಅತ್ಯಲ್ಪವಾದರೂ), (ಎಂದೂ), ದ್ವೇಷಂ–ದ್ವೇಷವನ್ನು, ನ ಚ–ಮಾಡಲೇಬಾರದು. ಇತಿ–ಹೀಗೆ, ಅನಘ–ಹೇ ಪಾಪವಿದೂರನಾದ ಬ್ರಹ್ಮದೇವ! ತ್ವಯಾ–ನನ್ನಿಂದ, ಮೇ–ನನ್ನಲ್ಲಿ, ಯತ್ ಪೃಷ್ಟಂ–ಯಾವುದು ಪ್ರಶ್ನಿಸಲ್ಪಟ್ಟಿತೋ, ಸರ್ವಂ–ಆ ಎಲ್ಲವೂ, ತೇ–ನಿನಗೋಸ್ಕರ, ಆಖ್ಯಾತಂ–ಹೇಳಲ್ಪಟ್ಟಿತು; ಯೇನ–ಯಾವುದರಿಂದ (ಯಾವ ರಹಸ್ಯವನ್ನು ತಿಳಿಯುವುದರಿಂದ), ಮನಃ–(ನಿನ್ನ) ಮನಸ್ಸು, ಪೂರ್ಣಂ ಭವೇತ್–ಪೂರ್ಣವಾಗುತ್ತದೆಯೋ, (ನಿನ್ನ ಜ್ಞಾನವು ಪೂರ್ಣವಾಗಿ ಸೃಷ್ಟಿಕಾರ್ಯದಲ್ಲಿ ಪೂರ್ಣದಕ್ಷತೆಯನ್ನು ಪಡೆಯುವೆಯೋ–ಪೂರ್ಣತೃಪ್ತನಾಗುವೆಯೋ), (ಅದನ್ನು) ಇದಾನೀಂ–ಈಗ (ಈ ಮುಂದೆ); ಕಥಯಿಷ್ಯಾಮಿ–ಹೇಳುತ್ತೇನೆ; ಬ್ರಹ್ಮನ್–ಹೇ ಬ್ರಹ್ಮ!, ತೇ–ನಿನಗೆ, ಪರಂ ಗುಹ್ಯಂ–ಪರಮಗೋಪ್ಯವಾದುದನ್ನು, ವದಾಮಿ–ಹೇಳುತ್ತೇನೆ, ಅವಹಿತಃ–ಸಾವಧಾನ ಮನಸ್ಕನಾಗಿ (ಏಕಾಗ್ರತೆಯಿಂದ), ಶೃಣುಷ್ವ–ಶ್ರವಣಮಾಡು.

ವನ್ನು ನೀನು ಸಂಪಾದಿಸುವುದಿದೆ. ಅದನ್ನು ಈ ಮುಂದೆ ನಿನಗೆ ಉಪದೇಶಿಸುತ್ತೇನೆ—ಸಾವಧಾನಚಿತ್ತನಾಗಿ ಶ್ರವಣಮಾಡು (೨೫–೨೭).

ಶ್ರೀಹರಿಯ ಸ್ವಾತಂತ್ರ್ಯಾದಿಗಳ ಉಪಪಾದನವೆಂಬ
೬ನೇ ಅಧ್ಯಾಯವು ಮುಗಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ೭

ಶ್ರೀ ವೇದವ್ಯಾಸಾಯ ನಮಃ

ಶ್ರೀ ಹಯಗ್ರೀವ ಉವಾಚ—

ಏವಂ ವಸ್ತುಷು ಸರ್ವೇಷು ವಿದ್ಯಮಾನಂ ಮಹೇಶ್ವರಂ ।
ವೇದಾಃ ಸ್ತುವಂತಿ ಮಾಮೇವ ನಾನಾರೂಪಮನೇಕಧಾ ॥ ೧ ॥

ಏವಂ–ಈ ಹಿಂದೆ ನಿರೂಪಿಸಿದಂತೆ,[1] ಸರ್ವೇಷು–ಎಲ್ಲಾ, ವಸ್ತುಷು–ವಸ್ತುಗಳಲ್ಲಿ, ವಿದ್ಯಮಾನಂ–ಇರುವ (ಅಂತಃಪ್ರವಿಷ್ಟನಾಗಿ ಸ್ಥಿತನಾಗಿರುವ), ಮಹೇಶ್ವರಂ–ಸರ್ವೋತ್ತಮ ಪ್ರಭುವಾದ, ಮಾಂ ಏವ–ನನ್ನನ್ನೇ, ವೇದಾಃ–(ಸಮಸ್ತ) ವೇದಗಳು, ನಾನಾರೂಪಂ – ಅನಂತರೂಪನಾದ ನನ್ನನ್ನು, ಅನೇಕಧಾ – ಬಹುಪ್ರಕಾರವಾಗಿ (ಬಹುಮಹಿಮೆಯುಳ್ಳವನನ್ನಾಗಿ), ಸ್ತುವಂತಿ–ಸ್ತುತಿಸುತ್ತವೆ.

ತಾವದ್ರೂಪೈಸ್ತು ತಂತ್ರಾಣಿ ಸ್ಫುಟಂ ತೈಸ್ತೈಶ್ಚ ನಾಮಭಿಃ ।
ಪ್ರಸಾದಯಂತಿ ಮಾಂ ಮಂತ್ರೈಸ್ತತ್ತದಾಗಮದೀಕ್ಷಿತಾಃ ॥ ೨ ॥

ತಂತ್ರಾಣಿ – ತಂತ್ರಗಳು, (ಸ್ಮೃತಿಗಳು), ಸ್ಫುಟಂ – ಸ್ಪಷ್ಟವಾಗಿ, ತೈಃ ತೈಃ–ಆಯಾ, ನಾಮಭಿಃ–ನಾಮಗಳಿಂದ, ತಾವದ್ರೂಪೈಃ–ಅಷ್ಟು

ಸಮಸ್ತ ವಸ್ತುಗಳಲ್ಲಿ ತತ್ತದಾಕಾರವುಳ್ಳ ಅನಂತರೂಪಗಳಿಂದ, ನಾನೇ ಅಂತರ್ಯಾಮಿಯಾಗಿ ನೆಲಸಿದ್ದೇನೆ; ಹೀಗಿರುವ ನನ್ನನ್ನೇ (ಪರಮ ಮುಖ್ಯ ವೃತ್ತಿಯಿಂದ) ಸಕಲ ವೇದಗಳು, ಅನಂತ ಮಹಿಮೆಗಳುಳ್ಳ ಮಹಾಪ್ರಭುವನ್ನಾಗಿ, ಬಹುಪರಿಯಾಗಿ ಸ್ತುತಿಸುತ್ತವೆ (೧). ತಂತ್ರಗಳೆಲ್ಲವೂ, ಬಹುನಾಮಗಳಿಂದ ಬೋಧ್ಯವಾದ ಮಹಿಮೆಗಳುಳ್ಳ ನಾನೇ ಬಹುರೂಪಿಯಾಗಿ ನಾನಾವಸ್ತುಗಳಲ್ಲಿ ಸ್ಥಿತನಾಗಿರುವೆನೆಂದು, ನನ್ನನ್ನು ಸ್ಪಷ್ಟವಾಗಿ ಸ್ತುತಿಸುತ್ತವೆ; ಆಯಾ ಆಗಮಗಳಲ್ಲಿ ನಿಷ್ಠೆಯುಳ್ಳ ಜೀವರು, ಆಯಾ ಆಗಮೋಕ್ತ

---

[1] ೬ನೇ ಅಧ್ಯಾಯದ ೬೬ನೇ ಶ್ಲೋಕಭಾಗವನ್ನು ನೋಡಿರಿ; ಹಾಗೂ ೩ನೇ ಅಧ್ಯಾಯದ ೧೫–೧೬ನೇ ಶ್ಲೋಕಗಳನ್ನು ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೂಪಗಳಿಂದ, (ಆಯಾ ನಾಮಗಳಿಂದ ಬೋಧ್ಯವಾದ ನಾನಾರೂಪಗಳುಳ್ಳವನೆಂದು), ಸ್ತುವಂತಿ – ಸ್ತುತಿಸುತ್ತವೆ; ತತ್ತದಾಗಮ ದೀಕ್ಷಿತಾಃ – ಆಯಾ ಆಗಮಗಳಲ್ಲಿ ದೀಕ್ಷೆಯುಳ್ಳವರು (ನಿಷ್ಠೆಯುಳ್ಳವರು), ಮಂತ್ರೈಃ – ಆಯಾ ಆಗಮೋಕ್ತ) ಮಂತ್ರಗಳಿಂದ, ಮಾಂ–ನನ್ನನ್ನು, ಪ್ರಸಾದಯಂತಿ–ಪ್ರಸನ್ನೀಕರಿಸಿಕೊಳ್ಳುತ್ತಾರೆ.

ಸರ್ವರೂಪಸ್ತುತಿಪರಾಃ ಸರ್ವೇ ವೇದಾ ಹಿ ಮುಖ್ಯತಃ ।
ಆಹ್ವಾನತತ್ಪರಾಣ್ಯಾಹುಃ ಸರ್ವತಂತ್ರಾಣಿ ಮುಖ್ಯತಃ ॥ ೩ ॥
ವೇದಾಃ ಶ್ರುತಯ ಇತ್ಯುಕ್ತಾಸ್ತಂತ್ರಾಣಿ ಸ್ಮೃತಯಸ್ತ್ವಿತಿ ।
ಶ್ರುತಿಸ್ಮೃತೀ ಉಭೇ ನೇತ್ರೇ ವಿಪ್ರಾಣಾಂ ಪರಿಕೀರ್ತಿತೇ ॥ ೪ ॥
ಏಕೇನ ಹೀನಃ ಕಾಣಃ ಸ್ಯಾತ್ ದ್ವಾಭ್ಯಾಮಂಧಃ ಪ್ರಕೀರ್ತಿತಃ ।
ಅತೋ ವಿಪ್ರೇಣ ಕರ್ತವ್ಯಂ ಶೀಲನಂ ವೇದತಂತ್ರಯೋಃ ॥ ೫ ॥

ಮಂತ್ರಗಳಿಂದ ನನ್ನ ಪ್ರಸನ್ನತೆಗಾಗಿ ಯತ್ನಿಸುತ್ತಾರೆ (೨). ಎಲ್ಲ ವೇದಗಳು ಮುಖ್ಯವಾಗಿ ನನ್ನ ಸರ್ವರೂಪಗಳನ್ನೇ ಸ್ತುತಿಸುತ್ತವೆ (ಮಹಿಮೆಗಳನ್ನು ಪ್ರತಿಪಾದಿಸುತ್ತವೆ); ಸಕಲ ತಂತ್ರಗಳು ಮುಖ್ಯವಾಗಿ, ಪೂಜಾರ್ಥವಾಗಿ ಪ್ರತಿಮಾದಿಗಳಿಗೆ ಬರಲು ನನ್ನನ್ನು ಆಹ್ವಾನಿಸುವ ತಾತ್ಪರ್ಯವುಳ್ಳವುಗಳೇ ಆಗಿರುತ್ತವೆ.[1] ವೇದಗಳು ಶ್ರುತಿಗಳೆಂದೂ, ತಂತ್ರಗಳು ಸ್ಮೃತಿಗಳೆಂದೂ ಕರೆಯಲ್ಪಡುತ್ತವೆ; ಶ್ರುತಿಸ್ಮೃತಿಗಳೆರಡೂ ಬ್ರಾಹ್ಮಣರಿಗೆ ಎರಡು ಕಣ್ಣುಗಳಿದ್ದಂತೆ; ಅವುಗಳಲ್ಲಿ ಒಂದಿಲ್ಲದವನು ಒಕ್ಕಣ್ಣನು—ಎರಡೂ ಇಲ್ಲದವನು ಕುರುಡನೆಂದು ಜ್ಞಾನಿಗಳು ಹೇಳುತ್ತಾರೆ. ಆದ್ದರಿಂದ ಬ್ರಾಹ್ಮಣನು ವೇದ ತಂತ್ರಗಳ ಅಭ್ಯಾಸದಲ್ಲಿ ಆಸಕ್ತನಾಗಬೇಕಾದುದು ಅವಶ್ಯಕರ್ತವ್ಯವಾಗಿದೆ (೩–೫).

---

1 ಶ್ರೀಹರಿಯು ಸರ್ವವಸ್ತುಗಳಲ್ಲಿ ಆಯಾ ವಸ್ತುಸದೃಶರೂಪನಾಗಿ ಸ್ಥಿತನಾಗಿರುತ್ತಾನೆ; ಆದರೂ ಪ್ರತಿಮಾದಿಗಳಲ್ಲಿ ಆತನನ್ನು ಪೂಜಿಸುವ ಮೊದಲು, ವಿಧ್ಯುಕ್ತ ಮಂತ್ರಗಳಿಂದ ಆತನನ್ನು ಆಹ್ವಾನಿಸಬೇಕು. ಅಲ್ಲಿದ್ದು ಭಕ್ತನ ಪೂಜೆಯನ್ನು ಸ್ವೀಕರಿಸಿ, ಅನುಗ್ರಹಿಸುವೆನೆಂಬ ಇಚ್ಛೆಯುಳ್ಳವನಾಗುವುದು ಅವಶ್ಯಕ. ಹೀಗೆ ಅನುಗ್ರಹೋನ್ಮುಖನಾಗುವುದನ್ನು ಸನ್ನಿಧಾನವೆನ್ನುವರು — ಆಹ್ವಾನ ಮಂತ್ರಗಳು ಭಗವಂತನನ್ನು ಈ ವಿಧ ಸುಮುಖನನ್ನಾಗಿ ಮಾಡಿಕೊಡುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೇ–ಎಲ್ಲ, ವೇದಾಃ – ವೇದಗಳು, ಮುಖ್ಯತಃ–ಮುಖ್ಯವಾಗಿ, ಸರ್ವರೂಪಸ್ತುತಿಪರಾಃ – (ನನ್ನ) ಸರ್ವರೂಪಗಳಸ್ತುತಿಪರಗಳೇ; ಹಿ – ಹೀಗೆಂಬುದೂ ವೇದಪ್ರಸಿದ್ಧವೇ; ಸರ್ವತಂತ್ರಾಣಿ – ಸಕಲ ಸ್ಮೃತಿಗಳು, ಮುಖ್ಯವಾಗಿ, ಆಹ್ವಾನತತ್ಪರಾಣಿ–(ಪೂಜಾರ್ಥವಾಗಿ)ನನ್ನನ್ನು ಆಹ್ವಾನಿಸುವ ತಾತ್ಪರ್ಯವುಳ್ಳವುಗಳೆಂದು, ಆಹುಃ–ಜ್ಞಾನಿಗಳು ಹೇಳುತ್ತಾರೆ; ವೇದಾಃ–ವೇದಗಳು, ಶ್ರುತಯಃ–ಶ್ರುತಿಗಳು, ಇತ್ಯುಕ್ತಾಃ–ಎಂದು ಹೇಳಲ್ಪಡುತ್ತವೆ; ತಂತ್ರಾಣಿ–ತಂತ್ರಗಳು, ಸ್ಮೃತಯಃ ಇತಿ – ಸ್ಮೃತಿಗಳೆಂದು (ಕರೆಯಲ್ಪಡುತ್ತವೆ); ಶ್ರುತಿಸ್ಮೃತೀ–ಶ್ರುತಿ ಮತ್ತು ಸ್ಮೃತಿಗಳೆಂಬ, ಉಭೇ–ಎರಡೂ, ವಿಪ್ರಾಣಾಂ–ಬ್ರಾಹ್ಮಣರಿಗೆ, ನೇತ್ರೇ–ಎರಡು ಕಣ್ಣುಗಳೆಂದು, ಕೀರ್ತಿತೇ–ಹೇಳಲ್ಪಡುತ್ತವೆ; ಏಕೇನ – ಒಂದರಿಂದ (ವೇದ, ತಂತ್ರಗಳೆಂಬೆರಡರಲ್ಲಿ ಒಂದರಿಂದ), ಹೀನಃ – ರಹಿತನು (ಹೀನನಾದವನು), ಕಾಣಃ ಸ್ಯಾತ್–ಒಕ್ಕಣ್ಣನೆನಿಸುತ್ತಾನೆ; ದ್ವಾಭ್ಯಾಂ–ಎರಡರಿಂದಲೂ (ಹೀನನು), ಅಂಧಃ–ಕುರುಡನೆಂದು, ಪ್ರಕೀರ್ತಿತಃ – ಹೇಳಲ್ಪಡುವನು; ಅತಃ – ಆದ್ದರಿಂದ, ವೇದತಂತ್ರಯೋಃ–ವೇದತಂತ್ರಗಳ (ಶ್ರುತಿಸ್ಮೃತಿಗಳ), ಶೀಲನಂ–ಅಭ್ಯಾಸವು (ಅವುಗಳಲ್ಲಿ ಆಸಕ್ತನಾಗುವ ಸ್ವಭಾವವು), ವಿಪ್ರೇಣ–ಬ್ರಾಹ್ಮಣನಿಂದ, ಕರ್ತವ್ಯಂ–ಮಾಡಲ್ಪಡತಕ್ಕದ್ದು.

ಅನುಷ್ಠಾನಂ ತಥಾ ಕುರ್ಯಾದುಭಯೋಕ್ತಂ ವಿಶೇಷತಃ ।
ಅತಸ್ತಂತ್ರಾಣಿ ವಕ್ಷ್ಯಾಮಿ ತೇನ ಪೂರ್ಣೋ ಭವಿಷ್ಯಸಿ ॥ ೬ ॥

ಶ್ರುತಿಸ್ಮೃತಿಗಳಲ್ಲಿ ವಿಧಿಸಲ್ಪಟ್ಟಿರುವಂತೆ ಆಚರಿಸಬೇಕು; ವಿಶೇಷವಾಗಿ ವಿಪ್ರನು, ಉಭಯೋಕ್ತವಾದ ವಿಧಿಗಳನ್ನು ಪಾಲಿಸಲೇಬೇಕು. ಈ ಕಾರಣದಿಂದ (ತಂತ್ರಗಳನ್ನು) ಸ್ಮೃತಿಗಳನ್ನು ನಿನಗೆ ಹೇಳುತ್ತೇನೆ[1]—ಅದರಿಂದ

---

[1] 'ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್'—ಇತಿಹಾಸ ಪುರಾಣಗಳು, ವೇದಜನ್ಯಜ್ಞಾನವನ್ನು ಪೂರ್ಣಗೊಳಿಸುತ್ತವೆ—ವೇದಜ್ಞಾನದ ಪರಿಪೂರ್ತಿಯನ್ನು (ಸ್ವಯೋಗ್ಯಪೂರ್ಣತ್ವವನ್ನು—ದೃಢಜ್ಞಾನವನ್ನು) ಪುರಾಣಾದಿಗಳಿಂದ ಸಾಧಿಸಿಕೊಳ್ಳಲೇಬೇಕು. ಆದಿಲ್ಲದವನೋ (ಕೇವಲ ವೇದಗಳನ್ನು ಅಧ್ಯಯನಮಾಡಿದವನು) 'ವಿಚಕ್ಷಣ'ನೆನಿಸುವುದಿಲ್ಲ.

9

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಥಾ – ಹಾಗೆ, ಅನುಷ್ಠಾನಂ – ಅನುಷ್ಠಾನವನ್ನು, ಕುರ್ಯಾತ್ – (ವಿಪ್ರನು) ಮಾಡತಕ್ಕದ್ದು ; ವಿಶೇಷತಃ – (ವಿಪ್ರನು) ವಿಶೇಷವಾಗಿ, ಉಭಯೋಕ್ತಂ–ಶ್ರುತಿ ಮತ್ತು ಸ್ಮೃತಿಗಳೆರಡರಲ್ಲಿ ಹೇಳಿರುವುದನ್ನು (ವಿಧಿಸಿರುವುದನ್ನು) ; (ಕುರ್ಯಾತ್ ಆಚರಿಸಬೇಕು) ; ಅತಃ–ಈ ಕಾರಣ ದಿಂದ ತಂತ್ರಾಣಿ–ಸ್ಮೃತಿಗಳನ್ನು, ವಕ್ಷ್ಯಾಮಿ–ಹೇಳುತ್ತೇನೆ; ತೇನ ಅವುಗಳ ಶ್ರವಣದಿಂದ, ಪೂರ್ಣಃ–ಪೂರ್ಣನು (ಪೂರ್ಣಮನಸ್ತೃಪ್ತಿಯನ್ನು ಹೊಂದಿ ದವನು), ಭವಿಷ್ಯಸಿ–ಆಗುತ್ತೀ.

ಶ್ರೀ ಭಗವಾನುವಾಚ—

ಏವಮುಕ್ತಃ ಸ ಭಗವಾನ್ ಹಯಗ್ರೀವೋಽಪಿ ಮತ್ತನುಃ ।
ಬ್ರಹ್ಮಣೇ ಕಥಯಾಮಾಸ ಕ್ರಮಾತ್ ತಂತ್ರಾಣಿ ಸರ್ವಶಃ ॥ ೭ ॥
ಪಂಚರಾತ್ರಂ ಪಾಶುಪತಂ ಕಾಪಿಲಂ ಶಾಕ್ತಮೇವ ಚ ।
ಸೌರಗಾಣೇಶವಾಮ್ನಾದೀನ್ ಸುಸಿದ್ಧಾನ್ಯಾಮುಲಾದಿಕಾನ್ ॥ ೮ ॥

ಏವಂ–ಹೀಗೆ, ಉಕ್ತಃ–ಹೇಳಿದ, ಸಃ ಭಗವಾನ್–ಆ ಷಡ್ಗುಣೈಶ್ವರ್ಯ ಪೂರ್ಣನಾದ, ಮತ್ತನುಃ–ನನ್ನ ಸ್ವರೂಪದಿಂದ ಅಭಿನ್ನನೇ ಆದ (ನನ್ನ ದೇಹವೇ ಆದ), ಹಯಗ್ರೀವಃ ಅಪಿ–ಶ್ರೀ ಹಯಗ್ರೀವನಾದರೂ, ಬ್ರಹ್ಮಣೇ– ಬ್ರಹ್ಮದೇವನಿಗೋಸ್ಕರ, ಕ್ರಮಾತ್–ಕ್ರಮವಾಗಿ, ಸರ್ವಶಃ–ಎಲ್ಲ, ತಂತ್ರಾಣಿ–ಸ್ಮೃತಿಗಳನ್ನು (ಆಗಮಗಳನ್ನು), ಕಥಯಾಮಾಸ–ಹೇಳಿದನು (ವಿಸ್ತಾರವಾಗಿ ಉಪದೇಶಿಸಿದನು) ; (ಅವು ಯಾವುವೆಂದರೆ), ಪಂಚ-

---

(ಅವುಗಳ ಶ್ರವಣದಿಂದ) ನೀನು ಪೂರ್ಣಮನಸ್ಕನಾಗುವಿ—ಸರ್ವಜ್ಞ ನಾಗುವಿ—ಮನಸ್ಸಿನ ಅತೃಪ್ತಿಯನ್ನು ಪರಿಹರಿಸಿಕೊಳ್ಳುವಿ (೬). ತಂತ್ರಜ್ಞಾನವು (ಸ್ಮೃತಿಗಳ ಜ್ಞಾನವು) ನಿನ್ನ ಪೂರ್ಣತ್ವಕ್ಕೆ (ಸರ್ವಜ್ಞತ್ವದ ಪರಿಪೂರ್ಣತೆ ಮತ್ತು ಅತೃಪ್ತಿಭಾವನೆಯ ಪರಿಹಾರಕ್ಕೆ) ಅವಶ್ಯಕವೆಂದು ಹೇಳಿ, ಶ್ರೀ ಹಯಗ್ರೀವರೂಪನಾದ ಶ್ರೀವಿಷ್ಣುವು ಬ್ರಹ್ಮದೇವನಿಗೆ ವಿವಿಧ ತಂತ್ರಗಳನ್ನು ಉಪದೇಶಿಸಿದನು; ಪಂಚರಾತ್ರ, ಪಾಶುಪತ, ಕಾಪಿಲ, ಶಾಕ್ತ, ಸೌರ, ಗಾಣೇಶ, ವಾಮ, ಯಾಮುಲಾದಿ ನಾನಾ ಆಗಮಗಳನ್ನು ಉಪದೇಶಿಸಿದನು. ಈ ಎಲ್ಲವೂ ಯಥಾಯೋಗ್ಯವಾದ ಜ್ಞಾನದಾರ್ಢ್ಯವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾತ್ರಂ – ಪಂಚರಾತ್ರವನ್ನು, ಪಾಶುಪತಂ – ಪಾಶುಪತವನ್ನು, ಕಾಪಿಲಂ – ಕಾಪಿಲವನ್ನು, ಶಾಕ್ತಂ–ಶಾಕ್ತವನ್ನು, ಏವ ಚ ಮತ್ತು ಹಾಗೆಯೇ, ಸೌರ ಗಾಣೇಶ ವಾಮಾದೀನ್–ಸೌರ, ಗಾಣೇಶ, ವಾಮ ಮೊದಲಾದ[1] ಆಗಮಗಳನ್ನು, ಸುಸಿದ್ಧಾನ್–ಅಲ್ಪಕಾಲದಲ್ಲಿ ಸುಸ್ಪಷ್ಟವಾದ ಸಿದ್ಧಿ (ಫಲ) ಗಳನ್ನು ದೊರಕಿಸಲು ಸಮರ್ಥಗಳಾದ, ಯಾಮುಲಾದಿಕಾನ್–ಮಂತ್ರಸಹಿತ ಹೋಮಾದಿಗಳನ್ನೂ, (ಕಥಯಾಮಾಸ– ಹಿಂದಿನ ಶ್ಲೋಕದಿಂದ ಸಮಾಕರ್ಷಿಸಿ ಅನ್ವಯಿಸಿಕೊಳ್ಳಬೇಕು).

ದೇವತಾಋಷಿಗಂಧರ್ವಾಃ ಸಿದ್ಧಗುಹ್ಯಕಪನ್ನಗಾಃ ।
ವೃಕ್ಷಗುಲ್ಮಲತಾದ್ಯಾಶ್ಚ ವಜ್ರಾದ್ಯಾ ರತ್ನಜಾತಯಃ ॥ ೯ ॥
ಗಜಾಶ್ವಗೋಜಮೇಷಾದ್ಯಾ ಯೇ ಚಾನ್ಯೇ ಸ್ಯುಃ ಪದಾರ್ಥಕಾಃ ।
ಸರ್ವೇ ತೇ ವೇದವಾಕ್ಯೇಷು ಸ್ತೂಯಂತೇ ಹಿ ತಥೈವ ಚ ॥ ೧೦ ॥

ಹೊಂದಲು, ಅವಶ್ಯಶ್ರವಣೀಯಗಳೇ ಆಗಿವೆ (೭–೮). ವೇದಗಳಲ್ಲಿ, ದೇವತೆಗಳು, ಋಷಿಗಳು, ಗಂಧರ್ವರು, ಸಿದ್ಧರು, ಗುಹ್ಯಕರು, ಪನ್ನಗರೂ, ಅಷ್ಟೇಕೆ! ವೃಕ್ಷ ಗುಲ್ಮ ಲತಾದಿಗಳು (ಅವುಗಳ ಅಭಿಮಾನಿ ದೇವತೆಗಳು), ವಿವಿಧ ವಜ್ರಾದಿ ರತ್ನಗಳು, ಗಜ, ಅಶ್ವ, ಗೋ, ಅಜ, ಮೇಷ ಮೊದಲಾದವುಗಳು (ತದಭಿಮಾನಿ ತನ್ನಾಮಕ ದೇವತೆಗಳೂ) ಮತ್ತು ಇತರ ಸಕಲ ಪದಾರ್ಥಗಳೂ (ತದಭಿಮಾನಿ ದೇವತೆಗಳೂ), ಸ್ತುತಿಸಲ್ಪಡುತ್ತಾರೆ; ತಂತ್ರಗಳಲ್ಲಿ ಈ ಎಲ್ಲ ದೇವತೆಗಳ ಆಹ್ವಾನಾದಿಗಳು ಹೇಳಲ್ಪಡುತ್ತವೆ. ಹಾಗೆ ಆಹ್ವಾನಿಸಿ ಆಯಾ ದೇವತೆಗಳನ್ನು ಉಪಾಸಿಸುವ ಆಯಾ ಭಕ್ತರು ಆಯಾ ದೇವತೆಗಳನ್ನು ಪ್ರತಿಪಾದಿಸಿ ಸ್ತುತಿಸುವ ತಂತ್ರಗಳ ಮಂತ್ರಗಳಿಂದ, ಆಯಾ ದೇವತೆಯನ್ನು ಪ್ರಸನ್ನೀಕರಿಸಿಕೊಳ್ಳುತ್ತಾರೆ; ಆದರೆ ಸರ್ವತ್ರ (ತೃಣಗುಲ್ಮ ಲತಾದಿ ಸಕಲ ವಸ್ತುಗಳಲ್ಲಿ ಮತ್ತು ಅವುಗಳ ಅಭಿಮಾನಿ ದೇವತೆಗಳಲ್ಲಿ ಸಹ)

---

[1] ಮಂತ್ರಮಾಟಾದಿಗಳಿಂದ ಅನ್ಯರನ್ನು ಪೀಡಿಸಲು ಉಪಯೋಗಿಸುವ 'ವಾಮಾಚಾರಗಳನ್ನು'—ಆಭಿಚಾರಿಕವಿದ್ಯೆಗಳನ್ನು ನಿರೂಪಿಸುವ ತಂತ್ರವಿಶೇಷ. ಸೂರ್ಯ, ಗಣೇಶ, ಪಶುಪತಿ, ಶಕ್ತಿಗಳನ್ನು ಪ್ರಸನ್ನೀಕರಿಸಿಕೊಳ್ಳುವ ವಿಧಾನಗಳನ್ನು ನಿರೂಪಿಸುವ ವಿವಿಧ ತಂತ್ರಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಂತ್ರೇಷು ತೇಷಾಮಾಹ್ವಾನಂ ಪ್ರಸಾದೋನ್ಮುಖತಾ ತತಃ ।
ತತ್ತನ್ಮಂತ್ರೈಶ್ಚ ಜಾಯೇತ ತತ್ತದ್ಭಕ್ತೇಭ್ಯ ಏವ ಹಿ ॥ ೧೧ ॥
ಯೋ ಭಾವಯತಿ ಸರ್ವತ್ರ ತೃಣಗುಲ್ಮಲತಾದಿಷು ।
ಸ್ಥಿತಂ ಮಾಂ ಸೋಽಶ್ನುತೇ ಸರ್ವಂ ಫಲಂ ಮತ್ಪ್ರೀತಿಸಂಭವಂ ॥ ೧೨ ॥

ದೇವತಾಃ – ದೇವತೆಗಳು; ಋಷಿಗಂಧರ್ವಾಃ – ಋಷಿಗಳೂ ಗಂಧರ್ವರೂ; ಸಿದ್ಧಗುಹ್ಯಕಪನ್ನಗಾಃ–ಸಿದ್ಧರೂ, ಗುಹ್ಯಕರೂ, ಪನ್ನಗರೂ; ವೃಕ್ಷಗುಲ್ಮಲತಾದ್ಯಾಃ–ವೃಕ್ಷಗಳೂ, ಗುಲ್ಮಗಳೂ, ಲತಾದಿಗಳೂ (ವೃಕ್ಷಾದಿಗಳ ಅಭಿಮಾನಿದೇವತೆಗಳಾದ ಆಯಾ ನಾಮಗಳಿಂದ ಕರೆಯಲ್ಪಡುವ ದೇವತೆಗಳೂ); ಚ – ಹಾಗೂ, ರತ್ನಜಾತಯಃ – ರತ್ನಗಳ ಗುಂಪಿಗೆ ಸೇರಿದ, ವಜ್ರಾದ್ಯಾಃ–ವಜ್ರ ಮೊದಲಾದ ರತ್ನಗಳೂ (ತನ್ನಾಮಕ ತದಭಿಮಾನಿ ದೇವತೆಗಳೂ); ಗಜಾಶ್ವಗೋಜಮೇಷಾದ್ಯಾಃ–ಗಜ, ಅಶ್ವ, ಗೋ, ಅಜ, ಮೇಷ, ಇವೇ ಮೊದಲಾದ ಪ್ರಾಣ್ಯಭಿಮಾನಿ ದೇವತೆಗಳೂ; ಚ–ಮತ್ತು, ಯೇ ಅನ್ಯೇ–ಯಾವ ಬೇರೆ, ಪದಾರ್ಥಕಾಃ – ಪದಾರ್ಥಗಳು (ಜಗತ್ತಿನಲ್ಲಿ) ಇರುವುವೋ, ತೇ ಸರ್ವೇ–ಆ ಎಲ್ಲವೂ, ವೇದವಾಕ್ಯೇಷು–ವೇದವಾಕ್ಯಗಳಲ್ಲಿ (ಪ್ರತ್ಯೇಕ ವಾಕ್ಯಗಳಿಂದ), ಸ್ತೂಯಂತೇ–ಸ್ತುತಿಸಲ್ಪಡುತ್ತವೆ; ತಂತ್ರೇಷು–ತಂತ್ರಗಳಲ್ಲಿ (ಆಗಮಗಳಲ್ಲಿ), ತೇಷಾಂ – ಆ ದೇವತೆಗಳ, ಆಹ್ವಾನಂ–ಆಹ್ವಾನವೂ, ತತಃ–ಅದರಿಂದ (ಹಾಗೆ ಸನ್ನಿಧಾನವನ್ನು ಆಹ್ವಾನಿಸಿ, ಅಲ್ಲಿ ಪೂಜಿಸುವುದರಿಂದ), ತತ್ತದ್ಭಕ್ತೇಭ್ಯಃ – ಆಯಾ ದೇವತೆಗಳ ಭಕ್ತರಿಗೆ, ತತ್ತನ್ಮಂತ್ರೈಶ್ಚ – ಆಯಾ ದೇವತಾ (ಪ್ರತಿಪಾದಕ) ಮಂತ್ರಗಳಿಂದಲೇ, ಪ್ರಸಾದೋನ್ಮುಖತಾ–ಪ್ರಸನ್ನಚಿತ್ತನಾಗುವಿಕೆಯೆಂಬ ಫಲವು, ಜಾಯೇತ–ಉಂಟಾಗುತ್ತದೆ; (ಆದರೆ), ಯಃ–ಯಾವ ಅಧಿಕಾರಿಯು, ತೃಣಗುಲ್ಮಲತಾದಿಷು – ತೃಣಗುಲ್ಮಲತಾದಿಗಳಲ್ಲಿ (ತದಭಿಮಾನಿತನ್ನಾಮಕ ದೇವತೆಗಳಲ್ಲಿ), ಸರ್ವತ್ರ–ಎಲ್ಲ ವಸ್ತುಗಳಲ್ಲಿ, ಸ್ಥಿತಂ–ಇರುವ, ಮಾಂ–ನನ್ನನ್ನು

ಸ್ಥಿತನಾಗಿರುವವನು ನಾನೇ ಎಂದು ತಿಳಿದು, ಭಕ್ತಿಯಿಂದ ನನ್ನನ್ನೇ ಉಪಾಸಿಸುವವನು, ನನ್ನ ಪ್ರಸನ್ನತೆಯಿಂದ, ಪೂರ್ಣ ಫಲವನ್ನು (ಆ ಎಲ್ಲ ದೇವತೆಗಳಿಂದ ದೊರೆಯಬಹುದಾದ ಸರ್ವಫಲಗಳನ್ನು), ಹೊಂದುತ್ತಾನೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಶ್ರೀವಿಷ್ಣುವನ್ನು), ಭಾವಯತಿ – ಚಿಂತಿಸಿ ಪೂಜಿಸುವನೋ (ಭಕ್ತಿಯಿಂದ ಪೂಜಿಸುವನೋ), ಸಃ – ಆತನು ಮತ್ಪ್ರೀತಿಸಂಭವಂ – ನನ್ನ ಪ್ರೀತಿಯಿಂದ (ಪ್ರಸನ್ನತೆಯಿಂದ) ಉದಯಿಸುವ, ಸರ್ವಂಫಲಂ–ಸಮಸ್ತ (ಪೂರ್ಣ) ಫಲವನ್ನು, ಅಶ್ನುತೇ–ಹೊಂದುತ್ತಾನೆ.

ಇತಿ ಶ್ರುತ್ವಾ ವಚಸ್ತಸ್ಯ ಹಯಾಸ್ಯಸ್ಯ ಮಹಾತ್ಮನಃ ।
ಪಪ್ರಚ್ಛ ಪುರುಷಸ್ತ್ವಾದ್ಯಃ ಪ್ರಣಯೋತ್ಫುಲ್ಲಲೋಚನಃ ॥ ೧೩ ॥

ಶ್ರೀ ಬ್ರಹ್ಮೋವಾಚ—

ಭಗವನ್ನಿದಮಾಖ್ಯಾತಂ ತಂತ್ರಜಾತಂ ತ್ವಯಾಖಿಲಂ ।
ವೇದಾಶ್ಚ ಸರ್ವೇ ವ್ಯಾಖ್ಯಾತಾಃ ವದ ತತ್ರಾಧಿಕಾರಿಣಃ ॥ ೧೪ ॥

ತಸ್ಯ – ಆ, ಮಹಾತ್ಮನಃ – ಮಹಾಸ್ವಾಮಿಯಾದ, ಹಯಾಸ್ಯಸ್ಯ – ಶ್ರೀ ಹಯಗ್ರೀವದೇವನ, ಇತಿವಚಃ–ಹೀಗೆಂಬ ಮಾತನ್ನು, ಶ್ರುತ್ವಾ–ಕೇಳಿ, ಆದ್ಯಃ ಪುರುಷಃ ತು – ಮೊದಲುಹುಟ್ಟಿದ ಪುರುಷನಾದ ಬ್ರಹ್ಮನು, ಪ್ರಣಯೋತ್ಫುಲ್ಲಲೋಚನಃ – ಭಕ್ತಿಯಿಂದ ವಿಕಸಿತವಾದ (ಅರಳಿದ) ಕಣ್ಣುಗಳುಳ್ಳವನಾಗಿ, ಪಪ್ರಚ್ಛ – ಪ್ರಶ್ನಿಸಿದನು. ಬ್ರಹ್ಮದೇವನು ಮಾತನಾಡುತ್ತಾನೆ :—

ಭಗವನ್–ಹೇ ಹಯಗ್ರೀವದೇವ!, ತ್ವಯಾ–ನಿನ್ನಿಂದ, ಅಖಿಲಂ–ಸಮಸ್ತವಾದ, ಇದಂ ತಂತ್ರಜಾತಂ–ಈ ಆಗಮಸಮೂಹವು, ಆಖ್ಯಾತಂ–

(೯-೧೨). ಶ್ರೀ ಹಯಗ್ರೀವದೇವನು ಹೀಗೆ ಹೇಳಿದ್ದನ್ನು ಕೇಳಿ ಆದ್ಯಪುರುಷನಾದ ಬ್ರಹ್ಮದೇವನು, ಭಕ್ತ್ಯುದ್ರೇಕದಿಂದ ವಿಕಸಿತವಾದ ನೇತ್ರಗಳುಳ್ಳವನಾಗಿ, ಪುನಃ ಮುಂದೆ ಹೇಳುವಂತೆ ಪ್ರಶ್ನಿಸಿದನು. ಬ್ರಹ್ಮನು ಮಾತನಾಡುತ್ತಾನೆ:—'ಹೇ ಹಯಗ್ರೀವದೇವ! ಸಕಲಾಗಮಗಳನ್ನೂ, ಎಲ್ಲ ವೇದಗಳನ್ನೂ ವಿಸ್ತಾರವಾಗಿ ಉಪದೇಶ ಮಾಡಿರುವಿ; ಈ ವೇದಗಳಲ್ಲಿ ಮತ್ತು ತಂತ್ರ (ಆಗಮ) ಗಳಲ್ಲಿ ಅಧಿಕಾರಿಗಳು[1] ಯಾರೆಂಬುದನ್ನು ಹೇಳು ಸ್ವಾಮಿ!

[1] ವೇದಗಳು ಮತ್ತು ತಂತ್ರಗಳ ಅಧ್ಯಯನ ಮತ್ತು ತಂತ್ರೋಕ್ತ ಉಪಾಸನಾದಿಗಳ ಅನುಷ್ಠಾನಗಳಿಂದ, ಉಕ್ತವಾದ ಫಲಗಳನ್ನು ಹೊಂದುವ ಅರ್ಹತೆಯುಳ್ಳವರು, ಅವುಗಳಲ್ಲಿ ಅಧಿಕಾರವುಳ್ಳವರೆಂದು ಹೇಳಲ್ಪಡುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವರವಾಗಿ ಉಪದೇಶಿಸಲ್ಪಟ್ಟಿತು; ಸರ್ವೇ–ಎಲ್ಲ, ವೇದಾಶ್ಚ–ವೇದಗಳೂ ಸಹ, ವ್ಯಾಖ್ಯಾತಾಃ – ಉಪದೇಶಿಸಲ್ಪಟ್ಟವು; ತತ್ರ–ಈ ವೇದತಂತ್ರಗಳಲ್ಲಿ (ವೇದತಂತ್ರಗಳ ಅಧ್ಯಯನ, ಅನುಷ್ಠಾನಾದಿಗಳಲ್ಲಿ), ಅಧಿಕಾರಿಣಃ– ಅಧಿಕಾರಿಗಳನ್ನು (ಅರ್ಹತೆಯುಳ್ಳವರನ್ನು), ವದ–ಹೇಳುವವನಾಗು.

ಶ್ರೀ ಹಯಗ್ರೀವ ಉವಾಚ—

ಸರ್ವವರ್ಣಾಶ್ರಮಾಚಾರಾಃ ಸರ್ವೇ ದೇವಾಃ ಪ್ರಕೀರ್ತಿತಾಃ ।
ವೇದೇಷು ಚಾಥ ತಂತ್ರೇಷು ತೇ ಮುಖ್ಯಾಹ್ಯಧಿಕಾರಿಣಃ ॥ ೧೫ ॥

ತೇಷು ಸರ್ವೇಷ್ವಪಿ ಭವಾನ್ ಮುಖ್ಯತಃ ಸರ್ವಸಾರವಿತ್ ।
ಅಧಿಕಾರೀ ಮುಖ್ಯತಮಃ ಸರ್ವೇಽಪಿ ತದನಂತರಂ ॥ ೧೬ ॥

ಸರ್ವೇ ದೇವಾಃ–ಎಲ್ಲ ದೇವತೆಗಳೂ, ಸರ್ವವರ್ಣಾಶ್ರಮಾಚಾರಾಃ– ಬ್ರಾಹ್ಮಣಾದಿ ಎಲ್ಲ ವರ್ಣಗಳ ಮತ್ತು ಯತ್ಯಾಶ್ರಮಾದಿ ಎಲ್ಲ ಆಶ್ರಮಗಳ ಆಚಾರಗಳ ಅನುಷ್ಠಾನವುಳ್ಳವರು (ಎಂದು), ಪ್ರಕೀರ್ತಿತಾಃ – ಪ್ರಸಿದ್ಧರಾಗಿರುವರು; ವೇದೇಷು – ವೇದಗಳಲ್ಲಿ, ಚ ಅಥ – ಮತ್ತೇನೆಂದರೆ, ತಂತ್ರೇಷು – ತಂತ್ರಗಳಲ್ಲಿಯೂ, ಮುಖ್ಯಾಃ ಅಧಿಕಾರಿಣಃ–ಮುಖ್ಯಾಧಿಕಾರಿಗಳು, ತೇ ಹಿ–ಅವರೇ ಸರಿ;

(೧೫–೧೬). ಎಲ್ಲ ವರ್ಣಗಳ ಮತ್ತು ಆಶ್ರಮಗಳ ಧರ್ಮಗಳನ್ನು ಆಚರಿಸುವುದರಲ್ಲಿ, ಎಲ್ಲ ದೇವತೆಗಳು ಮುಖ್ಯಾಧಿಕಾರಿಗಳು;[1] ಆ ಎಲ್ಲರಲ್ಲಿ ವೇದತಂತ್ರಗಳ ಸರ್ವಸಾರವೇತ್ತನಾದ ನೀನು ಅತ್ಯಂತ ಮುಖ್ಯಾಧಿಕಾರಿಯು—ಇತರ

[1] ಪ್ರಸಿದ್ಧರಾದ ದೇವತೆಗಳು ಒಂಭತ್ತು ಕೋಟಿ ಸಂಖ್ಯೆಯಲ್ಲಿರುವರೆಂದು 'ನವಕೋಟ್ಯೋಹಿ ದೇವಾನಾಂ ...' ಇತ್ಯಾದಿ ಪ್ರಮಾಣಗಳಿಂದ ತಿಳಿದುಬರುತ್ತದೆ. ಇವರಲ್ಲಿ ತತ್ವಾಭಿಮಾನಿಗಳೆಲ್ಲರೂ ಸರ್ವ ವರ್ಣ ಮತ್ತು ಸರ್ವ ಆಶ್ರಮಗಳುಳ್ಳವರಲ್ಲಿಯೂ ಇರುವರು. ಅಲ್ಲಿದ್ದು ಆಯಾ ವರ್ಣದವರ ಮತ್ತು ಆಯಾ ಆಶ್ರಮದವರ ಕರ್ಮಗಳನ್ನು ತಾವು ಪ್ರೇರಕರಾಗಿ, ಆಯಾ ಜ್ಞಾನಕರ್ಮೇಂದ್ರಿಯಗಳಲ್ಲಿದ್ದು ಆಯಾ ಜೀವರೊಂದಿಗೆ ಆಚರಿಸುತ್ತಾರೆ. ಸರ್ವ ವರ್ಣಾಶ್ರಮಗಳ ಧರ್ಮಗಳನ್ನು ಆಚರಿಸುವ ಅರ್ಹತೆಯು, ಯಜ್ಞದಲ್ಲಿ ಆಹ್ವಾನಿಸಲ್ಪಡಲು ಅರ್ಹರಾದ, ಮತ್ತು ಸೋಮಪಾನಾರ್ಹರಾದ ೧೦೧ ದೇವತೆಗಳಿಗೆಲ್ಲ ಇರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೇಷುಸರ್ವೇಷು ಅಪಿ–ಆ ಎಲ್ಲರಲ್ಲಿ (ದೇವತೆಗಳಲ್ಲಿ) ಸಹ, ಭವಾನ್–ನೀನು, ಮುಖ್ಯತಃ – ಮುಖ್ಯವಾಗಿ, ಸರ್ವಸಾರವಿತ್ – (ಈ ಎಲ್ಲವುಗಳ–ವೇದತಂತ್ರಗಳ) ಪೂರ್ಣಸಾರವನ್ನು ತಿಳಿದವನು; (ಆದ್ದರಿಂದಲೇ), ಮುಖ್ಯ-ತಮಃ–ಅತ್ಯಂತಮುಖ್ಯನಾದ, ಅಧಿಕಾರೀ–ಅಧಿಕಾರಿಯು; ಸರ್ವೇ ಅಪಿ–(ಉಳಿದ) ಎಲ್ಲರೂ (ಎಲ್ಲ ದೇವತೆಗಳೂ), ತದನಂತರಂ – ನಿನ್ನನಂತರ (ಕೆಳಗಿನ) ಅಧಿಕಾರಿಗಳು.

ಏತೇ ಹಿ ವಿಷ್ಣುಂ ಸರ್ವತ್ರ ಸರ್ವಶಬ್ದಾಭಿದಂ ಪರಂ ।
ವೈದಿಕೈಸ್ತಾಂತ್ರಿಕೈರ್ಮಂತ್ರೈರ್ಯಥಾಯೋಗ್ಯಮುಪಾಸತೇ ॥ ೧೭ ॥

ಏತೇ ಈ ದೇವತೆಗಳೇ, ಸರ್ವಶಬ್ದಾಭಿದಂ–ಸಕಲ ಶಬ್ದಗಳೇ ತನ್ನ ನಾಮಗಳಾಗಿವುಳ್ಳ (ಸರ್ವಶಬ್ದವಾಚ್ಯನಾದ), ಪರಂ–ಸರ್ವೋತ್ತಮನಾದ, ವಿಷ್ಣುಂ – ಶ್ರೀವಿಷ್ಣುವನ್ನು, ಸರ್ವತ್ರ – ಸರ್ವತ್ರ (ಎಲ್ಲ ಅಧಿಷ್ಠಾನಗಳಲ್ಲಿ), ವೈದಿಕೈಃ–ವೇದೋಕ್ತವಾದ, ತಾಂತ್ರಿಕೈಃ–ತಂತ್ರೋಕ್ತವಾದ, ಮಂತ್ರೈಃ–ಮಂತ್ರಗಳಿಂದ, ಯಥಾಯೋಗ್ಯಂ – ತಂತಮ್ಮ ಯೋಗ್ಯತಾನುಗುಣವಾಗಿ, ಉಪಾಸತೇ ಹಿ–ಉಪಾಸಿಸುತ್ತಾರೆ—ಇದು ವೇದಪ್ರಸಿದ್ಧವು.

ನ್ಯಾಯೇನಾನೇನ ಯಜ್ಞೇಷು ಸರ್ವವೇದಸ್ವರೂಪಿಣಂ ।
ತತ್ತನ್ಮಂತ್ರೈಶ್ಚ ಹವಿಷಾ ಮಾಮೇವ ಹಿ ಭಜಂತಿ ತೇ ॥ ೧೮ ॥

ದೇವತೆಗಳೆಲ್ಲ ನಿನ್ನ ನಂತರದ ಅಧಿಕಾರಿಗಳು (೧೫–೧೬). ದೇವತೆಗಳು ಸರ್ವಶಬ್ದವಾಚ್ಯನಾದ (ಸಕಲ ಶಬ್ದಗಳಿಂದ ಬೋಧ್ಯವಾದ ಗುಣಧರ್ಮಗಳೆಲ್ಲವನ್ನೂ ಅನಂತವಾಗಿ ತನ್ನಲ್ಲಿ ಹೊಂದಿರುವವನೂ), ಸರ್ವೋತ್ತಮನೂ ಆದ ಶ್ರೀವಿಷ್ಣುವನ್ನು, ಸರ್ವತ್ರ[1] ವೇದೋಕ್ತವಾದ ಮತ್ತು ತಂತ್ರೋಕ್ತವಾದ ಮಂತ್ರಗಳಿಂದ ಸ್ವಯೋಗ್ಯತಾನುಸಾರ ಉಪಾಸಿಸುತ್ತಾರೆ—ಹೀಗೆಂಬುದು ವೇದಪ್ರಸಿದ್ಧವು (೧೭). ವೇದ, ತಂತ್ರಗಳೆಂಬ ಉಭಯಮಂತ್ರಗಳಿಂದ

[1] ಸರ್ವತ್ರ ಶ್ರೀವಿಷ್ಣುವನ್ನು ಉಪಾಸಿಸುವ ಯೋಗ್ಯತೆಯುಳ್ಳವರು—ವ್ಯಾಪ್ತ್ಯೋಪಾಸಕರಾದ, ಅಪ್ರತೀಕಾಲಂಬನರೆಂದು ಕರೆಯಲ್ಪಡುವ ದೇವತೆಗಳು; ದೇವಾನ್ಯರು (ಅವರಕಿಂತ ತಾರತಮ್ಯದಲ್ಲಿ ಕೆಳಗಿರುವವರು, ಪ್ರತೀಕಾಲಂಬನರು—ವಿವಿಧ ಪ್ರತಿಮೆಗಳಲ್ಲಿ ಶ್ರೀಹರಿಯನ್ನು ಉಪಾಸಿಸುವವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನೇನ–ಈ (ಪೂರ್ವೋಕ್ತ), ನ್ಯಾಯೇನ–ನಿಯಮಾನುಸಾರವಾಗಿ, ತೇ–ಆ ದೇವತೆಗಳು, ಯಜ್ಞೇಷು–ಯಜ್ಞಗಳಲ್ಲಿ (ತಾವು ಮಾಡುವ ನನ್ನ ವಿವಿಧ ಪೂಜಾರೂಪ ಕರ್ಮಗಳಲ್ಲಿ), ಸರ್ವವೇದಸ್ವರೂಪಿಣಂ– ಸಕಲ ವೇದ ಗಳಿಂದ ಪ್ರತಿಪಾದ್ಯವಾದ ಸ್ವರೂಪವುಳ್ಳ, ಮಾಂ ಏವ–ನನ್ನನ್ನೇ, ಭಜಂತಿ ಹಿ–ಸೇವಿಸುವರೆಂಬುದು ನಿಶ್ಚಯ.

ಇಂದ್ರಿಯೇಷು ಚ ಸರ್ವೇಷು ತೇಷಾಮಹಮವಸ್ಥಿತಃ ।
ಹೃಷೀಕೇಶಸ್ತತೋಽಹಂ ವೈ ಖ್ಯಾತೋ ವೇದವಿದಾಂ ಮುಖೇ ॥೧೯॥

ತೇಷಾಂ–ಆ ದೇವತೆಗಳ, ಸರ್ವೇಷು–ಎಲ್ಲ, ಇಂದ್ರಿಯೇಷು ಚ–ಇಂದ್ರಿಯಗಳಲ್ಲಿ ಸಹ, ಅಹಂ–ನಾನು, ಅವಸ್ಥಿತಃ–ಇರುವೆನು ; ತತಃ–ಆದ್ದ ರಿಂದ, ವೇದವಿದಾಂ – ವೇದಜ್ಞಾನಿಗಳ, ಮುಖೇ – ಮುಖದಲ್ಲಿ (ಅವರ ಮಾತುಗಳಲ್ಲಿ—ಉಪದೇಶಗಳಲ್ಲಿ), ಅಹಂ ವೈ–ನಾನೇ, ಹೃಷಿಕೇಶಃ–ಹೃಷೀಕೇಶನು, ಎಂದು, ಖ್ಯಾತಃ–ಪ್ರಸಿದ್ಧನಾಗಿರುವೆನು.

ಯಥಾಯೋಗ್ಯತಯಾಽನ್ಯೇ ಚ ಯಥಾ ಜ್ಞಾನಂ ಚ ತೇಽಖಿಲಾಃ ।
ಆರಾಧಯಂತಿ ತೇ ವೈಮಾಂ ತಂತ್ರೈರ್ನಾನಾಸ್ವರೂಪಿಣಂ ॥ ೨೦ ॥

ಅನ್ಯೇ–ದೇವತೆಗಳಿಂದ ಅನ್ಯರಾದ, ತೇ ಅಖಿಲಾಃ–ಸಮಸ್ತ ಜೀವರು, ಯಥಾಜ್ಞಾನಂ-ತಂತಮ್ಮ ಜ್ಞಾನವಿದ್ದಷ್ಟು, ಯಥಾಯೋಗ್ಯತಯಾ-ತಂತಮ್ಮ

ನನ್ನನ್ನು ಭಜಿಸುವ (ಉಪಾಸಿಸುವ) ದೇವತೆಗಳು, ನಾನಾ ಯಜ್ಞಗಳಲ್ಲಿ, ಸರ್ವವೇದಪ್ರತಿಪಾದ್ಯ ಮಹಿಮೋಪೇತವಾದ ಸ್ವರೂಪವುಳ್ಳ ನನ್ನನ್ನೇ ಸೇವಿಸುತ್ತಾರೆ—ಇದು ನಿಶ್ಚಯ (೧೮). ವೇದವೇತ್ತೃಗಳಾದ ಜ್ಞಾನಿಗಳು ನನ್ನನ್ನು ಹೃಷಿಕೇಶನೆಂದು ಕರೆಯುತ್ತಾರೆ; ('ಹೃಷೀಕ' ಎಂದರೆ ಇಂದ್ರಿಯ), ಆ ಎಲ್ಲ ದೇವತೆಗಳ ಎಲ್ಲ ಇಂದ್ರಿಯಗಳಲ್ಲಿ ನಾನೇ ಇದ್ದುದರಿಂದ (ಇದ್ದು ಅವುಗಳಿಂದ ಎಲ್ಲ ವ್ಯಾಪಾರಗಳನ್ನು ಮಾಡಿಸುವ ಈಶ–ನಿಯಾಮಕನಾದ್ದ ರಿಂದ), ಹೃಷೀಕೇಶ ಎಂಬುದು ನನ್ನ ಅನ್ವರ್ಥನಾಮವು (೧೯). ಸರ್ವವರ್ಣಾ ಶ್ರಮಾಚಾರಗಳನ್ನು ಅನುಷ್ಠಾನಮಾಡುವುದರಲ್ಲಿ ಅಧಿಕಾರಿಗಳಾದ ದೇವತೆ ಗಳನ್ನುಳಿದು, ಅನ್ಯರೆಲ್ಲರೂ, ತಮ್ಮ ಜ್ಞಾನವಿದ್ದಷ್ಟು, ತಮ್ಮ ಸ್ವರೂಪ ಯೋಗ್ಯತಾನುಗುಣವಾಗಿ ತಂತ್ರಗಳಿಂದ, ಬಹುರೂಪಿಯಾದ ನನ್ನನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವರೂಪಯೋಗ್ಯತೆಯನ್ನನುಸರಿಸಿ, ನಾನಾಸ್ವರೂಪಿಣಂ–ಬಹುರೂಪನಾದ, ಮಾಂ–ನನ್ನನ್ನು, ತಂತ್ರೈಃ–ತಂತ್ರಗಳಿಂದ, ಆರಾಧಯಂತಿ ವೈ–ಆರಾಧಿಸುತ್ತಾರೆ, ಇದು ಯೋಗ್ಯವೇ ಆಗಿದೆ.

ಗಂಧರ್ವಾ ಋಷಯಃ ಸಿದ್ಧಾಃ ಪಿಶಾಚಾ ಗುಹ್ಯಕಾದಯಃ ।
ತತೋಽಧಮಾ ಮನುಷ್ಯಾಸ್ತು ವೇದತಂತ್ರಾಧಿಕಾರಿಣಃ ॥ ೨೦ ॥

ಗಂಧರ್ವಾಃ–ಗಂಧರ್ವರು, ಋಷಯಃ–ಋಷಿಗಳು, ಸಿದ್ಧಾಃ–ಸಿದ್ಧರು, ಪಿಶಾಚಾಃ–ಪಿಶಾಚಿಗಳು, ಗುಹ್ಯಕಾದಯಃ–ಗುಹ್ಯಕರೇ ಮೊದಲಾದವರು, ತತಃ – ಇವರೆಲ್ಲರಗಿಂತ, ಅಧಮಾಃ – ನೀಚರಾದ (ಕೆಳಗಿನವರಾದ), ಮನುಷ್ಯಾಃ–ಮನುಷ್ಯರು, ತು–ಸಹ, ವೇದತಂತ್ರಾಧಿಕಾರಿಣಃ–ವೇದಗಳು ಮತ್ತು ತಂತ್ರಗಳಲ್ಲಿ (ಉಭಯಕ್ಕೂ) (ಪ್ರತ್ಯೇಕ) ಅಧಿಕಾರಿಗಳು (ಇರುತ್ತಾರೆ). (ಇದರ ವಿವರಗಳು ಮುಂದೆ ಪ್ರಸಕ್ತವಾಗಿವೆ).

ತತ್ರಾಪಿ ಬ್ರಾಹ್ಮಣಾಃ ಶ್ರೇಷ್ಠಾಃ ಕ್ಷತ್ರಿಯಾಶ್ಚ ತತೋಽಧಮಾಃ ।
ವೈಶ್ಯಾಶ್ಚೈವಾನುಲೋಮಾಶ್ಚ ಕೇಚಿದ್ವೇದಾಧಿಕಾರಿಣಃ ॥ ೨೧ ॥

ತತ್ರಾಪಿ – ಮನುಷ್ಯರಲ್ಲಿ ಸಹ (ಮನುಷ್ಯದೇಹಗಳಲ್ಲಿರುವ ಇವರಲ್ಲಿಯಾದರೂ), ಬ್ರಾಹ್ಮಣಾಃ–ಬ್ರಾಹ್ಮಣರು, ಶ್ರೇಷ್ಠಾಃ–ಶ್ರೇಷ್ಠರು; ತತಃ–

(ತಾವು ಮೆಚ್ಚುವ ರೂಪಗಳನ್ನು), ಆರಾಧಿಸುತ್ತಾರೆ (೨೦). ಗಂಧರ್ವ, ಋಷಿ, ಸಿದ್ಧ, ಪಿಶಾಚ, ಗುಹ್ಯಕಾದಿಗಳು[1] ಮತ್ತು ಅವರಗಿಂತ ಕೆಳಗಿನವರಾದ ಮನುಷ್ಯ ಮೊದಲಾದ ಅಸಂಖ್ಯಜೀವರಲ್ಲಿ ಸಹ, ವೇದಗಳು ಮತ್ತು ತಂತ್ರಗಳೆಂಬ ಉಭಯಕ್ಕೂ ಪ್ರಪ್ರತ್ಯೇಕ ಅಧಿಕಾರಿಗಳಿರುವರು (೨೧). ಈ ವಿವಿಧ ಅಧಿಕಾರಿಗಳಲ್ಲಿ, ತತ್ರಾಪಿ ಮನುಷ್ಯರಲ್ಲಿ ಬ್ರಾಹ್ಮಣರು, ಶ್ರೇಷ್ಠರು; ಕ್ಷತ್ರಿಯರು ಅವರಗಿಂತ ಕೆಳಗಿನವರು; ಈ ಉಭಯರು ಮತ್ತು ವೈಶ್ಯರು ಸಹ ವೇದಾಧಿಕಾರಿಗಳು; ಮತ್ತು ಕೆಲವು ಅನುಲೋಮ ಜಾತಿಯವರೂ ಸಹ

[1] ಪಿಶಾಚ ಗುಹ್ಯಕಾದಿ ದೇಹಗಳು ಪೃಥಿವ್ಯಾದಿ ಪಂಚಭೂತಗಳಲ್ಲಿ, ವಾಯು ಪ್ರಚುರವಾದ ಭೂತಗಳಿಂದ ನಿರ್ಮಿತ ದೇಹಗಳು; ಕರ್ಮಾನುಸಾರವಾಗಿ ಮುಕ್ತಿಯೋಗ್ಯರಾದ ಸಾತ್ವಿಕ ಸ್ವರೂಪದ ಜೀವರೂ ಈ ದೇಹಗಳಲ್ಲಿ ಬರುತ್ತಾರೆ (ಹುಟ್ಟಿಸಲ್ಪಡುತ್ತಾರೆ). ಹೀಗಿದ್ದರೂ, ಸರ್ವ ಜೀವರಿಗೆ ಮನುಷ್ಯದೇಹವೇ ವಿಶೇಷವಾಗಿ ಸ್ವಗತಿಸಾಧಕವೆಂದು ಹೇಳಲಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವರಿಗಿಂತ, ಕ್ಷತ್ರಿಯಾಃ ಚ–ಕ್ಷತ್ರಿಯರಾದರೂ, ಅಧಮಾಃ–ಅಧಮರು; ವೈಶ್ಯಾಃ–ವೈಶ್ಯರು, ಚ–ಮತ್ತು (ಈ ಮೂರುವರ್ಣದವರೊಂದಿಗೆ, ಕೇಚಿತ್–ಕೆಲವು, ಅನುಲೋಮಾಃ–ಅನುಲೋಮಜಾತಿಯವರು, ವೇದಾಧಿಕಾರಿಣಃ–ವೇದಗಳಲ್ಲಿ ಅಧಿಕಾರಿಗಳಾಗಿರುತ್ತಾರೆ, (ವೇದಾಧ್ಯಯನಾದಿಗಳಲ್ಲಿಯೂ ವೇದೋಕ್ತಕರ್ಮಾನುಷ್ಠಾನದಲ್ಲಿಯೂ ಅಧಿಕಾರಿಗಳು).

ಸ್ತ್ರೀಶೂದ್ರಪ್ರತಿಲೋಮಾದ್ಯಾ ತಂತ್ರಮಾತ್ರಾಧಿಕಾರಿಣಃ ।
ನ ತೇಷಾಂ ವೈದಿಕೇ ಮಾರ್ಗೇ ಪ್ರವೇಶೋ ವಿಹಿತೋದಿತಃ ॥ ೨೩ ॥

ಸ್ತ್ರೀ ಶೂದ್ರ ಪ್ರತಿಲೋಮಾದ್ಯಾಃ – ಸ್ತ್ರೀಯರು, ಶೂದ್ರರು, ಪ್ರತಿಲೋಮಜರೇ ಮೊದಲಾದವರು, ತಂತ್ರಮಾತ್ರಾಧಿಕಾರಿಣಃ–ತಂತ್ರಗಳಲ್ಲಿ ಮಾತ್ರ ಅಧಿಕಾರವುಳ್ಳವರಾಗಿದ್ದಾರೆ; ತೇ ಷಾಂ – ಅವರಿಗೆ, ವೈದಿಕೇ

ವೇದಾಧಿಕಾರಿಗಳಾಗಿದ್ದಾರೆ[1] (೨೨). ಸ್ತ್ರೀಯರು, ಶೂದ್ರರು ಮತ್ತು ಪ್ರತಿಲೋಮ ಜಾತಿಯವರೇ ಮೊದಲಾದ ಅನ್ಯರು, ತಂತ್ರಗಳಲ್ಲಿ ಮಾತ್ರ ಅಧಿಕಾರಿಗಳು; ಇವರಿಗೆ ವೈದಿಕಮಾರ್ಗದಲ್ಲಿ ಪ್ರವೇಶವುಂಟೆಂದು ಶ್ರುತಿಗಳಲ್ಲಿ ಹೇಳಲಾಗಿರುವುದಿಲ್ಲ[2] (೨೩). ಮನುಷ್ಯರಲ್ಲಿ (ಜೀವರಲ್ಲಿ) ಸಾತ್ವಿಕರು,

---

[1] ಋಷ್ಯಾದಿ ಶಬ್ದಗಳು ನಾನಾ ಯೋನಿಗಳ ನಾಮಗಳಾಗಿರುವಂತೆ, ಜೀವ ಸ್ವರೂಪವಾಚಕವೂ ಆಗಿವೆ. ಸ್ವರೂಪದಿಂದಲೇ, ಋಷಿ ಮನುಷ್ಯಾದಿ ಜೀವಭೇದಗಳೂ ಇವೆ. ಇಲ್ಲಿ ಪ್ರಸಕ್ತವಾದ ಅಧಿಕಾರ ನಿರೂಪಣೆಯು ಮುಖ್ಯವಾಗಿ ಜೀವ ಸ್ವರೂಪಗಳಿಗೆ ಅನ್ವಯಿಸುತ್ತವೆಯಾದರೂ, ತನ್ನಾಮಕ ಪ್ರಾಕೃತದೇಹಗಳಲ್ಲಿರುವ ಜೀವರಿಗೂ, ವಿಶೇಷವಾಗಿ ಮನುಷ್ಯದೇಹಗಳಲ್ಲಿರುವವರಿಗೂ ಅನ್ವಯಿಸುತ್ತದೆಂದು ತಿಳಿಯಬೇಕು. ಅನುಲೋಮಾದಿ ಜಾತಿವಿವೇಕವು ಮುಂದಿನ ಅಧ್ಯಾಯಗಳಲ್ಲಿ ಪ್ರಸಕ್ತವಾಗಲಿದೆ. ಉತ್ತಮವರ್ಣದ ಪುರುಷ ಮತ್ತು ಅಧಮವರ್ಣದ ಸ್ತ್ರೀ, ಇವರ ಸಂಗದಿಂದ ಜನಿಸುವವರು ಅನುಲೋಮಜರೆನಿಸುತ್ತಾರೆ.

[2] ಉತ್ತಮಸ್ತ್ರೀಯರಿಗೆ, ಎಂದರೆ ದೇವತಾಸ್ತ್ರೀಯರಿಗೆ ಮತ್ತು ಕೆಲವು ಋಷಿ ಪತ್ನಿಯರಿಗೆ ವೇದಾಧಿಕಾರವುಂಟೆಂದು ಅನ್ಯಪ್ರಮಾಣಗಳಿಂದ ಸಿದ್ಧವಾಗುತ್ತದೆ. ಅವರನ್ನುಳಿದು ಇತರ ಸ್ತ್ರೀಯರಿಗೆ ವೇದಾಧಿಕಾರವಿಲ್ಲೆಂದು ತಿಳಿಯಬೇಕು.

ಪ್ರತಿಲೋಮಜರೆಂದರೆ, ಉತ್ತಮವರ್ಣದ ಸ್ತ್ರೀ ಮತ್ತು ಅಧಮವರ್ಣದ ಪುರುಷ—ಇವರ ಸಂಯೋಗದಿಂದ ಹುಟ್ಟಿದವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾರ್ಗೇ–ವೇದಮಾರ್ಗದಲ್ಲಿ, ಪ್ರವೇಶಃ–ಪ್ರವೇಶವು, ನ ವಿಹಿತೋದಿತಃ–ವಿಹಿತವೆಂದು ಹೇಳಲ್ಪಟ್ಟಿಲ್ಲ (ವೇದಗಳಲ್ಲಿ ಹೇಳಲಾಗಿಲ್ಲ).

ಸಾತ್ವಿಕಾ ರಾಜಸಾಶ್ಚೈವ ತಾಮಸಾಶ್ಚ ತಥಾಪರೇ ।
ಮನುಷ್ಯೇಷು ಹಿ ವಿದ್ಯಂತೇ ತತ್ರ ಯೇ ಸಾತ್ವಿಕಾ ನರಾಃ ॥ ೨೪ ॥
ಬ್ರಾಹ್ಮಣಾದ್ಯಾಶ್ಚ ಸರ್ವೇಽಪಿ ಸಂಸಾರಾದ್ಯೇ ಮುಮುಕ್ಷವಃ ।
ತೇ ತು ತಂತ್ರಂ ಪಂಚರಾತ್ರಮಾಶ್ರಯೇಯುರ್ನಚೇತರತ್ ॥ ೨೫ ॥

ಮನುಷ್ಯೇಷು–ಮನುಷ್ಯರಲ್ಲಿ, ಸಾತ್ವಿಕಾಃ–ಸಾತ್ವಿಕರೂ, ರಾಜಸಾಃ ಚೈವ–ರಾಜಸರೂ, ತಥಾ–ಹಾಗೂ, ಅಪರೇ–ಅನ್ಯರಾದ, ತಾಮಸಾಃ–ತಾಮಸರೂ, ವಿದ್ಯಂತೇಹಿ – ಇರುವರಷ್ಟೆ ; (ತ್ರಿವಿಧರಾದ, ಕ್ರಮವಾಗಿ ಮುಕ್ತಿಯೋಗ್ಯರೂ, ಮಿಶ್ರರೂ [ನಿತ್ಯಸಂಸಾರಿಗಳೂ] ತಮೋಯೋಗ್ಯರೂ ಆದ ಜೀವರು ಸಾತ್ವಿಕಾದಿ ನಾಮಗಳಿಂದ ಕರೆಯಲ್ಪಡುತ್ತಾರೆ) ; ತತ್ರ–ಈ ತ್ರಿವಿಧ ಜೀವರ ಮಧ್ಯದಲ್ಲಿ, ಯೇ ಸಾತ್ವಿಕಾಃ ನರಾಃ – ಸಾತ್ವಿಕರಾದ ಮನುಷ್ಯರು, ಬ್ರಾಹ್ಮಣಾದ್ಯಾಃ ಚ – ಬ್ರಾಹ್ಮಣಾದಿ ವರ್ಣಗಳಲ್ಲಿರುವವರು, ಸಂಸಾರಾತ್–ಸಂಸಾರದಿಂದ, ಮುಮುಕ್ಷವಃ–ಮುಕ್ತರಾಗಬೇಕೆಂಬ ಇಚ್ಛೆಯುಳ್ಳವರಾಗಿ, ಪಂಚರಾತ್ರಂ ತಂತ್ರಂ–ಪಂಚರಾತ್ರ ಆಗಮವನ್ನು, ತೇ–ಅವರು (ಮುಮುಕ್ಷುಗಳು), ಆಶ್ರಯೇಯುಃ–ಆಶ್ರಯಿಸುತ್ತಾರೆ ; ಇತರತ್ ನ ಚ – ಇತರ ಪಾಶುಪತಾದಿ (ಈ ಮೊದಲು ಹೇಳಲಾದ) ಆಗಮಗಳನ್ನು ಆಶ್ರಯಿಸುವುದೇ ಇಲ್ಲ.

ರಾಜಸರು, ತಾಮಸರು ಎಂದು ಮೂರು ವಿಧವಿದೆ ; ಬ್ರಾಹ್ಮಣಾದಿ[1] ವರ್ಣಗಳಲ್ಲಿ ಜನಿಸಿರುವ ಸಾತ್ವಿಕಜೀವರು, ಮುಮುಕ್ಷುಗಳಾಗಿ (ಮೋಕ್ಷಾಪೇಕ್ಷೆಯುಳ್ಳವರಾಗಿ), ಪಂಚರಾತ್ರಾಗಮವನ್ನು ಆಶ್ರಯಿಸುತ್ತಾರೆ—ಇತರ ಪಾಶು

---

[1] ಎಲ್ಲ ಜೀವರ ಸಾಧನೆಗಳು ಸಾಮಾನ್ಯವಾಗಿ ಮನುಷ್ಯದೇಹದಿಂದಲೇ ನಡೆಯುತ್ತವೆ. ಆದಿ ಶಬ್ದದಿಂದ ವೇದಾಧಿಕಾರವುಳ್ಳ ಕ್ಷತ್ರಿಯ ವೈಶ್ಯರು ಮತ್ತು ಇತರ ಅನುಲೋಮಜರು, ಸಹ ವಿವಕ್ಷಿತರು. ಇದರ ವಿವರಗಳು ಮುಂದಿನ ಅಧ್ಯಾಯಗಳಲ್ಲಿ ಪ್ರಸಕ್ತವಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜಸಾ ಮನುಜಾ ಯೇ ತು ವಿದ್ಯೈಶ್ವರ್ಯಧನೇಪ್ಸವಃ ।
ಶಾಕ್ತಗಾಣೇಶಸೌರಾದೀನಾಶ್ರಯೇಯುಸ್ತಥಾಗಮಾನ್ ॥ ೨೬ ॥

ಯೇ–ಯಾವ, ಮನುಜಾಃ ತು–ಮನುಷ್ಯರಾದರೂ, ರಾಜಸಾಃ–ರಾಜಸರೋ, (ಅವರು), ವಿದ್ಯೈಶ್ವರ್ಯಧನೇಪ್ಸವಃ–ವಿದ್ಯೆ, ಐಶ್ವರ್ಯ, ಧನಗಳನ್ನು ಆಶಿಸುವವರಾಗಿ, ಶಾಕ್ತಗಾಣೇಶಸೌರಾದೀನ್–ಶಾಕ್ತ, ಗಾಣೇಶ, ಸೌರ ಮೊದಲಾದ, ಆಗಮಾನ್ – ಆಗಮಗಳನ್ನು, ತಥಾ – ಹಾಗೆಯೇ (ಆ ಫಲಗಳ ಪ್ರಾಪ್ತಿಗಾಗಿಯೇ), ಆಶ್ರಯೇಯುಃ–ಆಶ್ರಯಿಸುತ್ತಾರೆ.

ಪರದಾರಪರದ್ರವ್ಯಪರವಶ್ಯಪರಕ್ಷಯಾಃ ।
ಮಾರಣೋಚ್ಚಾಟನಾದೀನಿ ಕ್ರೂರಕರ್ಮಾಣಿ ಯಾನಿ ತು ॥ ೨೭ ॥
ಸುರಾಮಾಂಸೋಪಹಾರಾದ್ಯೈಃ ಶ್ಮಶಾನನಿಲಯಾದಿಭಿಃ ।
ಸಾಧ್ಯಾನಿ ತಾನಿ ರೋಚಂತೇ ತಾಮಸಾಸ್ತೇ ನರಾ ಮತಾಃ ॥ ೨೮ ॥

ಪರದಾರಪರದ್ರವ್ಯಪರವಶ್ಯಪರಕ್ಷಯಾಃ – ಪರರ ಪತ್ನಿಯರನ್ನೂ (ಪರಸ್ತ್ರೀಯರನ್ನೂ), ಪರದ್ರವ್ಯವನ್ನೂ, ಪರರನ್ನು ಸ್ವವಶಮಾಡಿಕೊಳ್ಳುವುದನ್ನೂ, ಪರರ ನಾಶವನ್ನೂ, ಸಾಧಿಸಲಿಚ್ಛಿಸುವವರು, (ಈ ಉದ್ದೇಶಗಳ ಸಾಧನೆಗಾಗಿ), ಸುರಾಮಾಂಸೋಪಹಾರಾದ್ಯೈಃ–ಸುರೆ, ಮಾಂಸ (ಮದ್ಯ ಮಾಂಸ)ಗಳ ಉಪಹಾರಗಳಿಂದಲೂ, ಶ್ಮಶಾನನಿಲಯಾದಿಭಿಃ–ಶ್ಮಶಾನಸ್ಥಳಾದಿ

ಪತಾದಿ ಆಗಮವನ್ನಲ್ಲ (೨೪–೨೫). ವಿದ್ಯೆ, ಐಶ್ವರ್ಯ, ಧನಾದಿ ಫಲಗಳನ್ನು ಆಶಿಸುವ ರಾಜಸಜೀವರು, ಶಾಕ್ತ, ಗಾಣಾಪತ್ಯ, ಸೌರ ಮೊದಲಾದ ಆಗಮಗಳನ್ನು (ಆಯಾ ಆಗಮೋಕ್ತದೇವತೆಗಳ ಆಹ್ವಾನ ಮತ್ತು ಆರಾಧನೆಗಳಿಗಾಗಿ) ಆಶ್ರಯಿಸುತ್ತಾರೆ (೨೬). ಪರಸ್ತ್ರೀ ಮತ್ತು ಪರದ್ರವ್ಯಗಳನ್ನೂ, ಪರರ ವಶೀಕರಣವನ್ನೂ ಮತ್ತು ಪರರ ನಾಶವನ್ನೂ, ಸಾಧಿಸಲಿಚ್ಛಿಸುವವರು, ಮಾರಣ–ಉಚ್ಚಾಟನ ಮೊದಲಾದ ಉಗ್ರಕರ್ಮಗಳಲ್ಲಿ ತೊಡಗುತ್ತಾರೆ; ಈ ಕರ್ಮಗಳು, ಆ ಫಲಗಳನ್ನು ಕೊಡುವುವೆಂಬ ದೇವತೆಗಳಿಗೆ ಮದ್ಯ ಮಾಂಸಾದಿಗಳ ಉಪಹಾರಗಳನ್ನು ಅರ್ಪಿಸುವುದರಿಂದಲೂ, ಪೂಜಾದಿಗಳಿಗೆ ಶ್ಮಶಾನಾದಿ (ಅಪವಿತ್ರ) ಸ್ಥಾನಗಳನ್ನು ಆರಿಸಿಕೊಳ್ಳುವುದರಿಂದಲೂ, ಸಿದ್ಧಿಸುತ್ತವೆ; ಈ ವಿಧ ಉಗ್ರಕರ್ಮಗಳು ಯಾರಿಗೆ ರುಚಿಸುತ್ತವೆಯೋ, ಅವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಿಂದಲೂ (ಪೂಜಾಸ್ಥಾನಗಳಿಂದಲೂ), ಸಾಧ್ಯಾನಿ - ಸಾಧ್ಯಗಳಾದ, ಮಾರಣೋಚ್ಚಾಟನಾದೀನಿ-ಮಾರಣ (ಸಂಹಾರ) ಉಚ್ಚಾಟನ (ಸ್ಥಾನ ಬಿಟ್ಟು ಓಡಿಸುವುದು) ಮೊದಲಾದ, ಯಾನಿ-ಯಾವ, ಕ್ರೂರಕರ್ಮಾಣಿ ತು-ಕ್ರೂರಕರ್ಮಗಳೋ, ತಾನಿ-ಅವುಗಳನ್ನು, ರೋಚಂತೇ-(ಕೈಗೊಳ್ಳಲು) ಇಚ್ಛಿಸುತ್ತಾರೆ (ಇಂಥ ಉಗ್ರಕರ್ಮಗಳು ಅವರಿಗೆ ರುಚಿಸುತ್ತವೆ); ತೇ-ಈ ಜನರು, ತಾಮಸಾಃ ನರಾಃ - ತಾಮಸ ಮನುಷ್ಯರೆಂದು, ಮತಾಃ-ತಿಳಿಯಲ್ಪಡುತ್ತಾರೆ.

ತೇ ಹಿ ಯಾಮಲವಾಮಾದಿಕಾಪಾಲಾದ್ಯಾಗಮಾನಪಿ ।
ಆಶ್ರಯೇಯುಸ್ತತೋ ಭ್ರಷ್ಟಾಸ್ತತ್ತದ್ದೇಹಾಭಿಮಾನಿನಃ ॥ ೨೯ ॥

ಪಾಪಾಚಾರಾ ಹಿ ಜಾಯಂತೇ ಲಭಂತೇ ಹಿ ಫಲಾನಿ ತೇ ।
ಅಂತೇ ನಿರಯವಾಸಃ ಸ್ಯಾತ್ತೇಷಾಂ ಪಾಪಾತ್ಮನಾಂ ಸದಾ ॥ ೩೦ ॥

ತೇ ಹಿ - ಆ ತಾಮಸ ಮನುಷ್ಯರಾದರೂ, ಯಾಮಲವಾಮಾದಿ - ಯಾಮಲ, ವಾಮ ಮೊದಲಾದ, ಕಾಪಾಲಾದಿ - ಕಾಪಾಲ ಮುಂತಾದ, ಆಗಮಾನ್ ಅಪಿ - ಆಗಮಗಳನ್ನೇ, ಆಶ್ರಯೇಯುಃ - ಆಶ್ರಯಿಸುತ್ತಾರೆ; ತತಃ - ಈ ಆಗಮಗಳ ಆಶ್ರಯದಿಂದ (ತದುಕ್ತಕರ್ಮಗಳನ್ನು ಆಚರಿಸುವುದರಿಂದ), ಭ್ರಷ್ಟಾಃ-ಪತಿತರಾಗಿ, ತತ್ತದ್ದೇಹಾಭಿಮಾನಿನಃ - ಆಯಾದೇಹಗಳಲ್ಲಿ (ಮನುಷ್ಯದೇಹಗಳಲ್ಲಿ) ಅಭಿಮಾನವುಳ್ಳವರಾಗಿ (ಅಹಂಮಮಕಾರಗಳುಳ್ಳವರಾಗಿ), ಪಾಪಾಚಾರಾಃ - ಪಾಪಾಚಾರವುಳ್ಳವರು, ಜಾಯಂತೇ ಹಿ - ತಪ್ಪದೇ ಆಗುತ್ತಾರೆ; ತೇ - ಅವರು, ಫಲಾನಿ - ಆ ಪಾಪಗಳ ಫಲ

ಮನುಷ್ಯರಲ್ಲಿ ತಾಮಸರೆಂದು ಹೇಳಲ್ಪಡುತ್ತಾರೆ (೨೭-೨೮). ಆ ತಾಮಸ ಸ್ವಭಾವದ ಜೀವರು, ಯಾಮಲ, ವಾಮ, ಕಾಪಾಲ ಮೊದಲಾದ ಆಗಮಗಳನ್ನು ಆಶ್ರಯಿಸಿ, ತದುಕ್ತಕರ್ಮಗಳನ್ನು-ವಾಮಾಚಾರಗಳನ್ನು ಆಚರಿಸಿ, ಪತಿತರಾಗುತ್ತಾರೆ; ಸ್ವದೇಹದಲ್ಲಿ ಅಹಂಮಮಕಾರವುಳ್ಳವರಾಗಿ ನಾನಾ ಪಾಪಗಳನ್ನು ಮಾಡಿ ಅವುಗಳ ಫಲವನ್ನೂ ಭೋಗಿಸಿ, ಅಂತ್ಯಕ್ಕೆ, ಪಾಪಸ್ವರೂಪರೇ ಆದ ತಾವು ತಮಗೆ ಯೋಗ್ಯವಾದ ಅಂಧತಮಸ್ಸನ್ನೇ (ನಿತ್ಯ ದುಃಖಾನುಭವದ-ಸುಖಲೇಶವಿಲ್ಲದ ನಿತ್ಯನರಕವನ್ನೇ) ಹೊಂದುತ್ತಾರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳನ್ನೂ, ಲಭಂತೇ ಹಿ – ಹೊಂದುವರೆಂಬುದೂ ನಿಶ್ಚಯವು; ಅಂತೇ–ಮಾನುಷದೇಹವಿಯೋಗಾನಂತರ (ಸಾಧನಪೂರ್ತಿಯನಂತರ) ಪಾಪಾತ್ಮನಾಂ–ಪಾಪಸ್ವರೂಪರೇ ಆದ, ತೇಷಾಂ–ಆ ತಾಮಸಜೀವರಿಗೆ, ಸದಾ–ನಿತ್ಯವೂ, ನಿರಯವಾಸಃ–ನರಕವಾಸವು (ನಿತ್ಯನರಕವೇ–ಅಂಧತಮಃ ಪ್ರಾಪ್ತಿಯೇ), ಸ್ಯಾತ್–ಆಗುತ್ತದೆ (ದೊರೆಯುತ್ತದೆ).

ತತ್ರಾಪಿ ಬ್ರಾಹ್ಮಣಾ ಯೇ ಸ್ಯುಃ ಸಾತ್ವಿಕಾ ವಿಷ್ಣುತತ್ಪರಾಃ ।
ಕ್ಷತ್ರಿಯಾಶ್ಚ ತಥಾ ವೈಶ್ಯಾಃ ಪಂಚರಾತ್ರಂ ಹಿ ತನ್ಮತಂ ॥ ೩೧ ॥

ತತ್ರಾಪಿ–ಈ ತ್ರಿವಿಧ ಜೀವರ ಮಧ್ಯದಲ್ಲಿ, ಯೇ–ಯಾರು, ವಿಷ್ಣು-ತತ್ಪರಾಃ–ವಿಷ್ಣುಭಕ್ತರಾದ (ಶ್ರೀವಿಷ್ಣುವನ್ನೇ ಸರ್ವೋತ್ತಮನೆಂಬ ಜ್ಞಾನವುಳ್ಳವರಾಗಿ ಆಶ್ರಯಿಸಿರುವ), ಸಾತ್ವಿಕಾಃ–ಸಾತ್ವಿಕರು, ಬ್ರಾಹ್ಮಣಾಃ–ಬ್ರಾಹ್ಮಣರು, ಚ–ಮತ್ತು, ಕ್ಷತ್ರಿಯಾಃ–ಕ್ಷತ್ರಿಯರು, ತಥಾ–ಹಾಗೂ, ವೈಶ್ಯಾಃ–ವೈಶ್ಯರು, ಸ್ಯುಃ–ಆಗಿರುವರೋ (ಈ ವರ್ಣಗಳಲ್ಲಿ ಜನಿಸಿದವರೋ), (ಅವರಿಗೆ), ಪಂಚರಾತ್ರಂ–ಪಂಚರಾತ್ರಾಗಮವು, ತನ್ಮತಂ ಹಿ–ಅವರಿಗೆ ಸಮ್ಮತವಾಗಿರುತ್ತದೆ.

ಅನ್ಯೇಷಾಂ ಆಗಮಾನಾಂ ತು ವಕ್ತಾರೋಽನ್ಯೇ ಭವಂತ್ಯಪಿ ।
ಪಾಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾಹಂ ಸ್ವಯಮೇವ ಹಿ ॥ ೩೨ ॥
ಅತೋ ಹಿ ಸರ್ವಶಾಸ್ತ್ರೇಷು ವರಮೇತನ್ನಿಗದ್ಯತೇ ।
ಮನ್ಮುಖಾದೇವ ಸಂಶ್ರುತ್ಯ ನಾರದಾದ್ಯಾ ಮಹರ್ಷಯಃ ॥ ೩೩ ॥

(೨೯–೩೦). ಸ್ವಭಾವದಿಂದಲೇ ವಿಷ್ಣುಭಕ್ತರಾದ ಸಾತ್ವಿಕರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯವರ್ಣದವರಾದರೆ, ಅವರಿಗೆ ಪಂಚರಾತ್ರಾಗಮವೇ ಪರಮ ಸಂಮತವಾಗಿರುತ್ತದೆ (೩೧). ಇತರ ಎಲ್ಲ ಆಗಮಗಳ ವಕ್ತೃಗಳು, (ಕರ್ತೃಗಳು ಮತ್ತು ಉಪದೇಶಕರು), ನನ್ನ ಆಜ್ಞೆಯಂತೆ ರುದ್ರಾದಿ ಇತರ ದೇವತೆಗಳು, ಆಗಿರುತ್ತಾರೆ—ಆದರೆ ಸಮಗ್ರವಾದ ಪಂಚರಾತ್ರಾಗಮದ ವಕ್ತಾರನು ಸ್ವಯಂ ನಾನೇ ಆಗಿದ್ದೇನೆ; ಈ ಕಾರಣದಿಂದಲೇ, ಸಕಲಾಗಮಗಳ ಮಧ್ಯದಲ್ಲಿ ಪಂಚರಾತ್ರವು ಶ್ರೇಷ್ಠವೆಂದು ಜ್ಞಾನಿಗಳು ಹೇಳುವರು; ಇದನ್ನು ನನ್ನ ಮುಖದಿಂದ ನಾರದಾದಿ ಮಹರ್ಷಿಗಳು ಶ್ರವಣಮಾಡಿ, ನನ್ನ ಭಕ್ತರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೋಕೇ ಪ್ರಕಾಶಯಿಷ್ಯಂತಿ ಮದ್ಭಕ್ತೇಷ್ವೇವ ನಾನ್ಯಥಾ ।
ಸನಕಾದ್ಯಾಶ್ಚ ಶೃಣ್ವಂತಿ ನಾರದಾತ್ ಪಾಂಚರಾತ್ರಕಂ ॥ ೩೪ ॥

ಅನ್ಯೇಷಾಂ–ಇತರ ಎಲ್ಲ, ಆಗಮಾನಾಂ–ಆಗಮಗಳ, ವಕ್ತಾರಃ–ವಕ್ತೃಗಳು (ಹೇಳುವವರು–ಪ್ರವರ್ತಕರು), ಅನ್ಯೇ – ಇತರರು (ರುದ್ರಾದಿಗಳು), ಭವಂತಿ ಅಪಿ–(ನನ್ನ ಆಜ್ಞೆಯಿಂದಲೇ) ಆಗುತ್ತಾರೆ; ಕೃತ್ಸ್ನಸ್ಯ–ಪೂರ್ಣವಾದ (ಸಕಲ), ಪಾಂಚರಾತ್ರಸ್ಯ–ಪಂಚರಾತ್ರಾಗಮದ, ವಕ್ತಾ–ವಕ್ತಾರನು (ಪ್ರವರ್ತಕನು–ಉಪದೇಶಕನು), ಸ್ವಯಂ – ಸಾಕ್ಷಾತ್ತಾಗಿ, ಅಹಂ ಏವ – ನಾನೇ ಆಗಿರುವೆನು; ಹಿ – ಇದು ಪ್ರಸಿದ್ಧವು; ಅತಃ ಹಿ–ಆದ್ದರಿಂದಲೇ, ಸರ್ವಶಾಸ್ತ್ರೇಷು–ಸಕಲಶಾಸ್ತ್ರಗಳಲ್ಲಿ (ಆಗಮಗಳಲ್ಲಿ), ಏತತ್–ಈ ಪಂಚರಾತ್ರಾಗಮವು, ಪರಂ–ಶ್ರೇಷ್ಠವೆಂದು, ನಿಗದ್ಯತೇ–(ಜ್ಞಾನಿಗಳಿಂದ) ಹೇಳಲ್ಪಡುತ್ತದೆ; ಮನ್ಮುಖಾದೇವ–ನನ್ನ ಮುಖದಿಂದಲೇ, ನಾರದಾದ್ಯಾಃ–ನಾರದನೇ ಮೊದಲಾದ, ಮಹರ್ಷಯಃ–ಮಹರ್ಷಿಗಳು (ಜ್ಞಾನಿಶ್ರೇಷ್ಠರು), ಸಂಶ್ರುತ್ಯ – ಭಕ್ತಿಪೂರ್ವಕ ಶ್ರವಣಮಾಡಿ (ಅರ್ಥಜ್ಞಾನಪೂರ್ವಕ ಕೇಳಿ ತಿಳಿದು), ಮದ್ಭಕ್ತೇಷು ಏವ–ನನ್ನ ಭಕ್ತರಲ್ಲಿಯೇ (ವಿಷ್ಣುಭಕ್ತರಿಗೆ ಮಾತ್ರ), ಅನ್ಯಥಾ ನ–ಬೇರೆಯವರಿಗೆ ಅಲ್ಲವೇ ಅಲ್ಲ, ಪ್ರಕಾಶಯಿಷ್ಯಂತಿ–(ಪಂಚರಾತ್ರಾಗಮವನ್ನು) ಪ್ರಕಾಶಗೊಳಿಸುತ್ತಾರೆ; ನಾರದಾತ್–ನಾರದನಿಂದ, ಸನಕಾದ್ಯಾಶ್ಚ–ಸನಕಾದಿಗಳು ಸಹ, ಪಾಂಚರಾತ್ರಕಂ–ಪಂಚರಾತ್ರಾಗಮವನ್ನು, ಶೃಣ್ವಂತಿ–ಶ್ರವಣಮಾಡುತ್ತಾರೆ.

ಭವಿಷ್ಯಂತೋಽಪಿ ಮೇ ಭಕ್ತಾಃ ಕರಿಷ್ಯಂತ್ಯೇವಮೇವ ಹಿ ।
ಪ್ರಹ್ಲಾದಧ್ರುವಬಲ್ಯಾದ್ಯಾ ವಸಿಷ್ಠಾದ್ಯಾ ಮಹರ್ಷಯಃ ॥ ೩೫ ॥

ಮಾತ್ರ (ವಿಷ್ಣುಭಕ್ತರಿಗೆ ಮಾತ್ರ) ಪ್ರಕಾಶಪಡಿಸುತ್ತಾರೆ; ನಾರದನಿಂದ ಸನಕಾದಿಗಳು ಸಹ ಪಂಚರಾತ್ರವನ್ನು ಆದರದಿಂದ ಶ್ರವಣಮಾಡುತ್ತಾರೆ (೩೨–೩೪). ಮುಂದೆ ಹುಟ್ಟಲಿರುವ ನನ್ನ ಭಕ್ತರೆಲ್ಲರೂ ಯೋಗ್ಯಗುರುಗಳಿಂದ ಪಂಚರಾತ್ರವನ್ನು ಶ್ರವಣಮಾಡಿ, ಆ ಮಾರ್ಗದಿಂದ ನನ್ನನ್ನು ಆರಾಧಿಸುವರೆಂಬಲ್ಲಿ ಸಂಶಯವಿಲ್ಲ; ಪ್ರಹ್ಲಾದ, ಧ್ರುವ, ಬಲಿ ಮೊದಲಾದವರೂ, ವಸಿಷ್ಠಾದಿ ಮಹರ್ಷಿಗಳೂ, ಸ್ವಾಯಂಭುವಾದಿ ಮನುಗಳೂ ಮತ್ತು ಅವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾಯಂಭುವಾದ್ಯಾ ಮನವೋ ಹ್ಯನ್ಯೇ ತದ್ವಂಶಜಾಸ್ತಥಾ ।
ಮಹರ್ಷಯಸ್ತಥಾ ಪುಣ್ಯಾಃ ಪುಣ್ಯಾ ರಾಜರ್ಷಯಃ ಪರೇ ॥೩೬॥
ವಿಭೀಷಣಾದ್ಯಾಃ ಸರ್ವೇಽಪಿ ಬ್ರಹ್ಮರುದ್ರಾದಿದೇವತಾಃ ।
ಆರಾಧ್ಯ ಪಂಚರಾತ್ರೇಣ ವಿಧಿನಾ ಮಾಂ ಪ್ರಪೇದಿರೇ ॥ ೩೭ ॥

ಭವಿಷ್ಯಂತಃ – ಮುಂದೆ ಬರಲಿರುವ, ಮೇ – ನನ್ನ, ಭಕ್ತಾಃ ಅಪಿ – ಭಕ್ತರೂ ಸಹ, ಏವಮೇವ – ಹೀಗೆಯೇ, ಕರಿಷ್ಯಂತಿ ಹಿ – ಮಾಡುವರೆಂಬಲ್ಲಿ ಸಂದೇಹವಿಲ್ಲ; ಪ್ರಹ್ಲಾದ ಧ್ರುವ ಬಲ್ಯಾದ್ಯಾಃ – ಪ್ರಹ್ಲಾದ, ಧ್ರುವ, ಬಲಿ ಮೊದಲಾದವರು, ವಸಿಷ್ಠಾದ್ಯಾಃ ಮಹರ್ಷಯಃ – ವಸಿಷ್ಠಾದಿಮಹರ್ಷಿಗಳು, ಸ್ವಾಯಂಭುವಾದ್ಯಾಃ – ಸ್ವಾಯಂಭುವನೇ ಮೊದಲಾದ, ಮನವಃ – ಮನ್ವಂತರಾಧಿಪತಿಗಳು, ತಥಾ – ಹಾಗೂ, ತದ್ವಂಶಜಾಃ – ಅವರ (ಆ ಮನುಗಳ)

ವಂಶಜರೂ, ಮತ್ತು ಇತರ ಪುಣ್ಯಶಾಲಿಗಳಾದ ಮಹರ್ಷಿಗಳೂ ಮತ್ತು ರಾಜರ್ಷಿಗಳೂ ವಿಭೀಷಣಾದಿ ಭಕ್ತರೂ, ಅಷ್ಟೇಕೆ! ಬ್ರಹ್ಮರುದ್ರಾದಿದೇವತೆಗಳೂ ಪಂಚರಾತ್ರೋಕ್ತ ವಿಧಾನದಿಂದಲೇ ನನ್ನನ್ನು ಆರಾಧಿಸಿ ನನ್ನನ್ನು ಹೊಂದಿರುವರು [1] (೩೫–೩೭). ಉಪನಯನ ಸಂಸ್ಕಾರವು ದ್ವಿಜರಿಗೆ ವೇದಾಧಿ

[1] ಸೃಷ್ಟಿಗಾಗಿ ಅವಶ್ಯಕವಾದ ಪರಿಪೂರ್ಣ ಸರ್ವಜ್ಞತ್ವವನ್ನೂ ಚಿತ್ತಸ್ವಾಸ್ಥ್ಯವನ್ನೂ ದೊರಕಿಸಲು ಶ್ರೀವಿಷ್ಣುವು ಬ್ರಹ್ಮದೇವನಿಗೆ ಉಪದೇಶ ಮಾಡುತ್ತಿರುವ ಭಾಗದಲ್ಲಿ, ಪ್ರಹ್ಲಾದಾದಿಗಳ, ಮತ್ತು ಬ್ರಹ್ಮರುದ್ರಾದಿಗಳ ಪ್ರಸಕ್ತಿ ಬಂದಿರುವುದನ್ನು ಹಿಂದಿನ ಬ್ರಹ್ಮಕಲ್ಪದ ಸನಾಮಕಭಕ್ತರೂ, ದೇವತೆಗಳೂ ಇಲ್ಲಿ ವಿವಕ್ಷಿತರೆಂದು ತಿಳಿಯಬೇಕು. ಪ್ರತಿಕಲ್ಪದಲ್ಲಿ ಸಮಾನನಾಮವುಳ್ಳ ಬ್ರಹ್ಮಾದಿ ದೇವತೆಗಳು ಇರುವರೆಂಬುದು ಶಾಸ್ತ್ರನಿರ್ಣೀತವಿಷಯವಾಗಿದೆ. ಬ್ರಹ್ಮಸೂತ್ರಗಳ ಅಧ್ಯಾಯ ೧–ಪಾದ ೩–ಅಧಿಕರಣ ೮ರಲ್ಲಿ ‘ ಓಂ ಸಮಾನನಾಮರೂಪತ್ವಾಚ್ಚಾವೃತ್ತಾವಪ್ಯವಿರೋಧೋ ದರ್ಶನಾತ್ ಸ್ಮೃತೇಶ್ಚ ಓಂ’ ಎಂಬ ಸೂತ್ರವು ಈ ಪ್ರಮೇಯವನ್ನು ನಿರ್ಣಯಿಸುತ್ತದೆ. ದೇವತೆಗಳು, ಅಸುರರು ಪ್ರತಿಮನ್ವಂತರದಲ್ಲಿ, ಅವೇ ಇಂದ್ರ ಪ್ರಹ್ಲಾದಾದಿ ನಾಮಗಳುಳ್ಳ ಜೀವರು ಇರುತ್ತಾರೆಂದು ಹೇಳಲಾಗಿದೆ.

‘ದೇವಾಸುರಾದಯಃ ಕ್ಷತ್ತಃ ಕಲ್ಪೇಽಸ್ಮಿನ್ ಯೇ ಪ್ರಕೀರ್ತಿತಾಃ ।
ತ ಏವ ನಾಮರೂಪಾಭ್ಯಾಂ ಆಸನ್ ಮನ್ವಂತರಾಂತರೇ ॥ (ಭಾಗ)

ಏವಂ ಚ ವಿಷ್ಣುಭಕ್ತರೆಲ್ಲರೂ, ಎಲ್ಲ ಕಲ್ಪಗಳಲ್ಲಿ ಪಂಚರಾತ್ರವಿಧಿಗಳಿಂದಲೇ ಶ್ರೀವಿಷ್ಣುವನ್ನು ಆರಾಧಿಸಿ, ಮುಕ್ತರಾಗುವರೆಂದು ಹೇಳಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಂಶದಲ್ಲಿ ಹುಟ್ಟಿದವರಾದ, ಅನ್ಯೇ–ಇತರರೂ, ತಥಾ–ಮತ್ತು, ಪುಣ್ಯಾಃ–ಪುಣ್ಯವಂತರಾದ, ಮಹರ್ಷಯಃ – ಮಹರ್ಷಿಗಳು, ಪರೇ – ಇತರರಾದ, ಪುಣ್ಯಾಃ – ಪುಣ್ಯಶಾಲಿಗಳಾದ, ರಾಜರ್ಷಯಃ – ರಾಜರ್ಷಿಗಳೂ, ವಿಭೀಷಣಾದ್ಯಾಃ – ವಿಭೀಷಣನೇ ಮೊದಲಾದ, ಸರ್ವೇ – ಎಲ್ಲ ಭಕ್ತರೂ, ಬ್ರಹ್ಮರುದ್ರಾದಿದೇವತಾಃ–ಬ್ರಹ್ಮರುದ್ರಾದಿದೇವತೆಗಳೂ, ಪಂಚರಾತ್ರೇಣ–ಪಂಚರಾತ್ರದ (ಪಂಚರಾತ್ರೋಕ್ತವಾದ), ವಿಧಿನಾ – ಮಾರ್ಗದಿಂದ (ವಿಧಿಸಲ್ಪಟ್ಟಂತೆ), ಆರಾಧ್ಯ – ಸೇವಿಸಿ (ಪೂಜಿಸಿ); ಮಾಂ – ನನ್ನನ್ನು, ಪ್ರಪೇದಿರೇ–ಹೊಂದಿದರು.

ಉಪನೀತಾ ದ್ವಿಜಾಃ ಸರ್ವೇ ವೇದೇಷ್ವಧಿಕೃತಾ ಮತಾಃ ।
ತಂತ್ರೇಷು ದೀಕ್ಷಿತಾ ಏವ ಪ್ರೋಚ್ಯಂತೇ ಹ್ಯಧಿಕಾರಿಣಃ ॥ ೩೮ ॥

ಉಪನೀತಾಃ–ಉಪನಯನ ಸಂಸ್ಕಾರವನ್ನು ಹೊಂದಿದ, ಸರ್ವೇ–ಎಲ್ಲ, ದ್ವಿಜಾಃ–ದ್ವಿಜರೂ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೂ), ವೇದೇಷು – ವೇದಗಳಲ್ಲಿ (ಅಧ್ಯಯನ–ವೇದೋಕ್ತ ಕರ್ಮಾನುಷ್ಠಾನಗಳಲ್ಲಿ), ಅಧಿಕೃತಾಃ–ಅಧಿಕಾರವುಳ್ಳವರೆಂದು, ಮತಾಃ–ಸಂಮತರಾಗಿದ್ದಾರೆ (ಹೇಳಲ್ಪಟ್ಟದ್ದಾರೆ–ಗ್ರಹಿಸಲ್ಪಟ್ಟದ್ದಾರೆ); ತಂತ್ರೇಷು–ತಂತ್ರಗಳಲ್ಲಿ (ಪಂಚರಾತ್ರಾದಿ ಸ್ಮೃತ್ಯುಕ್ತ ಪೂಜಾದಿಗಳಲ್ಲಿ), ದೀಕ್ಷಿತಾಃ ಏವ – ದೀಕ್ಷೆಯನ್ನು ಹೊಂದಿರುವವರು ಮಾತ್ರವೇ, ಅಧಿಕಾರಿಣಃ – ಅಧಿಕಾರಿಗಳೆಂದು, ಪ್ರೋಚ್ಯಂತೇ ಹಿ–ಹೇಳಲ್ಪಡುವರಷ್ಟೆ.

ದೀಕ್ಷಾ ಹಿ ದ್ವಿವಿಧಾ ಪ್ರೋಕ್ತಾ ಬಾಹ್ಯಾಭ್ಯಂತರಭೇದತಃ ।
ಜ್ಞಾನಿನಾಮುಭಯಂ ತತ್ರ ಬಾಹ್ಯೋಽನ್ಯಾಜ್ಞಾನಿನಾಂ ಭವೇತ್ ॥

ದೀಕ್ಷಾ ಹಿ – ದೀಕ್ಷೆಯೆಂಬುದಾದರೋ, ಬಾಹ್ಯಾಭ್ಯಂತರಭೇದತಃ – 'ಬಾಹ್ಯ' ಮತ್ತು 'ಅಂತರ'ಗಳೆಂಬ ಭೇದದಿಂದ, ದ್ವಿವಿಧಾ – ಎರಡು

ಕಾರವನ್ನು ದೊರಕಿಸುತ್ತದೆ; ಆದರೆ ತಂತ್ರೋಕ್ತ ಪೂಜಾದಿ ಕರ್ಮಾನುಷ್ಠಾನಗಳ ವಿಷಯದಲ್ಲಿ ವಿಧಿಪೂರ್ವಕ ದೀಕ್ಷೆಯನ್ನು ಪಡೆದವರು ಮಾತ್ರ ಅಧಿಕಾರಿಗಳಾಗುತ್ತಾರೆ (೩೮). ಬಾಹ್ಯ ಮತ್ತು ಅಂತರವೆಂದು ದೀಕ್ಷೆಯು ಎರಡು ವಿಧವಾಗಿರುತ್ತದೆ; ಅದರಲ್ಲಿ ಜ್ಞಾನಿಗಳಿಗೆ ಎರಡೂ ದೀಕ್ಷೆಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾರವೆಂದು, ಪ್ರೋಕ್ತಾ – ಹೇಳಲಾಗಿದೆ; ತತ್ರ–ದ್ವಿವಿಧ ದೀಕ್ಷೆಗಳಲ್ಲಿ, ಜ್ಞಾನಿನಾಂ–ಜ್ಞಾನಿಗಳಿಗೆ, ಉಭಯಂ–ಎರಡೂ ದೀಕ್ಷೆಗಳೂ, ವಾ– ಮತ್ತು, ಬಾಹ್ಯಃ–ಬಾಹ್ಯಮಾತ್ರವು, ಅಜ್ಞಾನಿನಾಂ-ಅಜ್ಞಾನಿಗಳಿಗೂ, ಭವೇತ್– ಉಂಟು (ಅನ್ವಯಿಸುತ್ತದೆ).

ಅಯಂ ಸರ್ವೇಷ್ಟದಾತಾ ಮೇ ಸರ್ವಾನಿಷ್ಟನಿವಾರಕಃ ।
ಸರ್ವೋತ್ಕೃಷ್ಟೋಯಮೇವೈಕಸ್ತದೀಯೋಹಂ ಸ ಮೇ ಪತಿಃ ॥೪೦॥

ಇತಿಜ್ಞಾನಂ ನಿಶ್ಚಿತಂ ಯತ್ ಸಾ ದೀಕ್ಷಾಭ್ಯಂತರಾ ಮತಾ ।
ನಾಮಚಿಹ್ನಾದಿನಾ ದೇಹೇ ವಹ್ನಿನಾ ವಾ ಮೃದಾಂಕನಂ ॥ ೪೧ ॥

ಸಾ ಬಾಹ್ಯಾ ಪ್ರೋಚ್ಯತೇ ದೀಕ್ಷಾ ಹ್ಯಜ್ಞಾನಾಂ ಜ್ಞಾನಿನಾಮಪಿ ।
ಶಿಶವಃ ಪಶವೋನ್ನಾನಿ ಪಾತ್ರಾಣ್ಯಾಭರಣಾನಿ ಚ ॥ ೪೨ ॥

ರಥಧ್ವಜಪತಾಕಾದಿ ಸರ್ವಮಜ್ಞಾನಮುಚ್ಯತೇ ।
ಏತೇಷಾಂ ಹಿ ಮದೀಯತ್ವಜ್ಞಾಪನಾಯ ಲಿಖೇತ್ಸ್ವಯಮ್ ॥೪೩॥

ಅವಶ್ಯಕವು; ಅಜ್ಞಾನಿಗಳಿಗೆ ಬಾಹ್ಯಮಾತ್ರವೆಂದೂ ಹೇಳಲಾಗಿದೆ (೩೯). ಶ್ರೀವಿಷ್ಣುವೇ ನನ್ನ ಸರ್ವಾಭೀಷ್ಟಗಳನ್ನು ಕೊಡುವವನು—ಆತನೇ ನನ್ನ ಸರ್ವ ಅನಿಷ್ಟಗಳನ್ನು ಪರಿಹರಿಸುವನು; ಸರ್ವೋತ್ತಮನಾದವನು ಆತನೊಬ್ಬನೇ—ಆತನಿಗೆ ಸಮರೂ ಅಧಿಕರೂ ಯಾರೂ ಯಾವ ಕಾಲದಲ್ಲಿಯೂ ಇಲ್ಲವೇ ಇಲ್ಲ; ನಾನು ಆತನ ಪರಿವಾರದಲ್ಲಿರುವ ಆತನ ನಿತ್ಯಸೇವಕನು; ಆತನೇ ನನ್ನ ಸ್ವಾಮಿಯು; ಎಂಬ ನಿಶ್ಚಯಜ್ಞಾನವೇ, 'ಅಂತರದೀಕ್ಷೆ' ಎನಿಸುತ್ತದೆ.[1] ಶ್ರೀ ವಿಷ್ಣುನಾಮಗಳನ್ನು ಮತ್ತು ಆತನ ಚಕ್ರ ಮೊದಲಾದ ಚಿಹ್ನೆಗಳನ್ನು, ತಪ್ತಮುದ್ರೆಗಳಿಂದ, ಮತ್ತು ಗೋಪಿ ಚಂದನಾದಿ ಮೃತ್ತಿಕೆಯಿಂದ, ದೇಹದಲ್ಲಿ ಗುರ್ತಿಸಿಕೊಳ್ಳುವುದು, ಬಾಹ್ಯದೀಕ್ಷೆಯು; ಇದು ಜ್ಞಾನಿಗಳಿಗೂ ಅಜ್ಞಾನಿಗಳಿಗೂ, ಉಭಯರಿಗೂ ಅವಶ್ಯಕವು (ವಿಹಿತವಾಗಿದೆ); 'ಅಜ್ಞಾನ' ಶಬ್ದದಿಂದ, ಶಿಶುಗಳು, ಹಸು ಮೊದಲಾದ

---

1 ಅಂತರದೀಕ್ಷೆಯು ಜ್ಞಾನಿಗಳಿಗೆ (ಪರೋಕ್ಷಜ್ಞಾನಿಗಳಿಗೆ) ಆವಶ್ಯಕ. ಅಜ್ಞಾನಿಗಳಿಗೆ—ಶಾಸ್ತ್ರಾವಲೋಕನಾದಿ ಅಶಕ್ತರಿಗೆ ಬಾಹ್ಯದೀಕ್ಷೆಯು ಪುಣ್ಯ (ಜ್ಞಾನ) ಸಾಧಕವಾಗುತ್ತದೆ. ಈ ಬಾಹ್ಯದೀಕ್ಷೆಯು ಜ್ಞಾನಿಗಳಿಗೂ ಅತ್ಯವಶ್ಯಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇ – ನನಗೆ, ಸರ್ವೇಷ್ಟದಾತಾ – ಸಕಲಾಭೀಷ್ಟಗಳನ್ನು ಕೊಡು ವವನೂ, ಸರ್ವಾನಿಷ್ಟನಿವಾರಕಃ–ಸಕಲ ಅನಿಷ್ಟಗಳನ್ನು ಪರಿಹರಿಸುವವನೂ, ಅಯಂ–ಈತನೇ (ಶ್ರೀವಿಷ್ಣುವೇ); ಅಯಂ ಏವ ಏಕಃ – ಈತನೊಬ್ಬನೇ, ಸರ್ವೋತ್ಕೃಷ್ಟಃ–ಸರ್ವೋತ್ತಮನು, ಅಹಂ–ನಾನು, ತದೀಯಃ–ಆತನವನು (ಅವನ ಭೃತ್ಯನು); ಸಃ–ಆತನೇ, ಮೇಪತಿಃ–ನನ್ನ ಒಡೆಯನು; ಇತಿ ಜ್ಞಾನಂ–ಹೀಗೆಂಬ ಜ್ಞಾನವು, ಯತ್ ನಿಶ್ಚಿತಂ–ನಿಶ್ಚಿತವಾದರೆ, ಸಾ ದೀಕ್ಷಾ– ಆ ದೀಕ್ಷೆಯು (ಮನೋನಿಶ್ಚಯವು), ಅಭ್ಯಂತರಾ – ಅಂತರದೀಕ್ಷೆಯೆಂದು, ಮತಾ–ತಿಳಿಯಲಾಗುತ್ತದೆ; ನಾಮ ಚಿಹ್ನಾದಿನಾ–ನಾಮ, ಚಿಹ್ನೆ ಮೊದ ಲಾದ್ದರಿಂದ (ನಾರಾಯಣಾದಿ ನಾಮ, ಚಕ್ರಾದಿ ಚಿಹ್ನೆಗಳಿಂದ), ವಹ್ನಿನಾ– ಅಗ್ನಿಯಿಂದ, ಮೃದಾ ವಾ–ಅಥವಾ (ಮತ್ತು), ಮೃತ್ತಿಕೆಯಿಂದ, ದೇಹೇ– ದೇಹದಲ್ಲಿ, ಅಂಕನಂ–ಗುರ್ತಿಸಿಕೊಳ್ಳುವುದು, ಸಾದೀಕ್ಷಾ–ಆ ದೀಕ್ಷೆಯು, ಬಾಹ್ಯಾ – ಬಾಹ್ಯದೀಕ್ಷೆಯೆಂದು, ಪ್ರೋಚ್ಯತೇ – ಹೇಳಲಾಗುತ್ತದೆ; ಅಜ್ಞಾನಾಂ – ಅಜ್ಞರಿಗೂ, ಜ್ಞಾನಿನಾಂ ಅಪಿ – ಜ್ಞಾನಿಗಳಿಗೂ ಸಹ, (ಸಾ ದೀಕ್ಷಾ ಪ್ರೋಚ್ಯತೇ–ಆ ಬಾಹ್ಯದೀಕ್ಷೆಯು ವಿಹಿತವಾಗಿದೆ). ಶಿಶವಃ– ಮಕ್ಕಳು, ಪಶವಃ–ಪಶುಗಳು, ಅನ್ನಾನಿ–ಧಾನ್ಯಾದಿ ಆಹಾರವಸ್ತುಗಳು, ಪಾತ್ರಾಣಿ–ಪಾತ್ರೆಗಳು, ಚ–ಮತ್ತು, ಆಭರಣಾನಿ–ಆಭರಣಗಳೂ, ರಥ ಧ್ವಜಪತಾಕಾದಿ–ರಥ, ಧ್ವಜ, ಪತಾಕೆಗಳೇ ಮೊದಲಾದ ವಾಹನಪರಿಕರ ಗಳೂ, ಸರ್ವಂ–ಈ ಎಲ್ಲವೂ, ಅಜ್ಞಾನಂ ಉಚ್ಯತೇ – 'ಅಜ್ಞಾನ'ವೆಂದು ಹೇಳಲ್ಪಡುತ್ತದೆ; ಏತೇಷಾಂ–ಇವುಗಳ, ಮದೀಯತ್ವಜ್ಞಾಪನಾಯ–ನನ್ನ ವೆಂಬುವುದರ ಜ್ಞಾಪಕಕ್ಕಾಗಿ (ಈ ಎಲ್ಲವೂ ಶ್ರೀವಿಷ್ಣುವಿನ ಅಧೀನಗಳೇ– ಅವನ ಸ್ವಾಮಿತ್ವಕ್ಕೆ ಒಳಪಟ್ಟವುಗಳೇ ಎಂಬುದರ ಜ್ಞಾಪಕಾರ್ಥವಾಗಿ), ಸ್ವಯಂ–ತಾನೇ (ಇವೆಲ್ಲವುಗಳನ್ನು ಉಪಯೋಗಿಸುವ ವಿಷ್ಣುಭಕ್ತನು), ಲಿಖೇತ್–(ಅವುಗಳಮೇಲೆ, ವಿಷ್ಣುನಾಮ ಅಥವಾ ಆತನ ಚಿಹ್ನೆಗಳನ್ನು) ಚಿತ್ರಿಸಬೇಕು (ಬರೆಯಬೇಕು).

ಪಶುಗಳು, ಧಾನ್ಯಾದಿಗಳು, ಪಾತ್ರೆಗಳು, ಆಭರಣಗಳು, ರಥ ಧ್ವಜ ಪತಾಕಾದಿಗಳೂ, ವಿವಕ್ಷಿತವೆಂದು ತಿಳಿದು, ಅವೆಲ್ಲವೂ ಶ್ರೀವಿಷ್ಣುವಿನ ಸ್ವಾಮ್ಯಕ್ಕೆ ಒಳಪಟ್ಟುವೆಂಬುದರ ಜ್ಞಾಪಕಾರ್ಥವಾಗಿ, ಅವುಗಳ ಮೇಲೆ ಸಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷ್ಣುಭಕ್ತೋ ವಿಶೇಷೇಣ ಬ್ರಾಹ್ಮಣಶ್ಚ ವಿಶೇಷತಃ ।
ಅದೀಕ್ಷಿತಾಯಾಂ ಭಾರ್ಯಾಯಾಂ ದೀಕ್ಷಿತೋಽಜನಯೇತ್ಸುತಂ ॥
ಸ ಹಿ ಜಾರಜವತ್ ಪ್ರೋಕ್ತೋ ದೀಕ್ಷಿತಶ್ಚೇತ್ ವಿಶುಧ್ಯತಿ ।

-ವಿಶೇಷೇಣ–ವಿಶೇಷವಾಗಿ (ಅನ್ಯಜೀವರ ವಿವಕ್ಷೆಯಿಂದ, ಅವಶ್ಯವಾಗಿ), ವಿಷ್ಣುಭಕ್ತಃ–ವಿಷ್ಣುಭಕ್ತನು (ಶ್ರೀವಿಷ್ಣುವಿನಲ್ಲಿ ಭಕ್ತಿಯುಳ್ಳವನು), ಚ–ಅದರಲ್ಲಿಯೂ, ವಿಶೇಷತಃ–(ಅನ್ಯವರ್ಣದವರಿಂದ) ಹೆಚ್ಚಾಗಿ (ಅವಶ್ಯವಾಗಿ), ಬ್ರಾಹ್ಮಣಃ–ಬ್ರಾಹ್ಮಣನೇ, ದೀಕ್ಷಿತಃ–ವಿಷ್ಣುದೀಕ್ಷೆಯನ್ನು ಪಡೆದವನಾಗಿದ್ದು, ಅದೀಕ್ಷಿತಾಯಾಂ–ವಿಷ್ಣುದೀಕ್ಷೆಯನ್ನು ಹೊಂದದಿರುವ, ಭಾರ್ಯಾಯಾಂ–ಹೆಂಡತಿಯಲ್ಲಿ, ಸುತಂ–ಮಗನನ್ನು (ಪುತ್ರಸಂತಾನವನ್ನು), ಜನಯೇತ್–ಹುಟ್ಟಿಸಿದರೆ, ಸಃ–ಆ ಪುತ್ರನು, ಹಿ–ನಿಶ್ಚಯವಾಗಿ, ಜಾರಜವತ್–ಪರಪುರುಷ (ಜಾರ) ನಿಂದ ಹುಟ್ಟಿದವನಂತೆ ಎಂದು, ಪ್ರೋಕ್ತಃ – ಹೇಳಲ್ಪಡುತ್ತಾನೆ; ದೀಕ್ಷಿತಃ ಚೇತ್ – ಆ ಸುತನು (ಪುತ್ರನು) ವಿಷ್ಣುದೀಕ್ಷೆಯನ್ನು ಹೊಂದಿದರೆ ಅಥವಾ ಶೈವವಾವಸ್ಥೆಯಲ್ಲಿಯೇ ಹೊಂದಿಸಲ್ಪಟ್ಟರೆ), ವಿಶುಧ್ಯತಿ – ಶುದ್ಧನಾಗುತ್ತಾನೆ (ಯೋಗ್ಯ ಔರಸಪುತ್ರನೆನಿಸುತ್ತಾನೆ).

ಶ್ರೀವಿಷ್ಣುವಿನ ನಾಮಚಿಹ್ನೆಗಳನ್ನು ಲೇಖಿಸಬೇಕು (೪೦–೪೩). ವಿಷ್ಣುಭಕ್ತರಲ್ಲಿಯೂ ವಿಶೇಷವಾಗಿ, ದೀಕ್ಷಿತನಾದ ಬ್ರಾಹ್ಮಣನು,[1] ವಿಷ್ಣುದೀಕ್ಷಾರಹಿತಳಾದ ಭಾರ್ಯೆಯಲ್ಲಿ, ಪುತ್ರನನ್ನು ಉತ್ಪಾದಿಸಿದರೆ, ಆ ಪುತ್ರನು ಜಾರತ್ವದಿಂದ ಆ ಸ್ತ್ರೀಯು ಪಡೆದ ಪುತ್ರನಂತೆ ಅಪವಿತ್ರದೇಹಿಯಾಗುತ್ತಾನೆ; ಆ ಮಗನು ಯೋಗ್ಯಕಾಲದಲ್ಲಿ ವಿಷ್ಣುದೀಕ್ಷೆಯನ್ನು ಹೊಂದಿದರೆ, ಶುದ್ಧನಾಗಿ ಆ ಮಾತಾಪಿತೃಗಳ ಔರಸಪುತ್ರನಂತೆ ಪವಿತ್ರದೇಹವುಳ್ಳವನೆಂದು ಭಾವಿಸಲ್ಪಡುತ್ತಾನೆ (ಭಾವಿಸತಕ್ಕದ್ದು—ತಿಳಿಯತಕ್ಕದ್ದು) (೪೪). ರಾಜಾಶ್ರಯದಲ್ಲಿರುವ

---

[1] ಇಲ್ಲಿ ಪ್ರಸಕ್ತವಾಗಿರುವ ದೀಕ್ಷೆಯು ಈ ಹಿಂದೆ ಹೇಳಲಾದ ದ್ವಿವಿಧದೀಕ್ಷೆಗಳಲ್ಲಿ ಬಾಹ್ಯದೀಕ್ಷೆಯೆಂದು ತಿಳಿಯಬೇಕು. 'ವಿಷ್ಣುಭಕ್ತ ಮತ್ತು ಬ್ರಾಹ್ಮಣ' ಶಬ್ದಗಳು, ಸ್ವರೂಪವಿವಕ್ಷೆಯಿಂದ ಪ್ರಯೋಗಿಸಲ್ಪಟ್ಟಿಲ್ಲ. ಬ್ರಾಹ್ಮಣವರ್ಣದಲ್ಲಿ ಹುಟ್ಟಿ ಶ್ರೀವಿಷ್ಣುವಿನಲ್ಲಿ ಭಕ್ತಿಯುಳ್ಳವರು ಇಲ್ಲಿ ವಿವಕ್ಷಿತರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಸ್ಕರಾಶ್ಚ ಯಥಾ ಲೋಕೇ ಕಸ್ಯಚಿನ್ನೀಯತೇ ತಥಾ ॥ ೪೫ ॥
ರಾಜಕೀಯಾ ನ ತೈಃ ಸಾಕಂ ವ್ಯವಹಾರಂ ಹಿ ಕುರ್ವತೇ ।
ತಥಾ ದೀಕ್ಷಾವಿಹೀನಾ ಯೇ ನಿರ್ನಾಥಾಸ್ತಸ್ಕರಾ ಇವ ॥ ೪೬ ॥

ಯಥಾ–ಹೇಗೆ, ಲೋಕೇ–ಲೋಕದಲ್ಲಿ, ತಸ್ಕರಾಃ–ಕಳ್ಳರು, ಕಸ್ಯಚಿತ್–ಯಾರೊಬ್ಬನ (ಅನ್ಯರ) ವಸ್ತುವನ್ನು, ನೀಯತೇ–ಒಯ್ಯುವರೋ, ತಥಾ – ಹಾಗೆ (ಕಳ್ಳರೊಂದಿಗೆ ಎಂಬಂತೆ), ತೈಃ ಸಾಕಂ – ಅವರೊಡನೆ, ರಾಜಕೀಯಾಃ–ರಾಜಾನುವರ್ತಿಗಳಾದ ಪ್ರಜೆಗಳು, ವ್ಯವಹಾರಂ – ಯಾವ ವ್ಯವಹಾರವನ್ನೂ, ನ ಕುರ್ವತೇ–ಮಾಡುವುದಿಲ್ಲ (ವಿಷ್ಣುಭಕ್ತರು ಅದೀಕ್ಷಿತರೊಂದಿಗೆ ವ್ಯವಹರಿಸುವುದಿಲ್ಲ); ಯೇ–ಯಾರು, ದೀಕ್ಷಾವಿಹೀನಾಃ–ದೀಕ್ಷಾರಹಿತರೋ, (ಅವರು) ತಸ್ಕರಾಃ ಇವ–ಕಳ್ಳರಂತೆ, ನಿರ್ನಾಥಾಃ–ಅನಾಥರೇಸರಿ, ಸ್ವಾಮಿರಹಿತರು–ರಾಜಾಶ್ರಯವಿಲ್ಲದವರು.

ಯಮದೂತೈರ್ನೀಯಮಾನಾನ್ನಕಶ್ಚಿದ್ವಾರಯೇಚ್ಚ ತಾನ್ ।
ಹನ್ಯಮಾನಾನ್ಯಥಾ ಚೋರಾನ್ನಹಿ ಕಶ್ಚಿನ್ನಿವಾರಯೇತ್ ॥ ೪೭ ॥

ಯಮದೂತೈಃ – ಯಮದೂತರಿಂದ, ನೀಯಮಾನಾನ್–ಕರೆದೊಯ್ಯಲ್ಪಡುವವರನ್ನು, ಕಶ್ಚಿತ್–ಯಾರೊಬ್ಬರೂ, (ಯಥಾ–ಹೇಗೆ) ನ ವಾರಯೇತ್–ಬಿಡಿಸುವುದಿಲ್ಲವೋ; ಯಥಾ–ಹೇಗೆ, ತಾನ್–ಆ, ಹನ್ಯಮಾನಾನ್ – ಹೊಡೆಯಲ್ಪಡುವ (ಶಿಕ್ಷಿಸಲ್ಪಡುವ), ಚೋರಾನ್ –

ಪ್ರಜೆಗಳು (ಸ್ವಾಮಿಭಕ್ತಿಯುಳ್ಳವರು), ರಾಜಾಜ್ಞೆಯನ್ನು ಅತಿಕ್ರಮಿಸಿ ಅನ್ಯರ ವಸ್ತುವನ್ನು ಅಪಹರಿಸುವ ಕಳ್ಳರೊಂದಿಗೆ ಹೇಗೆ ವ್ಯವಹರಿಸುವುದಿಲ್ಲವೋ ಹಾಗೆ ಸ್ವಾಮಿಭಕ್ತರಾದ ವಿಷ್ಣುಭಕ್ತರು, ಕಳ್ಳರಂತಿರುವ ದೀಕ್ಷಾರಹಿತ ವಿಷ್ಣುಭಕ್ತರೊಡನೆ ಯಾವ ವ್ಯವಹಾರವನ್ನೂ ಇಟ್ಟುಕೊಳ್ಳುವುದಿಲ್ಲ (ಇಟ್ಟುಕೊಳ್ಳಕೂಡದು—ಸ್ವಾಮಿಯ ಕೋಪಕ್ಕೆ ಗುರಿಯಾಗುತ್ತಾರೆ) (೪೫–೪೬). ಯಮದೂತರು ಎಳೆದೊಯ್ಯುತ್ತಿರುವ ಪಾಪಿಗಳನ್ನು ಯಾರೂ ಬಿಡಿಸಲೆತ್ನಿಸುವುದಿಲ್ಲ (ತಡೆಯುವುದಿಲ್ಲ); ಹಾಗೆಯೇ ಶಿಕ್ಷಿಸಲ್ಪಡುವ (ದಂಡಿಸಲ್ಪಡುವ) ಕಳ್ಳರನ್ನು ಯಾರೂ ತಡೆಯುವುದಿಲ್ಲ; (ಹೀಗೆಯೇ ವಿಷ್ಣುದೀಕ್ಷೆಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಳ್ಳರನ್ನು, ಕಶ್ಚಿತ್–ಯಾರೊಬ್ಬರೂ, ನ ನಿವಾರಯೇತ್–ಬಿಡಿಸುವುದಿಲ್ಲವೋ (ತಡೆಯುವುದಿಲ್ಲವೋ); (ಹಾಗೆ ವಿಷ್ಣು ದೀಕ್ಷಾರಹಿತರ ಸಹಾಯಕ್ಕೆ ಯಾರೂ ಹೋಗುವುದಿಲ್ಲ).

ಪತ್ಯುಶ್ಚಿಹ್ನಂ ಯಥಾ ನಾರೀ ಕಂಠಸೂತ್ರಂ ಬಿಭರ್ತಿ ಹಿ ।
ಸನಾಥಾ ಸುಭಗಾ ತೇನ ಪೂತಗಾತ್ರಾ ಚ ಜಾಯತೇ ॥ ೪೮ ॥

ತೇನೈವ ಹೀನಾ ವಿಧವಾ ನಿಂದಿತಾಮಂಗಲಾದಿಷು ।
ಅನ್ಯಥಾಚಾಪವಿತ್ರಾಂಗೀ ದೀಕ್ಷಾಹೀನಸ್ತಥಾ ನರಃ ॥ ೪೯ ॥

ಯಥಾ – ಹೇಗೆ, ಪತ್ಯುಃ – ಪತಿಯ, ಚಿಹ್ನಂ ಹಿ – ಗುರುತೇ ಆದ, (ಸಧವಾ ಎಂಬುದನ್ನು ತೋರಿಸುವ), ಕಂಠಸೂತ್ರಂ – ಕಂಠಸೂತ್ರವನ್ನು (ಮಂಗಲಸೂತ್ರವನ್ನು), ನಾರೀ–ಸ್ತ್ರೀಯು, ಬಿಭರ್ತಿ–(ಕಂಠದಲ್ಲಿ) ಧರಿಸುವಳೋ, ತೇನ–ಅದರಿಂದ (ಹಾಗೆ ಧರಿಸುವುದರಿಂದ), ಸುಭಗಾ–ಭಾಗ್ಯಶಾಲಿಯಾದ, ಸನಾಥಾ–ಪತಿಯುಳ್ಳವಳೂ (ಸೌಭಾಗ್ಯವಂತಳೂ), ಚ–ಮತ್ತು, ಪೂತಗಾತ್ರಾ – ಪವಿತ್ರವಾದ ದೇಹವುಳ್ಳವಳೂ, ಜಾಯತೇ–ಆಗುವಳೋ; ಮತ್ತು, ತೇನೈವ–ಆ ಕಂಠಸೂತ್ರದಿಂದ, ಹೀನಾ–ಹೀನಳಾದ (ಇಲ್ಲದವಳಾದ), ವಿಧವಾ–ವಿಧವೆಯು, ಮಂಗಲಾದಿಷು – ಮಂಗಲಕಾರ್ಯಗಳಲ್ಲಿ,

---

ಪಡೆದವರು ಅದೀಕ್ಷಿತರ ಸಹಾಯಕ್ಕೆ ಹೋಗುವದಿಲ್ಲ)[1] (೪೭). ಸ್ತ್ರೀಯು ಕಂಠದಲ್ಲಿ ಮಂಗಲಸೂತ್ರವನ್ನು ಧರಿಸಿದ್ದರೆ, ಸಧವೆಯೆಂದು ಗುರ್ತಿಸಲ್ಪಡುತ್ತಾಳೆ; ಕಂಠಸೂತ್ರದಿಂದ, ಸನಾಥಳೂ ಸೌಭಾಗ್ಯಶಾಲಿನಿಯಾದ ಪವಿತ್ರ ದೇಹವುಳ್ಳವಳೂ ಎನಿಸುತ್ತಾಳೆ; ಅದೇ ಕಂಠಸೂತ್ರವಿಲ್ಲದ ತರುಣ ಸ್ತ್ರೀಯು (ಕಂಠಸೂತ್ರವಿಲ್ಲದವಳು), ವಿಧವೆಯೆನಿಸಿ, ಶುಭಕಾರ್ಯಗಳಲ್ಲಿ ಭಾಗವಹಿಸಲು ಅನರ್ಹಳಾಗಿ, ಬೇರೆ ವಿಧದಿಂದ ಸಹ ಅಪವಿತ್ರದೇಹವುಳ್ಳವಳಾಗುತ್ತಾಳೆ; ಹೀಗೆಯೇ ವಿಷ್ಣುದೀಕ್ಷಾಹೀನನಾದ ಮನುಷ್ಯನು ಶುಭಕರ್ಮಗಳನ್ನು ಆಚರಿಸಲು ಅಯೋಗ್ಯನಾಗುವನು; ಅವನ ದೇಹವನ್ನು ಅಪವಿತ್ರ

[1] ವಿಷ್ಣು ದೀಕ್ಷೆಯನ್ನು ಸ್ವೀಕರಿಸಲು ಅರ್ಹರಾಗಿದ್ದೂ ಸಹ ದೀಕ್ಷೆಯನ್ನು ಪಡೆಯದವರು, ವಿಷ್ಣುವಿನ ಆಜ್ಞೆಯನ್ನು ಮೀರಿದವರೇ ಸರಿ—ವಿಷ್ಣುವಿಮುಖರೊಡನೆ ವಿಷ್ಣುಭಕ್ತರು ಸಹಕರಿಸುವುದು ಅಸಂಭವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಂದಿತಾ – ಅಯೋಗ್ಯ (ಅನರ್ಹ) ಳೆಂದೆನಿಸಿ, ಚ – ಮತ್ತು, ಅನ್ಯಥಾ – ಬೇರೆ ವಿಧದಿಂದ, ಅಪವಿತ್ರಾಂಗೀ – ಅಪವಿತ್ರದೇಹವುಳ್ಳವಳೂ ಆಗುವಳೋ, ತಥಾ–ಹಾಗೆ, ದೀಕ್ಷಾಹೀನಃ–ದೀಕ್ಷಾರಹಿತನಾದ, ನರಃ–ಮನುಷ್ಯನು, (ಶುಭಕಾರ್ಯಗಳಲ್ಲಿ ಅನರ್ಹನೂ, ಅಪವಿತ್ರದೇಹಿಯೂ, ಎಂದೆನಿಸುತ್ತಾನೆ).

ದೀಕ್ಷಿತೋ ಲಭತೇ ಪೂಜಾಂ ಯಮಾದಪಿ ಬಿಭೇತಿ ನ ।
ನೃಪಾಮಾತ್ಯಃ ಕಥಂ ತ್ರಸ್ಯೇದನ್ಯಸ್ಮಾತ್ ನೃಪಬಾಹ್ಯತಃ ॥ ೫೦ ॥

ದೀಕ್ಷಿತಃ–ವಿಷ್ಣುದೀಕ್ಷೆಯನ್ನು ಪಡೆದವನು, ಪೂಜಾಂ–(ವಿಷ್ಣುಭಕ್ತರೆಲ್ಲರಿಂದ) ಪೂಜೆಯನ್ನು (ಸತ್ಕಾರವನ್ನು), ಲಭತೇ–ಹೊಂದುತ್ತಾನೆ; ಯಮಾತ್ ಅಪಿ–ಯಮನದೆಶೆಯಿಂದ ಸಹ, ನ ಬಿಭೇತಿ–ಹೆದರುವುದಿಲ್ಲ; ನೃಪಾಮಾತ್ಯಃ – ರಾಜಸಚಿವನು, ನೃಪಬಾಹ್ಯತಃ – ರಾಜಭಿನ್ನನಾದ, ಅನ್ಯಸ್ಮಾತ್–ಮತ್ತೊಬ್ಬನಿಂದ, ಕಥಂ–ಹೇಗೆ, ತ್ರಸ್ಯೇತ್–ಹೆದರುತ್ತಾನೆ (ಭಯಪಡುವುದೇ ಇಲ್ಲ).

ಸ್ವಸ್ವವರ್ಣಾಶ್ರಮಾಚಾರನಿರತಃ ಸತ್ಯವಾಕ್ ಶುಚಿಃ ।
ಸ ಏವ ಲಭತೇ ಸರ್ವಂ ದೀಕ್ಷಾಗ್ರಹಣಜಂ ಫಲಂ ॥ ೫೧ ॥

(ಯಃ – ಯಾರು), ಸ್ವಸ್ವವರ್ಣಾಶ್ರಮಾಚಾರನಿರತಃ – ತನ್ನ ವರ್ಣ ಮತ್ತು ಆಶ್ರಮಗಳಿಗೆ ಯೋಗ್ಯವಾದ ಕರ್ಮಾನುಷ್ಠಾನದಲ್ಲಿ ನಿರತನಾಗಿರುವನೋ (ಆಸಕ್ತಿಯಿಂದ ಆಚರಿಸುವನೋ), ಸತ್ಯವಾಕ್–ಯಥಾರ್ಥಭಾಷಿಯೂ, ಶುಚಿಃ–(ತ್ರಿಕರಣ) ಶುದ್ಧಿಯುಳ್ಳವನೂ ಆಗಿರುವನೋ, ಸಃ ಏವ–ಆತನೇ, ದೀಕ್ಷಾಗ್ರಹಣಜಂ–ವಿಷ್ಣುದೀಕ್ಷೆಯನ್ನು ಸ್ವೀಕರಿಸುವುದರಿಂದ ಉತ್ಪನ್ನವಾಗುವ ಸರ್ವಂಫಲಂ–ಪೂರ್ಣಫಲವನ್ನು ಲಭತೇ–ಹೊಂದುತ್ತಾನೆ.

ವೆಂದು, ಜ್ಞಾನಿಗಳು ತಿಳಿಯುತ್ತಾರೆ (೪೮–೪೯). ವಿಷ್ಣುದೀಕ್ಷೆಯನ್ನು ಪಡೆದವನು, ಸರ್ವವಿಷ್ಣುಭಕ್ತರಿಂದ ಯೋಗ್ಯಸತ್ಕಾರವನ್ನು ಪಡೆಯುತ್ತಾನೆ; ಆತನು ಯಮನಿಗೂ ಹೆದರುವುದಿಲ್ಲ; ಅಮಾತ್ಯನು ತನ್ನ ರಾಜನನ್ನು ಬಿಟ್ಟು ಅನ್ಯರಿಂದ ಭಯಪಡುವನೇ ? (ಸರ್ವಥಾ ಇಲ್ಲ) (೫೦). ತನ್ನ ವರ್ಣ ಮತ್ತು ಆಶ್ರಮಕ್ಕೆ ಯೋಗ್ಯವಾದ ಕರ್ಮಗಳಲ್ಲಿ ನಿರತನಾಗಿ, ಸತ್ಯಭಾಷಿಯೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷ್ಣುದೀಕ್ಷಾಯುತೋಽಪಿ ಯೋಽಪಿ ವಿಷ್ಣುಭಕ್ತಿವಿವರ್ಜಿತಃ ।
ದೀಕ್ಷಾಫಲಂ ನ ತಸ್ಯಾಸ್ತಿ ದೀಕ್ಷಯಾ ನರಕಂ ವ್ರಜೇತ್ ॥ ೫೨ ॥

ವಿಷ್ಣುದೀಕ್ಷಾಯುತಃ ಅಪಿ – ವಿಷ್ಣುದೀಕ್ಷೆಯುಳ್ಳವನಾದರೂ, ವಿಷ್ಣುಭಕ್ತಿವಿವರ್ಜಿತಃ–ವಿಷ್ಣುಭಕ್ತಿರಹಿತನಾದ, ತಸ್ಯ–(ಆ) ಪುರುಷನಿಗೆ, ದೀಕ್ಷಾಫಲಂ–ದೀಕ್ಷಾಸ್ವೀಕಾರದ ಫಲವು, ನ ಅಸ್ತಿ–ಇರುವುದಿಲ್ಲ (ದೊರೆಯುವುದಿಲ್ಲ) ; (ಕಿಂತು), ದೀಕ್ಷಯಾ–ದೀಕ್ಷೆಯಿಂದ, ನರಕವನ್ನು, ವ್ರಜೇತ್–ಹೊಂದುತ್ತಾನೆ.

ಸರ್ವಾಸಾಮಪಿ ದೀಕ್ಷಾಣಾಂ ವಿಷ್ಣುದೀಕ್ಷಾಧಿಕಾ ಮತಾ ।
ಯತಃ ಸರ್ವೇಶ್ವರೋ ವಿಷ್ಣುರ್ದೇವಾನಾಮಪಿ ದೇವತಾ ॥ ೫೩ ॥

ಸರ್ವಾಸಾಂ ದೀಕ್ಷಾಣಾಂ ಅಪಿ–ವಿವಿಧಗಳಾದ ಎಲ್ಲ ದೀಕ್ಷೆಗಳ ಮಧ್ಯದಲ್ಲಿ, ವಿಷ್ಣುದೀಕ್ಷಾ–ವಿಷ್ಣುದೀಕ್ಷೆಯು, ಅಧಿಕಾ–ಶ್ರೇಷ್ಠವೆಂದು, ಮತಾ–(ಜ್ಞಾನಿಗಳಿಂದ) ತಿಳಿಯಲ್ಪಡುತ್ತದೆ; ಯತಃ–ಏಕೆಂದರೆ, (ಯಾವಕಾರಣದಿಂದ), ವಿಷ್ಣುಃ–ಶ್ರೀವಿಷ್ಣುವೆ, ಸರ್ವೇಶ್ವರಃ–ಸರ್ವರ ಒಡೆಯನು (ಸರ್ವಸ್ವಾಮಿಯು), ಮತ್ತು, ದೇವಾನಾಂ ಅಪಿ – (ಬ್ರಹ್ಮಾದಿ) ದೇವತೆಗಳಿಗೂ ಸಹ, ದೇವತಾ–ದೇವತೆಯು (ಆರಾಧ್ಯದೇವತೆಯಾಗಿರುವನು).

ಶುದ್ಧನೂ[1] ಆಗಿರುವವನು ಮಾತ್ರ, ವಿಷ್ಣುದೀಕ್ಷೆಯಿಂದ ಹುಟ್ಟುವ ಪೂರ್ಣಫಲವನ್ನು ಹೊಂದುತ್ತಾನೆ (೫೧). ವಿಷ್ಣುಭಕ್ತಿರಹಿತನಾದವನು, ವಿಷ್ಣುದೀಕ್ಷೆಯನ್ನು ಸ್ವೀಕರಿಸುವ ಮಾತ್ರದಿಂದ ಯಾವ ಫಲವನ್ನೂ ಹೊಂದುವುದಿಲ್ಲ; ಅಷ್ಟುಮಾತ್ರವಲ್ಲ, ಆ ಕಪಟದೀಕ್ಷೆಯಿಂದ ನರಕವನ್ನೇ ಹೊಂದುತ್ತಾನೆ (೫೨). ಎಲ್ಲ ದೀಕ್ಷೆಗಳಲ್ಲಿ ವಿಷ್ಣುದೀಕ್ಷೆಯು ಶ್ರೇಷ್ಠವು. ಏಕೆಂದರೆ, ಶ್ರೀವಿಷ್ಣುವೇ ಸಕಲ ದೇವತೆಗಳಿಗೆ ಆರಾಧ್ಯದೇವತೆಯು–ಸರ್ವಸ್ವಾಮಿಯು–ಸ್ವತಂತ್ರನಾಗಿ ಸರ್ವನಿಯಾಮಕನು (೫೩). ಶ್ರೀವಿಷ್ಣುಮಹಿಮೆಗಳ (ಆತನ

[1] ಕಾಯೇನ ಮನಸಾ ವಾಚಾ—ಎಂದರೆ, ದೇಹ, ಮನಸ್ಸು, ಮಾತುಗಳಿಂದ ಏಕಪ್ರಕಾರವಾದ, ಶುದ್ಧವಾದ ನಡತೆಯುಳ್ಳವನು, ಶುಚಿಯು. ಈ ಮೂರು ತ್ರಿಕರಣಗಳೆನಿಸುತ್ತವೆ—ಯಾವುದೊಂದು ಕರ್ಮದ ಸಂಘಟನೆಗೆ ಸಾಧನಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ಮಹಿಮ್ನಃ ಪರಂ ಪಾರಂ ವೇತ್ತಾ ಜಾತೋ ನ ಚಾಸ್ತಿ ನ ।
ನ ಭವಿಷ್ಯತಿ ಕಶ್ಚಾಪಿ ಕುತಸ್ತಸ್ಯ ಸಮೋಽಧಿಕಃ ॥ ೫೪ ॥

ಯನ್ಮಹಿಮ್ನಃ–ಯಾವ ಶ್ರೀವಿಷ್ಣುವಿನ ಮಹಿಮೆಯ, ಪರಂ ಪಾರಂ–ಅಂತ್ಯವನ್ನು (ಆ ಕಡೆಯ ತೀರವನ್ನು), ವೇತ್ತಾ–ತಿಳಿದವನು (ಕಂಡವನು), ನ ಜಾತಃ–(ಹಿಂದೆ) ಈವರೆಗೆ ಯಾರೂ ಹುಟ್ಟಲಿಲ್ಲ; ಚ–ಮತ್ತು, ನ ಅಸ್ತಿ–ಈಗ ಇಲ್ಲ; ಕಶ್ಚಾಪಿ – ಯಾರೊಬ್ಬನು—ನ ಭವಿಷ್ಯತಿ (ಮುಂದೆಯೂ ಇರುವುದಿಲ್ಲ—ಶ್ರೀವಿಷ್ಣುವಿನ ಮಹಿಮೆಗಳನ್ನು, ಯಾವುದೊಂದು ಮಹಿಮೆಯನ್ನಾಗಲಿ, ಪೂರ್ಣವಾಗಿ ತಿಳಿದವನು ತ್ರಿಕಾಲಗಳಲ್ಲಿ ಸಹ ಯಾರೊಬ್ಬನೂ ಇಲ್ಲವೇ ಇಲ್ಲ; (ಹೀಗಿರುವಾಗ) ತಸ್ಯ–ಆತನಿಗೆ (ಶ್ರೀವಿಷ್ಣುವಿನ), ಸಮಃ–ಸಮನೂ, ಅಧಿಕಃ–ಅಧಿಕನೂ, ಕುತಃ–ಎಲ್ಲಿಂದ ಬರಬೇಕು! (ಶ್ರೀವಿಷ್ಣುವು ಸಮಾಧಿಕರಹಿತನಾದ ಸರ್ವೋತ್ತಮನು).

ಯಸ್ಯ ಸ್ಯಾದ್ವೈಷ್ಣವೀ ದೀಕ್ಷಾ ಸರ್ವೈರ್ಮಾನ್ಯಃ ಸ ದೀಕ್ಷಿತಃ ।
ಅವಜಾನಾತಿ ಯಸ್ತಂತು ಸೋಽವಜಾನಾತಿ ಕೇಶವಂ ॥ ೫೫ ॥

ಯಸ್ಯ–ಯಾರಿಗೆ, ವೈಷ್ಣವೀದೀಕ್ಷಾ–ವಿಷ್ಣುದೀಕ್ಷೆಯು, ಸ್ಯಾತ್–ಆಗಿರುವುದೋ, ಸಃ ದೀಕ್ಷಿತಃ–ಆ ದೀಕ್ಷೆಯುಳ್ಳವನು, ಸರ್ವೈಃ–ಎಲ್ಲರಿಂದಲೂ, ಮಾನ್ಯಃ – ಗೌರವಿಸಲ್ಪಡಲು ಅರ್ಹನು; ಯಃ – ಯಾರು, ತಂ ತು–ಅವನನ್ನೇ, ಅವಜಾನಾತಿ–ಅವಮಾನ ಮಾಡುತ್ತಾನೋ (ತಿರಸ್ಕಾರಬುದ್ಧಿ

ಪ್ರತಿ ಮಹಿಮೆಯೂ—ಜ್ಞಾನಾನಂದಾದಿ ಅನಂತಗುಣಗಳಲ್ಲಿ ಪ್ರತಿಯೊಂದೂ ಅನಂತವಾದುದರಿಂದ) ಕೊನೆಯನ್ನು (ಪೂರ್ಣವಾಗಿ) ತಿಳಿದವನು, ಹಿಂದೆ ಯಾರೂ ಹುಟ್ಟಲಿಲ್ಲ; ಈಗ ಯಾರೂ ಇಲ್ಲ; ಮುಂದೆ ಯಾರೂ ಜನಿಸುವುದಿಲ್ಲ—ಹೀಗಿರುವಾಗ, ಆತನಿಗೆ ಸಮನು ಮತ್ತೊಬ್ಬನು ಎಲ್ಲಿರುವನು? (ಇಲ್ಲವೇ ಇಲ್ಲ) ಅಧಿಕನೊಬ್ಬನನ್ನು ಎಲ್ಲಿ ತರಬೇಕು? (ತ್ರಿಕಾಲಗಳಲ್ಲಿ ಶ್ರೀವಿಷ್ಣುವೇ ಸಮಾಧಿಕರಹಿತನಾದ ಮಹಾಮಹಿಮನು) (೫೪).
ವಿಷ್ಣುದೀಕ್ಷೆಯನ್ನು ಹೊಂದಿದ ಪುರುಷನು ಸರ್ವರಿಂದಲೂ ಪೂಜ್ಯನು (ಗೌರವಿಸಲ್ಪಡಲರ್ಹನು); ಯಾರು ಆತನನ್ನು (ಈ ದೀಕ್ಷಿತನನ್ನು) ಅಪಮಾನಗೊಳಿಸುವನೋ, ಆತನು ಶ್ರೀವಿಷ್ಣುವನ್ನೇ ಅಪಮಾನಗೊಳಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಿಂದ ಕೀಳಾಗಿ ಕಾಣುತ್ತಾನೋ), ಸಃ-ಆತನು, ಕೇಶವಂ-ಶ್ರೀವಿಷ್ಣುವನ್ನೇ, ಅವಜಾನಾತಿ – ಅಪಮಾನಗೊಳಿಸುತ್ತಾನೆ (ಶ್ರೀವಿಷ್ಣುವನ್ನೇ ಅಪಮಾನಗೊಳಿಸಿದಂತೆಯೇ ಸರಿ).

ಅಂಕಿತಂ ಶಂಖಚಕ್ರಾದ್ಯೈರ್ವಿಷ್ಣುದೀಕ್ಷಾನ್ವಿತಂ ನರಂ ।
ಯೋ ನಿಂದತಿ ವಿಮೂಢಾತ್ಮಾ ಸ ದ್ವೇಷ್ಟಾ ವಿಷ್ಣುಮೇವ ಹಿ ॥ ೫೬ ॥

ಶಂಖಚಕ್ರಾದ್ಯೈಃ–ಶಂಖ ಚಕ್ರ ಮೊದಲಾದವುಗಳಿಂದ, ಅಂಕಿತಂ–ಚಿಹ್ನಿತನಾದ (ಮುದ್ರಿತನಾದ), ವಿಷ್ಣುದೀಕ್ಷಾನ್ವಿತಂ–ವಿಷ್ಣುದೀಕ್ಷೆಯನ್ನು ಹೊಂದಿರುವ, ನರಂ–ಮನುಷ್ಯನನ್ನು, ಯಃ–ಯಾರು, ನಿಂದತಿ–ನಿಂದಿಸುವನೋ, ಸಃ–ಆ, ವಿಮೂಢಾತ್ಮಾ–ಮೂರ್ಖನು, ವಿಷ್ಣುಂ ಏವ–ಶ್ರೀವಿಷ್ಣುವನ್ನೇ, ದ್ವೇಷ್ಟಾ ಹಿ–ದ್ವೇಷಿಸುವವನೇ ಸರಿ (ವಿಷ್ಣುದ್ವೇಷಿಯೇ ಸರಿ).

ತಪ್ತಚಕ್ರಂ ಭುಜೇ ಯಸ್ಯ ವಿಪ್ರಾದೇರ್ಯಸ್ಯ ಕಸ್ಯ ವಾ ।
ವಿಷ್ಣೋರೇವ ಹಿ ಸಾ ಮೂರ್ತಿರ್ನಾವಮನ್ಯೇತ ಕರ್ಹಿಚಿತ್ ॥ ೫೭ ॥

ಯಸ್ಯ–ಯಾವಾತನ, ಭುಜೇ – ಬಾಹುಗಳಲ್ಲಿ (ಭುಜದಲ್ಲಿ), ತಪ್ತಚಕ್ರಂ–ತಪ್ತಚಕ್ರಮುದ್ರೆಯೋ (ವಿಧ್ಯುಕ್ತರೀತಿಯಲ್ಲಿ ಅಗ್ನಿಯಲ್ಲಿ ದಹಿಸಲ್ಪಟ್ಟ ಚಕ್ರದಿಂದ, ಯೋಗ್ಯ ಅಧಿಕಾರಿಗಳಿಂದ ಭುಜದಲ್ಲಿ ಮುದ್ರಿತವಾದ ಚಿಹ್ನೆಯುಳ್ಳವನೋ), ವಿಪ್ರಾದೇಃ–ಬ್ರಾಹ್ಮಣಾದಿಗಳ, ಯಸ್ಯಕಸ್ಯವಾ–ಯಾರಾದರೊಬ್ಬನ, ಸಾ ಮೂರ್ತಿಃ – ಆ (ದೇಹರೂಪದ) ಪ್ರತಿಮೆಯು, ವಿಷ್ಣೋಃ ಏವ – ಶ್ರೀವಿಷ್ಣುವಿನದೇ (ಶ್ರೀವಿಷ್ಣು ಪ್ರತಿಮೆಯೇ ಸರಿ); ಕರ್ಹಿಚಿತ್ – ಎಂದಿಗೂ (ಯಾವ ಪ್ರಕಾರದಿಂದಲೂ), ನ ಅವಮನ್ಯೇತ – (ಆ ಪ್ರತಿಮೆಯನ್ನು) ಅವಮಾನಗೊಳಿಸಕೂಡದು.

ಮಹಾದೋಷಿಯಾಗುತ್ತಾನೆ (೫೫). ಶಂಖಚಕ್ರಾದಿ ವಿಷ್ಣುಚಿಹ್ನೆಗಳನ್ನು ತನ್ನ ದೇಹದಲ್ಲಿ ಮುದ್ರಿಸಿಕೊಂಡ, ವಿಷ್ಣುದೀಕ್ಷಾವುಳ್ಳ ಮನುಷ್ಯನನ್ನು ನಿಂದಿಸುವವನು ಶ್ರೀವಿಷ್ಣುದ್ವೇಷಿಯೇ ಸರಿ (೫೬). ಭುಜದಲ್ಲಿ ತಪ್ತಚಕ್ರದ ಮುದ್ರೆಯನ್ನು (ಅಂಕಿತವನ್ನು) ಧರಿಸಿದ ಯಾವನೊಬ್ಬ ವ್ಯಕ್ತಿಯು, ಆತನು ಬ್ರಾಹ್ಮಣಾದಿ ವರ್ಣಗಳಲ್ಲಿ ಯಾರೇ ಆಗಲಿ, ಶ್ರೀವಿಷ್ಣುವಿನ ಪ್ರತಿಮೆಯೇ ಆಗಿರುವನು; ಈ ವಿಷ್ಣುಪ್ರತಿಮಾರೂಪದ ಮನುಷ್ಯನನ್ನು ಯಾವ ವಿಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೀಚವರ್ಣೋಽಪಿ ಯೋ ವಿಷ್ಣುದೀಕ್ಷಾವಾನ್ ಸ ಹಿ ಬಂಧುವತ್ ।
ವಿನಾ ಪ್ರಣಾಮಂ ಮಾನ್ಯಃ ಸ ರಾಮಕೃಷ್ಣಾದಿನಾಮಭಿಃ ॥ ೫೮ ॥

ಯಃ–ಯಾವನೊಬ್ಬನು, ನೀಚವರ್ಣೋಽಪಿ-ನೀಚವರ್ಣದವನಾದರೂ (ಕೀಳುಜಾತಿಯವನಾದರೂ), ವಿಷ್ಣುದೀಕ್ಷಾವಾನ್ – ವಿಷ್ಣುದೀಕ್ಷೆಯುಳ್ಳವನಾದರೆ, ಸಃ–ಆತನು, ಬಂಧುವತ್–ಬಂಧುವಿನಂತೆ ; ಪ್ರಣಾಮಂ ವಿನಾ–ನಮಸ್ಕಾರವಿನಹ (ನಮಸ್ಕರಿಸುವುದನ್ನು ಬಿಟ್ಟು), ರಾಮಕೃಷ್ಣಾದಿ-ನಾಮಭಿಃ–ರಾಮ, ಕೃಷ್ಣ ಮೊದಲಾದ ನಾಮೋಚ್ಚಾರಣಪೂರ್ವಕವಾಗಿ, ಸಃ–ಅವನು, ಮಾನ್ಯಃ–ಮಾನಿಸಲ್ಪಡಲರ್ಹನೇ ಸರಿ (ಗೌರವಿಸಲ್ಪಡಬೇಕು).

ಉಚ್ಚವರ್ಣೋಽಪಿ ಯೋ ವಿಪ್ರೋ ವೇದವೇದಾಂಗಪಾರಗಃ ।
ಸದಾಚಾರರತೋಽಪಿ ಸ್ಯಾದ್ವಿಷ್ಣುದೀಕ್ಷಾವಿವರ್ಜಿತಃ ॥ ೫೯ ॥
ಸ ಚೋರವದ್ಬಹಿಷ್ಕಾರ್ಯಸ್ತಸ್ಮೈ ದತ್ತಂ ಚ ನಿಷ್ಫಲಂ ।
ಪಾತ್ರಂ ಹಿ ಪರಮಂ ಪ್ರೋಕ್ತಂ ಹವ್ಯಕವ್ಯಾದಿತಃ ಸದಾ ॥ ೬೦ ॥
ಯಸ್ಯ ಸ್ಯಾದ್ವೈಷ್ಣವೀದೀಕ್ಷಾ ದತ್ತಂ ಭವತಿ ಚಾಕ್ಷಯಂ ।

ದಿಂದಲೂ ಎಂದಿಗೂ ಅವಮಾನಗೊಳಿಸಕೂಡದು (೫೭). ವಿಷ್ಣುದೀಕ್ಷೆಯುಳ್ಳವನು ನೀಚವರ್ಣದವನಾದರೂ, ಆತನು ವಿಷ್ಣುಭಕ್ತರಿಗೆ ಬಂಧುವಿದ್ದಂತೆಯೇ ಸರಿ ; ಆತನನ್ನು ರಾಮಕೃಷ್ಣಾದಿ ನಾಮೋಚ್ಚಾರಣಪೂರ್ವಕವಾಗಿ ಸತ್ಕರಿಸಿ ಗೌರವಿಸಬೇಕು (೫೮). ಶ್ರೇಷ್ಠವಾದ ಬ್ರಾಹ್ಮಣಜಾತಿಯಲ್ಲಿ ಹುಟ್ಟಿ, ವೇದವೇದಾಂಗಪಾರಂಗತನಾಗಿ, ಸದಾಚಾರನಿಷ್ಠನಾಗಿದ್ದರೂ, ವಿಷ್ಣುದೀಕ್ಷಾರಹಿತನು, ದೇವಕಾರ್ಯ ಪಿತೃಕಾರ್ಯಗಳಲ್ಲಿ ಬಹಿಷ್ಕರಿಸಲ್ಪಡಬೇಕು ; ಲೌಕಿಕದಲ್ಲಿ ಚೋರನಂತೆ, ಆತನು ತ್ಯಾಜ್ಯನೇ ಸರಿ. ವಿಷ್ಣುದೀಕ್ಷೆಯುಳ್ಳವನೇ (ಯೋಗ್ಯಾಧಿಕಾರಿಗಳಿಂದ ದೀಕ್ಷೆಯನ್ನು ಪಡೆದವನೇ) ಹವ್ಯಕವ್ಯಾದಿಗಳಲ್ಲಿ[1] ಉತ್ತಮ ಪಾತ್ರನು ; ಆತನಿಗೆ ಕೊಡಲ್ಪಟ್ಟ ದಾನಾದಿಗಳು

[1] ಹವ್ಯ—ದೇವತೆಗಳನ್ನು ಉದ್ದೇಶಿಸಿ ಯಜ್ಞಾದಿಗಳಲ್ಲಿ ಅರ್ಪಿಸುವ ಹವಿಸ್ಸು ಮೊದಲಾದ ಪೂಜಾದ್ರವ್ಯಗಳು ; ಕವ್ಯ—ಪಿತೃಗಳಿಗಾಗಿ ಶ್ರಾದ್ಧಾದಿಗಳಲ್ಲಿ ಅರ್ಪಿಸುವ ಪಿಂಡಾದಿ ದ್ರವ್ಯಗಳು ; ಹವ್ಯಕವ್ಯಶಬ್ದಗಳು, ಅವುಗಳುಳ್ಳ ದೇವಪಿತೃಕಾರ್ಯಗಳನ್ನು (ತದುದ್ದೇಶಿತ ಕರ್ಮಗಳನ್ನು) ಸೂಚಿಸುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಃ ವಿಪ್ರಃ–ಯಾವ ಬ್ರಾಹ್ಮಣನು, ಉಚ್ಚವರ್ಣಃ ಅಪಿ–ಉತ್ತಮ ವರ್ಣದವನಾದರೂ (ಶ್ರೇಷ್ಠ ಜಾತಿಯವನಾದರೂ), ವೇದವೇದಾಂಗ–ಪಾರಗಃ – ವೇದವೇದಾಂಗಪಾರಂಗತನಾಗಿದ್ದು, ಸದಾಚಾರರತಃ ಅಪಿ – ಸದಾಚಾರವುಳ್ಳವನಾದರೂ, ವಿಷ್ಣುದೀಕ್ಷಾವಿವರ್ಜಿತಃ–ವಿಷ್ಣುದೀಕ್ಷಾ ರಹಿತನು, ಸ್ಯಾತ್–ಆದರೆ, ಸಃ–ಆತನು (ಬ್ರಾಹ್ಮಣನಾದರೂ), ಸದಾ–ಸರ್ವದಾ, ಹವ್ಯಕವ್ಯಾದಿತಃ – ಹವ್ಯಕವ್ಯಾದಿಗಳಿಂದ (ದೇವಪಿತೃಕಾರ್ಯ ಗಳಿಂದ), ಚೋರವತ್ – ಕಳ್ಳನಂತೆ (ಕಳ್ಳನೊಂದಿಗೆ ಸಜ್ಜನರು ಯಾವ ವ್ಯವಹಾರವನ್ನೂ ಇಟ್ಟುಕೊಳ್ಳದಂತೆ), ಬಹಿಷ್ಕಾರ್ಯಃ–ಬಹಿಷ್ಕರಿಸಲ್ಪಡ ಬೇಕು (ಹೊರಗೆ ಹಾಕಲ್ಪಡಬೇಕು–ತ್ಯಜಿಸತಕ್ಕದ್ದು) ; ತಸ್ಮೈ – ಅವನಿಗೆ (ದೀಕ್ಷಾವಿಹೀನನಿಗೆ), ದತ್ತಂ – ಕೊಡಲ್ಪಟ್ಟದ್ದು (ದಾನ ದಕ್ಷಿಣೆ ಮುಂತಾದುವು), ನಿಷ್ಫಲಂ–ವ್ಯರ್ಥವು ; ಚ–ಮತ್ತು, ಯಸ್ಯ–ಯಾವ ಬ್ರಾಹ್ಮಣನಿಗೆ, ವೈಷ್ಣವೀ ದೀಕ್ಷಾ–ವಿಷ್ಣುದೀಕ್ಷೆಯು, ಸ್ಯಾತ್–ಆಗಿರುವುದೋ, (ತಸ್ಯ–ಅವನಿಗೆ), ದತ್ತಂ–ಕೊಟ್ಟದ್ದು, ಅಕ್ಷಯಂ–ಅಕ್ಷಯಫಲವುಳ್ಳದ್ದು (ಬಹುಫಲ ಪ್ರಾಪಕವು), ಭವತಿ–ಆಗುತ್ತದೆ ; (ಹವ್ಯಕವ್ಯಾದಿಗಳಲ್ಲಿ), ಸಃ–ಅತನೇ, ಪರಮಂ–ಉತ್ತಮ, ಪಾತ್ರಂ–ಪಾತ್ರನೆಂದು, ಪ್ರೋಕ್ತಂ–ಹೇಳಲಾಗಿದೆ.

ತಪ್ತಚಕ್ರಾಂಕಿತೋ ಯಃ ಸ್ಯಾತ್ ಸ ಚಾಂಡಾಲೋ ವರೋ ಭವೇತ್
ಕಿಂ ಪುನರ್ಬ್ರಾಹ್ಮಣಾ ಪುಣ್ಯಾಃ ಸದಾಚಾರಾ ವಿಶೇಷತಃ ।

ಯಃ – ಯಾರೊಬ್ಬನು, ತಪ್ತಚಕ್ರಾಂಕಿತಃ – ತಪ್ತಚಕ್ರದಿಂದ ಚಿಹ್ನಿತನು, ಸ್ಯಾತ್–ಆಗುವನೋ, ಸಃ–ಆತನು, ಚಾಂಡಾಲಃ ಅಪಿ–

ಅಕ್ಷಯಫಲವನ್ನು ಹೊಂದಿಸುತ್ತವೆ (೫–೬೦). ತಪ್ತಚಕ್ರಾಂಕಿತ ದೇಹವುಳ್ಳ ಚಂಡಾಲನೂ ಸಹ, ಅದೀಕ್ಷಿತ ಉತ್ತಮವರ್ಣದವರಿಗಿಂತ, ದರ್ಶನಾದಿಗಳಿಗೆ ಪ್ರಶಸ್ತನಾದವನಾಗಿರಲು (ಉತ್ತಮನಾಗಿರುವಾಗ), ತಪ್ತಚಕ್ರಾದಿ ಚಿಹ್ನೆ ಗಳುಳ್ಳ ಪುಣ್ಯವಂತರಾದ ಬ್ರಾಹ್ಮಣರು, ಅವರಲ್ಲಿಯೂ ವಿಶೇಷವಾಗಿ ಸದಾಚಾರನಿಷ್ಠರಾದವರು, (ದೇವಪಿತೃಕಾರ್ಯಗಳಲ್ಲಿ ದಾನಾದಿಗಳಿಗೆ ಶ್ರೇಷ್ಠಪಾತ್ರರೆಂದು) ಉತ್ತಮರೆಂದು ಹೇಳಲೇನಿದೆ ! (೬೧). ಸ್ತ್ರೀಯಾಗಲಿ ಪುರುಷನಾಗಲಿ, ತಪ್ತಮುದ್ರಾಧಾರಣ ಮಾಡಿಸಿಕೊಂಡಿರದಿದ್ದರೆ, ಅವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೀಚವರ್ಣದ ಚಂಡಾಲನಾದರೂ, ವರಃ–ಉತ್ತಮನು (ಅದೀಕ್ಷಿತ ಉತ್ತಮ ವರ್ಣದ ಪುರುಷನಗಿಂತ), ಭವೇತ್–(ಮುಖದರ್ಶನಾದಿಗಳಿಗೆ ಅರ್ಹನು) ಆಗುತ್ತಾನೆ; (ಹೀಗಿರುವಾಗ), ಪುಣ್ಯಾಃ–ಪುಣ್ಯವಂತರಾದ (ಜನ್ಮಾಂತರ ಪುಣ್ಯದಿಂದ ಬ್ರಾಹ್ಮಣನಾಗಿ ಜನಿಸಿದವರಾದ), ಬ್ರಾಹ್ಮಣಾಃ–ಬ್ರಾಹ್ಮಣರು, ವಿಶೇಷತಃ–ವಿಶೇಷವಾಗಿ, ಸದಾಚಾರಾಃ–ಸದಾಚಾರನಿಷ್ಠರು, ಕಿಂ ಪುನಃ–ಉತ್ತಮರೆಂದು ಹೇಳಲೇನು!

ನಾರೀ ವಾ ಪುರುಷೋ ವಾಪಿ ತಪ್ತಚಕ್ರಾಂಕವರ್ಜಿತಃ ॥ ೬೨ ॥
ಶ್ಮಶಾನಕಾಷ್ಠವತ್ತಸ್ಯ ಸ್ಪರ್ಶೇ ಸ್ನಾನಂ ಸಮಾಚರೇತ್ ।

ನಾರೀ–ಸ್ತ್ರೀ, ವಾ–ಅಥವಾ, ಪುರುಷಃ ಅಪಿ–ಪುರುಷನಾಗಲಿ, ತಪ್ತ-ಚಕ್ರಾಂಕವರ್ಜಿತಃ–ತಪ್ತಚಕ್ರಚಿಹ್ನೆಯಿಂದ ರಹಿತನಾದರೆ (ಸ್ವಗುರುಗಳಿಂದ ತಪ್ತಮುದ್ರಾಧಾರಣೆಯನ್ನು ಮಾಡಿಸಿಕೊಳ್ಳದಿದ್ದರೆ), ಶ್ಮಶಾನಕಾಷ್ಠವತ್–ಶ್ಮಶಾನದಲ್ಲಿ ಬಿದ್ದಿರುವ ಕಟ್ಟಿಗೆಯಂತೆ (ಶವದಹನಾವಶಿಷ್ಟಕಾಷ್ಠದಂತೆ); (ಅಪವಿತ್ರರು), ತಸ್ಯ–ಆ ವ್ಯಕ್ತಿಯ, ಸ್ಪರ್ಶೇ–ಸ್ಪರ್ಶವಾದರೆ, ಸ್ನಾನಂ–ಸ್ನಾನವನ್ನು, ಸಮಾಚರೇತ್–ಮಾಡತಕ್ಕದ್ದು (ಸ್ನಾನಮಾಡಿ ಶುದ್ಧನಾಗಬೇಕು).

ಕಂಚುಕಂ ಕಂಠಸೂತ್ರಂ ಚ ಲಲಾಟೇ ಚೋರ್ಧ್ವಪುಂಡ್ರಕಂ ॥ ೬೩ ॥
ತಪ್ತಚಕ್ರಂ ತಥಾ ಶಂಖಂ ಯಸ್ಯಾ ಗಾತ್ರೇ ನ ವಿದ್ಯತೇ ।
ಹವ್ಯಂ ಕವ್ಯಂ ತಯಾ ಸ್ಪೃಷ್ಟಂ ದೇವಾಶ್ಚ ಪಿತರೋಽಪಿ ಹಿ ॥ ೬೪ ॥

ಸ್ಪರ್ಶವಾದರೆ, ಶ್ಮಶಾನದಲ್ಲಿ ಬಿದ್ದಿರುವ ಕಟ್ಟಿಗೆಯನ್ನು ಮುಟ್ಟಿದಂತೆ, ಸ್ನಾನದಿಂದ ಶುದ್ಧನಾಗಬೇಕು. ಚಕ್ರಾಂಕಿತವಲ್ಲದ ದೇಹವು ಅಷ್ಟು ಅಪವಿತ್ರವಾದುದು (೬೨). ಕಂಚುಕ (ಕುಬಸ–ಕುಪ್ಪಸ), ಮಂಗಲಸೂತ್ರ, ಹಣೆಯಲ್ಲಿ ಊರ್ಧ್ವಪುಂಡ್ರ, (ಕೈಗಳಮೇಲೆ) ತಪ್ತಚಕ್ರ ಶಂಖಗಳು, ಇಲ್ಲದ ಸ್ತ್ರೀಯು ಮುಟ್ಟಿದ ಹವ್ಯಕವ್ಯಗಳನ್ನು (ದೇವತೆಗಳಿಗೂ ಮತ್ತು ಪಿತೃಗಳಿಗೂ ಅರ್ಪಿಸಬೇಕಾದ ದ್ರವ್ಯಗಳನ್ನು), ನಾಯಿ ಮುಟ್ಟಿದ ವಸ್ತುಗಳು ಹೇಗೋ ಹಾಗೆ, ದೇವತೆಗಳು ಮತ್ತು ಪಿತೃಗಳು, ಸಿಟ್ಟಿನಿಂದ ಸ್ವೀಕರಿಸುವುದಿಲ್ಲ (ಇಂಥ ಸ್ತ್ರೀಯರು ಅವರಿಂದ ಅಪವಿತ್ರದೇಹಿಗಳೆಂದು ಭಾವಿಸಲ್ಪಡುತ್ತಾರೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೈವ ಗೃಹ್ಣಂತಿ ಕುಪಿತಾ ಶುನಾ ಸ್ಪೃಷ್ಟಂ ಯಥಾತಥಾ ।

ಕಂಚುಕಂ – ಕುಪ್ಪಸವೂ, ಕಂಠಸೂತ್ರಂ ಚ – ಕಂಠದಲ್ಲಿ ಮಂಗಲ ಸೂತ್ರವೂ, ಲಲಾಟೇ–ಹಣೆಯಲ್ಲಿ, ಊರ್ಧ್ವಪುಂಡ್ರಂ–ಊರ್ಧ್ವಪುಂಡ್ರವೂ (ಹಣೆಯಮಧ್ಯದಲ್ಲಿ ನೇರವಾಗಿ ಮೇಲೇರುವ ಮೃತ್ತಿಕಾದಿರಚಿತನಾಮವೂ), ತಪ್ತಚಕ್ರಂ–ತಪ್ತಚಕ್ರವೂ, ತಥಾ – ಹಾಗೂ, ಶಂಖಂ – ತಪ್ತಶಂಖವೂ (ಇವುಗಳ ಅಂಕಿತವೂ), ಯಸ್ಯಾಃ–ಯಾವ ಸ್ತ್ರೀಯ, ಗಾತ್ರೇ–ದೇಹದಲ್ಲಿ, ನ ವಿದ್ಯತೇ–ಇರುವುದಿಲ್ಲವೋ, ತಯಾ–ಆಕೆಯಿಂದ (ಅಂಥ ಸ್ತ್ರೀಯಿಂದ), ಸ್ಪೃಷ್ಟಂ – ಮುಟ್ಟಲಾದ, ಹವ್ಯಂ – ಹವ್ಯವನ್ನೂ, ಕವ್ಯಂ – ಕವ್ಯವನ್ನೂ, ದೇವಾಃ–ದೇವತೆಗಳೂ, ಚ–ಮತ್ತು, ಪಿತರಃ ಅಪಿ–ಪಿತೃಗಳೂ, ಕುಪಿತಾಃ–ಕುಪಿತರಾಗಿ (ಆ ಸ್ತ್ರೀಯ ಸ್ಪರ್ಶದಿಂದ ಸಿಟ್ಟಾಗಿ), ಶುನಾ–ನಾಯಿಯಿಂದ, ಸ್ಪೃಷ್ಟಂ–ಮುಟ್ಟಲ್ಪಟ್ಟದ್ದನ್ನು, ಯಥಾ–ಹೇಗೋ, ತಥಾ–ಹಾಗೆ, ಗೃಹ್ಣಂತಿ ನ ಏವ–ಸ್ವೀಕರಿಸುವುದೇ ಇಲ್ಲ.

ಪತಿತಾ ಅಪಿ ಶುದ್ಧ್ಯಂತಿ ತಪ್ತಚಕ್ರಾದಿಧಾರಣಾತ್ ॥ ೬೫ ॥
ಸ್ವಸ್ವವರ್ಣಾಶ್ರಮಾಚಾರಾಃ ಕಿಂ ಪುನರ್ಬ್ರಾಹ್ಮಣಾದಯಃ ।

ತಪ್ತಚಕ್ರಾದಿಧಾರಣಾತ್–ತಪ್ತಚಕ್ರಾದಿಗಳನ್ನು ದೇಹದಲ್ಲಿ ಮುದ್ರಿಸಿಕೊಳ್ಳುವುದರಿಂದ, ಪತಿತಾಃ ಅಪಿ – ಪತಿತರಾದವರು ಸಹ (ಕೀಳುಜಾತಿಯವರು ಮತ್ತು ಮಹಾಪಾತಕಿಗಳು ಸಹ), ಶುದ್ಧ್ಯಂತಿ–ಪರಿಶುದ್ಧರಾಗುತ್ತಾರೆ; (ಹೀಗಿರಲು), ಸ್ವಸ್ವವರ್ಣಾಶ್ರಮಾಚಾರಾಃ–ತಂತಮ್ಮ ವರ್ಣಾಶ್ರಮಧರ್ಮಗಳನ್ನು ಆಚರಿಸುವ, ಬ್ರಾಹ್ಮಣಾದಯಃ–ಬ್ರಾಹ್ಮಣರೇ ಮೊದಲಾದವರು (ದ್ವಿಜರು), ಕಿಂಪುನಃ–(ತಪ್ತಮುದ್ರಾಧಾರಣದಿಂದ) ಪರಮಪಾವನರೆಂದು ಹೇಳಲೇನು !

(೬೩–೬೪). ತಪ್ತಚಕ್ರಶಂಖಾದಿಗಳನ್ನು ಧಾರಣಮಾಡುವ ಪತಿತರೂ ಸಹ ಪರಿಶುದ್ಧರಾಗುತ್ತಾರೆ; ಹೀಗಿರಲು, ಸ್ವವರ್ಣಾಶ್ರಮಾಚಾರನಿರತರಾದ ಬ್ರಾಹ್ಮಣಾದಿ ಉತ್ತಮರು, ತಪ್ತಮುದ್ರಾಂಕನದಿಂದ ಪರಮಪವಿತ್ರರೆಂದು ಹೇಳಲೇನಿದೆ ! (೬೫). ಯಾಚಿಸುವವರ ಅಭೀಷ್ಟಗಳನ್ನು ಕೊಡುವಾತನು, ಪರಮಮಿತ್ರನೆನಿಸುತ್ತಾನೆ—ಏಕೆಂದರೆ, ಕೇಳಿದ್ದನ್ನು ಕೊಟ್ಟು ಬದುಕಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾತಾ ಹಿ ಪರಮಂ ಮಿತ್ರಂ ಯತೋ ಜೀವಯತೇಽರ್ಥಿನಃ ‖ ೬೬ ‖
ಯೋ ಹಿ ವಿಷ್ಣುಂ ಪರಂ ದ್ವೇಷ್ಟಿ ತೇನ ಮೈತ್ರೀಂ ಕರೋತಿ ಯಃ ।
ರಿಪುರ್ಮಿತ್ರಾಯತೇ ತಸ್ಮೈ ಕಥಂ ವಿಷ್ಣುಃ ಪ್ರಸೀದತಿ ‖ ೬೭ ‖

ಯತಃ–ಯಾವ ಕಾರಣದಿಂದ, ಅರ್ಥಿನಃ–ಅರ್ಥಿಗಳನ್ನು (ಪ್ರಾರ್ಥಿಸುವವರನ್ನು), ಜೀವಯತೇ–(ಅಪೇಕ್ಷಿತವನ್ನಿತ್ತು) ರಕ್ಷಿಸುವನೋ, (ಆ ಕಾರಣದಿಂದ), ದಾತಾ–(ಅಪೇಕ್ಷಿತ ಅರ್ಥವನ್ನು) ಕೊಡುವಾತನು, ಪರಮಂ-ಮಿತ್ರಂ–ಶ್ರೇಷ್ಠ ಮಿತ್ರನೆನಿಸುವನು ; ಯಃ–ಯಾರು, ಪರಂ ವಿಷ್ಣುಂ–ಸರ್ವೋತ್ತಮನಾದ ಶ್ರೀವಿಷ್ಣುವನ್ನು, ದ್ವೇಷ್ಟಿ–ದ್ವೇಷಿಸುವನೋ, ತೇನ–ಆತನಿಂದ, ಮೈತ್ರೀಂ–ಮಿತ್ರಭಾವವನ್ನು (ಆತನೊಂದಿಗೆ ಸ್ನೇಹವನ್ನು), ಯಃ–ಯಾರು, ಕರೋತಿ–ಮಾಡುವನೋ, ತಸ್ಮೈ–ಆತನಿಗೆ, ರಿಪುಃ–(ಶ್ರೀವಿಷ್ಣುವಿನ) ಶತ್ರುವು, ಮಿತ್ರಾಯತೇ–ಮಿತ್ರನಂತಾಗುತ್ತಾನೆ ; ಹಿ–ಆದ್ದರಿಂದ (ತಸ್ಮೈ–ಅಂಥವನ ವಿಷಯಕ್ಕೆ), ವಿಷ್ಣುಃ–ಶ್ರೀವಿಷ್ಣುವು, ಕಥಂ–ಹೇಗೆ, ಪ್ರಸೀದತಿ–ಪ್ರಸನ್ನನಾಗುತ್ತಾನೆ ? (ಪ್ರಸನ್ನನಾಗುವ ಸಂಭವವೇ ಇಲ್ಲ).

ಯಃ ಕುರ್ಯಾದ್ವೈಷ್ಣವಂ ಚಿಹ್ನಂ ತಪ್ತಚಕ್ರಾದಿಧಾರಣಾತ್ ।
ತದೀಯೋಽಸ್ಮೀತಿ ಯೋ ನಿತ್ಯಂ ಭಾವಯನ್ ಮನಸಾಪಿ ಹಿ ‖ ೬೮ ‖
ತನ್ಮಂತ್ರಜಾಪಕೋ ಯಃ ಸ್ಯಾತ್ತನ್ನಾಮ್ನಾಂ ಚಾಪಿ ಕೀರ್ತಕಃ ।
ಕಥಂ ಸ ನ ಭವೇನ್ಮೂರ್ತಿಃ ಸರ್ವದೇವಪತೇರ್ಹರೇಃ ‖ ೬೯ ‖

ತ್ತಾನೆ ; ಹೀಗಿರಲು, ಸರ್ವರ ಸರ್ವಾಭೀಷ್ಟಗಳನ್ನು ಸಲ್ಲಿಸುವ ಶ್ರೀವಿಷ್ಣುವನ್ನು ದ್ವೇಷಿಸುವವನೊಡನೆ, ಮಿತ್ರತ್ವವನ್ನು ಇಟ್ಟುಕೊಂಡರೆ (ಪರಮಮಿತ್ರನಾದ ಶ್ರೀವಿಷ್ಣುವನ್ನು ದ್ವೇಷಿಸುವವನೊಡನೆ, ಮಿತ್ರನಾಗಿರುವನಾದರೆ), ತನ್ನ ದ್ವೇಷಿಯ ಮಿತ್ರನ ವಿಷಯಕ್ಕೆ ಶ್ರೀವಿಷ್ಣುವು ಹೇಗೆ ಪ್ರಸನ್ನನಾದಾನು ? (ಸರ್ವಥಾ ಆತನ ಪ್ರಸಾದವು ಲಭಿಸುವ ಸಂಭವವೇ ಇಲ್ಲ) (೬೬–೬೭).

ಯಾರು ತಪ್ತಚಕ್ರಾದಿಗಳನ್ನು ತನ್ನ ದೇಹದಲ್ಲಿ ಧರಿಸಿ, ತಾನು ಶ್ರೀಹರಿಯ ನಿತ್ಯಸೇವಕನೆಂದು ಸದಾ ಮನಸ್ಸಿನಲ್ಲಿ ಭಾವಿಸುತ್ತಿರುವನೋ, ಆತನ (ಶ್ರೀಹರಿಯ) ಮಂತ್ರಗಳನ್ನೇ ಜಪಿಸುತ್ತ, ಆತನ ನಾಮಗಳನ್ನು ಕೀರ್ತಿಸುವುದರಲ್ಲಿ ಆಸಕ್ತನಾಗಿರುವನೋ, ಆತನು (ಹೀಗಿರುವ ಹರಿಭಕ್ತನು), ಸರ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥಂ ನ ಸ್ಯಾಚ್ಚ ಸಂತೋಷೋ ವಿಷ್ಣೋರಪಿ ತದರ್ಚನಾತ್ ।

ಯಃ – ಯಾರು, ತಪ್ತಚಕ್ರಾದಿಧಾರಣಾತ್ – ತಪ್ತಚಕ್ರಾದಿಗಳನ್ನು (ದೇಹದಲ್ಲಿ) ಧರಿಸುವುದರಿಂದ, ವೈಷ್ಣವಂ–ಶ್ರೀವಿಷ್ಣುವಿನ, ಚಿಹ್ನಂ–ಚಿಹ್ನೆಯನ್ನು, ಕುರ್ಯಾತ್–ಮಾಡಿಕೊಳ್ಳುವನೋ (ಮತ್ತು), ಯಃ–ಯಾರು, ಮನಸಾಪಿ ಹಿ – ಮನಸ್ಸಿನಿಂದ ಸಹ, ನಿತ್ಯಂ – ಸದಾ, ತದೀಯಃ – ಆತನ (ಶ್ರೀವಿಷ್ಣುವಿನ) ಸೇವಕನು, ಅಸ್ಮಿ – ಆಗಿರುವೆನು, ಇತಿ – ಹೀಗೆಂದು, ಭಾವಯನ್–ಚಿಂತಿಸುವನೋ; ಮತ್ತು, ಯಃ–ಯಾರು, ತನ್ಮಂತ್ರಜಾಪಕಃ–ಆತನ ಮಂತ್ರಗಳನ್ನು ಜಪಿಸುವನು (ವಿಷ್ಣುಮಂತ್ರಜಪದಲ್ಲಿ ತೊಡಗಿರುವನು), ಸ್ಯಾತ್ – ಆಗಿರುವನೋ ; ಚ – ಮತ್ತು, ತನ್ನಾಮ್ನಾಂ – ಆತನ (ಶ್ರೀವಿಷ್ಣುವಿನ) ನಾಮಗಳ, ಕೀರ್ತಕಃ – ಕೀರ್ತನೆಮಾಡುವವನಾಗುತ್ತಾನೋ ; ಸಃ–ಆತನು, ಸರ್ವದೇವಪತೇಃ–ಸಕಲ ದೇವತೆಗಳ ಒಡೆಯನಾದ, ಹರೇಃ–ಶ್ರೀಹರಿಯ, ಮೂರ್ತಿಃ–ಪ್ರತಿಮೆಯು, ಕಥಂ–ಹೇಗೆ, ನ ಭವೇತ್ – ಆಗುವುದಿಲ್ಲ? (ಅಂಥವನು ಶ್ರೀವಿಷ್ಣುವನ್ನು ಒಳಗಿಟ್ಟು ಕೊಂಡಿರುವ ಪ್ರತಿಮೆಯೇ ಸರಿ); ತದರ್ಚನಾತ್–ಆತನ ಸತ್ಕಾರಾದಿಗಳಿಂದ (ಆರ್ಚನೆಯಿಂದ), ವಿಷ್ಣೋಃ ಅಪಿ–ಶ್ರೀವಿಷ್ಣುವಿಗೆ ಸಹ, ಸಂತೋಷಃ–ಸಂತೋಷವು, ಕಥಂ ನ ಸ್ಯಾತ್ – ಹೇಗೆ ಆಗುವುದಿಲ್ಲ? (ಶ್ರೀವಿಷ್ಣುವು ನಿಶ್ಚಯವಾಗಿ ಪ್ರೀತನಾಗುತ್ತಾನೆ).

ಸರ್ವದೇವಾತ್ಮಕಸ್ಯಾಸ್ಯ ವಿಷ್ಣೋರಾರಾಧನೇ ಕೃತೇ ॥ ೭೦ ॥

ದೇವತೆಗಳ ಒಡೆಯನಾದ ಶ್ರೀಹರಿಯ ಪ್ರತೀಕನೇ ಆಗಿರುವನು; ಶ್ರೀಹರಿಯನ್ನು ತನ್ನೊಳಗೆ ಧರಿಸಿದ ಪ್ರತಿಮೆಯೇ ಆಗಿರುವನು; ಈತನನ್ನು (ಈ ವಿಷ್ಣುಪ್ರತಿಮೆಯನ್ನು) ಪೂಜಿಸುವುದರಿಂದ, ಶ್ರೀವಿಷ್ಣುವು ನಿಶ್ಚಯವಾಗಿ ಪ್ರೀತನಾಗುತ್ತಾನೆ (೬೮–೬೯). ತಮ್ಮ ಪರಮಸ್ವಾಮಿಯಾದ ಶ್ರೀವಿಷ್ಣುವನ್ನು, ಆರಾಧಿಸಿದರೆ, ಆತನ ಪರಿವಾರದವರಾದ ಬ್ರಹ್ಮಾದಿದೇವತೆಗಳೂ; ಶ್ರೀವಿಷ್ಣುಪೂಜೆಯಿಂದ, ತಾವೂ ಸಂತುಷ್ಟರಾಗುತ್ತಾರೆ; ಅವರೆಲ್ಲರೂ ಶ್ರೀವಿಷ್ಣುವು ಸಂತೋಷಗೊಂಡರೆ ತಾವೂ ಸಂತೋಷಪಡುವ ಸ್ವಭಾವವುಳ್ಳವರು. ಹೀಗಿರುವಲ್ಲಿ, ವಿಷ್ಣುವಿನ ಪ್ರತಿಮೆಯಂತಿರುವ, ವಿಷ್ಣುದೀಕ್ಷೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೇ ದೇವಾಃ ಕಥಂ ನ ಸ್ಯುಸ್ತುಷ್ಟಾಸ್ತತ್ತೋಷತೋಷಿಣಃ ।
ತಾದೃಶಸ್ಯ ಹರೇರ್ಮೂರ್ತೇರವಜ್ಞಾನೇ ಕೃತೇಽಖಿಲಾಃ ॥ ೭೧ ॥
ಕಥಂ ದೇವಾಃ ನ ರುಷ್ಯೇಯುರ್ನಾರಾಯಣಪರಾಯಣಾಃ ।

ಸರ್ವದೇವಾತ್ಮಕಸ್ಯ–ಸರ್ವದೇವತೆಗಳ ಪರಮಸ್ವಾಮಿಯಾದ, ಅಸ್ಯ – ಈ, ವಿಷ್ಣೋಃ – ಶ್ರೀವಿಷ್ಣುವಿನ, ಆರಾಧನೇ – ಆರಾಧನೆಯು (ಪೂಜೆಯು–ಸೇವೆಯು), ಕೃತೇ – ಮಾಡಲ್ಪಡುತ್ತಿರಲು, ಕಥಂ – ಹೇಗೆ (ಯಾವ ಕಾರಣದಿಂದ), ಸರ್ವೇ ದೇವಾಃ–ಎಲ್ಲ (ಆತನ ಪರಿವಾರಭೂತರಾದ ಬ್ರಹ್ಮಾದಿ) ದೇವತೆಗಳು, ತುಷ್ಟಾಃ–ಸಂತುಷ್ಟರು, ನ ಸ್ಯುಃ–ಆಗದಿರುವರು ? ; (ಸಂತುಷ್ಟರೇ ಆಗುತ್ತಾರೆ) ; ಏಕೆಂದರೆ, (ಎಲ್ಲ ದೇವತೆಗಳು) ತತ್ತೋಷ-ತೋಷಿಣಃ–ಆತನ (ಶ್ರೀವಿಷ್ಣುವಿನ ಸಂತೋಷದಿಂದ ಸಂತೋಷಪಡತಕ್ಕ ಸ್ವಭಾವದವರಾಗಿದ್ದಾರೆ ; ತಾದೃಶಸ್ಯ–ಹೀಗಿರುವ) ಸಕಲದೇವತೆಗಳ ಸ್ವಾಮಿಯಾದ), ಹರೇಃ–ಶ್ರೀಹರಿಯ ಮೂರ್ತೇಃ–ಮೂರ್ತಿಯ (ಪ್ರತಿಮೆಯಾದ ವಿಷ್ಣುದೀಕ್ಷೆಯನ್ನು ಹೊಂದಿರುವ ಭಕ್ತನ), ಅವಜ್ಞಾನೇ – ನಿಂದೆಯು (ಅಪಮಾನವು – ತಿರಸ್ಕಾರವು), ಕೃತೇ (ಸತಿ)–ಮಾಡಲ್ಪಡುತ್ತಿರಲು, ನಾರಾಯಣಪರಾಯಣಾಃ – ಸರ್ವದಾ ಶ್ರೀನಾರಾಯಣನನ್ನೇ (ಸರ್ವಥಾ) ಆಶ್ರಯಿಸಿಕೊಂಡಿರುವ, (ಶ್ರೀನಾರಾಯಣನೇ ಸರ್ವೋತ್ತಮನೆಂಬ ಜ್ಞಾನ ನಿಶ್ಚಯವುಳ್ಳವರಾದ), ಅಖಿಲಾಃ–ಸಮಸ್ತರಾದ, ದೇವಾಃ–ದೇವತೆಗಳು, ಕಥಂ ನ ರುಷ್ಯೇಯುಃ–ಹೇಗೆ ಸಿಟ್ಟಾಗದಿರುವರು ? (ಕುಪಿತರಾಗುವುದು ನಿಶ್ಚಯ).

ಯನ್ನು ಹೊಂದಿದ ವಿಷ್ಣುಭಕ್ತನ ನಿಂದೆ ತಿರಸ್ಕಾರಾದಿಗಳಿಂದ, ದೇವತೆಗಳು (ವಿಷ್ಣುಭಕ್ತನಲ್ಲಿ, ಅಂತಃಸನ್ನಿಹಿತನಾದ ಶ್ರೀವಿಷ್ಣುವಿನ ಅವಜ್ಞೆಯಿಂದ) ಹೇಗೆ ಕುಪಿತರಾಗದೇ ಇರುವರು ? ಅವರೆಲ್ಲರೂ ಸರ್ವದಾ ನಾರಾಯಣ ಪರಾಯಣರಾದ್ದರಿಂದ, ವಿಷ್ಣುಭಕ್ತನನ್ನು ಅವಮಾನಮಾಡಿದ ಮನುಷ್ಯನ ಮೇಲೆ ಕುಪಿತರಾಗಿಯೇ ತೀರುತ್ತಾರೆ (೭೦–೭೧). ಶ್ರೀವಿಷ್ಣುವಿನ ಪ್ರತಿಮಾಸ್ಥಾನೀಯನಾದ ವಿಷ್ಣುದೀಕ್ಷಾಯುಕ್ತನಾದವನನ್ನು ಯಥಾಯೋಗ್ಯವಾಗಿ ಪೂಜಿಸುವುದರಿಂದ ಅಂತರ್ಯಾಮಿಯಾದ ಶ್ರೀವಿಷ್ಣುವು ಪ್ರೀತನಾಗುತ್ತಾನೆ ; ಶ್ರೀವಿಷ್ಣು ಪ್ರೀತನಾದರೆ, ಆತನ ಪರಿವಾರಭೂತರಾದ ಸಕಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಸ್ಮಾತ್ತು ವೈಷ್ಣವೀ ದೀಕ್ಷಾ ನಿಖಿಲೈರ್ಬ್ರಾಹ್ಮಣಾದಿಭಿಃ ॥ ೭೨ ॥
ಮನಸಾ ಕರ್ಮಣಾ ವಾಚಾ ಗ್ರಹಣೀಯಾ ಪ್ರಯತ್ನತಃ ।
ತಥೈವ ಪೂಜ್ಯತಾಂ ಯಾತಿ ಪ್ರಿಯತಾಂ ಚ ಹರೇರಪಿ ॥ ೭೩ ॥

ಪ್ರಾಪ್ನೋತ್ಯಪಿ ಚ ಸರ್ವೇಷ್ಟಮೈಹಿಕಾಮುಷ್ಮಿಕಂ ಸದಾ ।
ಕ್ರಮೇಣ ಮುಕ್ತಿಮಾಪ್ನೋತಿ ಪುನರ್ನಾವರ್ತತೇ ತತಃ ॥ ೭೪ ॥

ತಸ್ಮಾತ್ ತು – ಆ ಕಾರಣದಿಂದಲೇ, (ಶ್ರೀವಿಷ್ಣುಸಹಿತ ಸಕಲ ದೇವತೆಗಳು ಪ್ರೀತರಾಗುವುದರಿಂದಲೇ), ನಿಖಿಲೈಃ – ಸಮಸ್ತರಾದ, ಬ್ರಾಹ್ಮಣಾದಿಭಿಃ – ಬ್ರಾಹ್ಮಣರೇ ಮೊದಲಾದವರಿಂದ, ಮನಸಾ – ಮನಸ್ಸಿನಿಂದಲೂ, ಕರ್ಮಣಾ – ಕರ್ಮದಿಂದಲೂ, ವಾಚಾ – ನುಡಿಯಿಂದಲೂ, ಪ್ರಯತ್ನತಃ–ಯತ್ನಪೂರ್ವಕವಾಗಿ (ಎಲ್ಲ ವಿಘ್ನಗಳನ್ನು ಪರಿಹರಿಸಿಕೊಂಡು), ವೈಷ್ಣವೀದೀಕ್ಷಾ–ವಿಷ್ಣುದೀಕ್ಷೆಯು, ಗ್ರಹಣೀಯಾ – ಸ್ವೀಕರಿಸಲ್ಪಡಬೇಕು; ತಥಾಏವ – ಹೀಗೆ ಮಾಡುವುದರಿಂದಲೇ, (ಆ ದೀಕ್ಷಿತನಾದವನು), ಪೂಜ್ಯತಾಂ–ಪೂಜ್ಯತ್ವವನ್ನು (ಸಕಲರ ಗೌರವವನ್ನು), ಯಾತಿ – ಹೊಂದುತ್ತಾನೆ; ಚ–ಮತ್ತು, ಹರೇಃ–ಶ್ರೀಹರಿಯ, ಪ್ರಿಯತಾಂ ಅಪಿ–ಪ್ರೀತಿಯನ್ನು ಸಹ, ಪ್ರಾಪ್ನೋತಿ–ಹೊಂದುತ್ತಾನೆ (ಶ್ರೀಹರಿಗೂ ಪ್ರಿಯನಾಗುತ್ತಾನೆ); ಚ–ಹಾಗೂ, ಐಹಿಕಾಮುಷ್ಮಿಕಂ–ಇಹಪರಲೋಕಗಳ, ಸರ್ವೇಷ್ಟಂ–ಸರ್ವ ಇಷ್ಟಾರ್ಥಗಳನ್ನೂ, ಸದಾ–ನಿರಂತರವಾಗಿ, (ಪ್ರಾಪ್ನೋತಿ–ಹೊಂದುತ್ತಾನೆ); ಕ್ರಮೇಣ–ಕ್ರಮವಾಗಿ (ಅಪರೋಕ್ಷಜ್ಞಾನ – ಪ್ರಾರಬ್ಧ ಭೋಗಗಳನಂತರ),

---

ದೇವತೆಗಳೂ ಪ್ರೀತರಾಗುತ್ತಾರೆ; ಈ ಕಾರಣದಿಂದ, ಬ್ರಾಹ್ಮಣಾದಿ ಸರ್ವರೂ ಕಾಯೇನ ಮನಸಾ ವಚಸಾ, ಯತ್ನಪೂರ್ವಕವಾಗಿ, ವಿಷ್ಣುದೀಕ್ಷೆಯನ್ನು ಗ್ರಹಿಸಬೇಕು; ಹೀಗೆ ದೀಕ್ಷಿತರಾದವರು ಸರ್ವರಿಂದ ಮಾನ್ಯರಾಗುತ್ತಾರೆ; ಇವರು ಶ್ರೀಹರಿಪ್ರೀತಿಗೆ ಪಾತ್ರರಾಗಿ, ಇಹಪರಲೋಕಗಳಲ್ಲಿ ಸಕಲಾಭೀಷ್ಟಗಳನ್ನು ಹೊಂದಿ, ಕ್ರಮವಾಗಿ ಶ್ರೀಹರಿಯ ಸಾಕ್ಷಾದ್ದರ್ಶನವನ್ನು ಪಡೆದು, ಪ್ರಾರಬ್ಧಕರ್ಮದ ಭೋಗವು ಮುಗಿದನಂತರ ಮುಕ್ತರಾಗುತ್ತಾರೆ; ಜನನ ಮರಣ ರೂಪದ ಈ ಸಂಸಾರಕ್ಕೆ ಅವರು ಎಂದೂ ತಿರಿಗಿಬರುವುದಿಲ್ಲ (೭೨–೭೪).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಕ್ತಿಂ – ಮೋಕ್ಷವನ್ನೂ, ಆಪ್ನೋತಿ – ಹೊಂದುತ್ತಾನೆ; ತತಃ–ಅಲ್ಲಿಂದ (ಮುಕ್ತಸ್ಥಾನದಿಂದ), ಪುನಃ – ಮತ್ತೆ, ನ ಆವರ್ತತೇ – ಸಂಸಾರಕ್ಕೆ ಬರುವುದಿಲ್ಲ.

ಆಷಾಢೇ ಕಾರ್ತಿಕೇ ಮಾಘೇ ವೈಶಾಖೇ ಮಾರ್ಗಶೀರ್ಷಕೇ ।
ಪುಷ್ಟಚಂದ್ರೇ ತಿಥೌ ತತ್ರ ದಶಮ್ಯಾದೌ ವಿಶೇಷತಃ ॥ ೭೫ ॥

ಬುಧಭಾರ್ಗವಜೀವಾನಾಂ ಶನೇರರ್ಕಸ್ಯ ವಾ ದಿನೇ ।
ಮೃದುಕ್ಷಿಪ್ರಧ್ರುವರ್ಕ್ಷೇಷು ಕುಯೋಗೈರ್ವರ್ಜಿತೇ ಶುಭೇ ॥ ೭೬ ॥

ಗೃಹ್ಣೀಯಾದ್ವೈಷ್ಣವೀಂ ದೀಕ್ಷಾಂ ಶ್ರವಣೇ ಚ ವಿಶೇಷತಃ ।
ಶನಿರ್ಯದಾನುಕೂಲಃ ಸ್ಯಾತ್ತದಾ ದೀಕ್ಷಾ ಫಲಾಧಿಕಾ ॥ ೭೭ ॥

ದೀಕ್ಷಾಸ್ವೀಕಾರಕಾಲವೂ ದೀಕ್ಷಾಫಲದ ಆಧಿಕ್ಯಕ್ಕೆ ಕಾರಣವಾಗುತ್ತದೆ; ಆಷಾಢ, ಕಾರ್ತಿಕ, ಮಾಘ, ವೈಶಾಖ, ಮಾರ್ಗಶಿರ ಮಾಸಗಳಲ್ಲಿಯೂ, ಶುಕ್ಲಪಕ್ಷದ ದಶಮ್ಯಾದಿ ತಿಥಿಗಳಲ್ಲಿಯೂ, ಬುಧ, ಶುಕ್ರ, ಬೃಹಸ್ಪತಿ, ಶನಿ, ರವಿ ವಾರಗಳಲ್ಲಿಯೂ, ಕುಯೋಗವರ್ಜಿತ ಶುಭಯೋಗದಲ್ಲಿಯೂ,[1] ಮೃದು, ಕ್ಷಿಪ್ರ, ಧ್ರುವತಾರೆಗಳಲ್ಲಿಯೂ[1] ವಿಶೇಷವಾಗಿ ಶ್ರವಣ ನಕ್ಷತ್ರದಲ್ಲಿಯೂ,

---

[1] ಯೋಗಗಳು, ೨೭; ವಿಷ್ಕಂಭ, ಪ್ರೀತಿ, ಆಯುಷ್ಮಾನ್ ಇತ್ಯಾದಿ; ಇವುಗಳ ವಿವರಗಳನ್ನು ಜ್ಯೋತಿಷಶಾಸ್ತ್ರದಿಂದ ತಿಳಿಯಬಹುದು. ಈ ೨೭ ಯೋಗಗಳಲ್ಲಿ ಸಾಮಾನ್ಯವಾಗಿ, ಶೂಲ, ಗಂಡ, ವ್ಯಾಘಾತ, ವ್ಯತೀಪಾತ, ವೈಧೃತಿ ಮೊದಲಾದ ಕೆಲವು, ಕುಯೋಗಗಳೆಂದು ಹೇಳಲ್ಪಡುತ್ತವೆ. ಇದಲ್ಲದೇ ದಗ್ಧಯೋಗ—ಮೃತ್ಯು ಯೋಗಗಳು ಸಮಸ್ತಶುಭಕಾರ್ಯಗಳಲ್ಲಿ ನಿಂದ್ಯವೆಂದು ಹೇಳಲಾಗಿವೆ. ಇವು, ತದಿಗೆ-ಬುಧವಾರ, ನವಮಿ-ಶನಿವಾರ ಇತ್ಯಾದಿ ತಿಥಿ ವಾರ ಸಂಯೋಗದಿಂದಲೂ, ಭಾನುವಾರ-ಅನೂರಾಧ ಇತ್ಯಾದಿ ಕೆಲವು ವಿಶಿಷ್ಟವಾದ ನಕ್ಷತ್ರಗಳ ಯೋಗದಿಂದಲೂ, ಸಂಭವಿಸುವುವೆಂದು ಜ್ಯೋತಿಷಿಗಳು ಹೇಳುವರು. ಇಷ್ಟು ಮಾತ್ರವಲ್ಲ– ೨೭ ವಿಷ್ಕಂಭಾದಿ ಯೋಗಗಳಲ್ಲಿ, ನಿರ್ದಿಷ್ಟವಾದ ಕೆಲವು ಘಳಿಗೆಗಳು (ವಿಷ್ಕಂಭ-೩೧; ಪ್ರೀತಿ-೨೪ ಇತ್ಯಾದಿ) ತ್ಯಾಜ್ಯಕಾಲಗಳೆಂದೂ ಹೇಳಲಾಗಿವೆ.

[1] ಚಿತ್ತ, ರೇವತಿ, ಮೃಗಶಿರ, ಅನುರಾಧಾ ನಕ್ಷತ್ರಗಳು 'ಮೃದು'ಸಂಜ್ಞೆಯುಳ್ಳವು; ಅಶ್ವಿನಿ, ಹಸ್ತ, ಪುಷ್ಯ ನಕ್ಷತ್ರಗಳು 'ಕ್ಷಿಪ್ರ' ಎಂದು ಕರೆಯಲ್ಪಡುತ್ತವೆ; ರೋಹಿಣಿ, ಉತ್ತರ, ಉತ್ತರಾಷಾಢ, ಉತ್ತರಾಭಾದ್ರ ನಕ್ಷತ್ರಗಳು 'ಸ್ಥಿರ'

*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಷಾಢೇ–ಆಷಾಢದಲ್ಲಿ, ಕಾರ್ತಿಕೇ–ಕಾರ್ತಿಕದಲ್ಲಿ, ಮಾಘೇ–ಮಾಘದಲ್ಲಿ, ವೈಶಾಖೇ–ವೈಶಾಖದಲ್ಲಿ, ಮಾರ್ಗಶೀರ್ಷಕೇ–ಮಾರ್ಗಶಿರಮಾಸದಲ್ಲಿ, ಪುಷ್ಟಚಂದ್ರೇ–ಚಂದ್ರನು ವೃದ್ಧಿಹೊಂದುವ ಶುಕ್ಲಪಕ್ಷದ, ತಿಥೌ–ತಿಥಿಯಲ್ಲಿ, ತತ್ರ – ಅದರಲ್ಲಿಯೂ, ವಿಶೇಷತಃ – ವಿಶೇಷವಾಗಿ (ಶ್ರೇಷ್ಠವೆಂದರೆ), ದಶಮ್ಯಾದೌ–ದಶಮೀ ಮೊದಲಾದ ತಿಥಿಗಳಲ್ಲಿ, ಬುಧಭಾರ್ಗವಜೀವಾನಾಂ–ಬುಧ, ಶುಕ್ರ, ಬೃಹಸ್ಪತಿಗಳ, ವಾ–ಅಥವಾ, ಶನೇಃ–ಶನಿಯ, ಅರ್ಕಸ್ಯ–ಸೂರ್ಯನ (ರವಿಯ), ದಿನೇ–ದಿನದಲ್ಲಿ ವಾರದಲ್ಲಿ, ಕುಯೋಗೈಃ–ಕುಯೋಗಗಳಿಂದ, ವರ್ಜಿತೇ–ರಹಿತವಾದ, ಶುಭೇ–ಶುಭಯೋಗದಲ್ಲಿ, ಮೃದುಕ್ಷಿಪ್ರ-ಧ್ರುವರ್ಕ್ಷೇಷು–ಮೃದು, ಕ್ಷಿಪ್ರ, ಧ್ರುವತಾರೆಗಳಲ್ಲಿ, ವಿಶೇಷತಃ–ವಿಶೇಷವಾಗಿ, ಶ್ರವಣೇ – ಶ್ರವಣನಕ್ಷತ್ರದಲ್ಲಿ, ವೈಷ್ಣವೀಂ ದೀಕ್ಷಾಂ – ವಿಷ್ಣುದೀಕ್ಷೆಯನ್ನು, ಗೃಹ್ಣೀಯಾತ್–ಸ್ವೀಕರಿಸತಕ್ಕದ್ದು ; ಯದಾ–ಯಾವಕಾಲದಲ್ಲಿ, ಶನಿಃ–ಶನಿಗ್ರಹವು, ಅನುಕೂಲಃಸ್ಯಾತ್–ಅನುಕೂಲವಾಗಿರುವುದೋ, ತದಾ–ಆಗ, ದೀಕ್ಷಾ-ದೀಕ್ಷೆಯ ಸ್ವೀಕಾರವು, ಫಲಾಧಿಕಾ-ಅಧಿಕಫಲವುಳ್ಳದ್ದು (ಆಗುತ್ತದೆ).

ಗಂಗಾದಿಪುಣ್ಯತೀರ್ಥೇಷು ಚಂದ್ರಸೂರ್ಯಗ್ರಹೇ ತಥಾ ।
ಮಹಾಗುರುಸಮಾಜೇ ಚ ಕಾಲಂ ನೈವ ಪ್ರತೀಕ್ಷಯೇತ್ ॥ ೭೮ ॥
ತದಾನೀಂ ಯದಿ ಲಭ್ಯೇತ ಶುಭಕಾಲಸ್ತದಾಧಿಕಂ ।

ವಿಷ್ಣುದೀಕ್ಷೆಯನ್ನು ಸ್ವೀಕರಿಸಬೇಕು; ಶನಿಯು ಅನುಕೂಲನಾಗಿದ್ದಾಗ, ದೀಕ್ಷೆಗೆ ಫಲಾಧಿಕ್ಯವನ್ನು ತಿಳಿಯತಕ್ಕದ್ದು[2] (೭೫–೭೭). ಭಾಗೀರಥೀ ಮೊದಲಾದ ಪುಣ್ಯತೀರ್ಥಗಳಲ್ಲಿಯೂ, ಚಂದ್ರಸೂರ್ಯಗ್ರಹಣಗಳಲ್ಲಿಯೂ, ಮತ್ತು ಮಹಾಗುರುಗಳ ಸನ್ನಿಧಾನದಲ್ಲಿಯೂ ಈ ಹಿಂದೆ

(ಧ್ರುವ) ಸಂಜ್ಞೆಯುಳ್ಳವುಗಳು. ಹೀಗೆಯೇ ಇತರ ನಕ್ಷತ್ರಗಳು ದಾರುಣ—ಉಗ್ರ—ಸಾಧಾರಣ—ಚರ ಇತ್ಯಾದಿ ನಾಮಗಳಿಂದ ಸೂಚಿಸಲ್ಪಡುತ್ತವೆ. ನಕ್ಷತ್ರಗಳು ಆಯಾ ಸಂಜ್ಞಾ ಪ್ರಕಾರದ ಫಲ ಕೊಡತಕ್ಕವುಗಳೆಂದು ಹೇಳಲಾಗುತ್ತದೆ.

2 ದೀಕ್ಷಾಸ್ವೀಕಾರಮಾಡುವ ವ್ಯಕ್ತಿಯ ಕುಂಡಲಿಯಲ್ಲಿ ಚಂದ್ರನಿರುವ ರಾಶಿಯಿಂದ, ೩—೬—೧೧ನೇ ರಾಶಿಗಳಲ್ಲಿ ಶನಿಯು ಇದ್ದರೆ, ಆತನಿಗೆ ಶನಿಯು 'ಅನುಕೂಲ'ನೆಂದೂ, ಉತ್ತಮ ಫಲದಾತನಾಗುವನೆಂದೂ, (ಮಕರ—ಕುಂಭ—ತುಲಾ ರಾಶಿಗಳು ಶನಿಯ ಸ್ವಂತ ಮನೆಗಳೆಂದೂ, ಶನಿಯು ಅಲ್ಲಿದ್ದರೆ ಉಚ್ಚನೆಂದೂ) ಜ್ಯೋತಿಷವು ಹೇಳುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಂಗಾದಿಪುಣ್ಯತೀರ್ಥೇಷು – ಗಂಗಾದಿಪುಣ್ಯತೀರ್ಥಗಳಲ್ಲಿ, ತಥಾ – ಹಾಗೂ, ಚಂದ್ರಸೂರ್ಯಗ್ರಹಾದಿಷು–ಚಂದ್ರಸೂರ್ಯಗ್ರಹಣಗಳಲ್ಲಿ, ಚ– ಮತ್ತು, ಮಹಾಗುರುಸಮಾಜೇ–ಮಹಾಗುರುಗಳಿರುವ ಸಭೆಯಲ್ಲಿ (ಮಹಾ ಗುರುಗಳ ಸನ್ನಿಧಾನದಲ್ಲಿ), ಕಾಲಂ–(ದೀಕ್ಷಾ ಸ್ವೀಕಾರಕ್ಕೆ) ಕಾಲವನ್ನು, ನೈವ ಪ್ರತೀಕ್ಷಯೇತ್ – (ಪೂರ್ವೋಕ್ತಮಾಸ, ತಿಥಿ, ದಿನ, ನಕ್ಷತ್ರ, ಯೋಗಾದಿಗಳನ್ನು) ನಿರೀಕ್ಷಿಸಬಾರದು (ಎಂದರೆ, ಕಾಲದ ಗುಣಾವಗುಣ ವನ್ನು ಗಮನಿಸದೇ ಪುಣ್ಯತೀರ್ಥಾದಿಗಳಲ್ಲಿ ದೀಕ್ಷೆಯನ್ನು ತೆಗೆದುಕೊಳ್ಳ ಬೇಕು); ತದಾನೀಂ–ಆಗಲೇ (ಪುಣ್ಯತೀರ್ಥಕ್ಕೆ ಹೋದ ದಿನವೇ ಅಥವಾ ಗ್ರಹಣಗಳ ದಿನವೇ), ಯದಿ–ಒಂದು ವೇಳೆ, ಶುಭಕಾಲಃ–(ಪೂರ್ವೋಕ್ತ) ಶುಭಕಾಲವು, ಲಭ್ಯೇತ–ದೊರೆತರೆ (ಲಭಿಸಿದರೆ), ತದಾ–ಆಗ, ಅಧಿಕಂ– ದೀಕ್ಷಾಕರ್ಮವು ಫಲಾಧಿಕ್ಯವುಳ್ಳದ್ದಾಗುತ್ತದೆ.

ನಾಮಕರ್ಮಣಿ ಬಾಲಾನಾಂ ತಥೋಪನಯನೇಽಪಿ ಚ || ೭೯ ||
ದೀಕ್ಷಾಕಾಲಃ ಸ ವಿಜ್ಞೇಯಃ ಪಿತುಃ ಕುಲಗುರೋರಪಿ |
ದೀಕ್ಷಾಂ ಗೃಹ್ಣೀತ ಯತ್ನೇನ ವಿಷ್ಣುಪ್ರೀಣನಹೇತವೇ || ೮೦ ||

ಬಾಲಾನಾಂ–ಬಾಲಕರ, ನಾಮಕರ್ಮಣಿ – ನಾಮಕರಣಕರ್ಮದಲ್ಲಿ (ನಾಮಕರಣಕಾಲದಲ್ಲಿ), ತಥಾ – ಹಾಗೂ, ಉಪನಯನೇ ಅಪಿ ಚ–ಉಪ ನಯನಕಾಲದಲ್ಲಿ ಸಹ, ಸಃ ದೀಕ್ಷಾಕಾಲಃ – ಅದೇ (ಶ್ರೇಷ್ಠವಾದ) ದೀಕ್ಷಾ ಕಾಲವೆಂದು, ವಿಜ್ಞೇಯಃ–ತಿಳಿಯತಕ್ಕದ್ದು; ಕುಲಗುರೋಃ–ಕುಲಗುರು ಗಳಿಂದ, ಪಿತುಃ–ತಂದೆಯಿಂದ, ಅಪಿ – ಸಹ, ವಿಷ್ಣುಪ್ರೀಣನಹೇತವೇ– ಶ್ರೀವಿಷ್ಣುಪ್ರೀತ್ಯರ್ಥವಾಗಿ, ಯತ್ನೇನ–ಯತ್ನಪೂರ್ವಕವಾಗಿ, ದೀಕ್ಷಾಂ– ದೀಕ್ಷೆಯನ್ನು, ಗೃಹ್ಣೀತ–ಸ್ವೀಕರಿಸತಕ್ಕದ್ದು.

ಹೇಳಲಾದ ಮಾಸ, ತಿಥಿವಾರಾದಿಗಳನ್ನು ದೀಕ್ಷಾಸ್ವೀಕಾರಕ್ಕೆ, ಅಪೇಕ್ಷಿಸ ತಕ್ಕದ್ದಲ್ಲ; ಒಂದು ಪಕ್ಷದಲ್ಲಿ ಈ ಕಾಲವಿಶೇಷಗಳೂ, ಆಗ ಒದಗಿಬಂದರೆ, ದೀಕ್ಷಾಸ್ವೀಕಾರದಿಂದ ಫಲಾಧಿಕ್ಯವು ದೊರೆಯುತ್ತದೆ (೭೮). ಬಾಲಕರಿಗೆ ನಾಮಕರಣ ಮತ್ತು ಉಪನಯನಗಳನ್ನು ನೆರವೇರಿಸುವ ಕಾಲವು, ದೀಕ್ಷಾ ಸ್ವೀಕಾರಕ್ಕೆ ಪರಮಯೋಗ್ಯವಾದ ದೀಕ್ಷಾಕಾಲವೆನಿಸುತ್ತದೆ. ವಿಷ್ಣುದೀಕ್ಷೆ ಯನ್ನು ತಂದೆಯಿಂದಲೂ, ಕುಲಗುರುಗಳಿಂದ ಸಹ, ಶ್ರೀವಿಷ್ಣುವಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿಖಾಯಜ್ಞೋಪವೀತಾಭ್ಯಾಂ ಯಥಾ ಹೀನೋ ನ ಕರ್ಮಸು ।
ಅಧಿಕಾರೀ ತಥಾ ನ ಸ್ಯಾತ್ತಪ್ತಚಕ್ರಾದಿವರ್ಜಿತಃ ॥ ೮೧ ॥

ಯಥಾ – ಹೇಗೆ, ಶಿಖಾಯಜ್ಞೋಪವೀತಾಭ್ಯಾಂ – ಶಿಖಾಯಜ್ಞೋಪವೀತಗಳಿಂದ (ಜುಟ್ಟು ಜನಿವಾರಗಳಿಂದ), ಹೀನಃ – ರಹಿತನಾದವನು (ಅವುಗಳಿಲ್ಲದವನು), ಕರ್ಮಸು – ವೇದೋಕ್ತ ಕರ್ಮಾನುಷ್ಠಾನದಲ್ಲಿ, ಅಧಿಕಾರೀ ನ–ಅಧಿಕಾರಿಯಲ್ಲವೋ (ಕರ್ಮಾನುಷ್ಠಾನಕ್ಕೆ ಅನರ್ಹನೋ), ತಥಾ – ಹಾಗೆ, ತಪ್ತಚಕ್ರಾದಿವರ್ಜಿತಃ – ತಪ್ತಚಕ್ರಾದಿಗಳಿಲ್ಲದವನು, ನ ಸ್ಯಾತ್ – (ಕರ್ಮಸು ಅಧಿಕಾರೀ – ಕರ್ಮಗಳನ್ನು ಆಚರಿಸಲರ್ಹನು) ಆಗುವದಿಲ್ಲ.

ಗಾಯತ್ರ್ಯಾದಿಷು ಮಂತ್ರೇಷು ವೇದಸ್ಯಾಧ್ಯಯನಾದಿಷು ।
ಅತಪ್ತಚಕ್ರಗಾತ್ರೋಽಪಿ ನಾಧಿಕಾರೀ ಭವೇದ್ಧ್ರುವಂ ॥ ೮೨ ॥

ಗಾಯತ್ರ್ಯಾದಿಷು ಮಂತ್ರೇಷು–ಗಾಯತ್ರೀ ಮೊದಲಾದ ಮಂತ್ರಗಳ ವಿಷಯದಲ್ಲಿ (ಮಂತ್ರಗಳ ಜಪದಲ್ಲಿ), ವೇದಸ್ಯ–ವೇದದ, ಅಧ್ಯಯನಾದಿಷು–ಅಧ್ಯಯನಾದಿಗಳಲ್ಲಿ, ಅಪಿ – ಸಹ, ಅತಪ್ತಚಕ್ರಗಾತ್ರಃ – ತಪ್ತಚಕ್ರವನ್ನು

ಪ್ರೀತ್ಯರ್ಥವಾಗಿ, ಯತ್ನಪೂರ್ವಕವಾಗಿ ದೀಕ್ಷೆಯನ್ನು ಸ್ವೀಕರಿಸತಕ್ಕದ್ದು (೭೯–೮೦). ಶಿಖಾಯಜ್ಞೋಪಗಳಿಲ್ಲದವನು ವೇದೋಕ್ತಸಂಧ್ಯಾವಂದನಾದಿ ಕರ್ಮಗಳನ್ನು ಆಚರಿಸಲು ಹೇಗೆ ಅನರ್ಹನೋ, (ಅಧಿಕಾರಿಯಲ್ಲವೋ—ಆತನ ಕರ್ಮಗಳು ಹೇಗೆ ವ್ಯರ್ಥವಾಗುವವೋ) ಹಾಗೆ ತಪ್ತಚಕ್ರಾದಿ ವಿಷ್ಣುಚಿಹ್ನೆಗಳನ್ನು ದೇಹದಲ್ಲಿ ಧರಿಸದಿದ್ದವನು (ಬಾಹ್ಯದೀಕ್ಷಾರಹಿತನು), ಆ ಕರ್ಮಗಳ ಆಚರಣೆಗೆ ಅಯೋಗ್ಯನೆನಿಸುತ್ತಾನೆ[1] (೮೧). ಗಾಯತ್ರ್ಯಾದಿ

---

[1] 'ತಪ್ತಚಕ್ರಂ ದ್ವಿಭುಜೇ ಧಾರ್ಯಮಿತಿ । ಅಗ್ನಿನಾ ವೈ ಹೋತ್ರಾ
ವಿಷ್ಣೋಃ ಸಾಯುಜ್ಯಂ ಸ ಲೋಕತಾಮಾಪ್ನೋತಿ ।'
(ಶುಕ್ಲ ಯಜುರ್ವೇದದ ಶತಪಥಬ್ರಾಹ್ಮಣ) ;

'ಅಗ್ನಿರ್ವೈ ಸಹಸ್ರಾರಃ ಸಹಸ್ರಾರೋ ನೇಮಿಃ ನೇಮಿನಾ ತಪ್ತತನುಃ
ಸಾಯುಜ್ಯಂ ಪ್ರಾಪ್ನುಯಾತ್ ॥' (ಸಾಮವೇದ) ;

'ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ।
ಅತಪ್ತತನೂರ್ನತದಾಮೋ ಅಶ್ನುತೇ ಶೃತಾಸ ಇದ್ವಹಂ ತಸ್ತತ್ ಸಮಾಶತ ।'
(ಋಗ್ವೇದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರಿಸದ ದೇಹವುಳ್ಳವನು, ಧ್ರುವಂ – ನಿಶ್ಚಯವಾಗಿಯೂ, ಅಧಿಕಾರೀ– ಅಧಿಕಾರಿಯು (ಅವುಗಳ ಆಚರಣೆಯಿಂದ ಹೊಂದಬೇಕಾದ ಫಲಕ್ಕೆ ಅರ್ಹನು), ನ ಭವೇತ್–ಆಗುವುದಿಲ್ಲ.

ಮಂತ್ರಗ್ರಹಣಕಾಲೇ ತು ತಪ್ತಚಕ್ರಾದಿಧಾರಣಂ |
ವೈಷ್ಣವೈಃ ಕ್ರಿಯತೇ ತದ್ಧಿ ಮಂತ್ರಷಾಡ್ಗುಣ್ಯಕೃದ್ಭವೇತ್ || ೮೩ ||

ಮಂತ್ರಗಳನ್ನು ಜಪಿಸಲಿಕ್ಕೂ, ವೇದಗಳ ಅಧ್ಯಯನಾದಿಗಳನ್ನು[1] ಮಾಡಲಿಕ್ಕೂ, ದೇಹದಲ್ಲಿ ತಪ್ತಮುದ್ರೆಗಳನ್ನು ಧರಿಸದವನು ಅರ್ಹನಾಗುವುದಿಲ್ಲ (೮೨). ವಿಷ್ಣುಭಕ್ತರು ಗುರುಗಳಿಂದ ಮಂತ್ರೋಪದೇಶವನ್ನು ಪಡೆಯುವಾಗ ಅವರಿಂದ ತಪ್ತಚಕ್ರಾದಿ ಮುದ್ರೆಗಳನ್ನೂ ಧರಿಸಬೇಕು—ಇದರಿಂದ,

---

ಈ ಶ್ರುತಿಗಳ ಭಾವಾರ್ಥಗಳು ಕ್ರಮವಾಗಿ ಹೀಗಿವೆ:—

'ಹೋಮಾಗ್ನಿಯಲ್ಲಿ ದಹಿಸಿ, ಎರಡೂ ಭುಜಗಳಲ್ಲಿ ಧರಿಸಿದವನು, ಸಾಯುಜ್ಯ ಸಾಲೋಕ್ಯ ಮುಕ್ತಿಯನ್ನು ಹೊಂದುತ್ತಾನೆ.'

'ಅಗ್ನಿಯೇ ಸಹಸ್ರಾರವು; ಸಹಸ್ರಾರವೇ ನೇಮಿಯು; ನೇಮಿಯಿಂದ ತಪ್ತವಾದ ದೇಹವುಳ್ಳವನು, ಸಾಯುಜ್ಯವನ್ನು ಹೊಂದುತ್ತಾನೆ.'

'ಪವಿತ್ರಂ ಚರಣಂ ನೇಮೀ ಪವಿಶ್ಚಕ್ರಂ ಸುದರ್ಶನಂ |
ಸಹಸ್ರಾರಂ ಪ್ರಾಕೃತಘ್ನಂ ಲೋಕಾಧಾರಂ ಮಹೌಜಸಂ ||'

ಇವು ಹತ್ತು ಶ್ರೀವಿಷ್ಣು ಚಕ್ರದ ನಾಮಗಳು.

'ಚತುರ್ವರ್ಗಖನಿಗೂ ಪ್ರಭುವಾದ ಹೇ ವಿಷ್ಣೋ! (ಬ್ರಹ್ಮಣಸ್ಪತೇ), ಸರ್ವತ್ರ ವ್ಯಾಪ್ತವಾದ ಪವಿತ್ರ ತೇಜಸ್ಸುಳ್ಳ ನಿನ್ನ ಚಕ್ರದಿಂದ ಚಿಹ್ನಿತವಾದ ದೇಹವುಳ್ಳ ನಾವು ಶತ್ರುರಹಿತರಾಗಿ (ಪಾಪವಿಮುಕ್ತರಾಗಿ) ನಿನ್ನ ಪರಮಪದವನ್ನು ಹೊಂದುತ್ತೇವೆ'; ಅತಪ್ತತನುಗಳು (ತಪ್ತಚಕ್ರವನ್ನು ಧರಿಸದ ದೇಹವುಳ್ಳವರು) ಉತ್ತಮಲೋಕವನ್ನು ಹೊಂದುವುದಿಲ್ಲ.

('ಶೃತಾಸ್ತ'ವೆಂದರೆ ದಹಿಸಲ್ಪಟ್ಟವುಗಳೆಂದರ್ಥ; 'ಶೃ' ಎಂದರೆ ದಹಿಸುವುದು. 'ಅಗ್ನಿದೂರ ಸಮೀಪಸ್ಥ ವಸ್ತುನ್ಯಾತ್ಮತ್ವ ಸಾಮ್ಯತಃ | ಶೃತಾಸ ಇತಿಶಬ್ದಾರ್ಥೋ ದಾಹವಂತೋ ನ ತಾಪಸಾಃ'). ಏವಂ ಚ ಮೂರು ವೇದಗಳು ತಪ್ತಚಕ್ರಧಾರಣೆಯನ್ನು ವಿಧಿಸುತ್ತವೆ. ಅದ್ದರಿಂದ ಅದಿಲ್ಲದೇ (ಈ ಬಾಹ್ಯವಿಷ್ಣುದೀಕ್ಷೆಯ ವಿನಹ) ಮೋಕ್ಷವಿಲ್ಲ—ಮೋಕ್ಷಸಾಧಕಗಳೆಂಬ ವಿಹಿತಕರ್ಮಾಚರಣೆಯೂ ವ್ಯರ್ಥ.

[1] ಅಧ್ಯಯನಾದಿಗಳೆಂಬಲ್ಲಿರುವ 'ಆದಿ' ಶಬ್ದದಿಂದ, ಅಧ್ಯಾಪನ ಯಜನ–ಯಾಜನ, ದಾನ ಪರಿಗ್ರಹಗಳೂ ಸೂಚಿತವಾಗಿವೆ—ವೇದೋಕ್ತ ಕರ್ಮಾನುಷ್ಠಾನಗಳಲ್ಲಿ ಬ್ರಾಹ್ಮಣಾದಿ ದ್ವಿಜರು, ತಂತಮ್ಮ ವರ್ಣೋಚಿತ ವೇದವಿಹಿತ ಕರ್ಮಗಳಲ್ಲಿ ಅನಧಿಕಾರಿಗಳಾಗುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರಗ್ರಹಣಕಾಲೇ ತು–ಮಂತ್ರವನ್ನು (ಗುರುವಿನಿಂದ) ಸ್ವೀಕರಿಸುವ (ಉಪದೇಶವನ್ನು ಪಡೆಯುವ) ಕಾಲದಲ್ಲಿಯೇ, ತಪ್ತಚಕ್ರಾದಿಧಾರಣಂ–ತಪ್ತಚಕ್ರಾದಿಧಾರಣೆಯು, (ತಪ್ತಮುದ್ರಾಧಾರಣೆಯು), ವೈಷ್ಣವೈಃ–ವಿಷ್ಣುಭಕ್ತರಿಂದ, ಕ್ರಿಯತೇ – ಮಾಡಲ್ಪಡುತ್ತದೆ; ತತ್ – ಹೀಗೆ ಮಾಡುವುದು (ತಪ್ತಮುದ್ರೆಗಳನ್ನು ಗುರುಗಳಿಂದ ದೇಹದಲ್ಲಿ ಪಡೆಯುವುದು), ಮಂತ್ರಷಾಡ್ಗುಣ್ಯಕೃತ್–ಉಪದೇಶ ಹೊಂದಿದ ಮಂತ್ರಜಪದ ಫಲವು ಆರುಮಡಿ ಅಧಿಕವಾದುದು, ಭವೇತ್ ಹಿ–ಆಗುವುದು ನಿಶ್ಚಯ.

ವಿನಾ ಮಂತ್ರಗ್ರಹಂ ಯತ್ತು ತಪ್ತಚಕ್ರಾದಿಧಾರಣಂ ।
ಪಾಪಾನಾಂ ನಾಶಕಂ ತತ್ಸ್ಯಾತ್ ಪುಣ್ಯಾನಾಂ ಚ ವಿವರ್ಧಕಂ ॥೭೪॥
ವಿಷ್ಣುಪ್ರೀತಿಕರಂಭೂಯಸ್ತತೋಽಪಿ ಪ್ರತ್ಯಹಂ ಲಿಖೇತ್ ।
ಸ್ವಸ್ವವರ್ಣೋಕ್ತಪುಂಡ್ರೇಷು ಹೃದಿಬಾಹೂದರಾದಿಷು ॥ ೭೫ ॥
ಚಕ್ರಾದೀನಿ ಯಥಾಸ್ಥಾನಂ ದ್ವಾರವತ್ಯಾದಿಮೃತ್ಸ್ನಯಾ ।

ಉಪದೇಶಗೊಂಡ ಮಂತ್ರಜಪವು ಆರರಷ್ಟು ಅಧಿಕಫಲಪ್ರಾಪಕವಾಗುತ್ತದೆ. ಇದು ಪ್ರಮಾಣಸಿದ್ಧ. (೭೩). ಮಂತ್ರೋಪದೇಶವನ್ನು ಪಡೆಯದೇ ಗುರುಗಳಿಂದ ತಪ್ತಮುದ್ರಾಧಾರಣವನ್ನು ಮಾತ್ರ ಪಡೆಯುವುದೂ ವ್ಯರ್ಥವಲ್ಲ—ಮಹಾಫಲಪ್ರಾಪಕವಾದುದೇ; ತಪ್ತಚಕ್ರಾದಿ ಧಾರಣೆಯಿಂದ ಪಾಪಗಳ ನಾಶವೂ, ಪುಣ್ಯವೃದ್ಧಿಯೂ ಆಗುತ್ತದೆ; ಇದಕ್ಕಿಂತ ಹೆಚ್ಚಿನ ಫಲವೆಂದರೆ, ಶ್ರೀವಿಷ್ಣುವೂ ಪ್ರೀತನಾಗುತ್ತಾನೆ. ವಿಷ್ಣುಚಿಹ್ನೆಗಳನ್ನು ದೇಹದಲ್ಲಿ ಧರಿಸುವುದು, ವಿಷ್ಣುಪ್ರೀತಿಕರವಾದುದರಿಂದ, ವಿಷ್ಣುಭಕ್ತರೆಲ್ಲರೂ, ತಂತಮ್ಮ ವರ್ಣಗಳಿಗೆ (ಜಾತಿಗೆ) ವಿಧಿಸಲಾಗಿರುವ ನಿಯಮಗಳನ್ನನುಸರಿಸಿ,[1] ತಾವು, ಹೃದಯ, ಭುಜ, ಉದರ ಮೊದಲಾದ ಸ್ಥಳಗಳಲ್ಲಿ ಧರಿಸುವ ನಾಮಗಳ ಮೇಲೆ, ವಿಧಿಗಳಲ್ಲಿ ಹೇಳಲಾಗುವಂತೆ, ಗೋಪೀಚಂದನಾದಿ ಮೃತ್ತಿಕೆಯಿಂದ, ಚಕ್ರಾದಿ ಚಿಹ್ನೆಗಳನ್ನು, ನಿತ್ಯವೂ, ಧರಿಸತಕ್ಕದ್ದು (೭೪–೭೫). ತಪ್ತಚಕ್ರಾದಿಗಳ ಧಾರಣಕ್ರಮ ಹೇಗೆಂದರೆ:—ವಿಧ್ಯುಕ್ತಕ್ರಮದಿಂದ ಅಗ್ನಿಪ್ರತಿಷ್ಠೆಯನ್ನು ಮಾಡಿ, ಎಳ್ಳುತುಪ್ಪಗಳ ಮಿಶ್ರಣದಿಂದ ಅಥವಾ ತುಪ್ಪದಿಂದ

---

1 ಈ ಮುಂತಾದ ನಿಯಮಗಳು ಈ ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರಗ್ರಹಂ ವಿನಾ – ಮಂತ್ರೋಪದೇಶವನ್ನು ಸ್ವೀಕರಿಸುವುದನ್ನು ಬಿಟ್ಟು, ಯತ್ – ಯಾವ, ತಪ್ತಚಕ್ರಾದಿಧಾರಣಂ – ತಪ್ತಚಕ್ರಾದಿಗಳ ಧಾರಣವೋ (ಮಂತ್ರೋಪದೇಶವಿಲ್ಲದ ಕೇವಲ ತಪ್ತಚಕ್ರಾದಿಧಾರಣವು), ತತ್–ಅದು, ಪಾಪಾನಾಂ–ಪಾಪಗಳ, ನಾಶಕಂ–ನಾಶಮಾಡತಕ್ಕದ್ದೂ, ಚ–ಮತ್ತು, ಪುಣ್ಯಾನಾಂ–ಪುಣ್ಯಗಳ, ವಿವರ್ಧಕಂ–ವೃದ್ಧಿಗೊಳಿಸತಕ್ಕದ್ದೂ, ಭೂಯಃ–ಅತಿಶಯವಾಗಿ, ವಿಷ್ಣುಪ್ರೀತಿಕರಂ–ಶ್ರೀವಿಷ್ಣುಪ್ರೀತಿಯನ್ನುಂಟು ಮಾಡುವುದೂ, ಸ್ಯಾತ್ – ಆಗುತ್ತದೆ; ತತಃ – ಆದ್ದರಿಂದ, ಅಪಿ – ಸಹ (ಶ್ರೀವಿಷ್ಣುಪ್ರೀತಿಜನಕವಾದ್ದರಿಂದ ಸಹ), ಹೃದಿಬಾಹೂದರಾದಿಷು–ಹೃದಯ (ಎದೆ), ಬಾಹು (ಭುಜಗಳು), ಉದರ (ಹೊಟ್ಟೆ) ಮೊದಲಾದ ದೇಹ ಭಾಗ ಗಳಲ್ಲಿ, ಸ್ವಸ್ವರ್ಣೋಕ್ತಪುಂಡ್ರೇಷು–ತಂತಮ್ಮ ವರ್ಣಗಳಿಗೆ ವಿಧಿಸಲ್ಪಟ್ಟಿರುವ ಪುಂಡ್ರ (ನಾಮ) ಗಳಲ್ಲಿ (ನಾಮುಗಳ ಮೇಲೆ), ಯಥಾಸ್ಥಾನಂ – ವಿಧ್ಯುಕ್ತ ಸ್ಥಾನಗಳಲ್ಲಿ, ದ್ವಾರವತ್ಯಾದಿ – ದ್ವಾರಕಾ (ದ್ವಾರಾವತೀ) ಮೊದಲಾದ ಪವಿತ್ರಕ್ಷೇತ್ರಗಳ, ಮೃತ್ಸ್ನಯಾ–ಮೃತ್ತಿಕೆಯಿಂದ (ಗೋಪೀ ಚಂದನಾದಿ ಮೃತ್ತಿಕೆಯಿಂದ), ಪ್ರತ್ಯಹಂ–ಪ್ರತಿನಿತ್ಯವೂ, ಚಕ್ರಾದೀನಿ–ಚಕ್ರ (ಶಂಖ, ಗದಾ, ಪದ್ಮ) ಮೊದಲಾದವುಗಳನ್ನು, ಲಿಖೇತ್–ಲೇಖಿಸಿಕೊಳ್ಳಬೇಕು (ಗುರ್ತಿಸಿಕೊಳ್ಳಬೇಕು).

ವಿಧಿನಾಗ್ನಿಂ ಪ್ರತಿಷ್ಠಾಪ್ಯ ತಿಲಾಜ್ಯೇನ ಘೃತೇನ ವಾ ॥ ೮೬ ॥
ಸಹಸ್ರಂ ವ್ಯಾಹೃತೇರ್ಹುತ್ವಾ ವಷಟ್ ತೇ ವಿಷ್ಣುಮಂತ್ರತಃ ।
ಅಷ್ಟೋತ್ತರಶತಂ ಹುತ್ವಾ ಪ್ರತ್ಯೇಕಂ ಚ ತತಃ ಪರಂ ॥ ೮೭ ॥
ಹೋಮಶೇಷಂ ಸಮಾಪ್ಯಾಗ್ನೌ ಚಕ್ರಶಂಖೌ ಪ್ರತಾಪಯೇತ್ ।

೧೦೦೦ (ಒಂದು ಸಾವಿರ) ಹೋಮಗಳನ್ನು, ವ್ಯಾಹೃತಿಮಂತ್ರದಿಂದ ಅರ್ಪಿಸಿ, ವಷಟ್ಕಾರ ರೂಪದ ವಿಷ್ಣುಮಂತ್ರದಿಂದ (೧೦೮) ನೂರೆಂಟು ಹೋಮ ಗಳನ್ನೂ, ವಿಧ್ಯುಕ್ತ ಅವಶಿಷ್ಟ ಹೋಮಗಳನ್ನು ಹೋಮಶೇಷದಿಂದಲೂ ಮಾಡಿ, ಅಗ್ನಿಕಾರ್ಯವನ್ನು ಮುಗಿಸಿ, ಆ ಅಗ್ನಿಯಲ್ಲಿ, ಶರೀರದಲ್ಲಿ ಮುದ್ರಿಸಲು ಉಪಯೋಗಿಸುವ ಚಕ್ರಶಂಖಗಳನ್ನು, ಕಾಯಿಸಬೇಕು (ದಹಿಸ ಬೇಕು) (೮೬–೮೭). ಅಗ್ನಿನಮಸ್ಕಾರದ ನಂತರ, ದೀಕ್ಷಾರ್ಥವಾಗಿ ಪ್ರಾಪ್ತ ನಾಗಿರುವ ವಿಷ್ಣುತತ್ಪರನಾದ ಭಕ್ತನಿಗೆ, ತಂದೆಯಾಗಲಿ, ಗುರುವಾಗಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಧಿನಾ – ವಿಧಿಪೂರ್ವಕವಾಗಿ (ವಿಧ್ಯುಕ್ತಪ್ರಕಾರವಾಗಿ), ಅಗ್ನಿಂ– ಅಗ್ನಿಯನ್ನು, ಪ್ರತಿಷ್ಠಾಪ್ಯ–ಪ್ರತಿಷ್ಠಿಸಿ (ಅಗ್ನಿದೇವನನ್ನು ಸ್ಥಾಪನೆಮಾಡಿ), ತಿಲಾಜ್ಯೇನ–ಎಳ್ಳುತುಪ್ಪದಿಂದ (ಇವುಗಳ ಮಿಶ್ರಣದಿಂದ), ವಾ – ಅಥವಾ, ಘೃತೇನ–ತುಪ್ಪದಿಂದ ಮಾತ್ರ, ಸಹಸ್ರಂ – ಸಾವಿರಾವರ್ತಿ, ವ್ಯಾಹೃತೀಃ– ವ್ಯಾಹೃತಿ ಮಂತ್ರಗಳನ್ನು (ಉಚ್ಚರಿಸಿ) (ಭೂರ್ಭುವಸ್ಸ್ವಃ–ಎಂಬುದು ವ್ಯಾಹೃತಿ), ಹುತ್ವಾ – ಹೋಮಮಾಡಿ, (ಮತ್ತು) ವಷಟ್‌ತೇ – 'ವಷಟ್‌ತೇ' ಎಂಬ ವಷಟ್ಕಾರ ರೂಪದ, ವಿಷ್ಣುಮಂತ್ರತಃ–ವಿಷ್ಣುಮಂತ್ರದಿಂದ, ಅಷ್ಟೋತ್ತರ- ಶತಂ–ನೂರೆಂಟಾವರ್ತಿ, ಹುತ್ವಾ–ಹೋಮಿಸಿ, ತತಃಪರಂ – ಆ ನಂತರ, ಪ್ರತ್ಯೇಕಂ – ಪ್ರತ್ಯೇಕವಾದ, ಹೋಮಶೇಷಂ – ಅವಶಿಷ್ಟಹೋಮಗಳನ್ನು, ಸಮಾಪ್ಯ–ಮುಗಿಸಿ, ಅಗ್ನೌ–ಅಗ್ನಿಯಲ್ಲಿ, ಚಕ್ರಶಂಖೌ–ಚಕ್ರ ಮತ್ತು ಶಂಖ ಗಳನ್ನು ಪ್ರತಾಪಯೇತ್–ದಹಿಸಬೇಕು (ಕಾಸಬೇಕು).

ಅಭಿವಾದನತಃ ಪಶ್ಚಾತ್ ಪ್ರಪನ್ನಂ ವಿಷ್ಣುತತ್ಪರಂ ॥ ೮೮ ॥

ಪಿತಾವಾಪಿ ಗುರುರ್ವಾಪಿ ಯಃ ಕೋಽಪಿ ಹಿ ಮಹಾನ್ ಭವೇತ್ ।
ಸ ದಹೇದ್ದಕ್ಷಿಣೇ ಬಾಹೌ ಚಕ್ರಂ ಶಂಖಂ ಚ ವಾಮತಃ ॥ ೮೯ ॥

ಸ್ತನಯೋರೂರ್ಧ್ವತಶ್ಚಾಪಿ ಸ್ವೇಚ್ಛಯಾ ಚ ತಥೋದರೇ ।
ಏವಂ ಮುದ್ರಾಪಂಚಕಂ ವಾ ಮುದ್ರಾದ್ವಯಮಥಾಪಿ ವಾ ॥ ೯೦ ॥

ಗೃಹ್ಣೀಯಾತ್ತು ಪ್ರಯತ್ನೇನ ಬಾಹ್ಯದೀಕ್ಷಾ ತು ಸಾ ಭವೇತ್ ।

ಅಥವಾ ಸದ್ಗುಣಗಳಿಂದ ಪೂಜ್ಯರಾದ ಅನ್ಯರು ಯಾರಾದರೊಬ್ಬರು, ಮುದ್ರೆಯನ್ನು ಕೊಡಬೇಕು (ದೇಹದಲ್ಲಿ ಒತ್ತಬೇಕು); ಬಲಭುಜದಲ್ಲಿ ಚಕ್ರವನ್ನೂ, ಎಡಭುಜದಲ್ಲಿ ಶಂಖವನ್ನೂ, ಹೀಗೆಯೇ ಬಲಸ್ತನಭಾಗದಲ್ಲಿ ಚಕ್ರವನ್ನೂ, ಎಡಸ್ತನಭಾಗದಲ್ಲಿ ಶಂಖವನ್ನೂ, ಇಚ್ಛಾನುಸಾರ ಹೊಟ್ಟೆಯಮೇಲೆ ಒಂದು ಚಕ್ರವನ್ನೂ ಮುದ್ರಿಸಬೇಕು. ಹೀಗೆ ಪಂಚಮುದ್ರೆಗಳನ್ನಾಗಲಿ ಅಥವಾ ಎರಡನ್ನು ಮಾತ್ರವಾಗಲಿ (ಬಲ ಎಡಭುಜಗಳಲ್ಲಿ ಮಾತ್ರವಾಗಲಿ) ತಪ್ತಚಕ್ರ ಶಂಖಮುದ್ರೆಗಳನ್ನು ಸ್ವೀಕರಿಸಬೇಕು. ಯತ್ನಪೂರ್ವಕವಾಗಿ ತಪ್ತಮುದ್ರಾ ಧಾರಣೆಯನ್ನು ಪಡೆಯಬೇಕು. ಇದೇ ಬಾಹ್ಯದೀಕ್ಷೆ ಎನಿಸುತ್ತದೆ (೮೮–೯೦). ಬಾಲಕರಿಗೆ ಹೊಟ್ಟೆಯಮೇಲೆ ಮಾತ್ರ ಒಂದು ಚಕ್ರವನ್ನೂ, ಸ್ತ್ರೀಯರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಿವಾದನತಃ ಪಶ್ಚಾತ್ – ಅಗ್ನಿಯನ್ನು ನಮಸ್ಕರಿಸಿದನಂತರ, ವಿಷ್ಣುತತ್ಪರಂ–ಶ್ರೀವಿಷ್ಣು ಸರ್ವೋತ್ತಮತ್ವಜ್ಞಾನದಿಂದ, ವಿಷ್ಣುಭಕ್ತನಾದ, ಪ್ರಪನ್ನಂ – (ದೀಕ್ಷಾರ್ಥವಾಗಿ) ಬಂದಿರುವ (ಶರಣು ಹೊಂದಿರುವ) ಮನುಷ್ಯನನ್ನು, ಪಿತಾವಾಪಿ–ತಂದೆಯಾಗಲಿ, ಗುರುರ್ವಾಪಿ–ಗುರುವಾಗಲಿ, ಯಃ ಕಃ ಅಪಿ–ಯಾರಾದರಾಗಲಿ, ಮಹಾನ್‌ಭವೇತ್ – ಮಹಾತ್ಮನಾದ, (ಪೂಜ್ಯನಾದ), ಸಃ–ಒಬ್ಬನು, ದಹೇತ್–(ದೇಹವನ್ನು) ಮುದ್ರಿಸಬೇಕು (ತಪ್ತಚಕ್ರಾದಿಗಳನ್ನು ದೇಹಕ್ಕೆ ಒತ್ತಬೇಕು); ದಕ್ಷಿಣೇಬಾಹೌ – ಬಲಭುಜದಲ್ಲಿ, ಚಕ್ರಂ–ಚಕ್ರವನ್ನೂ, ವಾಮತಃ–ಎಡಭುಜದಲ್ಲಿ, ಶಂಖಂ ಚ–ಶಂಖವನ್ನೂ, ಸ್ತನಯೋಃ–ಎದೆಯ ಎಡಬಲಭಾಗಗಳ, ಊರ್ಧ್ವತಃ–ಮೇಲ್ಭಾಗದಲ್ಲಿಯೂ (ಬಲಭಾಗದಲ್ಲಿ ಚಕ್ರವನ್ನೂ, ಎಡಭಾಗದಲ್ಲಿ ಶಂಖವನ್ನೂ), ಚ–ಮತ್ತು, ಸ್ವೇಚ್ಛಯಾ – ಗುರುವಿನ) ಇಚ್ಛಾನುಸಾರವಾಗಿ, ತಥಾ–ಹಾಗೆಯೇ (ಚಕ್ರವನ್ನು), ಉದರೇ ಅಪಿ–ಉದರಲ್ಲಿಯೂ (ಹೊಟ್ಟೆಯ ಮೇಲೂ), ಏವಂ–ಹೀಗೆ, ಮುದ್ರಾಪಂಚಕಂ ವಾ–ಐದು ಮುದ್ರೆಗಳನ್ನಾಗಲಿ, ಮುದ್ರಾದ್ವಯಂ ಅಥಾಪಿ–ಎರಡೇ ಮುದ್ರೆಗಳನ್ನಾಗಲಿ (ಬಲಎಡಭುಜಗಳ ಮೇಲೆ ಎರಡನ್ನಾಗಲಿ), ಪ್ರಯತ್ನೇನ – ಯತ್ನಪೂರ್ವಕ (ಅವಕಾಶವನ್ನು ಕಲ್ಪಿಸಿಕೊಂಡು – ಅವಕಾಶ ಬಂದೊದಗಿದಾಗ), ಗೃಹ್ಣೀಯಾತ್ ತು – ಸ್ವೀಕರಿಸಲೇಬೇಕು; ಸಾ – ಅದು, ಬಾಹ್ಯದೀಕ್ಷಾ – ಬಾಹ್ಯದೀಕ್ಷೆಯು, ಭವೇತ್–ಆಗುತ್ತದೆ (ಹೀಗೆ ಮುದ್ರೆಯನ್ನು ಧರಿಸುವುದು ಬಾಹ್ಯದೀಕ್ಷೆಯು).

ಬಾಲಾನಾಮುದರೇಷ್ವೇವ ಬಾಹ್ವೋರೇವ ಹಿ ಯೋಷಿತಾಂ ॥ ೯೧ ॥
ಶೂದ್ರಾದೀನಾಂ ತಥೈವ ಸ್ಯಾನ್ಮುದ್ರಾದ್ವಿತಯಮೇಹ ಹಿ ।
ಶೂದ್ರಾದಿಯೋಷಿತಾದೀನಾಂ ನ ದಹೇತ್ ಹೋಮವಹ್ನಿನಾ ॥೯೨॥

ಬಲ ಎಡ ಕೈಗಳಮೇಲೆ ಮಾತ್ರ ಕ್ರಮವಾಗಿ ಚಕ್ರಶಂಖಗಳನ್ನು, ಮುದ್ರಿಸಬೇಕು (ಸ್ತ್ರೀಯರಿಗೆ ಉದರದಮೇಲೂ ಸ್ತನಭಾಗಗಳಲ್ಲಿಯೂ ಮುದ್ರಿಸಕೂಡದು); ಸ್ತ್ರೀಯರಂತೆಯೇ ಶೂದ್ರಾದಿ ಕೀಳುಜಾತಿಯವರಿಗೂ ಎರಡೇ ಮುದ್ರೆಗಳು ವಿಹಿತವಾಗಿವೆ—ಇದರಲ್ಲಿ ಸಹ ವಿಶೇಷವೇನೆಂದರೆ;—ಶೂದ್ರಾದಿ ಸ್ತ್ರೀ ಮೊದಲಾದವರಿಗೆ ಹೋಮಾಗ್ನಿಯಲ್ಲಿ ದಹಿಸಿದ (ಕಾಯಿಸಿದ) ಚಕ್ರಾದಿಗಳಿಂದ ಮುದ್ರೆಗಳನ್ನು ಕೊಡಬಾರದು (೯೧–೯೨). ಹೋಮಾಗ್ನಿಯಲ್ಲಿ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಬಾಲಾನಾಂ – ಬಾಲಕರಿಗೆ (ಅನುಪನೀತರಿಗೆ), ಉದರೇಷು ಏವ– ಹೊಟ್ಟೆಯ ಮೇಲೆ ಮಾತ್ರ (ತಪ್ತಚಕ್ರವನ್ನು ಮುದ್ರಿಸಬೇಕು); ಯೋಷಿತಾಂ – ಸ್ತ್ರೀಯರಿಗೆ, ಬಾಹ್ವೋಃ – ಬಾಹುಗಳಲ್ಲಿ (ಕೈಗಳಮೇಲೆ) ಮಾತ್ರ (ಬಲ ಎಡಗೈಗಳಮೇಲೆ ಕ್ರಮವಾಗಿ ಚಕ್ರಶಂಖಗಳನ್ನು ಮಾತ್ರ ಧಾರಣಮಾಡಿಸಬೇಕು); ತಥಾ–ಹಾಗೂ, ಶೂದ್ರಾದೀನಾಂ ಏವ– ಶೂದ್ರಾದಿಗಳಿಗೂ, ಮುದ್ರಾದ್ವಿತಯಂ ಏವ-ಎರಡು ಮುದ್ರೆಗಳು ಮಾತ್ರವೇ; ಶೂದ್ರಾದಿಯೋಷಿತಾದೀನಾಂ – ಶೂದ್ರಾದಿಗಳು ಹಾಗೂ ಸ್ತ್ರೀಯರೇ ಮೊದಲಾದವರಿಗೆ, ಹೋಮವಹ್ನಿನಾ–ಹೋಮಾಗ್ನಿಯಿಂದ, ನ ದಹೇತ್– ಚಕ್ರಾದಿಗಳನ್ನು ದಹಿಸಕೂಡದು (ಹೋಮಾಗ್ನಿಯಲ್ಲಿ ಕಾಸಿದ ಚಕ್ರಾದಿಗಳಿಂದ ಮುದ್ರೆಗಳನ್ನು ಕೊಡಬಾರದು).

ದ್ವಿಜಾನಾಮೇವ ಹೋಮಾಗ್ನಿತಪ್ತಚಕ್ರಾದಿಧಾರಣಂ ।
ದ್ವಿಜಾನಾಂ ಯೋಷಿತೋ ಬಾಲಾಶ್ಚಕ್ರಶಂಖಾದಿಮುದ್ರಯಾ ॥೯೩॥
ಹೋಮಾಗ್ನಿನಾಪಿ ದಗ್ಧವ್ಯಾಃ ಶೂದ್ರಾದೀನ್ ನ ತಥಾ ದಹೇತ್ ।

ಹೋಮಾಗ್ನಿತಪ್ತಚಕ್ರಾದಿಧಾರಣಂ – ಹೋಮಾಗ್ನಿಯಲ್ಲಿ ದಹಿಸಿದ ಚಕ್ರಾದಿಗಳ ಧಾರಣವು, ದ್ವಿಜಾನಾಂ ಏವ–ದ್ವಿಜರಿಗೆ ಮಾತ್ರ (ಬ್ರಾಹ್ಮಣ ಕ್ಷತ್ರಿಯ ವೈಶ್ಯವರ್ಣದವರಿಗೆ ಮಾತ್ರ); ದ್ವಿಜಾನಾಂ–ದ್ವಿಜರ, ಯೋಷಿತಃ– ಸ್ತ್ರೀಯರು, ಚ–ಮತ್ತು, ಬಾಲಾಃ–ಬಾಲಕರು, ಚಕ್ರಶಂಖಾದಿಮುದ್ರಯಾ– ಚಕ್ರಶಂಖ ಮೊದಲಾದ ಮುದ್ರೆಯಿಂದ, ಹೋಮಾಗ್ನಿನಾ ಅಪಿ–ಹೋಮಾಗ್ನಿಯಿಂದ ಸಹ, ದಗ್ಧವ್ಯಾಃ–ದಹಿಸಲ್ಪಡಲು ಅರ್ಹರು; (ಹೋಮಾಗ್ನಿಯಲ್ಲಿ ದಹಿಸಿದ ಚಕ್ರಾದಿಗಳಿಂದ ಮುದ್ರೆಗಳನ್ನು ಹೊಂದಲು ದ್ವಿಜರ ಸ್ತ್ರೀಯರು

ದಹಿಸಿದ ಚಕ್ರಾದಿಗಳಿಂದ ಮುದ್ರಾಧಾರಣೆಯನ್ನು ಮಾಡಿಸುವುದು ದ್ವಿಜರಿಗೂ ದ್ವಿಜರ ಸ್ತ್ರೀಯರಿಗೂ ಮಕ್ಕಳಿಗೂ ಯುಕ್ತವಾಗುತ್ತದೆ (ವಿಧಿಯಿಂದ ಅವಕಾಶವಿದೆ); ಶೂದ್ರಾದಿಗಳಿಗೆ ಮಾತ್ರ ಹಾಗಲ್ಲ—ಹೋಮಾಗ್ನಿ ದಗ್ಧ ಚಕ್ರಾದಿಗಳನ್ನು ಅವರಿಗೆ ಮುದ್ರಿಸಕೂಡದು (೯೩). ತಪ್ತಮುದ್ರೆಯನ್ನು ಧಾರಣಮಾಡಿಸುವ ಗುರುವು, ಶಿಷ್ಯನ ಯೋಗ್ಯತಾನುಗುಣವಾದ ಮಂತ್ರವನ್ನೂ, ಮುದ್ರಾಧಾರಣೆಯ ನಂತರ, ಉಪದೇಶಿಸಬೇಕು. ಮಂತ್ರವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಮಕ್ಕಳು ಸಹ ಅರ್ಹರು); ಶೂದ್ರಾದೀನ್–ಶೂದ್ರಾದಿಗಳನ್ನು, ತಥಾ–ಹಾಗೆ (ಹೋಮಾಗ್ನಿದಗ್ಧಚಕ್ರಾದಿಗಳಿಂದ), ನ ದಹೇತ್–ದೇಹವನ್ನು (ಮುದ್ರಿಸತಕ್ಕದ್ದಲ್ಲ); (ಚಕ್ರಾದಿಗಳನ್ನು ಹೋಮಾಗ್ನಿಯಲ್ಲಿ ಕಾಯಿಸ ಕೂಡದು).

ಮಂತ್ರಂ ವೋಪದಿಶೇತ್ ಪಶ್ಚಾತ್ತತ್ತದ್ಯೋಗ್ಯತಯಾ ಗುರುಃ ||೯೪||
ತ್ರಿವಾರಮುಪದೇಶಃ ಸ್ಯಾದಂತೇ ಶಿಷ್ಯೋ ನಮೇದಪಿ ।
ಪ್ರಸನ್ನೋ ಭವತಾದ್ವಿಷ್ಣುಸ್ತತ್ತನ್ಮಂತ್ರಾಧಿದೇವತಾ || ೯೫ ||
ಇತ್ಯಾಶಿಷಂ ಪ್ರಯುಂಜ್ಯಾಥ ನ್ಯಸೇತ್ತನ್ಮಸ್ತಕೇ ಕರಂ ।
ಪರಸ್ಪರಂ ನಿರೀಕ್ಷ್ಯಾಥ ಪ್ರೀತ್ಯಾ ಶಿಷ್ಯಂ ವಿಸರ್ಜಯೇತ್ || ೯೬ ||
ಕೃಪಯಾ ತತ್ಪ್ರಗೃಹ್ಣೀತಂ ವಾಸುದೇವೇ ಸಮರ್ಪಯೇತ್ ।
ಇತಿ ದೀಕ್ಷಾವಿಧಾನಂ ತೇ ಕಥಿತಾಶ್ಚಾಧಿಕಾರಿಣಃ ।
ಬ್ರಹ್ಮನ್ ಪೃಷ್ಟಂ ತ್ವಯಾ ಯತ್ತು ಕಿಮನ್ಯತ್ ಶ್ರೋತುಮಿಚ್ಛಸಿ ||

ಗುರುಃ – ಗುರುವು (ತೃಪ್ತಮುದ್ರೆಯನ್ನು ಕೊಡುವ ಗುರುವು), ಪಶ್ಚಾತ್ – ಮುದ್ರಾಧಾರಣೆಯನ್ನಿತ್ತಮೇಲೆ, ಯೋಗ್ಯತಯಾ – ಶಿಷ್ಯನ ಯೋಗ್ಯತಾನುಗುಣವಾಗಿ, ಮಂತ್ರಂ ವಾ – ಮಂತ್ರವನ್ನಾದರೂ, ಉಪ-ದಿಶೇತ್ – ಉಪದೇಶಮಾಡಬೇಕು; ಉಪದೇಶಃ – ಮಂತ್ರೋಪದೇಶವು, ತ್ರಿವಾರಂ–ಮೂರಾವರ್ತಿ, ಸ್ಯಾತ್–ಮಾಡಲ್ಪಡಬೇಕು; ಅಂತೇ–ಉಪದೇಶಾನಂತರ, ಶಿಷ್ಯಃ ಅಪಿ–ಶಿಷ್ಯನಾದರೂ, ನಮೇತ್–ನಮಸ್ಕಾರ ಮಾಡಬೇಕು; ತತ್ತನ್ಮಂತ್ರಾಧಿದೇವತಾ – (ಉಪದೇಶಿಸಲಾದ) ಆಯಾ ಮಂತ್ರಗಳ ಅಧಿದೇವತೆಯಾದ (ಮುಖ್ಯಪ್ರತಿಪಾದ್ಯನೂ ಸರ್ವೋತ್ತಮನೂ ಆದ), ವಿಷ್ಣುಃ–ಶ್ರೀವಿಷ್ಣುವು, ಪ್ರಸನ್ನಃ–ಪ್ರಸನ್ನನು, ಭವತಾತ್–ಆಗಲಿ, ಇತಿ–ಎಂದು, ಆಶಿಷಂ – ಆಶೀರ್ವಾದವನ್ನು, ಪ್ರಯುಂಜ್ಯ – ಮಾಡಿ, (ಶಿಷ್ಯನನ್ನು

ಮೂರಾವರ್ತಿ ಉಪದೇಶಿಸಬೇಕು—ನಂತರ ಶಿಷ್ಯನು ನಮಸ್ಕರಿಸಬೇಕು; ಗುರುವು, 'ಮಂತ್ರಾಧಿದೇವತೆಯಾದ ಶ್ರೀವಿಷ್ಣುವು ಪ್ರಸನ್ನನಾಗಿ ನಿನ್ನನ್ನು ಅನುಗ್ರಹಿಸಲಿ' ಎಂದು, ಆಶೀರ್ವದಿಸಿ, ಶಿಷ್ಯನ ತಲೆಯಮೇಲೆ ತನ್ನ ಹಸ್ತವನ್ನಿಡಬೇಕು; ನಂತರ ಗುರುಶಿಷ್ಯರು ದೃಷ್ಟಿಸಿ ನೋಡಬೇಕು; ಗುರುವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಶೀರ್ವದಿಸಿ), ಅಥ–ನಂತರ, ತನ್ಮಸ್ತಕೇ–ಆ ಶಿಷ್ಯನ ತಲೆಯಲ್ಲಿ, ಕರಂ–ಹಸ್ತವನ್ನು, ನ್ಯಸೇತ್–ಇಡಬೇಕು ; ಅಥ–ನಂತರ, ಪರಸ್ಪರಂ–ಅನ್ಯೋನ್ಯವಾಗಿ (ಗುರುಶಿಷ್ಯರು ಒಬ್ಬರನ್ನೊಬ್ಬರು), ನಿರೀಕ್ಷ್ಯ–ದೃಷ್ಟಿಸಿ ನೋಡಿ, ಪ್ರೀತ್ಯಾ–ಸಂತೋಷವಾಗಿ, ಶಿಷ್ಯಂ–ಶಿಷ್ಯನನ್ನು, ವಿಸರ್ಜಯೇತ್–ಬಿಡಬೇಕು (ಕಳುಹಿಸಬೇಕು) ; ಕೃಪಯಾ – (ಶಿಷ್ಯನಮೇಲೆ) ಕೃಪೆಮಾಡಿ, ತತ್ಪ್ರಗೃಹ್ಣೀತಂ–ದೀಕ್ಷೆಯನ್ನು ಸ್ವೀಕರಿಸಿದ ಆತನನ್ನು, ವಾಸುದೇವೇ–ಶ್ರೀಹರಿಯಲ್ಲಿ, ಸಮರ್ಪಯೇತ್–ಸಮರ್ಪಿಸಬೇಕು (ಆತನ ದೀಕ್ಷೆಯನ್ನು ರಕ್ಷಿಸಿ ಕಾಪಾಡೆಂದು ಶ್ರೀಹರಿಯಲ್ಲಿ ಪ್ರಾರ್ಥಿಸಬೇಕು) ; ಇತಿ – ಹೀಗೆ, ತೇ – ನಿನಗೋಸ್ಕರ, ದೀಕ್ಷಾವಿಧಾನಂ–ಶ್ರೀವಿಷ್ಣುದೀಕ್ಷಾವಿಧಾನವೂ, ಅಧಿಕಾರಿಣಃ–ಅಧಿಕಾರಿಗಳೂ (ದೀಕ್ಷೆಯನ್ನು ಕೊಡುವ ಮತ್ತು ಸ್ವೀಕರಿಸುವ ಅಧಿಕಾರಿಗಳು ಅರ್ಹತೆಯುಳ್ಳವರು ಯಾರು ಯಾರೆಂಬುದೂ), ಬ್ರಹ್ಮನ್–ಹೇ ಬ್ರಹ್ಮದೇವ! ಯತ್ – ಯಾವುದು (ಯಾವ ದೀಕ್ಷಾ ವಿಷಯವು), ತ್ವಯಾ – ನಿನ್ನಿಂದ, ಪೃಷ್ಟಂ – ಕೇಳಲ್ಪಟ್ಟಿತೋ (ಆ ಎಲ್ಲವೂ), ಕಥಿತಾಃ – ಹೇಳಲ್ಪಟ್ಟವು ; ಅನ್ಯತ್ ಕಿಂ–ಬೇರೇನನ್ನು, ಶ್ರೋತುಂ–ಕೇಳಲು, ಇಚ್ಛಸಿ–ಅಪೇಕ್ಷಿಸುವಿ? (ಕೇಳು).

ಪ್ರೀತಿಯಿಂದ ಶಿಷ್ಯನನ್ನು ಬೀಳ್ಕೊಡಬೇಕು ; ದೀಕ್ಷೆಯನ್ನು ಸ್ವೀಕರಿಸಿದ ಶಿಷ್ಯನನ್ನು ಕೃಪೆಯಿಂದ ರಕ್ಷಿಸೆಂದು ಗುರುವು ಆತನನ್ನು ಶ್ರೀವಿಷ್ಣುವಿಗೇ ಸಮರ್ಪಿಸಬೇಕು ; ಹೀಗೆ ನೀನು ಪ್ರಶ್ನಿಸಿದ ದೀಕ್ಷಾವಿಧಾನವನ್ನೂ ಅಧಿಕಾರಿಗಳನ್ನೂ, ಹೇ ಬ್ರಹ್ಮ! ನಿನಗೋಸ್ಕರ ನಿರೂಪಿಸಿದ್ದೇನೆ—ಮತ್ತೇನನ್ನು ಕೇಳಲಿಚ್ಛಿಸುವಿ ? ಕೇಳು (೯೪–೯೭).

ದೀಕ್ಷಾಧಿಕಾರಕಥನವೆಂಬ ೭ನೇ ಅಧ್ಯಾಯವು ಮುಗಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ೮

ಶ್ರೀ ವೇದವ್ಯಾಸಾಯ ನಮಃ

ಬ್ರಹ್ಮೋವಾಚ—

ದೀಕ್ಷಾಪ್ರದಾನೇ ಭಗವನ್ ಕೇ ಕೇ ಸ್ಯುರಧಿಕಾರಿಣಃ ।
ಗೌಣಮುಖ್ಯಪ್ರಭೇದೇನ ವದ ತದ್ದಯಯಾ ಮಮ ॥ ೧ ॥

ಭಗವನ್—ಹೇ ಭಗವಂತ! (ವಿಷ್ಣೋ!), ದೀಕ್ಷಾ ಪ್ರದಾನೇ—ದೀಕ್ಷೆಯನ್ನು ಕೊಡುವುದರಲ್ಲಿ, (ದೀಕ್ಷಾಪ್ರದಾನಕ್ಕೆ), ಕೇಕೇ—ಯಾರು ಯಾರು, ಅಧಿಕಾರಿಣಃ ಸ್ಯುಃ—ಅಧಿಕಾರಿಗಳಾಗಿರುತ್ತಾರೆ (ಅರ್ಹರು)? ; ಗೌಣಮುಖ್ಯ-ಪ್ರಭೇದೇನ—ಗೌಣ ಮತ್ತು ಮುಖ್ಯ ಭೇದದಿಂದ (ಯಾರು ಮುಖ್ಯರು ಯಾರು ಅಮುಖ್ಯರು, ಎಂಬ ಭೇದದಿಂದ) ಕೇಕೇ ಅಧಿಕಾರಿಣಃ—ಯಾರು ಯಾರು ಅಧಿಕಾರಿಗಳು? ; ತತ್—ಅದನ್ನು, ದಯಯಾ—ಕೃಪೆ ಮಾಡಿ, ಮಮ—ನನಗೆ, ವದ—ಹೇಳು.

ಶ್ರೀ ಹಯಗ್ರೀವ ಉವಾಚ—

ಪ್ರತಿಲೋಮಾನುಲೋಮಾನಾಂ ವರ್ಣಾನಾಮಪಿ ಸರ್ವಶಃ ।
ಬ್ರಾಹ್ಮಣೋ ಹಿ ಗುರುರ್ಮುಖ್ಯೋ ಗೌಣಃ ಪಿತ್ರಾದಯಃ ಸ್ಮೃತಾಃ

ದೀಕ್ಷಾಪ್ರಧಾನದಲ್ಲಿ, ಮುಖ್ಯ-ಅಮುಖ್ಯ ಭೇದದಿಂದ ಅಧಿಕಾರಿಗಳು ಯಾರುಯಾರೆಂಬುದನ್ನು, ದಯಮಾಡಿ, ನನಗೆ ಹೇಳುವವನಾಗು, ಪ್ರಭೋ! (೧). ಪ್ರತಿಲೋಮ ಅನುಲೋಮವರ್ಣಗಳ[1] ಎಲ್ಲರಿಗೂ ಬ್ರಾಹ್ಮಣನೇ ಮುಖ್ಯಗುರುವು ; ಅವರವರ ತಂದೆ ಮೊದಲಾದ ಹಿರಿಯರು ಅಮುಖ್ಯಗುರುಗಳು (೨). ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ ಮತ್ತು

---

[1] ಪ್ರತಿಲೋಮ—ಉತ್ತಮವರ್ಣದ ಸ್ತ್ರೀಯಲ್ಲಿ ನೀಚವರ್ಣದ ಪುರುಷನಿಂದ ಹುಟ್ಟುವವರು ಪ್ರತಿಲೋಮವರ್ಣದವರು.

ಅನುಲೋಮ—ಉತ್ತಮವರ್ಣದ ಪುರುಷರಿಂದ ನೀಚವರ್ಣದ ಸ್ತ್ರೀಯಲ್ಲಿ ಹುಟ್ಟುವ ಸಂತಾನವು ಅನುಲೋಮವರ್ಣಜ್ವೆಂದು ಹೇಳಲಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತಿಲೋಮಾನುಲೋಮಾನಾಂ ವರ್ಣಾನಾಂ—ಪ್ರತಿಲೋಮ ಮತ್ತು ಅಣುಲೋಮ ಜಾತಿಗಳ, ಸರ್ವಶಃ—ಎಲ್ಲರಿಗೂ, ಬ್ರಾಹ್ಮಣಃ—ಬ್ರಾಹ್ಮಣನು, ಮುಖ್ಯಃ ಗುರುಃ – ಮುಖ್ಯಗುರುವು, ಹಿ – ಹೀಗೆಂದು ಶಾಸ್ತ್ರಪ್ರಸಿದ್ಧವು; ಪಿತ್ರಾದಯಃ – ತಂದೆ ಮೊದಲಾದವರು (ಅವರವರ ತಂದೆ ಮೊದಲಾದ ಹಿರಿಯರು), ಗೌಣಾಃ—ಅಮುಖ್ಯಗುರುಗಳು.

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋಽಥವಾ ಯತಿಃ ।
ಬ್ರಾಹ್ಮಣಃ ಸರ್ವಜಂತೂನಾಂ ಗುರುರ್ಮುಖ್ಯಃ ಪ್ರಕೀರ್ತಿತಃ ॥ ೩ ॥

ಬ್ರಾಹ್ಮಣಃ – ಬ್ರಾಹ್ಮಣನು, ಬ್ರಹ್ಮಚಾರೀ – ಬ್ರಹ್ಮಚಾರಿಯಾಗಲಿ, ವಾ—ಅಥವಾ, ಗೃಹಸ್ಥಃ – ಗೃಹಸ್ಥನಾಗಲಿ, ವಾನಪ್ರಸ್ಥಃ – ವಾನಪ್ರಸ್ಥನಾಗಲಿ, ಅಥವಾ, ಯತಿಃ—ಯತಿಯಾಗಲಿ, ಸರ್ವಜಂತೂನಾಂ—ಸರ್ವಪ್ರಾಣಿಗಳಿಗೆ, ಮುಖ್ಯಃ ಗುರುಃ – ಮುಖ್ಯಗುರುವೆಂದು, ಪ್ರಕೀರ್ತಿತಃ—ಹೇಳಲ್ಪಟ್ಟಿರುವನು.

ವಿಪ್ರಾಣಾಂ ಗುರವೋ ವಿಪ್ರಾ ಮಿಥೋ ಯೇ ಜ್ಞಾನಿನೋಽಧಿಕಾಃ ।
ತೇಷಾಮಪಿ ವಿಶೇಷೇಣ ವನಸ್ಥೋ ವಾ ಯತಿರ್ಭವೇತ್ ॥ ೪ ॥

ವಿಪ್ರಾಣಾಂ—ಬ್ರಾಹ್ಮಣರಿಗೆ, ವಿಪ್ರಾಃ—ಬ್ರಾಹ್ಮಣರೇ, ಮಿಥಃ—ಪರಸ್ಪರವಾಗಿ (ಒಬ್ಬರಿಗೆ ಮತ್ತೊಬ್ಬರು), ಗುರವಃ—ಗುರುಗಳು; ಯೇ—ಯಾರು, ಅಧಿಕಾಃ ಜ್ಞಾನಿನಃ – ಹೆಚ್ಚು ಜ್ಞಾನವುಳ್ಳವರೋ (ಅವರು), ತೇಷಾಂ – (ಕಡಿಮೆಜ್ಞಾನವುಳ್ಳ) ಇತರರಿಗೆ, (ಗುರುಗಳು); ತೇಷಾಂ ಅಪಿ—ಅವರಲ್ಲಿ ಸಹ, ವಿಶೇಷೇಣ – ವಿಶೇಷವಾಗಿ, ವನಸ್ಥಃ – ವಾನಪ್ರಸ್ಥ ಆಶ್ರಮಿಯೂ, ವಾ—ಅಥವಾ, ಯತಿಃ—ಯತ್ಯಾಶ್ರಮಿಯೂ, ಭವೇತ್—ಗುರುವಾಗುತ್ತಾನೆ.

ಯತಿಗಳೆಂಬ ಆಶ್ರಮಗಳಲ್ಲಿ ಯಾವ ಆಶ್ರಮಕ್ಕೆ ಸೇರಿದವನಾದರೂ, ಸಕಲ ಪ್ರಾಣಿಗಳಿಗೆ, ಬ್ರಾಹ್ಮಣನೇ ಮುಖ್ಯಗುರುವು (೩). ಜ್ಞಾನದಿಂದ ಅಧಿಕರಾದ ಬ್ರಾಹ್ಮಣರು, ಇತರ ಬ್ರಾಹ್ಮಣರಿಗೆ ಗುರುಗಳಾಗಿರುತ್ತಾರೆ; ಏವಂ ಚ, ಬ್ರಾಹ್ಮಣರಿಗೆ ಬ್ರಾಹ್ಮಣರು (ಪರಸ್ಪರ ಒಬ್ಬರಿಗೊಬ್ಬರು) ಗುರುಗಳೆನಿಸುತ್ತಾರೆ; ಅವರಲ್ಲಿಯೂ ವಿಶೇಷವಾಗಿ ವಾನಪ್ರಸ್ಥ ಮತ್ತು ಯತ್ಯಾಶ್ರಮಿಗಳು, ಇತರ ಆಶ್ರಮಿಗಳಿಗೆ ಗುರುಗಳು (೪). ಉತ್ತಮಾಶ್ರಮಿಗಳ ಅಭಾವದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೃಹಸ್ಥೇಷ್ವಪಿ ಪಿತ್ರಾದ್ಯಾ ಯೇ ವಾ ಸ್ಯುರ್ವೈಷ್ಣವೋತ್ತಮಾಃ ।
ಜ್ಞಾನತೋ ವಾಧಿಕಾ ಯೇ ಸ್ಯುಃ ಕುಲಸ್ಯ ಗುರವೋಽಪಿ ಯೇ ॥ ೫ ॥

ಪಿತಾ ಭ್ರಾತಾ ತು ಯೋ ಜ್ಯೇಷ್ಠ ಪಿತೃವ್ಯೋ ಮಾತುಲಸ್ತಥಾ ।
ತತ್ಸುತಃ ಶ್ವಶುರೋಽಪಿ ಸ್ಯಾದೇಷಾಂ ಪಿತ್ರಾದಯೋಽಪಿ ಚ ॥ ೬ ॥

ತತ್ರಾಪಿ ಜ್ಞಾನವಂತಃ ಸ್ಯುರ್ದೀಕ್ಷಾದಾನೇಽಧಿಕಾರಿಣಃ ।

ಗೃಹಸ್ಥೇಷು ಅಪಿ–ಗೃಹಸ್ಥಾಶ್ರಮಿಗಳಲ್ಲಿಯಾದರೋ (ವಾನಪ್ರಸ್ಥಾದಿ ಉತ್ತಮಾಶ್ರಮಿಗಳು ಇಲ್ಲದಾಗ), ಯೇ ವಾ ಸ್ಯುಃ – ಯಾರೇ ಆಗಲಿ, ವೈಷ್ಣವೋತ್ತಮಾಃ–ವಿಷ್ಣುಭಕ್ತಿಯಿಂದ ಉತ್ತಮರಾದವರು, ವಾ–ಅಥವಾ, ಯೇ – ಯಾರು, ಜ್ಞಾನತಃ–ಜ್ಞಾನದಿಂದ, ಅಧಿಕಾಃ ಸ್ಯುಃ – ಉತ್ತಮರಾದವರೋ, ಯೇ – ಯಾರು, ಕುಲಸ್ಯ – ವಂಶದ (ತಮ್ಮ ಮನೆತನದ), ಗುರವಃ ಅಪಿ – ಗುರುಗಳೂ ಆಗಿರುವರೋ (ಇಂಥವರಿಲ್ಲದಾಗ), ಪಿತಾ – ತಂದೆಯೂ, ಯಃ ತು–ಯಾರಾದರೆ, ಜ್ಯೇಷ್ಠ ಭ್ರಾತಾ–ಹಿರಿಯ ಅಣ್ಣನೋ, ಪಿತೃವ್ಯಃ–ಪಿತೃಸಹೋದರರೋ, (ದೊಡ್ಡಪ್ಪ ಚಿಕ್ಕಪ್ಪಗಳೋ), ತಥಾ–ಹಾಗೂ, ಮಾತುಲಃ–ಸೋದರಮಾವನೋ, (ಈ ಬಾಂಧವರಲ್ಲಿ ಕ್ರಮದಿಂದ ಯಾರೂ ಇಲ್ಲದಿದ್ದರೆ), ತತ್ಸುತಃ–ಸೋದರಮಾವನ ಮಗನೂ, ಶ್ವಶುರಃ ಅಪಿ–ಮಾವನು (ಹೆಣ್ಣುಕೊಟ್ಟ ಮಾವನೂ), ಸ್ಯಾತ್–(ದೀಕ್ಷಾಪ್ರಧಾನದಲ್ಲಿ

ಗೃಹಸ್ಥಾಶ್ರಮಿಗಳಲ್ಲಿ ವಿಷ್ಣುಭಕ್ತಿಯಿಂದ ಯಾರು ಉತ್ತಮರೋ ಅಥವಾ ಜ್ಞಾನದಿಂದ ಅಧಿಕರೋ ಅವರೂ, ದೀಕ್ಷೆಯನ್ನು ಸ್ವೀಕರಿಸುವವರ ಕುಲಪುರೋಹಿತಾದಿ ಗುರುಗಳೂ, ದೀಕ್ಷಾಪ್ರದಾನಕ್ಕೆ ಅರ್ಹರಾಗುತ್ತಾರೆ; ಇವರುಗಳ ನಂತರ, ದೀಕ್ಷೆಯನ್ನು ಪಡೆಯುವವನ ತಂದೆ, ಹಿರಿಯ ಅಣ್ಣ, ತಂದೆಯ ಸಹೋದರ, ಸೋದರಮಾವ (ತಾಯಿಯ ಸಹೋದರ), ಸೋದರಮಾವನ ಮಗ, ಹೆಣ್ಣುಕೊಟ್ಟ ಮಾವ (ಹೆಂಡತಿಯ ತಂದೆ), ಇವರುಗಳೂ, ಅಥವಾ ಈ ಬಂಧುವರ್ಗದವರ ತಂದೆ ಮೊದಲಾದವರೂ, ಅವರಲ್ಲಿಯೂ ಜ್ಞಾನಿಗಳಾದವರು ದೀಕ್ಷೆ ಕೊಡಲು ಅಧಿಕಾರಿಗಳಾಗುತ್ತಾರೆ (೫–೬). ಬ್ರಹ್ಮಚಾರಿಗಳಿಗೆ ಗೃಹಸ್ಥ, ವಾನಪ್ರಸ್ಥ ಮತ್ತು ಯತ್ಯಾಶ್ರಮಿಗಳು ಉಪದೇಶಕರಾಗಬಹುದು (ಗುರುಗಳಾಗುತ್ತಾರೆ); ಗೃಹಸ್ಥನಿಗೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧಿಕಾರಿಯು) ಆಗುತ್ತಾನೆ; ಏಷಾಂ–ಈ ಬಂಧುಗಳ, ಪಿತ್ರಾದಯಃ ಅಪಿ–ತಂದೆ ಮೊದಲಾದವರು ಸಹ, ತತ್ರಾಪಿ – ಅವರಲ್ಲಿಯೂ, ಜ್ಞಾನವಂತಃ–ಜ್ಞಾನಿಗಳಾದವರು, ದೀಕ್ಷಾದಾನೇ – ದೀಕ್ಷೆಯನ್ನು ಕೊಡುವುದರಲ್ಲಿ, ಅಧಿಕಾರಿಣಃ ಸ್ಯುಃ–ಅಧಿಕಾರಿಗಳಾಗುತ್ತಾರೆ.

ಬ್ರಹ್ಮಚಾರ್ಯುಪದೇಷ್ಟಾರೋ ಗೃಹಸ್ಥಾದಿತ್ರಯೋಽಪಿ ಚ ॥ ೭ ॥
ವನಸ್ಥಾ ಯತಿನಶ್ಚಾಪಿ ನೈಷ್ಠಿಕಬ್ರಹ್ಮಚಾರಿಣಃ ।
ಗುರವೋ ಗೃಹಿಣಃ ಸ್ಯುಃ ಸ ನ ಹ್ಯೇತೇಷಾಂ ಗುರುರ್ಭವೇತ್ ॥ ೮ ॥

ಗೃಹಸ್ಥಾದಿತ್ರಯಃ ಅಪಿ ಚ – ಗೃಹಸ್ಥಾದಿ ಮೂರು ಆಶ್ರಮದವರೂ (ಗೃಹಸ್ಥ, ವಾನಪ್ರಸ್ಥ ಮತ್ತು ಯತ್ಯಾಶ್ರಮಿಗಳೆಲ್ಲರೂ), ಬ್ರಹ್ಮಚಾರ್ಯುಪದೇಷ್ಟಾರಃ – ಬ್ರಹ್ಮಚಾರಿಗೆ ಗುರುಗಳಾಗುತ್ತಾರೆ; ಗೃಹಿಣಃ – ಗೃಹಸ್ಥನಿಗೆ, ವನಸ್ಥಾಃ–ವಾನಪ್ರಸ್ಥರು, ಯತಿನಃ ಚ–ಯತಿಗಳೂ, ನೈಷ್ಠಿಕ ಬ್ರಹ್ಮಚಾರಿಣಃ ಅಪಿ–ನೈಷ್ಠಿಕಬ್ರಹ್ಮಚಾರಿಗಳೂ ಸಹ, ಗುರವಃ–ಗುರುಗಳು, ಸ್ಯುಃ – ಆಗುವರು; ಸಃ–ಆ ಗೃಹಸ್ಥನು, ಏತೇಷಾಂ – ಇವರಿಗೆ (ವನಸ್ಥ, ಯತಿ ಮತ್ತು ನೈಷ್ಠಿಕ ಬ್ರಹ್ಮಚಾರಿಗಳಿಗೆ), ಗುರುಃ – ಗುರುವು (ಉಪದೇಶಕನು), ನ ಭವೇತ್ ಹಿ–ಆಗಲಾರನೆಂದು ಶಾಸ್ತ್ರಪ್ರಸಿದ್ಧವಾಗಿದೆ.

ಯತೀನಾಂ ಯತಯಃ ಪ್ರೋಕ್ತಾ ಗುರವೋಽನ್ಯೇ ನ ಹಿ ಕ್ವಚಿತ್ ।
ನೈಷ್ಠಿಕವ್ರತಿನಃ ಪ್ರೋಕ್ತೋ ನೈಷ್ಠಿಕವ್ರತವಾನ್ ಗುರುಃ ॥ ೯ ॥

ವಾನಪ್ರಸ್ಥ, ಯತಿ ಮತ್ತು ನೈಷ್ಠಿಕ ಬ್ರಹ್ಮಚಾರಿಗಳು ಗುರುಗಳಾಗಬಹುದು; ಆದರೆ ಗೃಹಸ್ಥನು, ಇವರಿಗೆ (ವಾನಪ್ರಸ್ಥ, ಯತಿ ಮತ್ತು ನೈಷ್ಠಿಕ ಬ್ರಹ್ಮಚಾರಿಗಳಿಗೆ) ಗುರುವಾಗಲರ್ಹನಲ್ಲ. ಈ ನಿಯಮವು ಶಾಸ್ತ್ರಸಿದ್ಧವಾದುದು (೭–೮). ಯತಿಗಳಿಗೆ ಯತಿಗಳೇ ಗುರುಗಳಾಗಲರ್ಹರು; ಅನ್ಯರಾರೂ ಅಲ್ಲ; ನೈಷ್ಠಿಕಬ್ರಹ್ಮಚಾರಿಗಳಿಗೆ ನೈಷ್ಠಿಕ ಬ್ರಹ್ಮಚಾರಿಯೇ ಗುರುವು[1] (೯). ವಾನಪ್ರಸ್ಥರಿಗೆ, ವಾನಪ್ರಸ್ಥರೂ,

---

[1] ಗುರುಶುಶ್ರೂಷಾದಿ ಬ್ರಹ್ಮಚರ್ಯಾಶ್ರಮಧರ್ಮಗಳನ್ನು ಮರಣಪರ್ಯಂತ ನಡೆಸುವ ನಿಷ್ಠೆ (ದೃಢಸಂಕಲ್ಪಮಾಡಿ) ಯಲ್ಲಿ ಸ್ಥಿರವಾಗಿ ಸ್ಥಿರನಾದವನು 'ನೈಷ್ಠಿಕ ವ್ರತಿ'ಯು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯತೀನಾಂ—ಯತಿಗಳಿಗೆ, ಯತಯಃ—ಯತಿಗಳು, ಗುರವಃ—ಗುರುಗಳು, ಪ್ರೋಕ್ತಾಃ – (ಎಂದು) ಹೇಳಲ್ಪಡುತ್ತಾರೆ; ಅನ್ಯೇ – ಬೇರೆ (ಅನ್ಯಾಶ್ರಮದವರು), ಕ್ವಚಿತ್—ಯಾರೊಬ್ಬನೂ, ನ ಹಿ—ಅಲ್ಲವೇ ಅಲ್ಲ; ನೈಷ್ಠಿಕವ್ರತಿನಃ – ನೈಷ್ಠಿಕಬ್ರಹ್ಮಚಾರಿಗೆ, ನೈಷ್ಠಿಕವ್ರತವಾನ್ – ನೈಷ್ಠಿಕ ಬ್ರಹ್ಮಚಾರಿಯೇ (ಆ ವ್ರತವುಳ್ಳವನೇ), ಗುರುಃ—ಗುರುವು.

ವನೀ ಯತಿರ್ವಾ ವನಿನೋ ವನೀಪ್ರವ್ರಾಜಕೋ ಗುರುಃ ।
ಬ್ರಾಹ್ಮಣೇಷು ವಿವೇಕೋಽಯಂ ಯತೀನಾಂ ವನವಾಸಿನಾಂ ॥ ೧೦ ॥

ವನಿನಃ—ವಾನಪ್ರಸ್ಥಾಶ್ರಮಿಗೆ, ವನೀ—ವಾನಪ್ರಸ್ಥಾಶ್ರಮಿಯೂ ವಾ—ಅಥವಾ, ಯತಿಃ—ಯತಿಯೂ, ವನೀಪ್ರವ್ರಾಜಕಃ—ವಾನಪ್ರಸ್ಥನಾದರೂ ಸರ್ವಸಂಗತ್ಯಾಗದಿಂದ ಪ್ರವ್ರಾಜಕ (ಯತಿ) ಜೀವನದಲ್ಲಿರುವವನೂ, ಗುರುಃ-ಗುರುವಾಗಲರ್ಹನು; ಅಯಂ – ಈ, ವಿವೇಕಃ – ವಿವೇಕವು (ವಿಶೇಷ ವ್ಯವಸ್ಥೆಯು), ಬ್ರಾಹ್ಮಣೇಷು—ಬ್ರಾಹ್ಮಣರಲ್ಲಿ (ಮಾತ್ರ), ಯತೀನಾಂ... ಇತ್ಯಾದಿ ಮುಂದಿನ ಶ್ಲೋಕದಿಂದ ಅನ್ವಯವಾಗುತ್ತದೆ.

ಕ್ಷತ್ರಿಯಾಣಾಂ ಚ ವೈಶ್ಯಾನಾಂ ನೈಷ್ಠಿಕಬ್ರಹ್ಮಚಾರಿಣಾಂ ।
ಗೃಹಸ್ಥಾನಾಂ ತಥಾನ್ಯೇಷಾಂ ಬ್ರಾಹ್ಮಣೋ ಗುರುರೇವ ಹಿ ॥ ೧೧ ॥

ಕ್ಷತ್ರಿಯಾಣಾಂ—ಕ್ಷತ್ರಿಯ ವರ್ಣದವರಾದ, ಚ—ಮತ್ತು, ವೈಶ್ಯಾನಾಂ—ವೈಶ್ಯವರ್ಣದವರಾದ (ಯತೀನಾಂ—ಯತಿಗಳಿಗೆ, ವನವಾಸಿನಾಂ—ವಾನಪ್ರಸ್ಥರಿಗೆ; ಈ ಪದಗಳು ಹಿಂದಿನ ಶ್ಲೋಕದಿಂದ ಅನ್ವಯಗೊಂಡಿವೆ), ನೈಷ್ಠಿಕ ಬ್ರಹ್ಮಚಾರಿಣಾಂ—ನೈಷ್ಠಿಕಬ್ರಹ್ಮಚಾರಿಗಳಿಗೆ, ಗೃಹಸ್ಥಾನಾಂ—ಗೃಹಸ್ಥರಿಗೆ, ತಥಾ – ಹಾಗೂ, ಅನ್ಯೇಷಾಂ – ಇತರರೆಲ್ಲರಿಗೂ, ಬ್ರಾಹ್ಮಣಃ ಏವ – ಬ್ರಾಹ್ಮಣನು ಮಾತ್ರ (ಬ್ರಾಹ್ಮಣನೇ), ಗುರುಃ ಹಿ—ಗುರುವೆಂದು ಪ್ರಸಿದ್ಧನು.

ಯತಿಗಳೂ, ವಾನಪ್ರಸ್ಥರಲ್ಲಿಯೇ ಸರ್ವಸಂಗತ್ಯಾಗದಿಂದ ಯತಿಜೀವನದಲ್ಲಿರುವವರೂ ಗುರುಗಳಾಗಲರ್ಹರು; ಈ ವಿಶೇಷ ವ್ಯವಸ್ಥೆಯು ಬ್ರಾಹ್ಮಣರಾಗಿ, ಬ್ರಹ್ಮಚರ್ಯಾದಿ ಆಶ್ರಮಗಳಲ್ಲಿರುವವರಿಗೆ ಮಾತ್ರ ಅನ್ವಯಿಸುತ್ತದೆ (೧೦). ಕ್ಷತ್ರಿಯ ಮತ್ತು ವೈಶ್ಯವರ್ಣಗಳ, ಗೃಹಸ್ಥರು, ಯತಿಗಳು, ವಾನಪ್ರಸ್ಥರು, ನೈಷ್ಠಿಕಬ್ರಹ್ಮಚಾರಿಗಳು (ಕೈಮುತ್ಯದಿಂದ ಬ್ರಹ್ಮಚಾರಿಗಳು,

*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಹ್ಮಚಾರೀ ಗೃಹಸ್ಥೋ ವಾ ವನಸ್ಥೋ ವಾಥವಾ ಯತಿಃ ।
ಸರ್ವಾಶ್ರಮವತಾಂ ಕ್ಷತ್ರವೈಶ್ಯಾನಾಮನುಲೋಮಿನಾಂ ॥ ೧೨ ॥

ಮುಖ್ಯೋ ಗುರುರ್ಭವೇದ್ವಿಪ್ರಃ ಕ್ಷತ್ರಿಯಾದಿಷು ಯೇಽಧಿಕಾಃ ।
ತೇಽಪಿ ವಿಪ್ರಾಜ್ಞಯಾ ತೇಷಾಂ ದೀಕ್ಷಾಯಾಂ ಗುರವೋ ಮತಾಃ ॥

ಸರ್ವಾಶ್ರಮವತಾಂ – ಬ್ರಹ್ಮಚರ್ಯಾದಿ ಎಲ್ಲ ಆಶ್ರಮಗಳ, ಕ್ಷತ್ರವೈಶ್ಯಾನಾಂ–ಕ್ಷತ್ರಿಯ ಮತ್ತು ವೈಶ್ಯರಿಗೆ, ಅನುಲೋಮಿನಾಂ–ಅನುಲೋಮ ಜಾತಿಯವರಿಗೆ ಸಹ, ವಿಪ್ರಃ–ಬ್ರಾಹ್ಮಣನು, ಬ್ರಹ್ಮಚಾರೀ–ಬ್ರಹ್ಮಚಾರಿಯಾಗಲಿ, ಗೃಹಸ್ಥಃ ವಾ-ಗೃಹಸ್ಥನಾಗಲಿ, ವನಸ್ಥಃ ವಾ-ವಾನಪ್ರಸ್ಥನಾಗಲಿ, ಅಥವಾ ಯತಿಃ – ಅಥವಾ ಯತಿಯಾಗಲಿ, ಮುಖ್ಯಃ ಗುರುಃ – ಮುಖ್ಯಗುರುವು, ಭವೇತ್–ಆಗಿರುತ್ತಾನೆ (ವಿಪ್ರನು ಯಾವ ಆಶ್ರಮಿಯಾಗಿದ್ದರೂ ಕ್ಷತ್ರಿಯ ವೈಶ್ಯ ಮತ್ತು ಅನುಲೋಮಿಗಳೆಲ್ಲರಿಗೂ ಮುಖ್ಯಗುರುವಾಗಿರಲರ್ಹನು) ; ಕ್ಷತ್ರಿಯಾದಿಷು–ಕ್ಷತ್ರಿಯ ಮೊದಲಾದವರಲ್ಲಿ, ಯೇ–ಯಾರು, ಅಧಿಕಾಃ–(ಭಕ್ತಿಜ್ಞಾನಾದಿ ಗುಣಗಳಿಂದ) ಅಧಿಕರೋ, ತೇ ಅಪಿ–ಅವರೂ ಸಹ, ವಿಪ್ರಾಜ್ಞಯಾ–ಬ್ರಾಹ್ಮಣನ ಆಜ್ಞೆಯಿಂದ, ತೇಷಾಂ–ಅವರಿಗೆ (ತಮ್ಮ ವರ್ಣದವರಿಗೂ, ಅನುಲೋಮಾದಿ ವರ್ಣದವರಿಗೂ), ದೀಕ್ಷಾಯಾಂ–ದೀಕ್ಷೆಯನ್ನು ಕೊಡುವ ವಿಷಯದಲ್ಲಿ, ಗುರವಃ – ಗುರುಗಳೆಂದು, ಮತಾಃ–ತಿಳಿಯಲ್ಪಡುತ್ತಾರೆ (ಪ್ರಮಾಣಗಳಿಂದ ತಿಳಿಯಬರುತ್ತದೆ).

ಶೂದ್ರಾದಿಷ್ವಪಿ ಸರ್ವೇಷು ಶ್ವಪಾಕಾಂತೇಷ್ವಪಿ ಕ್ರಮಾತ್ ।
ಜಾತಿತೋ ಜ್ಞಾನತೋ ಯೇ ಸ್ಯುರಧಿಕಾಸ್ತೇಽಪಿ ಸರ್ವಶಃ ॥ ೧೪ ॥

ಮತ್ತು ಇತರ ಈ ವರ್ಣದ ಸರ್ವರಿಗೆ, ಬ್ರಾಹ್ಮಣನೇ ಗುರುವು (೧೧). ಕ್ಷತ್ರಿಯ ವೈಶ್ಯ ಅನುಲೋಮಿ ವರ್ಣಗಳ ಎಲ್ಲ ಆಶ್ರಮದವರಿಗೂ, ಬ್ರಾಹ್ಮಣ ಸಾಮಾನ್ಯನು—ಆತನು ಯಾವ ಆಶ್ರಮದವನಾದರೂ ಸರಿಯೇ, ಮುಖ್ಯ ಗುರುವಾಗಲರ್ಹನು; ಕ್ಷತ್ರಿಯಾದಿಗಳಲ್ಲಿ ಯಾರು ಭಕ್ತಿ ಜ್ಞಾನಾದಿ ಸದ್ಗುಣಗಳಿಂದ ಅಧಿಕರೋ, ಆವರು, ತಮಗಿಂತ ಅವರರಾದ ಸರ್ವರಿಗೂ, ದೀಕ್ಷೆಯನ್ನು ಕೊಡುವ ವಿಷಯದಲ್ಲಿ ಗುರುಗಳಾಗಲರ್ಹರೆಂದು ಪ್ರಮಾಣಪ್ರಮಿತವಾಗಿದೆ (೧೨–೧೩). ಶೂದ್ರರಿಂದ ಆರಂಭಿಸಿ ಚಂಡಾಲರವರೆಗಿನ ಸಕಲರಿಗೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಿತ್ರಾದಯೋಽಥವಾಪಿ ಸ್ಯುಃ ಪೂರ್ವಾಭಾವೇ ಪರಃಪರಃ ।
ಗುರ್ವಾಧಿಕ್ಯವಶಾತ್ ಪ್ರೋಕ್ತಂ ದೀಕ್ಷಾಗ್ರಹಣಜಂ ಫಲಂ ॥ ೧೫ ॥

ಬ್ರಾಹ್ಮಣೋಽತ್ರ ಗುರುರ್ಮುಖ್ಯಸ್ತದನ್ಯೇ ತು ತದಾಜ್ಞಯಾ ।
ಅನ್ಯಥಾ ನರಕಂ ಯಾತಿ ಗೃಹೀತಾರೋಽಪಿ ತಾದೃಶಾಃ ॥ ೧೬ ॥

ಶೂದ್ರಾದಿಷು–ಶೂದ್ರವರ್ಣದವರೇ ಮೊದಲಾಗಿ, ಶ್ವಪಾಕಾಂತೇಷು–ಚಂಡಾಲ ಜಾತಿಯುವರೇ ಕಡೆಯಾದ, ಸರ್ವೇಷು ಅಪಿ–ಸರ್ವರಲ್ಲಿಯೂ, ಕ್ರಮಾತ್–ಕ್ರಮವಾಗಿ, ಜಾತಿತಃ–ಜಾತಿ (ವರ್ಣ) ಯಿಂದಲೂ, ಜ್ಞಾನತಃ–ಜ್ಞಾನದಿಂದಲೂ, ಯೇ–ಯಾರು, ಅಧಿಕಾಃ ಸ್ಯುಃ–ಅಧಿಕರಾಗಿರುವರೋ, ತೇ–ಅವರು, ಸರ್ವಶಃ ಅಪಿ–ಎಲ್ಲರೂ, ಅಥವಾ, ಪಿತ್ರಾದಯಃ–ತಂದೆಯೇ ಮೊದಲಾದವರು (ಈ ಹಿಂದೆ ಹೇಳಿದ ಬಂಧುವರ್ಗದವರು), ಸ್ಯುಃ–ಆಗಲಿ, ಪೂರ್ವಾಭಾವೇ – ಮೊದಲಿನವರು ಇಲ್ಲದಿರುವಾಗ, ಪರಃ ಪರಃ – ನಂತರದ ವ್ಯಕ್ತಿಯು, [ಗುರುವೋಽಮತಾಃ – (೧೩ ಶ್ಲೋಕದಿಂದ ಆಕರ್ಷಿಸಿ) ಗುರುಗಳಾಗಲರ್ಹರೆಂದು ತಿಳಿಯಲ್ಪಟ್ಟಿರುವರು]; ಗುರ್ವಾಧಿಕ್ಯವಶಾತ್–(ದೀಕ್ಷಾಪ್ರದಾನ ಮಾಡುವ) ಗುರುವಿನ ಆಧಿಕ್ಯವನ್ನನುಸರಿಸಿ, ದೀಕ್ಷಾಗ್ರಹಣಜಂ–ದೀಕ್ಷಾಸ್ವೀಕಾರದಿಂದ ಲಭಿಸುವ, ಫಲಂ – ಫಲವೆಂದು, ಪ್ರೋಕ್ತಂ – ಹೇಳಲಾಗುತ್ತದೆ; ಅತ್ರ–ದೀಕ್ಷಾಪ್ರದಾನವಿಷಯದಲ್ಲಿ, ಬ್ರಾಹ್ಮಣಃ–ಬ್ರಾಹ್ಮಣನು,

---

ಕ್ರಮವಾಗಿ, ಜಾತಿಯಿಂದಲೂ ಜ್ಞಾನದಿಂದಲೂ ಅಧಿಕರಾದವರೆಲ್ಲರೂ, ಈ ವಿಧ ಆಧಿಕ್ಯವುಳ್ಳವರ ಮಧ್ಯದಲ್ಲಿ ಈ ಹಿಂದೆ ಹೇಳಿದ ಪಿತ್ರಾದಿ ಬಂಧುವರ್ಗದವರೂ, ಮೊದಲಿನವರು ಇಲ್ಲದಾಗ ನಂತರದವರೂ, ದೀಕ್ಷಾಗುರುಗಳಾಗಲು ಅರ್ಹರೆಂದು ತಿಳಿಯಲ್ಪಟ್ಟಿರುತ್ತಾರೆ; ದೀಕ್ಷಾಸ್ವೀಕಾರ ಫಲವು, ಗುರುವಿನ ಆಧಿಕ್ಯವನ್ನು (ಶ್ರೇಷ್ಠತೆಯನ್ನು) ಅವಲಂಬಿಸಿರುತ್ತದೆ; ಈ ಎಲ್ಲರಿಗೂ ಬ್ರಾಹ್ಮಣನೇ ಮುಖ್ಯಗುರುವಾಗಿರುತ್ತಾನಾದ್ದರಿಂದ, ಅನ್ಯ ದೀಕ್ಷಾಪ್ರದಾನಗುರುಗಳೆಂಬುವರು, ಬ್ರಾಹ್ಮಣನ ಆಜ್ಞೆಯನ್ನು ಪಡೆದೇ ದೀಕ್ಷೆಯನ್ನು ಕೊಡಬೇಕು; ಹಾಗಲ್ಲದಿದ್ದರೆ (ಆಜ್ಞೆಯನ್ನು ಪಡೆಯದಿದ್ದರೆ) ನರಕವನ್ನು ಹೊಂದುತ್ತಾನೆ; ಆತನಿಂದ ದೀಕ್ಷೆಯನ್ನು ಸ್ವೀಕರಿಸಿದವರೂ ಸಹ ನರಕಭಾಗಿಗಳೇ ಆಗುತ್ತಾರೆ (೧೪–೧೬). ವಿಧಿಪೂರ್ವಕವಾಗಿ ಸ್ಥಂಡಿಲದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಖ್ಯಗುರುಃ – ಮುಖ್ಯಗುರುವು (ಶ್ರೇಷ್ಠಗುರುವು) ; ತದನ್ಯೇತು – ಇತರರಾದರೋ, ತದಾಜ್ಞಯಾ–ಆ ಮುಖ್ಯಗುರುವಿನ ಆಜ್ಞೆಯಿಂದಲೇ ಗುರುವು (ಗುರುಗಳಾಗುತ್ತಾರೆ) ; ಅನ್ಯಥಾ–ಹಾಗೆ ಆಜ್ಞೆಯನ್ನು ಪಡೆಯದೇ ದೀಕ್ಷಾ ಗುರುತ್ವವನ್ನು ವಹಿಸಿದರೆ, ನರಕಂ–ನರಕವನ್ನು, ಯಾತಿ–ಹೊಂದುತ್ತಾನೆ; ಗೃಹೀತಾರಃ ಅಪಿ–(ಅವರಿಂದ) ದೀಕ್ಷೆಯನ್ನು ಸ್ವೀಕರಿಸಿದವರೂ ಸಹ, ತಾದೃಶಾಃ–ನರಕ ಭಾಗಿಗಳೇ ಆಗುತ್ತಾರೆ.

ಸ್ಥಂಡಿಲೇಗ್ನಿಂ ಪ್ರತಿಷ್ಠಾಪ್ಯ ವಾಸುದೇವಾದಿನಾಮಭಿಃ ।
ಚತುರ್ಭಿಶ್ಚ ಚತುರ್ಥ್ಯಂತೈರ್ನಮೋಂತೈರ್ಮಂತ್ರಯೇಚ್ಚ ತಂ ॥೧೭
ಚಕ್ರಾದಿ ತತ್ರ ಸಂತಾಪ್ಯ ಸಂಸ್ಕಾರ್ಯಾ ಹಿ ದ್ವಿಜೇತರಾಃ ।

ಸ್ಥಂಡಿಲೇ – ಭೂಮಿಯಲ್ಲಿ ನಿರ್ಮಿತವಾದ ಕಟ್ಟೆಯಮೇಲೆ, (ಅಗ್ನಿ ಸ್ಥಾಪನೆಗಾಗಿ ಏರ್ಪಡಿಸಿದ ಪವಿತ್ರಪ್ರದೇಶದಲ್ಲಿ), ಅಗ್ನಿಂ – ಅಗ್ನಿಯನ್ನು, ಪ್ರತಿಷ್ಠಾಪ್ಯ – ಪ್ರತಿಷ್ಠೆಮಾಡಿ, ಚತುರ್ಭಿಃ – ನಾಲ್ಕು, ವಾಸುದೇವಾದಿ-ನಾಮಭಿಃ – ವಾಸುದೇವಾದಿ (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧಗಳೆಂಬ) ನಾಮಗಳಿಂದ, ಚತುರ್ಥ್ಯಂತೈಃ–ಚತುರ್ಥೀ ವಿಭಕ್ತಿಯಲ್ಲಿರುವ, ನಮೋಂತೈಃ–ನಮಃಶಬ್ದದಿಂದ ಕೊನೆಗೊಳ್ಳುವ ಮಂತ್ರಗಳಿಂದ (ವಾಸುದೇವಾಯ ನಮಃ ಸಂಕರ್ಷಣಾಯನಮಃ ಇತ್ಯಾದಿಗಳಿಂದ), ತಂ– ಆ ಅಗ್ನಿಯನ್ನು, ಮಂತ್ರಯೇತ್ – ಅಭಿಮಂತ್ರಿಸಬೇಕು ; ತತ್ರ – ಆ ಅಗ್ನಿಯಲ್ಲಿ, ಚಕ್ರಾದಿ – ಚಕ್ರಾದಿಗಳನ್ನು ಸಂತಾಪ್ಯ – ದಹಿಸಿ, (ಕಾಯಿಸಿ), ದ್ವಿಜೇತರಾಃ – ದ್ವಿಜರಲ್ಲದ ಇತರರು (ಶೂದ್ರಾದಿಗಳು), ಸಂಸ್ಕಾರ್ಯಾಃ– ಸಂಸ್ಕಾರಮಾಡಲ್ಪಡತಕ್ಕವರು(ಎಂದರೆ, ತಪ್ತಚಕ್ರಾದಿಮುದ್ರೆಗಳನ್ನು ಧಾರಣೆ ಮಾಡಿಸತಕ್ಕದ್ದು).

ಅಗ್ನಿಪ್ರತಿಷ್ಠೆಮಾಡಿ, ವಾಸುದೇವಾಯ ನಮಃ–ಸಂಕರ್ಷಣಾಯ ನಮಃ– ಪ್ರದ್ಯುಮ್ನಾಯ ನಮಃ-ಅನಿರುದ್ಧಾಯ ನಮಃ, ಎಂಬುದಾಗಿ ಅಗ್ನಿಯನ್ನು ಅಭಿಮಂತ್ರಿಸಿ, ಆ ಅಗ್ನಿಯಲ್ಲಿ ಚಕ್ರಾದಿಗಳನ್ನು ಕಾಯಿಸಿ (ದಹಿಸಿ), ಅದರಿಂದ, ಶೂದ್ರಾದಿಗಳಿಗೆ ಮುದ್ರೆಗಳನ್ನು ಕೊಡತಕ್ಕದ್ದು (೧೭). ತಪ್ತಮುದ್ರಾಧಾರಣೆಯನ್ನು ಮಾಡಿಸಿಯೇ ಗುರುವು ವೈಷ್ಣವಮಂತ್ರವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದತ್ವಾ ವಿಧಿವನ್ಮುದ್ರಾಂ ಯೋ ಮಂತ್ರಂ ವೈಷ್ಣವಂ ವದೇತ್ ॥
ಸ ಯಾತಿ ನರಕಂ ಘೋರಂ ಶಿಷ್ಯೇಣಾಪಿ ಸಹೈವ ತು ।

ವಿಧಿವತ್ – ವಿಧಿಪೂರ್ವಕವಾಗಿ (ನಿಯಮಗಳಂತೆ), ಮುದ್ರಾಂ – ತಪ್ತಚಕ್ರಾದಿಮುದ್ರೆಯನ್ನು, ಅದತ್ವಾ–ಕೊಡದೇ (ಶಿಷ್ಯನ ದೇಹದಮೇಲೆ ಮುದ್ರಿಸದೇ), ಯಃ – ಯಾರು (ಯಾವ ಗುರುವು), ವೈಷ್ಣವಂ – ವಿಷ್ಣು ಸಂಬಂಧಿಯಾದ, ಮಂತ್ರಂ–ಮಂತ್ರವನ್ನು, ವದೇತ್–ಉಪದೇಶಿಸುವನೋ, ಸಃ–ಆತನು, ಶಿಷ್ಯೇಣ ಅಪಿ ಸಹ–ಶಿಷ್ಯನಿಂದಲೂ ಕೂಡಿಕೊಂಡು, ಘೋರಂ–ಘೋರವಾದ, ನರಕಂ–ನರಕವನ್ನು, ಯಾತಿ ಏವ ತು–ನಿಶ್ಚಯವಾಗಿಯೂ ಹೊಂದುತ್ತಾನೆ.

ಪೂರ್ವೋಕ್ತೇನ ವಿಧಾನೇನ ದೀಕ್ಷಾಂ ಗೃಹ್ಣಾತಿ ವೈಷ್ಣವೀಂ ॥ ೧೯ ॥
ಸೋಚಿರೇಣೈವ ನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ।
ಅಕಾಲೇ ಚಾಪ್ಯದೇಶೇ ಚ ವಿಧಿಮುಲ್ಲಂಘ್ಯ ಯೋ ನರಃ ॥ ೨೦ ॥
ಲೋಭಾದ್ಯುಪಾಧಿನಾ ವಾಪಿ ಯಸ್ಮಾತ್ಕಸ್ಮಾಚ್ಚ ಪೂರುಷಾತ್ ।
ಸ್ವಯಂ ವಾಪಿ ದಹೇದ್ಗಾತ್ರಂ ಚಕ್ರಶಂಖಾದಿಕೈರಪಿ ॥ ೨೧ ॥

ಶಿಷ್ಯನಿಗೆ ಉಪದೇಶಿಸಬೇಕು; ಮುದ್ರೆಯನ್ನು ಕೊಡದೇ ಹಾಗೆಯೇ ಮಂತ್ರೋಪದೇಶಮಾಡಿದ ಗುರುವು, ಶಿಷ್ಯನಿಂದ ಕೂಡಿಕೊಂಡು ಘೋರ ನರಕವನ್ನೇ ಹೊಂದುತ್ತಾನೆ—ಇದು ಶಾಸ್ತ್ರನಿಶ್ಚಯವು (೧೮). ಪೂರ್ವೋಕ್ತ ವಿಧಿಯಂತೆ ವೈಷ್ಣವದೀಕ್ಷೆಯನ್ನು ಸ್ವೀಕರಿಸಿದವನು ಶೀಘ್ರವಾಗಿ ಸಂಸಾರ ದಿಂದ ಮುಕ್ತನಾಗಿ, ವಿಷ್ಣುಲೋಕವನ್ನು ಹೊಂದಿ ನಿತ್ಯಾನಂದದಿಂದ ವಿಹರಿಸುತ್ತಾನೆ; ಹಾಗಲ್ಲದೇ ಅಯೋಗ್ಯವಾದ ಕಾಲದೇಶಗಳಲ್ಲಿ,[1] ವಿಧಿಯನ್ನು ಮೀರಿ, ದ್ರವ್ಯಾಶೆ ಮೊದಲಾದ ಕಾರಣಗಳಿಂದ, ಯಾವನೊಬ್ಬ (ಸದ್ಗುರುವಲ್ಲದ) ಪುರುಷನಿಂದ, ಅಥವಾ ತಾನೇ ಚಕ್ರಶಂಖಾದಿಗಳಿಂದ

---

[1] ದೀಕ್ಷೆಯಿಂದ ಫಲಾಧಿಕ್ಯಕ್ಕೆ ಕಾರಣವಾಗುವ ಕಾಲವಿಶೇಷಗಳ ವಿವರಗಳಿಗೆ ೭ನೇ ಅಧ್ಯಾಯದ ೭೫-೭೭ನೇ ಶ್ಲೋಕಗಳನ್ನೂ ಆ ಶ್ಲೋಕಗಳ ಟಿಪ್ಪಣಿಗಳನ್ನೂ ನೋಡಬಹುದು. ಶುಭಕರ್ಮಗಳಿಗೆ ನಿಂದ್ಯಗಳೆಂದು ಜ್ಯೋತಿಷದಿಂದ ತಿಳಿದುಬರುವ ಕಾಲವಿಶೇಷಗಳು 'ಅಕಾಲ'ಗಳು; ಸಜ್ಜನಸಂಗವು, ಮಹಾಗುರುಸಮಾಜಗಳಿಲ್ಲದ ಸ್ಥಳಗಳು 'ಅದೇಶ' (ಅಯೋಗ್ಯ) ಗಳೆನಿಸುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೋಽಪಿ ವ್ರಜೇತ ನಿರಯಂ ಸಾಕಂ ಸ್ವಗುರುಣಾ ಚಿರಂ ।
ತಸ್ಮಾತ್ತು ವಿಧಿನಾ ಬ್ರಹ್ಮನ್ ಗೃಹ್ಣೀಯಾತ್ ಸದ್ಗುರೋರಪಿ ॥೨೨॥

ಪೂರ್ವೋಕ್ತೇನ–ಈ ಹಿಂದೆ ನಿರೂಪಿಸಲಾದ, ವಿಧಾನೇನ–ಕ್ರಮದಿಂದ (ನಿಯಮಾನುಸಾರವಾಗಿ), (ಯಃ–ಯಾರು), ವೈಷ್ಣವೀಂ ದೀಕ್ಷಾಂ–ವಿಷ್ಣುದೀಕ್ಷೆಯನ್ನು, ಗೃಹ್ಣಾತಿ–ಸ್ವೀಕರಿಸುವನೋ, ಸಃ–ಆತನು, ಅಚಿರೇಣ ಏವ–ಶೀಘ್ರವಾಗಿಯೇ, ನಿರ್ಮುಕ್ತಃ–(ಸಂಸಾರದಿಂದ)ಮುಕ್ತನಾಗಿ, ವಿಷ್ಣು-ಲೋಕೇ – ವೈಕುಂಠ ಮೊದಲಾದ ಶ್ರೀವಿಷ್ಣುವು ನಿತ್ಯಪ್ರತ್ಯಕ್ಷನಾಗುವ ಲೋಕದಲ್ಲಿ, ಮಹೀಯತೇ – ವಿರಾಜಿಸುತ್ತಾನೆ (ಆನಂದದಿಂದ ವಿಹರಿಸುತ್ತಾನೆ); ಅಕಾಲೇ – ಅಕಾಲದಲ್ಲಿಯೂ (ನಿಷಿದ್ಧಕಾಲಗಳಲ್ಲಿ), ಅದೇಶೇ ಚಾಪಿ – ಅಪವಿತ್ರದೇಶಗಳಲ್ಲಿಯೂ, ಯಃ ನರಃ – ಯಾವ ಮನುಷ್ಯನು, ವಿಧಿಂ–ವಿಧಿಯನ್ನು (ದೀಕ್ಷಾಸ್ವೀಕಾರ ನಿಯಮವನ್ನು), ಉಲ್ಲಂಘ್ಯ–ಮೀರಿ (ಅತಿಕ್ರಮಿಸಿ–ನಿಯಮಕ್ಕೆ ವಿರುದ್ಧವಾಗಿ), ಲೋಭಾದ್ಯುಪಾಧಿನಾ–ದ್ರವ್ಯಾದಿ ಲೋಭನಿಮಿತ್ತದಿಂದ, ಅಪಿ–ಆಗಲೀ, ವಾ–ಅಥವಾ, ಯಸ್ಮಾತ್ ಕಸ್ಮಾತ್–ಯಾರಾದರೊಬ್ಬ, ಪೂರುಷಾತ್–ಪುರುಷನಿಂದ, ಅಪಿ ಚ–ಮತ್ತೇನೆಂದರೆ, ಸ್ವಯಂ ವಾ – ತಾನೇ ಆಗಲಿ, ಚಕ್ರಶಂಖಾದಿಕೈಃ – ಚಕ್ರಶಂಖಾದಿಗಳಿಂದ, ಗಾತ್ರಂ – ತನ್ನ ದೇಹವನ್ನು, ದಹೇತ್ – ಸುಟ್ಟುಕೊಂಡರೆ, ಸಃ ಅಪಿ– ಆ ಮನುಷ್ಯನೂ, ಸ್ವಗುರುಣಾಸಾಕಂ–ತನ್ನ ಗುರುವಿನೊಡನೆ, ಚಿರಂ–ಬಹುಕಾಲ, ನಿರಯಂ–ನರಕವನ್ನು, ವ್ರಜೇತ–ಹೊಂದುತ್ತಾನೆ; ತಸ್ಮಾತ್–ಈ ಕಾರಣದಿಂದ, ಬ್ರಹ್ಮನ್–ಹೇ ಬ್ರಹ್ಮದೇವ!, ವಿಧಿನಾ–ವಿಧ್ಯುಕ್ತಕ್ರಮದಿಂದ, ಅಪಿ–ಮತ್ತು, ಸದ್ಗುರೋಃ–ಸದ್ಗುರುವಿನಿಂದ, ಗೃಹ್ಣೀಯಾತ್–(ದೀಕ್ಷೆಯನ್ನು) ಸ್ವೀಕರಿಸತಕ್ಕದ್ದು.

ದೇಶೇ ಕಾಲೇ ವಿಶೇಷೇಣ ವಿಷ್ಣುಭಕ್ತಿಸಮನ್ವಿತಃ ।
ವಿಷ್ಣುದೀಕ್ಷಾಫಲಂ ಕೃತ್ಸ್ನಂ ಸಮ್ಯಕ್ ಸ ಲಭತೇ ನರಃ ॥ ೨೩ ॥

ತನ್ನ ದೇಹವನ್ನು ಸುಡಿಸಿಕೊಂಡರೆ, ಆತನು ಅಂಥ ಕಷ್ಟನ ಗುರುವಿನೊಂದಿಗೆ ಬಹುಕಾಲಾವಧಿಯ ನರಕವಾಸವನ್ನು ಹೊಂದುತ್ತಾನೆ; ಆದ್ದರಿಂದ ಹೇ ಬ್ರಹ್ಮನ್! ವಿಧಿಪೂರ್ವಕವಾಗಿ ಸದ್ಗುರುವಿನಿಂದಲೇ ವಿಷ್ಣುದೀಕ್ಷೆಯನ್ನು ಎಲ್ಲರೂ ಸ್ವೀಕರಿಸತಕ್ಕದ್ದು (೧೯–೨೨). ಯೋಗ್ಯವಾದ ದೇಶ ಕಾಲಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನ್ಯಥಾ ನ ತಥಾ ತಸ್ಯ ಫಲಂ ಭವತಿ ನಿಶ್ಚಿತಂ ॥ ೨೪ ॥

ವಿಶೇಷೇಣ—ವಿಶೇಷವಾಗಿ, ವಿಷ್ಣುಭಕ್ತಿಸಮನ್ವಿತಃ—ವಿಷ್ಣುಭಕ್ತಿಯುಳ್ಳವನು, ದೇಶೇ ಕಾಲೇ—(ದೀಕ್ಷಾಸ್ವೀಕಾರಕ್ಕೆ ಯೋಗ್ಯವಾದ) ದೇಶಕಾಲಗಳಲ್ಲಿ, ವಿಷ್ಣುದೀಕ್ಷಾಫಲಂ—ವಿಷ್ಣುದೀಕ್ಷೆಯ ಫಲವನ್ನು, ಕೃತ್ಸ್ನಂ—ಪೂರ್ಣವಾಗಿ, ಲಭತೇ—ಹೊಂದುತ್ತಾನೆ; ಸ ನರಃ—ಆ ಮನುಷ್ಯನು, ಅನ್ಯಥಾ—ಹಾಗಿಲ್ಲದಿದ್ದರೆ (ವಿಷ್ಣುಭಕ್ತಿಯಿಲ್ಲದಿದ್ದರೆ), ತಸ್ಯ—ಆ ಪುರುಷನಿಗೆ, ನಿಶ್ಚಿತಂ—ನಿಶ್ಚಯವಾಗಿ, ಫಲಂ—ದೀಕ್ಷಾಫಲವು, ನ ಭವತಿ—ಉಂಟಾಗುವುದಿಲ್ಲ (ದೊರೆಯುವುದಿಲ್ಲ) ; ತಥಾ—ಹಾಗೂ (ಕಾಲ ದೇಶ ವಿಶೇಷಗಳಿಂದ ದೊರೆಯುವ ಪೂರ್ಣಫಲವೂ), ನ ಭವತಿ—ಲಭಿಸುವುದಿಲ್ಲ.

ಅಧ್ಯಾಯ ೯

ಶ್ರೀ ವೇದವ್ಯಾಸಾಯಃ ನಮಃ

ಬ್ರಹ್ಮೋವಾಚ—

ಯೇಷಾಂ ಹಿ ಪ್ರತಿಲೋಮಾನಾಂ ದರ್ಶನಾದೇವ ಜಾಯತೇ ।
ಶೌಚಭಂಗೋ ದ್ವಿಜಾತೀನಾಂ ತೇಷಾಂ ಮುದ್ರಾಂಕನಂ ಕಥಂ ॥೧॥

ಮತ್ತು ವಿಶೇಷವಾಗಿ ವಿಷ್ಣುಭಕ್ತಿಯಿಂದ ಕೂಡಿದವನಾಗಿ, ದೀಕ್ಷೆಯನ್ನು ಸ್ವೀಕರಿಸುವ ನರನು, ವಿಷ್ಣುದೀಕ್ಷೆಯಿಂದ ಲಭ್ಯವಾದ ಪೂರ್ಣಫಲವನ್ನು ಹೊಂದುತ್ತಾನೆ; ಅನ್ಯಥಾ, ದೀಕ್ಷಾಫಲವು, ಆ ಪ್ರಕಾರವಾಗಿ (ಪೂರ್ಣವಾಗಿ) ದೊರೆಯುವುದಿಲ್ಲವೆಂಬುದು ನಿಶ್ಚಯ (೨೩—೨೪).

ಗುರುವಿಚಾರವೆಂಬ ೮ನೇ ಅಧ್ಯಾಯವು ಮುಗಿದುದು.

ಪ್ರತಿಲೋಮಾದಿ ಅಧಮ (ಕೀಳು) ಜಾತಿಯವರನ್ನು ನೋಡುವ ಮಾತ್ರದಿಂದ, ದ್ವಿಜರಿಗೆ ಮೈಲಿಗೆಯಾಗುತ್ತದೆ (ಮಡಿಗೆ ಭಂಗ ಬರುತ್ತದೆ) ; ಹೀಗಿರಲು, ಆ ಜನರಿಗೆ, ಸ್ಪರ್ಶಮಾಡಿ (ಅವರನ್ನು ಮುಟ್ಟಿ), ತಪ್ತಮುದ್ರಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥಂ ಚೋಪದಿಶೇಯುಸ್ತಾನ್ ಶ್ವಪಾಕಾದೀನ್ ದ್ವಿಜೋತ್ತಮಾಃ ।
ಕಥಂ ವಾ ಬಿಭೃಯುರ್ಹಸ್ತಂ ತೇಷಾಮುಪರಿ ಮಸ್ತಕೇ ॥ ೨ ॥

ಉಪಾದಿಶೇಯುಃ ಕಾನ್ ಮಂತ್ರಾನ್ ತೇಷು ಜಾತ್ಯಧಮೇಷು ವೈ ।
ಏತಂ ಮೇ ಸಂಶಯಂ ದೇವ ಛೇತ್ತುಮರ್ಹಸ್ಯಶೇಷತಃ ॥ ೩ ॥

ಯೇಷಾಂ–ಯಾವ, ಪ್ರತಿಲೋಮಾನಾಂ–ಪ್ರತಿಲೋಮ ಜಾತಿಯವರ, ದರ್ಶನಾತ್ ಏವ–ದರ್ಶನ ಮಾತ್ರದಿಂದ, ದ್ವಿಜಾತೀನಾಂ–ದ್ವಿಜಾತಿಯವರಿಗೆ (ಬ್ರಾಹ್ಮಣಾದಿ ತ್ರಿವರ್ಣದವರಿಗೆ), ಶೌಚಭಂಗಃ – ಶುದ್ಧತೆಯ ಭಂಗವು, ಜಾಯತೇ–ಉಂಟಾಗುತ್ತದೆಯೋ (ಮೈಲಿಗೆಯಾಗುವುದೋ), ತೇಷಾಂ–ಆ ಪ್ರತಿಲೋಮ ವರ್ಣದವರಿಗೆ, ಮುದ್ರಾಂಕನಂ – ತಪ್ತಮುದ್ರಾಧಾರಣ ಮಾಡಿಸುವುದು, ಕಥಂ–ಹೇಗೆ (ಸಾಧ್ಯವಾಗುತ್ತದೆ?) (ಯಾವ ರೀತಿ ಮಾಡಬೇಕು); ದ್ವಿಜೋತ್ತಮಾಃ–ಬ್ರಾಹ್ಮಣಶ್ರೇಷ್ಠರು (ಸರ್ವರಿಗೂ ಮುಖ್ಯಗುರುಗಳಾದವರು), ಶ್ವಪಾಕಾದೀನ್ ತಾನ್–ಚಂಡಾಲರೇ ಮೊದಲಾದ ಆ ಹೀನ ಕುಲದವರನ್ನು ಕುರಿತು, ಕಥಂ ಚ – ಹೇಗೆ ತಾನೆ, ಉಪದಿಶೇಯುಃ – ಮಂತ್ರೋಪದೇಶ ಮಾಡುತ್ತಾರೆ?; ಕಥಂ ವಾ–ಮತ್ತು ಹೇಗೆ, ತೇಷಾಂ–ಆ ಹೀನಜಾತಿಯವರ, ಮಸ್ತಕೇ ಉಪರಿ–ತಲೆಯ ಮೇಲ್ಭಾಗದಲ್ಲಿ, ಹಸ್ತಂ–(ತಮ್ಮ) ಹಸ್ತವನ್ನು, ಬಿಭೃಯುಃ – ಇಡುತ್ತಾರೆ?; ಜಾತ್ಯಧಮೇಷು

ಧಾರಣಮಾಡಿಸುವುದು ಹೇಗೆ ಸಾಧ್ಯ? ಮುಖ್ಯಗುರುಗಳೆಂಬ ಬ್ರಾಹ್ಮಣರು ಚಂಡಾಲಾದಿ[1] ಹೀನಜಾತಿಯವರನ್ನು ಕುರಿತು, ಮಂತ್ರೋಪದೇಶವನ್ನು ಮಾಡುವುದು ಹೇಗೆ? ಅವರನ್ನು ಮುಟ್ಟಿ ಅವರ ತಲೆಯಮೇಲೆ ಗುರುವು ತನ್ನ ಹಸ್ತವನ್ನಿಡುವುದು ಹೇಗೆ? ಅಂಥ ಕೀಳುಜಾತಿಯವರಿಗೆ ಯಾವ ಮಂತ್ರಗಳನ್ನು ಉಪದೇಶಿಸಬೇಕು (ಉಪದೇಶಿಸುತ್ತಾರೆ)? ಈ ಮುಂತಾದ ನನ್ನ ಸಂಶಯಗಳನ್ನು ನಿಶ್ಶೇಷವಾಗಿ ಪರಿಹರಿಸು, ದೇವ! ಈ ಸಂಶಯಗಳ

---

[1] ಶ್ವಪಾಕರೆಂದರೆ ನಾಯಿಮಾಂಸವನ್ನು ಬೇಯಿಸಿ ತಿನ್ನುವವರು. ಶ್ವಪಾಕ ಶಬ್ದದಿಂದ ಚಂಡಾಲಾದಿ ಪ್ರತಿಲೋಮಜಾತಿಯವರು ವಿವಕ್ಷಿತರೆಂದು ತಿಳಿಯಬೇಕು; ಚಂಡಾಲನೆಂದರೆ, ಉತ್ತಮವರ್ಣದ ಬ್ರಾಹ್ಮಣಸ್ತ್ರೀಯಲ್ಲಿ ಶೂದ್ರವರ್ಣದ ಅಥವಾ ಆತನಗಿಂತ ಅಧಮಪುರುಷನಿಂದ, ಹುಟ್ಟಿದವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೇಷು–ಕೀಳುಜಾತಿಯ ಅವರಲ್ಲಿ (ಅವರಿಗೆ), ಕಾನ್ ಮಂತ್ರಾನ್–ಯಾವ ಮಂತ್ರಗಳನ್ನು, ಉಪದಿಶೇಯುಃ–ಉಪದೇಶಿಸುತ್ತಾರೆ? ವೈ–ಇವೆಲ್ಲವೂ ನಿಷಿದ್ಧಗಳೆಂದು ತೋರುತ್ತವೆಯಷ್ಟೆ! ದೇವ–ಹೇ ಸ್ವಾಮಿ!, ಮೇ–ನನ್ನ, ಏತಂ ಸಂಶಯಂ–ಈ ಸಂಶಯವನ್ನು, ಅಶೇಷತಃ–ಪೂರ್ಣವಾಗಿ (ಸ್ವಲ್ಪವೂ ಉಳಿಯದಂತೆ), ಛೇತ್ತುಂ–ಕತ್ತರಿಸಿ ಒಗೆಯಲು (ನಾಶಮಾಡಲು–ಪರಿಹರಿಸಲು), ಅರ್ಹತಿ–ಸಮರ್ಥನಾಗಿರುವಿ (ಹಾಗೆ ಮಾಡು, ದೇವ!).

ಹಯಗ್ರೀವ ಉವಾಚ—

ಯಥಾ ನಾನಾ ರಸಾ ಲೋಕೇ ಯಥಾ ನಾನೌಷಧೀಗಣಾಃ ।
ಸರ್ವವ್ಯಾಧಿಹರಾಃ ಪ್ರೋಕ್ತಾಃ ಪ್ರಯುಕ್ತಾಶ್ಚ ಚಿಕಿತ್ಸಕೈಃ ॥ ೪ ॥

ದಯಯಾ ರೋಗಿಸಂಘೇಷು ಭವಂತಿ ವ್ಯಾಧಿಘಾತಕಃ ।
ತಥಾ ಸಂಸಾರದುಃಖೇನ ಸಂತಾಪೈಸ್ತ್ರಿವಿಧೈರಪಿ ॥ ೫ ॥

ಪರಿಹಾರ ಮಾಡುವಲ್ಲಿ ನೀನೇ ಸಮರ್ಥನು (೧–೩). ವಿವಿಧ ರಸಾಯನಗಳು ಮತ್ತು ಔಷಧಿಗಳು ವೈದ್ಯರಿಂದ ರೋಗಿಗಳಲ್ಲಿ ಪ್ರಯೋಗಿಸಲ್ಪಟ್ಟರೆ, ರೋಗಿಗಳ ವಿವಿಧ ರೋಗಗಳು ಗುಣವಾಗುವುದು, ಲೋಕದಲ್ಲಿ ಕಂಡಿದೆಯಷ್ಟೆ; ಚಿಕಿತ್ಸಕನು ರೋಗಿಗಳನ್ನು ಮುಟ್ಟಲು ಮತ್ತು ಅವರ ಮಧ್ಯದಲ್ಲಿಯೇ ಇದ್ದು, ಕೃಪೆಯಿಂದ, ಮನಸ್ಸಿನಿಂದ ಯಾವ ರೀತಿಯಲ್ಲಿಯೂ ಬೇಸರಪಟ್ಟುಕೊಳ್ಳದೇ, ಚಿಕಿತ್ಸೆಯಲ್ಲಿ ತೊಡಗುತ್ತಾನೆ; ಹೀಗೆಯೇ ಸಂಸಾರದಲ್ಲಿರುವ ಜೀವರು ನಾನಾ ದುಃಖಗಳಿಂದಲೂ, ತ್ರಿವಿಧ ತಾಪಗಳಿಂದಲೂ,[1] ಅತಿಶಯವಾಗಿ ಪೀಡಿತರಾಗಿರುವರು; ಈ ದುಃಖಗಳಿಂದ ಮುಕ್ತರಾಗಲು, ವಿಷ್ಣುದೀಕ್ಷೆಯನ್ನು ವಿಧಿಪ್ರಕಾರ ಸ್ವೀಕರಿಸುವುದೊಂದೇ ಮಾರ್ಗವು—ಅನ್ಯಥಾ ಈ ದುಃಖಗಳಿಗೆ ಪರಿಹಾರಮಾರ್ಗವಿಲ್ಲ; ಆದ್ದರಿಂದ, ದಯಾವಂತನಾದ ಗುರುವು, ರೋಗಿಯ ದುಃಖವನ್ನು ಚಿಕಿತ್ಸೆಗಳಿಂದ ವೈದ್ಯನು ಪರಿಹರಿಸು

[1] ತಾಪಗಳು ಮೂರು ವಿಧ:—ಅಧಿಭೂತ—ದೇಹಕ್ಕೊದಗುವ ರೋಗಾದಿ ಉಪದ್ರವಗಳು; ಅಧ್ಯಾತ್ಮ—ನಾನಾವಿಧ ಮನೋರೋಗಗಳು; ಅಧಿದೈವ—ದೈವಿಕವಾಗಿ ಪ್ರಾಪ್ತವಾಗುವ, ಅತಿವೃಷ್ಟಿ–ಅನಾವೃಷ್ಟಿ–ಬಿರುಗಾಳಿ, ದುರ್ಭಿಕ್ಷ, ಸಿಡಿಲು ಮೊದಲಾದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನಿಶಂ ಪೀಡ್ಯಮಾನಾನಾಂ ಪರಮಂ ದುಃಖಮೋಚನಂ ।
ದೀಕ್ಷಾಯಾ ಗ್ರಹಣಂ ವಿಷ್ಣೋರೇಕಮೇವಾಸ್ತಿ ನಾನ್ಯಥಾ ॥ ೬ ॥

ಲೋಕೇ–ಲೋಕದಲ್ಲಿ, ಯಥಾ–ಹೇಗೆ, ನಾನಾ ರಸಾಃ–ವಿವಿಧ ರಸಗಳು (ರಸಾಯನಗಳು), ಮತ್ತು, ಯಥಾ–ಹೇಗೆ, ನಾನಾ ಔಷಧೀಗಣಾಃ–ವಿವಿಧವಾದ ಔಷಧಿಗಳ ಸಮೂಹವು, ಚಿಕಿತ್ಸಕೈಃ–ಚಿಕಿತ್ಸಕರಿಂದ (ವೈದ್ಯರಿಂದ), ರೋಗಿಸಂಘೇಷು–ರೋಗಿಗಳ ಗುಂಪುಗಳಲ್ಲಿ (ಅಸಂಖ್ಯರೋಗಿಗಳಲ್ಲಿ), ದಯಯಾ–ಕೃಪೆಯಿಂದ, ಪ್ರಯುಕ್ತಾಃ–ಪ್ರಯೋಗಿಸಲ್ಪಟ್ಟು, ಸರ್ವವ್ಯಾಧಿಹರಾಃ–ಸಕಲ ರೋಗಗಳನ್ನು ಪರಿಹರಿಸುವವುಗಳು, ಭವಂತಿ–ಆಗುತ್ತವೆಯೋ, ಯಥಾ–ಹೇಗೆ, ವ್ಯಾಧಿಘಾತಕಃ–ರೋಗಗಳನ್ನು ನಾಶಮಾಡುವ ವೈದ್ಯನೋ (ದಯಯಾ–ದಯೆಯಿಂದ, ರೋಗಿಸಂಘೇಷು–ರೋಗಿಗಳ ಸಮೂಹಗಳಲ್ಲಿ, ಪ್ರವೇಶಿಸಿ, ಅವರನ್ನು ಮುಟ್ಟಿ ಯೋಗ್ಯಚಿಕಿತ್ಸೆಗಳನ್ನು ನಡೆಸುತ್ತಾನೆಯೋ), ಸಂಸಾರದುಃಖೇನ – ಸಂಸಾರದುಃಖದಿಂದ, ಅಪಿ – ಮತ್ತು, ತ್ರಿವಿಧೈಃ–ಮೂರು ವಿಧದ (ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂಬ ತ್ರಿವಿಧ), ಸಂತಾಪೈಃ – ವಿಶೇಷ ದುಃಖಗಳಿಂದ, ಅನಿಶಂ – ನಿರಂತರವೂ, ಪೀಡ್ಯಮಾನಾನಾಂ–ಪೀಡಿಸಲ್ಪಡುತ್ತಿರುವವರಿಗೆ, ವಿಷ್ಣೋಃ–ವಿಷ್ಣುವಿನ, ದೀಕ್ಷಾಯಾಃ – ದೀಕ್ಷೆಯ (ತಪ್ತಮುದ್ರಧಾರಣ ಮಂತ್ರೋಪದೇಶಗಳ), ಗ್ರಹಣಂ–ಸ್ವೀಕಾರವು, ಪರಮಂ–ಉತ್ಕೃಷ್ಟವಾದ, ದುಃಖಮೋಚನಂ–ದುಃಖಪರಿಹಾರಮಾರ್ಗವು, ಏಕಮೇವ ಅಸ್ತಿ–ಒಂದು ಮಾತ್ರವಾಗಿರುತ್ತದೆ; ಅನ್ಯಥಾ ನ – ಬೇರೆ ಮಾರ್ಗವೇ ಇಲ್ಲ; (ಆದ್ದರಿಂದ) ತಥಾ – ವೈದ್ಯನಂತೆ, (ದ್ವಿಜನು ಕೀಳುಜಾತಿಯವರ ಸ್ಪರ್ಶದಿಂದಾದರೂ ಅವರನ್ನು ಅನುಗ್ರಹಿಸಬೇಕು—ಇದಕ್ಕೆ ಆ ದ್ವಿಜನು—ಗುರುವು ಮಾಡಿಕೊಳ್ಳಬೇಕಾದ ದೋಷಪರಿಹಾರವು, ಈ ಮುಂದೆ ಪ್ರಸಕ್ತವಾಗಲಿದೆ).

ವಂತೆ, ತನಗೆ ಉಂಟಾಗುತ್ತವೆಂಬ ಶೌಚಭಂಗಾದಿಗಳನ್ನು ಗಮನಿಸದೇ, ಚಂಡಾಲಾದಿ ಹೀನವರ್ಣದವರನ್ನು ಸ್ಪರ್ಶಮಾಡಿ ತಪ್ತಚಕ್ರಾದಿಗಳನ್ನು ದೇಹದಲ್ಲಿ ಧಾರಣೆಮಾಡಿಸಿ (ಮುದ್ರಾಂಕಿತರನ್ನಾಗಿ ಮಾಡಿ), ಯೋಗ್ಯ ಮಂತ್ರೋಪದೇಶವನ್ನು ಮಾಡಿ, ಆತನ ತಲೆಯಮೇಲೆ ತನ್ನ ಹಸ್ತವನ್ನಿಟ್ಟು ಶ್ರೀಹರಿಸ್ಮರಣೆಪೂರ್ವಕ, ವಿಷ್ಣುಭಕ್ತಿಯುಳ್ಳ ಶಿಷ್ಯನನ್ನು ಅನುಗ್ರಹಿಸಲೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾತ್ರ ವರ್ಣಾ ನಿಯಮ್ಯಂತೇ ನಾಪ್ಯಾಶ್ರಮನಿವಾಸಿನಃ ।
ಸರ್ವಾಶ್ರಮ್ಯೈಃ ಸರ್ವವರ್ಣ್ಯೈಃ ಸರ್ವಾಭಿರ್ಜಾತಿಭಿಸ್ತಥಾ ॥ ೭ ॥
ವಿಲೋಮ್ಯೈಃ ಪ್ರತಿಲೋಮ್ಯೈಶ್ಚ ತಥಾ ಕುಂಡೈಶ್ಚ ಗೋಳಕೈಃ ।
ಕರ್ತವ್ಯಾ ವಿಷ್ಣುಭಕ್ತಿಶ್ಚ ಗ್ರಾಹ್ಯಾ ದೀಕ್ಷೇ ಹರೇರಪಿ ॥ ೮ ॥

ಅತ್ರ–ದೀಕ್ಷಾಸ್ವೀಕಾರ ವಿಷಯದಲ್ಲಿ, ವರ್ಣಾಃ–ವರ್ಣಗಳಾಗಲಿ (ಜಾತಿಗಳಾಗಲಿ), ಆಶ್ರಮನಿವಾಸಿನಃ ಅಪಿ – ಆಶ್ರಮಗಳಲ್ಲಿರುವವರಾಗಲಿ, ನ ನಿಯಮ್ಯಂತೇ – ಯಾವ ನಿಯಮಕ್ಕೂ (ನಿರ್ಬಂಧಕ್ಕೂ) ಒಳಗಾಗುವುದಿಲ್ಲ; (ಎಂದರೆ, ದೀಕ್ಷಾಸ್ವೀಕಾರಕ್ಕೆ ಇಂಥ ವರ್ಣದವರು, ಇಂಥ ಆಶ್ರಮದಲ್ಲಿರುವವರು ಮಾತ್ರ ಅರ್ಹರೆಂಬ ಯಾವ ನಿಯಮವೂ ಇರುವುದಿಲ್ಲ—ವರ್ಣಗಳೂ ಆಶ್ರಮಗಳೂ ದೀಕ್ಷಾಸ್ವೀಕಾರಕ್ಕೆ ಯಾವ ನಿರ್ಬಂಧವನ್ನೂ ಉಂಟುಮಾಡುವುದಿಲ್ಲ.); ಮತ್ತೇನೆಂದರೆ, ಸರ್ವಾಶ್ರಮ್ಯೈಃ—ಎಲ್ಲ ಆಶ್ರಮಿಗಳಿಂದಲೂ, ಸರ್ವವರ್ಣ್ಯೈಃ–ಎಲ್ಲ ವರ್ಣದವರಿಂದಲೂ, ತಥಾ–ಹಾಗೂ, ಸರ್ವಾಭಿಃ–ಎಲ್ಲ, ಜಾತಿಭಿಃ–ಜಾತಿಯವರಿಂದಲೂ, ವಿಲೋಮ್ಯೈಃ[1]–ವಿಲೋಮಿಗಳಿಂದಲೂ, ಪ್ರತಿಲೋಮ್ಯೈಃ ಚ – ಪ್ರತಿಲೋಮಿಗಳಿಂದಲೂ, ತಥಾ–ಮತ್ತು, ಕುಂಡೈಃ[2]–ಕುಂಡರಿಂದಲೂ, ಚ–ಮತ್ತು, ಗೋಲಕೈಃ[3]–

ಬೇಕು (೭–೮). ವರ್ಣಾಶ್ರಮಗಳು ದೀಕ್ಷಾಸ್ವೀಕಾರದ ಅರ್ಹತೆಯನ್ನು ನಿಯಮಿಸುವುದಿಲ್ಲ; ಎಲ್ಲ ಆಶ್ರಮಿಗಳೂ, ಎಲ್ಲ ವರ್ಣದವರೂ, ಹಾಗೂ ಎಲ್ಲ ಜಾತಿಯವರೂ,* ವಿಲೋಮಿಗಳೂ ಪ್ರತಿಲೋಮಿಗಳೂ ಕುಂಡಗೋಳಕಾದಿ

---

1 ವಿಲೋಮಿಗಳೆಂದರೆ ಪ್ರತಿಲೋಮಿಗಳೇ ಆದರೂ, ಪ್ರತಿಲೋಮಿಗಳು ಮಾತ್ರರಲ್ಲ; ಪ್ರತಿಲೋಮಿಗಳಿಂದ ಉತ್ತಮ ಸ್ತ್ರೀಯಲ್ಲಿ ಹುಟ್ಟಿದವರೂ ವಿಲೋಮಿಗಳಲ್ಲಿ ಸೇರುತ್ತಾರೆ.

2 ಕುಂಡ—ಪತಿಯುಳ್ಳ ಸ್ತ್ರೀಯಲ್ಲಿ ಅನ್ಯಪುರುಷನಿಂದ (ಜಾರತ್ವದಿಂದ) ಹುಟ್ಟಿದ ಸಂತಾನ; 3 ಗೋಲಕ—ವಿಧವೆಯು ಪರಪುರುಷಸಂಗದಿಂದ ಪಡೆಯುವ ಸಂತಾನ. ವರ್ಣ, ಜಾತಿಗಳು ಮತ್ತು ಈ ಟಿಪ್ಪಣಿಗಳ ವಿಷಯಗಳು ಮುಂದೆ ಜಾತಿವಿವೇಕವೆಂಬ ೩೫ನೇ ಅಧ್ಯಾಯದಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಲ್ಪಡುತ್ತವೆ.

* ಬ್ರಾಹ್ಮಣಾದಿ ವರ್ಣದವರೂ, ಈ ವರ್ಗದಲ್ಲಿ ಸೇರಿರುವುದರಿಂದ, ಕೈಮುತ್ಯ ನ್ಯಾಯದಿಂದ ('ಜಾತಿ'ಶಬ್ದದಿಂದ ಉಪಲಕ್ಷಿತರಾದ) ಅನುಲೋಮಿಗಳನ್ನು ಇಲ್ಲಿ ಗ್ರಹಿಸಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಲಕರಿಂದಲೂ, ವಿಷ್ಣುಭಕ್ತಿಃ–ವಿಷ್ಣುಭಕ್ತಿಯು, ಕರ್ತವ್ಯಾ ಚ (ಏವ)–ಅವಶ್ಯವಾಗಿ ಮಾಡಲ್ಪಡತಕ್ಕದ್ದು ; ಅಪಿ–ಮತ್ತು, ಹರೇಃ ದೀಕ್ಷಾ–ವಿಷ್ಣುದೀಕ್ಷೆಯು, ಗ್ರಾಹ್ಯಾ–ಸ್ವೀಕರಿಸಲ್ಪಡಬೇಕು.

ಸಂಸಾರೇ ದುಃಖಬಹುಲೇ ವಿಯೋಗಃ ಪ್ರಿಯವಸ್ತುನಃ ।
ಸಂಯೋಗಶ್ಚಾಪ್ರಿಯಸ್ಯೈವ ಜಾಯತೇ ಸತತಂ ನೃಣಾಂ ॥ ೯ ॥

ನೃಣಾಂ – ಮನುಷ್ಯರಿಗೆ, ದುಃಖಬಹುಲೇ – ದುಃಖವೇ ಬಹಳವಾಗಿವುಳ್ಳ, ಸಂಸಾರೇ – ಸಂಸಾರದಲ್ಲಿ, ಪ್ರಿಯವಸ್ತುನಃ – ಪ್ರಿಯವಸ್ತುವಿನ, ವಿಯೋಗಃ–ವಿಯೋಗವೂ (ಸಂಬಂಧ ತಪ್ಪುವಿಕೆಯೂ), ಅಪ್ರಿಯಸ್ಯ ಏವ–ಅಪ್ರಿಯವಾದ ವಸ್ತುವಿನ (ತನಗೆ ಇಷ್ಟವಲ್ಲದ್ದೇ ಆದ ವಸ್ತುವಿನ), ಸಂಯೋಗಃ – ಸಂಬಂಧವೂ (ಸಮೀಪದಲ್ಲಿ ಕೂಡುವಿಕೆಯೂ), ಸತತಂ – ನಿತ್ಯವೂ, ಜಾಯತೇ–ಉಂಟಾಗುತ್ತದೆ.

ತಸ್ಮಾದತೋ ವಿರಕ್ತಃ ಸ್ಯಾದೇಕೈಕಂ ಚ ಶನೈಃಶನೈಃ ।
ವಿಸೃಜೇದ್ವಿಷಯಂ ಧೀಮಾನ್ ನಿತ್ಯಮುದ್ವಿಗ್ನಮಾನಸಃ ॥ ೧೦ ॥

ತಸ್ಮಾತ್ – ಆದ್ದರಿಂದ, ನಿತ್ಯಂ–ನಿತ್ಯವೂ (ನಿಯಮೇನ–ತಪ್ಪದೇ), ಉದ್ವಿಗ್ನಮಾನಸಃ–ಅಶಾಂತಮನಸ್ಕನಾದ ಸಂಸಾರಿಯು, ಅತಃ–ಈ ಸಂಸಾರದಿಂದ, ವಿರಕ್ತಃ–ವಿರಕ್ತನು (ಸಂಸಾರದಲ್ಲಿ ಆಸಕ್ತಿಯನ್ನು ತ್ಯಜಿಸಿದವನು),

---

ಅಪಕೃಷ್ಟರೂ (ಸಂಸಾರದುಃಖಪರಿಹಾರವನ್ನು ಇಚ್ಛಿಸುವ ಸರ್ವರೂ), ವಿಷ್ಣುವಿನಲ್ಲಿ ಭಕ್ತಿಯನ್ನು ಮಾಡಲೇಬೇಕು ಮತ್ತು ವಿಷ್ಣುದೀಕ್ಷೆಯನ್ನು ಸ್ವೀಕರಿಸಲೇಬೇಕು (೭–೮). ಮನುಷ್ಯರಿಗೆ ದುಃಖಪ್ರಚುರವಾದ ಈ ಸಂಸಾರದಲ್ಲಿ, ನಿತ್ಯವೂ ಪ್ರಿಯವಸ್ತುವಿನ ವಿಯೋಗವೂ, ಅಪ್ರಿಯವಸ್ತುವಿನ ಯೋಗವೂ, ಉಂಟಾಗುತ್ತಲೇ ಇರುತ್ತದೆ (೯). ಸಂಸಾರದಲ್ಲಿ ಮನುಷ್ಯನು ನಿಯಮೇನ ಅಶಾಂತಮನಸ್ಕನಾಗಿರುತ್ತಾನೆ (ಮನಸ್ಸು ಒಂದಲ್ಲ ಒಂದು ವಿಷಯಿಕವಾಗಿ ಉದ್ವೇಗಗೊಂಡೇ ಇರುತ್ತದೆ—ಶಾಂತವಾಗಿರುವುದಿಲ್ಲ) ; ಈ ಅಶಾಂತತೆಯ ಪರಿಹಾರಕ್ಕಾಗಿ ವಿವೇಕಿಯು ವಿರಕ್ತನಾಗಬೇಕು ; ವಿಷಯಭೋಗಗಳನ್ನು ಸಹಸಾ ತ್ಯಜಿಸುವುದು ಶಕ್ಯವಲ್ಲ—ಆದ್ದರಿಂದ ಮೆಲ್ಲಮೆಲ್ಲಗೆ, ಯತ್ನಪೂರ್ವಕವಾಗಿ ವೈರಾಗ್ಯವನ್ನು ದೊರಕಿಸಿಕೊಳ್ಳಬೇಕು (೧೦).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಯಾತ್–ಆಗಬೇಕು; ಧೀಮಾನ್–ವಿವೇಕಿಯಾದವನು, ಏಕೈಕಂ–ಒಂದೊಂದನ್ನೂ ಪ್ರತ್ಯೇಕವಾಗಿ, ವಿಷಯಂ–ವಿಷಯವನ್ನು (ಅಹಂ ಮಮ ಕಾರಗಳನ್ನು ಬಲಪಡಿಸುವ ಭೋಗಗಳನ್ನು), ಶನೈಃ ಶನೈಃ–ಮೆಲ್ಲಮೆಲ್ಲಗೆ (ಸಹಸಾ–ಇದ್ದಕ್ಕಿದ್ದಂತೆ ಬಿಡಲು ಅಶಕ್ಯವಾದ್ದರಿಂದ), ವಿಸೃಜೇತ್–ತ್ಯಜಿಸುತ್ತ ಸಾಗಬೇಕು (ಹೀಗೆ ವೈರಾಗ್ಯವು ಬಹುಯತ್ನಸಾಧ್ಯವು).

ಸತ್ಯವಾದೀ ಜಿತಕ್ರೋಧೋ ದಯಾವಾನ್ ವಿಜಿತೇಂದ್ರಿಯಃ ।
ಪರದಾರಪರದ್ರವ್ಯಪರದ್ರೋಹಪರಾಙ್ಮುಖಃ ॥ ೧೧ ॥

ವೈರಾಗ್ಯಸಂಪಾದನೆಗೆ ಸಹಾಯಕವಾಗುವ (ವೈರಾಗ್ಯದ ಫಲರೂಪ ಗಳೂ ಆದ) ಸದ್ಗುಣಗಳು, ಯಾವುವೆಂದರೆ:—ಸತ್ಯವಾದೀ–ಸತ್ಯಭಾಷಣ ವುಳ್ಳವನೂ, ಜಿತಕ್ರೋಧಃ–ಕೋಪವನ್ನು ಜಯಿಸಿದವನೂ, ದಯಾವಾನ್–ದಯಾವಂತನೂ, ವಿಜಿತೇಂದ್ರಿಯಃ–ಇಂದ್ರಿಯಜಯವುಳ್ಳವನೂ, ಪರದಾರ ಪರದ್ರವ್ಯ ಪರದ್ರೋಹ ಪರಾಙ್ಮುಖಃ – ಪರಸ್ತ್ರೀ, ಪರದ್ರವ್ಯ, ಪರವಂಚನೆ ಗಳನ್ನು ಮನಸ್ಸಿಗೆ ತರದವನೂ (ಆಗಿರಬೇಕು).

ತೀರ್ಥಸೇವಾಪರೋ ನಿತ್ಯಂ ನಾತಿತೃಷ್ಣೋತಿಶಾಂತಧೀಃ ।
ನ್ಯಾಯಾದ್ದ್ರವ್ಯಾರ್ಜಕೋ ಯಶ್ಚ ಪಾತ್ರೇ ದಾನಂ ಕರೋತಿ ಯಃ ॥
ಸತಾಂ ಸಂತೋಷಕೋ ಯಃ ಸ್ಯಾದಸತಾಂ ಸಂಗವರ್ಜಿತಃ ।
ಆಸ್ತಿಕ್ಯಬುದ್ಧಿಃ ಸತತಂ ಪಶ್ಚಾತ್ತಾಪೋ ಹಿ ಪಾತಕಾತ್ ॥ ೧೩ ॥

ದೃಢವಾದ ವೈರಾಗ್ಯವನ್ನು ಸಾಧಿಸುವ ಇಚ್ಛೆಯುಳ್ಳ ಪುರುಷನು ಸತ್ಯವಾದಿ ಯಾಗಬೇಕು; ಕೋಪಾದಿಗಳನ್ನು ಜಯಿಸಬೇಕು; ಸರ್ವಪ್ರಾಣಿಗಳಲ್ಲಿ ದಯಾವಂತನಾಗಿರಬೇಕು; ಪರಸ್ತ್ರೀ ಪರದ್ರವ್ಯಗಳನ್ನು ಎಂದೂ ಇಚ್ಛಿಸ ಕೂಡದು; ಪರರನ್ನು ವಂಚಿಸುವ ಇಚ್ಛೆಯನ್ನು ಮನಸ್ಸಿನಿಂದ ದೂರವಿಡ ಬೇಕು (೧೧). ವಿಷ್ಣುದೀಕ್ಷೆಯನ್ನು ಪಡೆದು ಅದರ ಫಲಕ್ಕೆ ಭಾಗಿಯಾಗ ತಕ್ಕವನು, ದೀಕ್ಷಾಸ್ವೀಕಾರದಲ್ಲಿ ಅಧಿಕಾರಿಯೆನಿಸುತ್ತಾನೆ; ದೀಕ್ಷಾಧಿಕಾರಿ ಯಲ್ಲಿರಬೇಕಾದ (ದೀಕ್ಷಾಸ್ವೀಕಾರಕ್ಕೆ ಅರ್ಹತೆಯನ್ನು ದೊರಕಿಸಿಕೊಡುವ) ಸದ್ಗುಣಗಳು ಯಾವುವೆಂದರೆ: ಪುಣ್ಯತೀರ್ಥಗಳನ್ನು ಸೇವಿಸುವುದರಲ್ಲಿ ಆಸಕ್ತಿ ಯಿರಬೇಕು; ವಿಷಯಾಶಾರಹಿತನಾಗಿರಬೇಕು (ವಿರಕ್ತನಾಗಿರಬೇಕು),

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದ್ವೇಷ್ಟಾ ಸರ್ವಭೂತಾನಾಂ ಶುಶ್ರೂಷುರತಿಥಿಪ್ರಿಯಃ ।
ಪ್ರಿಯವಕ್ತಾ ಸದಾಚಾರೋ ವಿಷ್ಣುಭಕ್ತಿಸಮನ್ವಿತಃ ॥ ೧೪ ॥
ವಿಷ್ಣುದೀಕ್ಷಾಧಿಕಾರೀ ಸ್ಯಾದ್ಯೋವಾ ಕೋ ವಾ ಭವತ್ಯಸೌ ।
ಪೂರ್ವೋಕ್ತಗುಣವಾನ್ ವಿಪ್ರೋ ಗುರುರ್ಮುಖ್ಯೋ ನಿಗದ್ಯತೇ ॥

ನಿತ್ಯಂ – ನಿತ್ಯವೂ, ತೀರ್ಥಸೇವಾಪರಃ – ತೀರ್ಥಯಾತ್ರಾದಿಗಳಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಬೇಕು; ಅತಿತೃಷ್ಣಃ ನ–ಅತಿಯಾದ ಆಶೆಯುಳ್ಳವನಾಗಬಾರದು; ಅತಿಶಾಂತಧೀಃ–ಅಧಿಕವಾದ ಮನಶ್ಶಾಂತಿಯುಳ್ಳವನಾಗಬೇಕು; ಯಶ್ಚ–ಯಾರಾದರೆ, ನ್ಯಾಯದ್ರವ್ಯಾರ್ಜಕಃ–ನ್ಯಾಯಮಾರ್ಗದಿಂದ ದ್ರವ್ಯವನ್ನು ಸಂಪಾದಿಸುವವನೋ, ಯಃ – ಯಾರು, ಪಾತ್ರೇ–ಸತ್ಪಾತ್ರನಲ್ಲಿ, ದಾನಂ – ದಾನವನ್ನು, ಕರೋತಿ – ಮಾಡುತ್ತಾನೆಯೋ, ಸತಾಂ–ಸಜ್ಜನರಿಗೆ, ಸಂತೋಷಕಃ–ಸಂತೋಷವನ್ನುಂಟುಮಾಡುವವನೋ, ಅಸತಾಂ–ದುರ್ಜನರ, ಸಂಗವರ್ಜಿತಃ–ಸಂಗವನ್ನು ಬಿಟ್ಟವನೂ, ಸ್ಯಾತ್–ಆಗಿರುವನೋ, ಸತತಂ–ನಿತ್ಯವೂ, ಆಸ್ತಿಕ್ಯಬುದ್ಧಿಃ–ಆಸ್ತಿಕ್ಯಬುದ್ಧಿಯುಳ್ಳವನೋ,[1] ಪಾತಕಾತ್–ಪಾಪಕರ್ಮದಿಂದ, ಪಶ್ಚಾತ್ತಾಪಃ-ಪಶ್ಚಾತ್ತಾಪ

ಅದರಿಂದ ಲಭ್ಯವಾದ ಮನಃಶಾಂತಿಯಿರಬೇಕು; ಧರ್ಮಮಾರ್ಗದಿಂದ ದ್ರವ್ಯಾರ್ಜನೆ ಮಾಡುವವನೂ, ಸತ್ಪಾತ್ರರಲ್ಲಿ ದ್ರವ್ಯದಾನಮಾಡುವವನೂ, ಸಜ್ಜನರಿಗೆ ಸಂತೋಷವನ್ನುಂಟುಮಾಡುವವನೂ, ದುರ್ಜನರ ಸಹವಾಸವನ್ನು ತ್ಯಜಿಸಿದವನೂ, ಮತ್ತು ಪಾಪಕರ್ಮಗಳು ತನ್ನಿಂದ ಸಂಭವಿಸಿದೊಡನೆ ಪಶ್ಚಾತ್ತಾಪವನ್ನು ಹೊಂದುವವನೂ, ಆಸ್ತಿಕ್ಯಬುದ್ಧಿಯುಳ್ಳವನೂ, ಯಾರನ್ನೂ ದ್ವೇಷಿಸದವನೂ, ಸತ್ಕಥಾಶ್ರವಣ ಮತ್ತು ಸಜ್ಜನಸೇವೆಯಲ್ಲಿ ಆಸಕ್ತನೂ, ಅತಿಥಿಪ್ರಿಯನೂ, ಪ್ರಿಯನುಡಿಗಳನ್ನಾಡುವವನೂ, ವಿಷ್ಣುಭಕ್ತಿಯುತನಾಗಿ ಸದಾಚಾರಸಂಪನ್ನನಾಗಿರುವವನೂ ವಿಷ್ಣುದೀಕ್ಷಾಸ್ವೀಕಾರಕ್ಕೆ ಅರ್ಹನಾಗಿರುತ್ತಾನೆ. ದೀಕ್ಷಾಸ್ವೀಕರಿಸುವವನು ಯಾವನೇ ಆಗಿರಲಿ, ಆತನಲ್ಲಿ ಈ ಸದ್ಗುಣಗಳಿರಬೇಕು. ಈ ವಿಧ ಸದ್ಗುಣಸಂಪನ್ನನಾದ ವಿಪ್ರನು,

---

1 ವೇದಾದಿ ಸಚ್ಛಾಸ್ತ್ರಗಳಲ್ಲಿ ಪ್ರಾಮಾಣ್ಯಬುದ್ಧಿಯುಳ್ಳವನಾಗಿ ಆತ ಏವ ಪರಮಾತ್ಮನಲ್ಲಿಯೂ ಪಾಪಪುಣ್ಯಗಳಲ್ಲಿಯೂ ವಿಶ್ವಾಸವುಳ್ಳವನೂ ಆಗಿರುವವನು ಆಸ್ತಿಕ್ಯಬುದ್ಧಿಯುಳ್ಳವನೆನಿಸುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವುಳ್ಳವನೋ, (ಪಾಪಕರ್ಮವನ್ನಾಚರಿಸಿದ ನಂತರ ಮನಸ್ಸಿನಲ್ಲಿ ತಾಪವನ್ನು ಹೊಂದುವನೋ—ಈ ಪರಿಯ ಕೃತ್ಯವು ಸಂಭವಿಸಿದುದು ಮಹಾಪರಾಧ ವಾಯಿತೆಂದೂ, ಮುಂದೆ ಹೀಗಾಗಬಾರದೆಂಬ ಬುದ್ಧಿಯೂ ಹುಟ್ಟುವುದು ಪಶ್ಚಾತ್ತಾಪವೆನಿಸುತ್ತದೆ) ; ಸರ್ವಭೂತಾನಾಂ—ಸಕಲಪ್ರಾಣಿಗಳ, ಅದ್ವೇಷ್ಟಾ—ದ್ವೇಷರಹಿತನೋ, (ಯಾರನ್ನೂ ದ್ವೇಷಿಸದವನೋ), ಶುಶ್ರೂಷುಃ—ಸತ್ಕಥಾಶ್ರವಣಾಸಕ್ತನೋ (ಸ್ತೋತ್ತಮಸೇವಾಪರನೋ), ಅತಿಥಿಪ್ರಿಯಃ—ಅತಿಥಿಗಳನ್ನು ಪ್ರೀತಿಯಿಂದ ನೋಡುವನೋ, ಪ್ರಿಯವಕ್ತಾ—ಪ್ರಿಯವನ್ನು ನುಡಿಯುವನೋ (ಅಪ್ರಿಯವನ್ನು ನುಡಿಯದವನೋ), ಸದಾಚಾರಃ—ಸಜ್ಜನಸಂಮತವಾದ ಆಚಾರಗಳುಳ್ಳವನೋ, ವಿಷ್ಣುಭಕ್ತಿ ಸಮನ್ವಿತಃ—ವಿಷ್ಣುಭಕ್ತಿಯುಳ್ಳವನೋ, ಅಸೌ—ಈ ಪೂರ್ವೋಕ್ತ ಸದ್ಗುಣ ಸಂಪನ್ನನು, ಯಃ ವಾ ಕಃ ವಾ—ಯಾವನಾದರಾಗಲಿ, (ಯಾವ ವರ್ಣದವ ನಾಗಲಿ ಅಥವಾ ವರ್ಣಬಾಹಿರನೇ ಆಗಲಿ) ವಿಷ್ಣುದೀಕ್ಷಾಧಿಕಾರೀ—ವಿಷ್ಣುದೀಕ್ಷಾಸ್ವೀಕಾರದಲ್ಲಿ ಅಧಿಕಾರವುಳ್ಳವನು, ಸ್ಯಾತ್—ಆಗುತ್ತಾನೆ ; ಪೂರ್ವೋಕ್ತ ಗುಣವಾನ್—ಈ ಮೊದಲು ನಿರೂಪಿಸಿದ ವೈರಾಗ್ಯಾದಿ ಸದ್ಗುಣ ಗಳುಳ್ಳ, ವಿಪ್ರಃ—ಬ್ರಾಹ್ಮಣನು, ಮುಖ್ಯಗುರುಃ—(ದೀಕ್ಷಾಪ್ರದಾನಕ್ಕೆ) ಮುಖ್ಯಗುರುವೆಂದು, ನಿಗದ್ಯತೇ—ನಿಸ್ಸಂಶಯವಾಗಿ ಹೇಳಲ್ಪಡುತ್ತಾನೆ.[1]

ಏವಂ ಯೋ ವಿದ್ಯತೇ ಕಶ್ಚಿತ್ ಪ್ರಪನ್ನಂ ದೀಕ್ಷಣೇ ಹರೇಃ ।
ಸೋನುಗ್ರಾಹ್ಯೋ ಭವೇದೇವ ನೈವ ತ್ಯಾಜ್ಯಃ ಕಥಂಚನ ॥ ೧೬ ॥

ವಿಷ್ಣುದೀಕ್ಷಾಪ್ರದಾನಾರ್ಹರಲ್ಲಿ ಮುಖ್ಯನೆಂದು (ಮುಖ್ಯಗುರುವೆಂದು) ಹೇಳ ಲ್ಪಡುತ್ತಾನೆ (೧೨–೧೫). ವಿಷ್ಣುದೀಕ್ಷೆಯನ್ನು ಅಪೇಕ್ಷಿಸಿ ತನ್ನನ್ನು ಶರಣು ಹೊಂದಿದ, ವೈರಾಗ್ಯ ಆಸ್ತಿಕ್ಯಬುದ್ಧಿ ವಿಷ್ಣುಭಕ್ತ್ಯಾದಿಗುಣಗಳುಳ್ಳ ಯಾವ ನನ್ನೂ, ಗುರುವು, ತ್ಯಜಿಸದೇ (ತಿರಸ್ಕರಿಸಿ ಕಳುಹಿಸದೇ), ದೀಕ್ಷೆಯನ್ನಿತ್ತು

---

[1] ದೀಕ್ಷಾಸ್ವೀಕಾರಕ್ಕೆ ವೈರಾಗ್ಯ, ಆಸ್ತಿಕ್ಯಬುದ್ಧಿ, ಸಜ್ಜನಸೇವಾಸಕ್ತಿ, ಸರ್ವ ಪ್ರಾಣಿದಯೆ ಮೊದಲಾದ ಸದ್ಗುಣಗಳುಳ್ಳವನು ಅಧಿಕಾರಿಯೆಂದು ಹೇಳುತ್ತಿರಲು, ದೀಕ್ಷಾಪ್ರದಾನ ಮಾಡುವ ಗುರುಗಳಲ್ಲಿ ಮುಖ್ಯಗುರುವೆಂದು ಹೇಳಲಾಗುವ ವಿಪ್ರನಲ್ಲಿ ಈ ಸದ್ಗುಣಗಳು ಅವಶ್ಯಕವಾಗಿ ಇರಬೇಕೆಂದು ನಿರ್ವಿವಾದವಾಗಿ ಸಿದ್ಧ ವಾಗುವುದಷ್ಟೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಃ ಕಶ್ಚಿತ್–ಯಾರೊಬ್ಬನು, ಏವಂ–(ಹೀಗೆ) ವೈರಾಗ್ಯಾದಿಗುಣಗಳುಳ್ಳವನು, ವಿದ್ಯತೇ–ಇರುತ್ತಾನೆಯೋ, ಹರೇಃ–ಶ್ರೀ ವಿಷ್ಣುವಿನ, ದೀಕ್ಷಣೇ – ದೀಕ್ಷೆಗಾಗಿ, ಪ್ರಪನ್ನಂ – ಬಂದುಸೇವಿಸುವ, ಸಃ – ಆತನು, ಅನುಗ್ರಾಹ್ಯಃ – ಅನುಗ್ರಹಿಸಲ್ಪಡುವವನು, ಭವೇತ್ ಏವ–ಆಗಿಯೇ ಇರುತ್ತಾನೆ; ಕಥಂಚನ – ಯಾವಕಾರಣದಿಂದಲೂ, ನೈವ ತ್ಯಾಜ್ಯಃ – ತಿರಸ್ಕರಿಸಲ್ಪಡಲು ಅರ್ಹನಲ್ಲ; (ದೀಕ್ಷೆಯನ್ನು ಕೊಡಲೇಬೇಕು)

ದರ್ಶನಸ್ಪರ್ಶನಪ್ರಶ್ನೈಃ ಶ್ವಪಾಕಾದೀನಪಿ ಧ್ರುವಂ ।
ರೋಗಿಣೋ ಹಿ ಚಿಕಿತ್ಸಂತೇ ದಯಾವಂತಶ್ಚಿಕಿತ್ಸಕಾಃ ॥ ೧೭ ॥

ನೈವಂ ತಾಂಸ್ತೇ ಜುಗುಪ್ಸಂತೇ ಶೌಚಹಾನೇರ್ನ ಬಿಭ್ಯತಿ ।
ದಯಯಾ ಕ್ಲಿನ್ನಮನಸೋ ರೋಗಂ ತೇಷಾಂ ನುದಂತಿ ಹಿ ॥ ೧೮ ॥

ಪುನಃ ಶೌಚಂ ಪ್ರಕುರ್ವಂತಿ ಪುನಃ ಸ್ನಾನಂ ಪ್ರಕುರ್ವತೇ ।
ನೈವೋದ್ವಿಜಂತಿ ತೇಭ್ಯಸ್ತೇ ರೋಗಿಭ್ಯಃ ಸುಚಿಕಿತ್ಸಕಾಃ ॥ ೧೯ ॥

ತಥಾ ದಯಾಲವಃ ಶಾಂತಾ ವಿಷ್ಣುಭಕ್ತಿಪರಾಯಣಾಃ ।
ಪತಿತಾದೀನ್ ಶ್ವಪಾಕಾಂ ತಾನ್ನನುಗೃಹ್ಣಂತಿ ದೀಕ್ಷತಃ ॥ ೨೦ ॥

ಶ್ವಪಾಕಾದೀನ್–ಚಂಡಾಲಾದಿ, ರೋಗಿಣಃ–ರೋಗಿಗಳನ್ನು, ಅಪಿ–ಸಹ, ದರ್ಶನಸ್ಪರ್ಶನಪ್ರಶ್ನೈಃ–ನೋಡಿ, ಮುಟ್ಟಿ, ಪ್ರಶ್ನೆಮಾಡಿ (ಅವರೊಡನೆ ಬೆರೆತು), ಧ್ರುವಂ–ನಿಶ್ಚಯವಾಗಿಯೂ, ದಯಾವಂತಃ–ದಯಾವಂತರಾದ,

---

ಅನುಗ್ರಹಿಸಲೇಬೇಕು (೧೬). ದಯಾವಂತರಾದ ವೈದ್ಯರು ಚಂಡಾಲಾದಿ ಜಾತಿಗಳ ರೋಗಿಗಳನ್ನು, ತಮಗೆ ಅಶುಚಿಯುಂಟಾಗುವುದೆಂಬ ಭಯದಿಂದ (ರೋಗವೇ ತಮಗೂ ಅಂಟಿಕೊಳ್ಳಬಹುದೆಂಬ ಮುಂತಾದ ಭಯದಿಂದ) ಚಿಕಿತ್ಸೆ ಮಾಡದೇ ಕೈಬಿಡುವುದಿಲ್ಲ; ದಯೆಯಿಂದ ಕರಗಿದ ಹೃದಯವುಳ್ಳವರಾಗಿ, ರೋಗಿಗಳನ್ನು ನೋಡುವುದು, ಸ್ಪರ್ಶಿಸುವುದು, ಅವರೊಡನೆ ಸಂಭಾಷಣೆ ಮಾಡುವುದು ಇತ್ಯಾದಿಯಾಗಿ, ರೋಗಿಗಳೊಡನೆ ಬೆರೆತು, ಯೋಗ್ಯ ಚಿಕಿತ್ಸೆಗಳನ್ನು ನಡೆಸುತ್ತಾರೆ; ನಂತರ ಶುಚಿ ಮಾಡಿಕೊಳ್ಳುತ್ತಾರೆ, ಅವಶ್ಯವಿದ್ದಲ್ಲಿ ಸ್ನಾನಾದಿಗಳನ್ನು ಮಾಡುತ್ತಾರೆ—ರೋಗಿಗಳ ವಿಷಯದಲ್ಲಿ ಹೇಗೂ ಉದ್ವಿಗ್ನಮನಸ್ಕರಾಗುವುದಿಲ್ಲ. ಹೀಗೆಯೇ ದಯಾಲುಗಳೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿಕಿತ್ಸಕಾಃ – ವೈದ್ಯರು, ಚಿಕಿತ್ಸಂತೇ – ಚಿ ಕಿ ತ್ಸೆ ಗ ಳ ನ್ನು (ರೋಗಿಗಳಿಗೆ ಯೋಗ್ಯಪರಿಹಾರಸಂಸ್ಕಾರಗಳನ್ನು) ಮಾ ಡು ತ್ತಾ ರೆ; ತೇ – ಅವರು (ವೈದ್ಯರು), ತಾನ್ – ಅ ವ ರ ನ್ನು (ಆ ರೋಗಿಗಳನ್ನು), ಏವಂ – ಹೀಗೆ, ನ ಜುಗುಪ್ಸಂತೇ–ಜುಗುಪ್ಸೆಯನ್ನು ಹೊಂದುವುದಿಲ್ಲ; ಶೌಚಹಾನೇಃ–ತಮ್ಮ ಶುದ್ಧತೆಯು ನಷ್ಟವಾಗುವುದೆಂದು, ನ ಬಿಭ್ಯತಿ–ಹೆದರುವುದಿಲ್ಲ; ದಯಾ-ಕ್ಲಿನ್ನಮನಸಃ – ದಯೆಯಿಂದ ಆರ್ದ್ರವಾದ (ತೊಯ್ದ) ಮನಸ್ಸುಳ್ಳ ಅವರು (ವೈದ್ಯರು), ತೇಷಾಂ – ಆ ಚಂಡಾಲಾದಿಗಳ, ರೋಗಂ–ರೋಗವನ್ನು, ನುದಂತಿ ಹಿ – ದೇಹದಿಂದ ಹೊರಗೆ ಹಾಕುತ್ತಾರೆ (ನಾಶಗೊಳಿಸುತ್ತಾರೆ); ಪುನಃ – ಮತ್ತೆ (ಚಿಕಿತ್ಸೆಯನ್ನು ನಡೆಸಿದನಂತರ), ಶೌಚಂ – (ಯೋಗ್ಯ) ಶುದ್ಧತೆಯನ್ನು, ಪ್ರಕುರ್ವಂತಿ – ಆಚರಿಸುತ್ತಾರೆ; ಪುನಃ ಸ್ನಾನಂ – ಮತ್ತೆ ಸ್ನಾನವನ್ನು (ಅವಶ್ಯವಿದ್ದಲ್ಲಿ), ಪ್ರಕುರ್ವತೇ – ಮಾಡುತ್ತಾರೆ; ಸುಚಿ-ಕಿತ್ಸಕಾಃ–ಒಳ್ಳೆಯ ವೈದ್ಯರು, ತೇಭ್ಯಃ–ಆ, ರೋಗಿಭ್ಯಃ–ರೋಗಿಗಳಿಂದ, ನೈವ ಉದ್ವಿಜಂತಿ – ಹೆದರುವುದಿಲ್ಲ (ಮನೋದ್ವೇಗವನ್ನು–ದೀರ್ಘಚಿಂತಾದಿಗಳನ್ನು ಹೊಂದುವುದಿಲ್ಲ); ತಥಾ – ಹಾಗೆಯೇ (ಕೃಪಾಳುಗಳಾದ ವೈದ್ಯರಂತೆ), ದಯಾಲವಃ – ದಯಾಳುಗಳೂ, ಶಾಂತಾಃ – ಶಾಂತಮನಸ್ಕರೂ, (ಆದ), ವಿಷ್ಣುಭಕ್ತಿಪರಾಯಣಾಃ – ಶ್ರೀವಿಷ್ಣುವಿನಲ್ಲಿ ಭಕ್ತಿಯುಳ್ಳ ದೀಕ್ಷಾಗುರುಗಳು, ಶ್ವಪಾಕಾಂತಾನ್–ಚಂಡಾಲರವರೆಗಿನವರ್ಣದ, ಪತಿತಾದೀನ್–ಅಜ್ಞಾನಾಂಧಕಾರರಲ್ಲಿ ಪತಿತರಾದ (ಜಾತ್ಯಾಪತಿತರು–ಕೀಳುಜನರೆಂದು ಭಾವಿಸಲ್ಪಡುವ) ಆ ಜನರನ್ನು, ದೀಕ್ಷತಃ–ದೀಕ್ಷೆಯಿಂದ (ದೀಕ್ಷೆಯನ್ನಿತ್ತು), ಅನುಗೃಹ್ಣಂತಿ–ಅನುಗ್ರಹಿಸುತ್ತಾರೆ (ಉದ್ಧೃತರಾಗಲು, ವಿಷ್ಣುಪ್ರೀತಿಯನ್ನು ದೊರಕಿಸಿಕೊಳ್ಳಲು ಸಹಾಯಮಾಡುತ್ತಾರೆ).

ಅನುಗೃಹ್ಣಾತಿ ದೃಷ್ಟ್ವೈವ ತತ್ತಜ್ಜಾತ್ಯಧಿಕಾನಪಿ ।
ಆಜ್ಞಾಪ್ಯ ತತ್ತಜ್ಜಾತೀಯಂ ದೀಕ್ಷಯಂತ್ಯಥವಾ ಹಿ ತೇ ॥ ೨೧ ॥

ಶಾಂತಚಿತ್ತರೂ ವಿಷ್ಣುಭಕ್ತಿಪಾರಾಯಣರೂ ಆದ ದೀಕ್ಷಾಗುರುಗಳು, ದೀಕ್ಷೆಗಾಗಿ ತಮ್ಮನ್ನು ಶರಣುಹೊಂದಿದ ಶ್ವಪಾಕಾದಿ ಕೀಳುಜನರನ್ನು, ತಿರಸ್ಕರಿಸದೇ ದೀಕ್ಷೆಯನ್ನಿತ್ತು ಅನುಗ್ರಹಿಸುತ್ತಾರೆ (೧೭–೨೦). ತಾವೇ ಸ್ವತಃ ಚಂಡಾಲಾದಿ ಜಾತಿಯವರನ್ನು ಮುಟ್ಟಿ ದೀಕ್ಷೆಯನ್ನು ಕೊಡದಿದ್ದರೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ–ಅಥವಾ (ತಾವೇ ಸ್ಪರ್ಶಿಸಿ ದೀಕ್ಷೆಯನ್ನು ಮಾಡದೇ ಬೇರೆ ರೀತಿಯಿಂದ ಸಹ), ತೇ–ಆ ದೀಕ್ಷಾಗುರುಗಳು, ದೃಷ್ಟ್ಯೈವ–ದೃಷ್ಟಿಮಾತ್ರ ದಿಂದ (ದೀಕ್ಷಾರ್ಥವಾಗಿ ಬಂದ ಶಿಷ್ಯನನ್ನು ಕೃಪಾದೃಷ್ಟಿ ಮಾತ್ರದಿಂದ), ಅನುಗೃಹ್ಣಾತಿ–ಅನುಗ್ರಹಿಸುತ್ತಾರೆ; ಅಪಿ–ಮತ್ತು (ದೀಕ್ಷೆಯನ್ನು ಕೊಡುವು ದಿಲ್ಲವೆಂದಲ್ಲ), ತತ್ತಜ್ಜಾತ್ಯಧಿಕಾನ್ – ಆಯಾ ಶಿಷ್ಯನ ಜಾತಿಯಲ್ಲಿ ಶ್ರೇಷ್ಠ ರಾದವರನ್ನು, ಆಜ್ಞಾಪ್ಯ – (ತಪ್ತಚಕ್ರಾದಿಗಳನ್ನು ಧಾರಣೆಮಾಡಿಸಲು) ಆಜ್ಞಾಪಿಸಿ, ತತ್ತಜ್ಜಾತೀಯಂ–ಆಯಾಜಾತಿಯ ಶಿಷ್ಯನನ್ನು, ದೀಕ್ಷಯಂತಿ–ದೀಕ್ಷೆ ಮಾಡಿಸುತ್ತಾರೆ.

ತಸ್ಮಾತ್ ಸರ್ವಪ್ರಯತ್ನೇನ ಪ್ರತಿಪನ್ನಂತು ವೈಷ್ಣವಂ ।
ಯಥಾತಥಾನುಗೃಹ್ಣೀತ ನ ಸ ತ್ಯಾಜ್ಯೋ ಹರಿಪ್ರಿಯೈಃ ॥ ೨೨ ॥

ತಸ್ಮಾತ್ – ಆದ್ದರಿಂದ, ಪ್ರತಿಪನ್ನಂ – (ದೀಕ್ಷಾರ್ಥವಾಗಿ) ಶರಣು ಹೊಂದಿದ, ವೈಷ್ಣವಂ–ವಿಷ್ಣುಭಕ್ತನನ್ನು, ಸರ್ವಪ್ರಯತ್ನೇನ–ಎಲ್ಲ ಪ್ರಯತ್ನ ದಿಂದ (ಶೌಚಭಂಗಾದಿವಿರೋಧಗಳನ್ನೂ ಮನೋದ್ವೇಗಗಳನ್ನೂ ಪರಿಹರಿಸಿ ಕೊಂಡು), ಯಥಾತಥಾ – ಶಿಷ್ಯನಿಗೆ ಉಚಿತವಾದ ವಿಧ್ಯುಕ್ತಕ್ರಮದಿಂದ, ಅನುಗೃಹ್ಣೀತ – (ದೀಕ್ಷೆಯನ್ನಿತ್ತು) ಅನುಗ್ರಹಿಸಬೇಕು; ಹರಿಪ್ರಿಯೈಃ–

ದೀಕ್ಷಾಸ್ವೀಕಾರಕ್ಕಾಗಿ ಪ್ರಾರ್ಥಿಸುವವನ ಜಾತಿಯಲ್ಲಿ ಜ್ಞಾನಾದಿಗಳಿಂದ ಶ್ರೇಷ್ಠರಾದ (ವಿಷ್ಣುಭಕ್ತಿಯುತರಾದ) ಹಿರಿಯರನ್ನು ಆಜ್ಞಾಪಿಸಿ, ಅವರಿಂದ ದೀಕ್ಷೆಯನ್ನು ಕೊಡಿಸುತ್ತಾರೆ; ತಾವು ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ ಅನುಗ್ರಹಮಾಡುತ್ತಾರೆ[1] (೨೧). ವಿಷ್ಣುದೀಕ್ಷೆಯನ್ನು ಸ್ವೀಕರಿಸಲು, ಚಂಡಾಲಾದಿ ಸರ್ವಜಾತಿಯವರೂ ಅರ್ಹರಾಗಿರುವುದರಿಂದ, ದೀಕ್ಷಾ ಸ್ವೀಕಾರಕ್ಕೆ ಅವಶ್ಯಕವಾದ ವಿಷ್ಣುಭಕ್ತ್ಯಾದಿಗುಣಗಳುಳ್ಳ ಕೀಳುಜಾತಿಯವರಿಗೆ ದೀಕ್ಷೆಯನ್ನಿತ್ತು ಅನುಗ್ರಹಿಸುವುದು ಶ್ರೀಹರಿಪ್ರೀತಿಕರವಾದ ಕರ್ಮವಾದ್ದ ರಿಂದ, ಶ್ರೀಹರಿಪ್ರಿಯರಾದ ದೀಕ್ಷಾಗುರುಗಳು, ಸರ್ವಪ್ರಯತ್ನದಿಂದ, ಆ ಶಿಷ್ಯರಿಗೆ ದೀಕ್ಷೆಯನ್ನು ಹೊಂದಿಸಿ, ಅನುಗ್ರಹಿಸುವುದು, ಆ ಗುರುಗಳ

---

1 ಈ ಪಕ್ಷಾಂತರದ ದೀಕ್ಷಾಪ್ರದಾನಕ ಗುರುಗಳು, ವಿಶೇಷವಾಗಿ ಯತ್ಯಾಶ್ರಮಿ ಗಳಾದ ವಿಪ್ರರೆಂದು ತಿಳಿಯಬಹುದಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀಹರಿಗೆ ಪ್ರಿಯರಾದವರಿಂದ (ವಿಷ್ಣುಪ್ರೀತಿಗೆ ಪಾತ್ರರಾದವರಿಂದ), ಸಃ–ಅಂಥ ಕೀಳುಜಾತಿಯ ಶಿಷ್ಯನು, ನ ತ್ಯಾಜ್ಯಃ–ತಿರಸ್ಕರಿಸಲ್ಪಡಲು ಅರ್ಹನಲ್ಲ (ದೀಕ್ಷೆಯನ್ನು ಕೊಡದೇ ಹಾಗೆಯೇ ಕಳುಹಿಸಬಾರದು);

ಮಂತ್ರಾ ನಾನಾವಿಧಾಃ ಸಂತಿ ಸೋಂಕಾರಾಶ್ಚ ನಿರೋಂಕೃತಾಃ ।
ಸ ಬೀಜಾಶ್ಚಾಪಿ ನಿರ್ಬೀಜಾ ನಾನಾಧಿಕೃತಭೇದತಃ ॥ ೨೩ ॥

ಸೋಂಕಾರಾಃ–ಓಂಕಾರಸಹಿತವಾದುವು, ಚ–ಮತ್ತು, ನಿರೋಂಕೃತಾಃ – ಓಂಕಾರವಿಲ್ಲದವು, ಮತ್ತು ಸಬೀಜಾಃ – ಬೀಜಸಹಿತವಾದುವು, ಚ–ಹಾಗೂ, ನಿರ್ಬೀಜಾಃ–ಬೀಜರಹಿತವಾದುವು (ಎಂದು), ನಾನಾಧಿಕೃತಭೇದತಃ–ವಿವಿಧರಾದ ಅಧಿಕಾರಿಗಳ ಭೇದದಿಂದ, ಮಂತ್ರಾಃ–ಮಂತ್ರಗಳು, ನಾನಾವಿಧಾಃ–ಬಹುವಿಧವಾಗಿ, ಸಂತಿ–ಇವೆ.

ತತ್ತನ್ನಾಮ ಚತುರ್ಥ್ಯಂತಂ ನಮೋಂತಂ ಪ್ರಣವಾದಿಕಂ ।
ಇತಿ ಸಾಮಾನ್ಯತೋ ಮಂತ್ರಸ್ತತ್ತದ್ದೇವಸ್ಯ ಕೀರ್ತಿತಃ ॥ ೨೪ ॥

ತತ್ತದ್ದೇವಸ್ಯ–(ಉಪಾಸ್ಯರಾದ) ಆಯಾ ದೇವತೆಯ, ಚತುರ್ಥ್ಯಂತಂ–ಚತುರ್ಥೀ ವಿಭಕ್ತಿಯಲ್ಲಿರುವ, ತತ್ತನ್ನಾಮ–ಆಯಾ ನಾಮವು, ಪ್ರಣವಾದಿಕಂ – ಮೊದಲು ಓಂಕಾರವಿದ್ದು, ನಮೋಂತಂ – ನಮಃ ಶಬ್ದವನ್ನು ಕೊನೆಯಲ್ಲಿ ಹೊಂದಿರುವುದು, ಸಾಮಾನ್ಯತಃ–ಸಾಮಾನ್ಯವಾಗಿ (ಸರ್ವಸಾಧಾರಣವಾದ), ಮಂತ್ರಃ–ಮಂತ್ರವು, ಇತಿ–ಎಂದು, ಕೀರ್ತಿತಃ–ಹೇಳಲಾಗುತ್ತದೆ.

ಅವಶ್ಯ ಕರ್ತವ್ಯವಾಗಿರುತ್ತದೆ (೨೨). ಓಂಕಾರಯುಕ್ತವಾದುವು, ಓಂಕಾರವಿಲ್ಲದವು, ಸಬೀಜ ಮತ್ತು ನಿರ್ಬೀಜಗಳೆಂದು, ವಿವಿಧ ಅಧಿಕಾರಗಳ ಭೇದದಿಂದ (ಆ ಮಂತ್ರಗಳನ್ನು ಉಪಯೋಗಿಸುವ ಅಧಿಕಾರಿಗಳು ಭಿನ್ನರಾಗಿರುವುದರಿಂದ), ಮಂತ್ರಗಳು ಬಹುವಿಧವಾಗಿರುತ್ತವೆ (೨೩). ಉಪಾಸ್ಯದೇವತೆಯ ಚತುರ್ಥೀ ವಿಭಕ್ತಿಯಲ್ಲಿರುವ ನಾಮವು, ಓಂಕಾರವನ್ನು ಮೊದಲಿನಲ್ಲಿಯೂ, ನಮಃ ಶಬ್ದವನ್ನು ಕೊನೆಯಲ್ಲಿಯೂ ಹೊಂದಿದ್ದರೆ, ಆ ದೇವತೆಯ ಮಂತ್ರವೆನಿಸುತ್ತದೆಂಬುದು ಸಾಧಾರಣ ನಿಯಮವು. (ಓಂ ಕೃಷ್ಣಾಯ ನಮಃ, ಎಂಬುದು ಕೃಷ್ಣಮಂತ್ರ–ಓಂ ರಾಮಾಯ ನಮಃ, ಎಂಬುದು ರಾಮಮಂತ್ರ, ಇತ್ಯಾದಿ) (೨೪).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಮಃಶಬ್ದೋಽಥವಾ ಪೂರ್ವೋಽ ನಾಮ್ನಾ ಸ್ವಾಹಾಂತತೋಽಪಿ ವಾ ।
ಸಂಬುಧ್ಯಂತಾ ನಮಃಸ್ವಾಹಾ ವರ್ಜಿತಾಶ್ಚಾಪಿ ಕೇಚನ ॥ ೨೫ ॥
ಶ್ರೀಕಾರಪೂರ್ವಾಃ ಕೇಚಿತ್ ಮಾಲಾಮಂತ್ರಾಸ್ತಥಾಪರೇ ।
ತತ್ತದ್ದೇವಸ್ತುತಿಪರಾಃ ನಾನಾಸಿದ್ಧಿಪ್ರದಾಶ್ಚ ತೇ ॥ ೨೬ ॥

ಅಥವಾ-ಅಥವಾ (ಹಾಗಲ್ಲದೇ), ಪೂರ್ವಃ-ಮೊದಲಿಗೇ ನಮಃ ಶಬ್ದಃ-ನಮಃ ಶಬ್ದವೂ, ನಾಮ್ನಾ-ನಾಮದಿಂದ ಸಹಿತವಾದ, ಸ್ವಾಹಾಂತತಃ ಅಪಿವಾ-ಸ್ವಾಹಾಶಬ್ದವನ್ನು ಕೊನೆಯಲ್ಲಿ ಉಳ್ಳದ್ದಾದರೂ ಆಗಲಿ (ಕೇಚನ-ಕೆಲವು ಮಂತ್ರಗಳೂ), ಚ – ಮತ್ತು, ನಮಃಸ್ವಾಹಾವರ್ಜಿತಾಃ – ನಮಃ ಮತ್ತು ಸ್ವಾಹಾಶಬ್ದಗಳಿಲ್ಲದೇ ಇರುವ, ಸಂಬುಧ್ಯಂತಾಃ-ಸಂಬೋಧನಾ ವಿಭಕ್ತಿಯಲ್ಲಿರುವ ದೇವತಾನಾಮಗಳು, ಕೇಚನ – ಕೆಲವು ಮಂತ್ರಗಳು;

ಕೆಲವು ಮಂತ್ರಗಳಲ್ಲಿ ನಮಃ ಶಬ್ದವು ಮೊದಲಿರುವುದೂ ಉಂಟು—'ಓಂ ನಮಃ ಶಿವಾಯ' ಎಂಬಂತೆ; ಅಥವಾ, ಮೊದಲು ನಮಃಶಬ್ದವಿದ್ದು, ಕೊನೆಯಲ್ಲಿ ಸ್ವಾಹಾ ಶಬ್ದವುಳ್ಳ ಮಂತ್ರಗಳೂ ಕೆಲವು ಇರುವುದುಂಟು; 'ಓಂ ನಮಃ ಕೃಷ್ಣಾಯ ಸ್ವಾಹಾ' ಇತ್ಯಾದಿ; (ಇಲ್ಲಿ ಸ್ವಾಹಾ ಶಬ್ದವು ಅರ್ಪಣಾರ್ಥವುಳ್ಳದ್ದು — ನಮಸ್ಕಾರವನ್ನು ಸಮರ್ಪಿಸುತ್ತೇನೆಂದರ್ಥ); 'ನಮಃ' ಮತ್ತು 'ಸ್ವಾಹಾ' ಶಬ್ದಗಳೆರಡೂ ಇಲ್ಲದೇ, ಕೇವಲ ಸಂಬೋಧನಾ ವಿಭಕ್ತಿಯಲ್ಲಿರುವ ದೇವತಾನಾಮವೂ ಮಂತ್ರರೂಪವಾಗಿರುತ್ತದೆ—ಉದಾಹರಣೆ: — ಕೃಷ್ಣಕೃಷ್ಣ ಹರೇಹರೇ—ಹರೇರಾಮ ಹರೇರಾಮ, ಇತ್ಯಾದಿ; ಕೆಲವು ಮಂತ್ರಗಳು ಮೊದಲಿನಲ್ಲಿ ಶ್ರೀಕಾರವುಳ್ಳವಾಗಿರುತ್ತವೆ; (ಶ್ರೀ ಕೃಷ್ಣಾಯ ನಮಃ—ಇತ್ಯಾದಿ); ಇನ್ನೂ ಕೆಲವು ಮಂತ್ರಗಳು ಮಾಲಾ ಮಂತ್ರಗಳ ರೂಪದಿಂದಿರುತ್ತವೆ[1]—ಅವು ಆಯಾ ಉಪಾಸ್ಯದೇವತೆಯ ಸ್ತುತಿಪರವಾಗಿರುತ್ತವೆ—ಮಹಿಮೆಗಳನ್ನು ಸ್ತುತಿಸುತ್ತವೆ; ಹೀಗೆ ವಿವಿಧ ವಾಗಿರುವ ಸರ್ವದೇವತಾಮಂತ್ರಗಳೂ, ಉಪಾಸಕರಿಗೆ ನಾನಾ ಬಗೆಯ ಸಿದ್ಧಿಗಳನ್ನು (ಫಲಗಳನ್ನು) ದೊರಕಿಸುತ್ತವೆ. (ಈ ಮಂತ್ರಗಳ ಉಪಾಸನೆ ಯಲ್ಲಿ ಅಧಿಕಾರಿಗಳೂ ವಿಭಿನ್ನರಾಗಿರುವರು—ಅಧಿಕಾರಿಭೇದವು ಮುಂದಿನ

---

[1] ಪುರುಷಸೂಕ್ತವು ಅಷ್ಟಮಹಾಮಂತ್ರಗಳಲ್ಲಿ ಒಂದಾಗಿದೆ—ಅದು ಮಾಲಾ ಮಂತ್ರಕ್ಕೆ ಉದಾಹರಣೆಯಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇಚಿತ್–ಮತ್ತೆ ಕೆಲವು ಮಂತ್ರಗಳು, ಶ್ರೀಕಾರಪೂರ್ವಾಃ – ಶ್ರೀಕಾರವನ್ನು ಮೊದಲಿನಲ್ಲಿ ಉಳ್ಳವು, ತಥಾ–ಹಾಗೂ, ಅಪರೇ–ಮತ್ತೆ ಬೇರೆ ಮಂತ್ರಗಳು, ತತ್ತದ್ದೇವಸ್ತುತಿಪರಾಃ – ಆಯಾ ಉಪಾಸ್ಯಸದೇವತೆಯ ಸ್ತುತಿಪರಗಳಾದ, ಮಾಲಾಮಂತ್ರಾಃ – ಮಾಲಾಮಂತ್ರಗಳು; ತೇ–ಅವು, ನಾನಾಸಿದ್ಧಿಪ್ರದಾಃ ಚ – ವಿವಿಧ ಸಿದ್ಧಿಗಳನ್ನು (ಉಪಾಸಕರಿಗೆ) ದೊರಕಿಸತಕ್ಕವುಗಳೇ (ಆಗಿರುತ್ತವೆ).

ನಾನಾಧಿಕಾರಿಣಸ್ತೇಷು ವಿಸ್ತಾರಾದ್ವಚ್ಮಿ ತಚ್ಛೃಣು ।
ಸೋಂಕಾರಾಸ್ತೇಷು ಯೇ ಮಂತ್ರಾ ದ್ವಿಜಾಸ್ತತ್ರಾಧಿಕಾರಿಣಃ ॥೨೭॥

ತೇಷು–ಆ ನಾನಾಮಂತ್ರಗಳಲ್ಲಿ (ಅವುಗಳಿಂದ ಉಪಾಸಿಸುವುದರಲ್ಲಿ), ನಾನಾಧಿಕಾರಿಣಃ – ವಿವಿಧರಾದ ಅಧಿಕಾರಿಗಳಿರುವರು; ವಿಸ್ತಾರಾತ್ – ವಿಸ್ತಾರದಿಂದ, ವಚ್ಮಿ–ಹೇಳುತ್ತೇನೆ; ತತ್–ಆ ವಿವರವನ್ನು, ಶೃಣು–ಕೇಳು; ತೇಷು–ನಾನಾಮಂತ್ರಗಳ ಮಧ್ಯದಲ್ಲಿ, ಯೇ ಮಂತ್ರಾಃ–ಯಾವ ಮಂತ್ರಗಳು, ಸೋಂಕಾರಾಃ – ಓಂಕಾರಯುಕ್ತವಾದವುಗಳೋ, ತತ್ರ–ಆ ಮಂತ್ರಗಳಲ್ಲಿ, ದ್ವಿಜಾಃ – ದ್ವಿಜರು, ಅಧಿಕಾರಿಣಃ – ಅಧಿಕಾರಿಗಳಾಗಿರುತ್ತಾರೆ.

ತತ್ರಾಪ್ಯಷ್ಟೌ ಮಹಾಮಂತ್ರಾ ಮಹಾವಿಷ್ಣೋರ್ಮಹಾಪ್ರಿಯಾಃ ।
ಸದಾಚಾರೈರ್ದ್ವಿಜೈರೇವ ಜಪಿತವ್ಯಾಃ ಶುಚಿಭಿಃ ॥ ೨೮ ॥

ತತ್ರಾಪಿ – ಜಪಿಸಲಿಕ್ಕೆ ಯೋಗ್ಯವಾದ ಮಂತ್ರಗಳ ಮಧ್ಯದಲ್ಲಿಯೂ, ಅಷ್ಟೌ – ಎಂಟು, ಮಹಾಮಂತ್ರಾಃ – ಮಹಾಮಂತ್ರಗಳು, (ಅಷ್ಟ ಮಹಾಮಂತ್ರಗಳು), ಮಹಾವಿಷ್ಣೋಃ–ಮಹಾವಿಷ್ಣುವಿಗೆ, ಮಹಾಪ್ರಿಯಾಃ–ಅತಿ

ಶ್ಲೋಕಗಳಲ್ಲಿ ಪ್ರಸಕ್ತವಾಗಲಿದೆ) (೨೫–೨೬). ಈ ವಿವಿಧವಾದ ಮಂತ್ರಗಳನ್ನು ಉಪಯೋಗಿಸಿ ಉಪಾಸಿಸುವವರಲ್ಲಿ, ನಾನಾ (ಭಿನ್ನಭಿನ್ನ) ಅಧಿಕಾರಿಗಳಿರುತ್ತಾರೆ; ಅಧಿಕಾರಭೇದದ ವಿಸ್ತಾರವನ್ನು ವಿವರಿಸುತ್ತೇನೆ— ಶ್ರವಣ ಮಾಡುವವನಾಗು; ಓಂಕಾರಸಹಿತವಾದ ಮಂತ್ರಗಳನ್ನು ಉಪಯೋಗಿಸುವುದರಲ್ಲಿ ದ್ವಿಜರು ಅಧಿಕಾರಿಗಳು (೨೭) ಹೀಗೆ ಬಹುವಿಧವಾಗಿರುವ ಮಂತ್ರಗಳಲ್ಲಿ ಅಷ್ಟಮಹಾಮಂತ್ರಗಳು ಪ್ರಸಿದ್ಧವಾದವು; ಅವು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಿಯವಾದವುಗಳು; ಅತಿಶೌಚಿಭಿಃ–ಅತಿಶುಚಿರ್ಭೂತರೂ, ಸದಾಚಾರೈಃ–ಸದಾಚಾರವುಳ್ಳವರೂ, (ಆದ) ದ್ವಿಜೈರೇವ–ದ್ವಿಜರಿಂದಲೇ, ಜಪಿತವ್ಯಾಃ–ಜಪಿಸಲಿಕ್ಕೆ ಯೋಗ್ಯವಾದವುಗಳು.

ಪ್ರಣವೋ ಮಾತೃಕಾಷ್ಟಾರ್ಣೋ ವ್ಯಾಹೃತಿರ್ದ್ವಾದಶಾಕ್ಷರಃ ।
ಗಾಯತ್ರೀ ಪುರುಷೋ ವಿಷ್ಣುರ್ಮಹಾಮಂತ್ರಾಷ್ಟಕಂ ಸ್ಮೃತಂ ॥

ಪ್ರಣವಃ–ಓಂಕಾರವು; ಮಾತೃಕಾಃ – ಅಕಾರಾದಿ ೫೦ ವರ್ಣಗಳು; ಅಷ್ಟಾರ್ಣಃ–ಅಷ್ಟಾಕ್ಷರದ ' ಓಂ ನಮೋನಾರಾಯಣಾಯ; ಎಂಬ ಮಂತ್ರ; ವ್ಯಾಹೃತಿಃ–(ಭೂಃ, ಭುವಃ, ಸ್ವಃ ಮತ್ತು ಭೂರ್ಭುವಸ್ವಃ ಎಂದು ವ್ಯಾಹೃತಿಗಳು ನಾಲ್ಕು) ವ್ಯಾಹೃತಿಯೂ, ದ್ವಾದಶಾಕ್ಷರಃ–(' ಓಂ ನಮೋ ಭಗವತೇ ವಾಸುದೇವಾಯ' ಎಂಬ ೧೨ ಅಕ್ಷರಗಳುಳ್ಳ) ವಾಸುದೇವ ಮಂತ್ರವೂ, ಗಾಯತ್ರೀ–(೨೪ ಅಕ್ಷರಗಳುಳ್ಳ) ಗಾಯತ್ರೀಮಂತ್ರವೂ; ಪುರುಷಃ–ಪುರುಷ ಸೂಕ್ತವೂ; ವಿಷ್ಣುಃ–(' ಓಂ ವಿಷ್ಣವೇ ನಮಃ' – ಎಂಬ ೬ ಅಕ್ಷರಗಳುಳ್ಳ)

ಅತಿಶುದ್ಧರೂ, ಸದಾಚಾರಸಂಪನ್ನರೂ ಆದ ದ್ವಿಜರಿಂದಲೇ ಜಪಿಸಲು ಅರ್ಹವಾದವುಗಳು (೨೮). [1] ಪ್ರಣವ, ಮಾತೃಕಾ, ಅಷ್ಟಾಕ್ಷರ, ವ್ಯಾಹೃತಿ, ದ್ವಾದಶಾಕ್ಷರ, ಗಾಯತ್ರೀ, ಪುರುಷಸೂಕ್ತ ಮತ್ತು ವಿಷ್ಣುಷಡಕ್ಷರಗಳೆಂಬ

---

[1] ಅಷ್ಟಮಹಾಮಂತ್ರಗಳ ಜಪದಿಂದ ಶ್ರೀವಿಷ್ಣುವು ಶೀಘ್ರವಾಗಿ ಪ್ರಸನ್ನನಾಗುತ್ತಾನೆ; ಆತನು ಪ್ರಸನ್ನನಾದ ಭಕ್ತನಿಗೆ ಅಲಭ್ಯವಾದ ಪುರುಷಾರ್ಥವಿಲ್ಲ. ಈ ಮಹಾಸಿದ್ಧಿಯ ಮುಂದೆ ಅಣಿಮಾದಿ ಸಿದ್ಧಿಗಳು ಕ್ಷುದ್ರ (ಅಲ್ಪ) ಗಳಾಗಿರುವುವು. ಈ ಮಂತ್ರಗಳನ್ನು, ಜಪಿಸುವ ಕ್ರಮ, ಪೂರ್ವಭಾವಿಯಾಗಿ ಆಚರಿಸಬೇಕಾದ ನ್ಯಾಸಾದಿಗಳು ಮೊದಲಾದ ವಿವರಗಳನ್ನು ಆ ಮಂತ್ರಾರ್ಥಗಳೊಂದಿಗೆ ಗುರುಮುಖದಿಂದ ತಿಳಿಯಬೇಕು; ಅಕಾರಾದಿ ವರ್ಣಗಳಿಂದ ಪ್ರತಿಪಾದ್ಯವಾದ ಭಗವದ್ರೂಪಗಳು ಮತ್ತು ಅವುಗಳ ಮಹಿಮೆಗಳನ್ನು ಶ್ರೀಮದಾನಂದತೀರ್ಥಭಗವತ್ಪಾದರಿಂದ ವಿರಚಿತವಾದ 'ತಂತ್ರಸಾರಸಂಗ್ರಹ'ವೆಂಬ ಗ್ರಂಥವನ್ನು ಅಭ್ಯಸಿಸಿ ತಿಳಿಯಬೇಕು; ಅಕಾರಾದಿ ವರ್ಣಗಳಿಂದ ಅಜಾದಿ ಭಗವದ್ರೂಪಗಳು, ಆ ನಾಮಗಳಿಂದ ಬೋಧ್ಯವಾದ ಮಹಿಮೆಗಳೂ ಹೇಳಲ್ಪಡುತ್ತವೆ; ಪುರುಷಸೂಕ್ತವೇ ಅಷ್ಟಮಂತ್ರಗಳಲ್ಲಿ ಒಂದು ಮಂತ್ರ—ಈ ಮಂತ್ರವನ್ನು ಮಾಲಾಮಂತ್ರವೆಂದೂ ತಿಳಿಯಬಹುದು (ಬಹುಮಂತ್ರಗಳ ಮಾಲೆಯಾಗಿರುತ್ತದೆ); ಇಲ್ಲಿ ವಿವಿಧ ಮಂತ್ರಗಳು ಮತ್ತು ಅವುಗಳ ಅಧಿಕಾರಿಗಳನ್ನು ನಿರೂಪಿಸುವ ವಿಷಯವು ಮಾತ್ರ ಪ್ರಸಕ್ತವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷ್ಣುಷಡಕ್ಷರ ಮಂತ್ರವೂ, ಮಹಾಮಂತ್ರಾಷ್ಟಕಂ – ಅಷ್ಟ ಮಹಾಮಂತ್ರಗಳೆಂದು, ಸ್ಮೃತಂ–ತಿಳಿಯಲ್ಪಡುತ್ತವೆ.

ತತ್ರಾಪಿ ಪ್ರಣವೋ ಮಂತ್ರೋ ಯತೀನಾಮೇವ ಕೀರ್ತಿತಃ ।
ಅನ್ಯಾಶ್ರಮಾ ಹಿ ತಂ ಜಪ್ತ್ವಾ ಭವಂತಿ ಪ್ರತ್ಯವಾಯಿನಃ ॥ ೩೦ ॥

ತತ್ರಾಪಿ – ಈ ಅಷ್ಟಮಹಾಮಂತ್ರಗಳಲ್ಲಿ ಸಹ, ಪ್ರಣವಃ ಮಂತ್ರಃ– ಪ್ರಣವಮಂತ್ರವು, ಯತೀನಾಂ ಏವ–ಯತಿಗಳಿಗೆ ಮಾತ್ರ, ಕೀರ್ತಿತಃ– ಹೇಳಲ್ಪಟ್ಟಿದೆ (ಅದರ ಜಪಕ್ಕೆ ಯತಿಗಳು ಮಾತ್ರ ಅಧಿಕಾರಿಗಳು) ; ಹಿ– ಏಕೆಂದರೆ, ಅನ್ಯಾಶ್ರಮಾಃ–ಗೃಹಸ್ಥಾದಿ ಬೇರೆ ಆಶ್ರಮದಲ್ಲಿರುವವರು, ತಂ– ಆ ಪ್ರಣವವನ್ನು, ಜಪ್ತ್ವಾ – ಜಪಿಸಿ, ಪ್ರತ್ಯವಾಯಿನಃ – ದೋಷವನ್ನು ಹೊಂದುವವರು, ಭವಂತಿ ಆಗುತ್ತಾರೆ.

ಮಾತೃಕಾದಿಷು ಮಂತ್ರೇಷು ಗೃಹಸ್ಥಾಶ್ಚಾಧಿಕಾರಿಣಃ ।
ನರಸಿಂಹಹಯಗ್ರೀವಹಂಸವಾರಾಹಭಾರ್ಗವಾಃ ॥ ೩೧ ॥

ಕಪಿಲವ್ಯಾಸದತ್ತಾದ್ಯಾ ದ್ವಿಜಾನಾಮೇವ ಕೀರ್ತಿತಾಃ ।
ಸ್ವಸ್ವವರ್ಣಾಶ್ರಮಾಚಾರೈರ್ದುರಾಚಾರವಿವರ್ಜಿತೈಃ ॥ ೩೨ ॥

ಎಂಟು ಮಂತ್ರಗಳು, ಅಷ್ಟಮಹಾಮಂತ್ರಗಳೆಂದು ಜ್ಞಾನಿಗಳಿಂದ ತಿಳಿಯಲಾಗಿವೆ (೨೯). ಈ ಅಷ್ಟಮಹಾಮಂತ್ರಗಳಲ್ಲಿ ಪ್ರಣವಮಂತ್ರವು, ಯತಿಗಳಿಂದ ಮಾತ್ರ ಜಪಿಸಲು ಅರ್ಹವಾದುದು (ಪ್ರಣವಜಪದಲ್ಲಿ ಯತಿಗಳಿಗೆ ಮಾತ್ರ ಅಧಿಕಾರವಿರುತ್ತದೆ) ; ಅನ್ಯಾಶ್ರಮದವರು, ಪ್ರಣವವನ್ನು ಜಪಿಸಿದರೆ, ದೋಷಿಗಳಾಗುತ್ತಾರೆ (೩೦). ಅಷ್ಟಮಹಾಮಂತ್ರಗಳಲ್ಲಿ ಮಾತೃಕಾದಿ ಇತರ ಮಂತ್ರಗಳನ್ನು ಉಪಾಸಿಸುವುದರಲ್ಲಿ ಗೃಹಸ್ಥರೂ ಅಧಿಕಾರಿಗಳಾಗಿರುತ್ತಾರೆ (ಯತಿಗಳಂತೂ ಅಧಿಕಾರಿಗಳೇ ಎಂದರ್ಥ) ; ನರಸಿಂಹ, ಹಯಗ್ರೀವ, ಹಂಸ, ವರಾಹ, ಭಾರ್ಗವ, ಕಪಿಲ, ವ್ಯಾಸ, ದತ್ತ ಮೊದಲಾದ ಇತರ ಭಗವನ್ಮಂತ್ರಗಳು, (ಅವುಗಳ ಉಪಾಸನೆಯು) ದ್ವಿಜರಿಗೆ ಮಾತ್ರವೆಂದು ಹೇಳಲಾಗಿವೆ; ಹೀಗೆ ಅಧಿಕಾರಿಗಳೆನಿಸುವ ದ್ವಿಜರು ದುರಾಚಾರಗಳಿಲ್ಲದವರಾಗಿರಬೇಕು ಮತ್ತು ಸ್ವವರ್ಣಾಶ್ರಮಧರ್ಮಗಳನ್ನು ತಪ್ಪದೇ ಆಚರಿಸುತ್ತಿರುವವರಾಗಿರಬೇಕು ; ಹೀಗಿಲ್ಲದವರು ಉಪಾಸಿಸಿದರೆ ಈ ಮಂತ್ರಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏತೇ ಮಂತ್ರಾ ಉಪಾಸ್ಯಾಃ ಸ್ಯುರನ್ಯಥಾ ನ ಫಲಪ್ರದಾಃ ।
ಪರದಾರಪರದ್ರವ್ಯದುಷ್ಪ್ರತಿಗ್ರಹವರ್ಜಿತೈಃ ।
ಏತೇ ಮಂತ್ರಾ ಉಪಾಸ್ಯಾಃ ಸ್ಯುರನ್ಯಥಾ ನ ಫಲಪ್ರದಾಃ ॥ ೩೩ ॥

ಮಾತೃಕಾದಿಷು ಮಂತ್ರೇಷು–ಮಾತೃಕಾದಿ ಇತರ ಮಂತ್ರಗಳ ಜಪದಲ್ಲಿ, ಗೃಹಸ್ಥಾಃ–ಗೃಹಸ್ಥಾಶ್ರಮಿಗಳು, ಅಧಿಕಾರಿಣಃ–ಅಧಿಕಾರಿಗಳಾಗಿರುವರು ; ನರಸಿಂಹಹಯಗ್ರೀವಹಂಸವಾರಾಹಭಾರ್ಗವಾಃ–ನರಸಿಂಹ, ಹಯಗ್ರೀವ, ಹಂಸ, ಭಾರ್ಗವಮಂತ್ರಗಳೂ, ಕಪಿಲವ್ಯಾಸದತ್ತಾದ್ಯಾಃ–ಕಪಿಲ, ವ್ಯಾಸ, ದತ್ತ ಮೊದಲಾದ ಮಂತ್ರಗಳೂ, ದ್ವಿಜಾನಾಂ ಏವ–ದ್ವಿಜರಿಗೆ ಮಾತ್ರವೆಂದು, ಕೀರ್ತಿತಾಃ–(ದ್ವಿಜರಿಂದ ಮಾತ್ರ ಜಪಿಸಲು ಅರ್ಹವಾದವುಗಳೆಂದು) ಹೇಳಲ್ಪಟ್ಟವೆ ; ಏತೇ–ಈ, ಮಂತ್ರಾಃ-ಮಂತ್ರಗಳು, ಸ್ವಸ್ವವರ್ಣಾಶ್ರಮಾಚಾರೈಃ – ತಂತಮ್ಮ ವರ್ಣಾಶ್ರಮಗಳ ಆಚಾರಗಳುಳ್ಳವರಾದ, ದುರಾಚಾರವರ್ಜಿತೈಃ–ದುರಾಚಾರರಹಿತರಾದವರಿಂದ, ಉಪಾಸ್ಯಾಃ ಸ್ಯುಃ–ಉಪಾಸ್ಯಗಳಾಗಿರುತ್ತವೆ (ಜಪಿಸಲು ಯೋಗ್ಯವಾಗುತ್ತವೆ) ; ಅನ್ಯಥಾ–ಹಾಗಿಲ್ಲದೇ ಇದ್ದರೆ, ನ ಫಲಪ್ರದಾಃ – (ಮಂತ್ರ ಜಪವು) ಫಲಪ್ರದವಾಗುವುದಿಲ್ಲ (ಮಂತ್ರಸಿದ್ಧಿಯು ದೊರೆಯುವುದಿಲ್ಲ) ; ಪರದಾರಪರದ್ರವ್ಯದುಷ್ಪ್ರತಿಗ್ರಹವರ್ಜಿತೈಃ–ಪರಸ್ತ್ರೀ, ಪರದ್ರವ್ಯಗಳ ಆಶೆಯಿಲ್ಲದವರಿಂದಲೂ, ದುರ್ದಾನಗಳನ್ನು ಸ್ವೀಕರಿಸದ ಬ್ರಾಹ್ಮಣರಿಂದಲೂ, ಏತೇ ಮಂತ್ರಾಃ–ಈ ಮಂತ್ರಗಳು, ಉಪಾಸ್ಯಾಃ ಸ್ಯುಃ–ಜಪಿಸಲು ಯೋಗ್ಯವಾಗಿರುತ್ತವೆ ; ಅನ್ಯಥಾ–ಹಾಗಲ್ಲದೇ (ಅನ್ಯರಿಂದ ಜಪಿಸಲ್ಪಟ್ಟರೆ), ನ ಫಲಪ್ರದಾಃ–ವ್ಯರ್ಥವಾಗುತ್ತವೆ (ಸಿದ್ಧಿಸುವುದಿಲ್ಲ).

ಸಿದ್ಧಿಸುವುದಿಲ್ಲ ; ಮುಖ್ಯವಾಗಿ ಪರಸ್ತ್ರೀ, ಪರದ್ರವ್ಯಗಳ ಆಶಾವರ್ಜಿತರಾಗಿರಬೇಕು ; ಅವರಲ್ಲಿ ದಾನಸ್ವೀಕಾರಕ್ಕೆ ಅರ್ಹರಾದ ಬ್ರಾಹ್ಮಣರು ದುಷ್ಟರಿಂದ ದಾನಸ್ವೀಕಾರ ಮಾಡಿರಕೂಡದು (ಅಥವಾ ದುಷ್ಟ ಸ್ತ್ರೀ ಮೊದಲಾದ ಪರಿವಾರರಹಿತರಾಗಿರಬೇಕು—ದುರ್ಜನ ಸಹವಾಸದಲ್ಲಿ ಆಸಕ್ತಿಯನ್ನು ತೊರೆದಿರಬೇಕು) ; ಹೀಗಿರುವ ಅಧಿಕಾರಿಗಳಿಂದ ಮಾತ್ರ ಈ ಮಂತ್ರಗಳು ಉಪಾಸ್ಯಗಳು—ಅನ್ಯಥಾ ಫಲಪ್ರದಗಳಾಗುವುದಿಲ್ಲ (೩೧–೩೩).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಗ್ನಿಹೋತ್ರರತಾ ಯೇತ್ರ ವೇದಾಧ್ಯಾಯರತಾಶ್ಚ ಯೇ ।
ಏತೇ ಮಂತ್ರಾ ಉಪಾಸಾ ಸ್ಯುರನ್ಯಥಾ ನ ಫಲಪ್ರದಾಃ ॥ ೩೪ ॥

ಹಿಂಸಾಯಾಂ ವಿಮುಖಾ ಯೇ ತು ಜಿತಶ್ವಾಸಾ ಜಿತೇಂದ್ರಿಯಾಃ ।
ಏತೇ ಮಂತ್ರಾ ಉಪಾಸಾ ಸ್ಯುರನ್ಯಥಾ ನ ಫಲಪ್ರದಾಃ ॥ ೩೫ ॥

ಸ್ವಸ್ಥ ಚಿತ್ತೈರ್ಧ್ಯಾನಪರೈಃ ನಿಷ್ಕ್ರೋಧೈರತಿಥಿಪ್ರಿಯೈಃ ।
ಏತೇ ಮಂತ್ರಾ ಉಪಾಸಾ ಸ್ಯುರನ್ಯಥಾ ನ ಫಲಪ್ರದಾಃ ॥ ೩೬ ॥

ವಿಷ್ಣುಭಕ್ತಿರ್ದೃಢಾ ಯೇಷಾಂ ದಾನೇ ಚಿತ್ತಂ ಸದೈವ ತು ।
ಏತೇ ಮಂತ್ರಾ ಉಪಾಸಾ ಸ್ಯುರನ್ಯಥಾ ನ ಫಲಪ್ರದಾಃ ॥ ೩೭ ॥

ಈಶ್ವರಾರ್ಪಿತ ಸರ್ವಸ್ವಾ ನ್ಯಾಯಾಗತಧನಾಶ್ಚ ಯೇ ।
ಏತೇ ಮಂತ್ರಾ ಉಪಾಸಾ ಸ್ಯುರನ್ಯಥಾ ನ ಫಲಪ್ರದಾಃ ॥ ೩೮ ॥

ಅತ್ರ–ಈ ಮಂತ್ರೋಪಾಸಕರ ಮಧ್ಯದಲ್ಲಿ, ಯೇ–ಯಾರು, ಅಗ್ನಿ-ಹೋತ್ರರತಾಃ–ಅಗ್ನಿಕಾರ್ಯದಲ್ಲಿ ಆಸಕ್ತರೋ, ಚ–ಮತ್ತು, ಯೇ–ಯಾರು,

---

ವಿವಿಧ ಮಂತ್ರಗಳನ್ನು ಉಪಾಸಿಸುವವರಲ್ಲಿ, ಯಾರು, ವೇದಾಧ್ಯಯನದಲ್ಲಿ ಮತ್ತು ಅಗ್ನಿಹೋತ್ರಾದಿ ಕರ್ಮಗಳಲ್ಲಿ ಆಸಕ್ತರಾಗಿರುವರೋ, ಅವರಿಂದ ಈ ನರಸಿಂಹ, ಹಯಗ್ರೀವಾದಿ ಮಂತ್ರಗಳು ಜಪಿಸಲರ್ಹವಾಗುತ್ತವೆ–ಹೀಗಿರುವವರೇ ಅಧಿಕಾರಿಗಳು—ಅನ್ಯರಿಗೆ ಈ ಮಂತ್ರಗಳು ಫಲಪ್ರದಗಳಾಗುವುದಿಲ್ಲ ; ಯಾರು ಪರಪೀಡೆಯಿಂದ ವಿಮುಖರೋ, ಪ್ರಾಣಾಯಾಮಾದಿ ನಿಯಮಗಳ ಅನುಷ್ಠಾನವುಳ್ಳವರೋ, ಮತ್ತು ಇಂದ್ರಿಯ ಜಯವುಳ್ಳವರೋ, ಅಂಥ, ಕ್ರೋಧಾದಿರಹಿತರೂ ಅತಿಥಿಪ್ರಿಯರೂ ಶಾಂತಚಿತ್ತರೂ ಧ್ಯಾನಾಸಕ್ತರೂ ಆದವರಿಂದ ಈ ಮಂತ್ರಗಳು ಉಪಾಸ್ಯಗಳು—ಅನ್ಯಥಾ ಫಲಪ್ರದಗಳಲ್ಲ ; ಯಾರು ದೃಢವಾದ ವಿಷ್ಣುಭಕ್ತಿಯುಳ್ಳವರೋ, ಸತ್ಪಾತ್ರದಾನದಲ್ಲಿ ಆದರವುಳ್ಳವರೋ, ಅವರಿಂದ ಮಾತ್ರ ಉಪಾಸ್ಯಗಳು—ಅನ್ಯಥಾ ಮಂತ್ರಸಿದ್ಧಿಯು ದೊರೆಯುವುದಿಲ್ಲ ; ನ್ಯಾಯಾರ್ಜಿತವಾದ ಧನಾದಿಗಳುಳ್ಳವರೂ ಮತ್ತು ಶ್ರೀಹರಿಯಲ್ಲಿ ಸರ್ವವನ್ನೂ ಸಮರ್ಪಿಸುವ ಬುದ್ಧಿಯುಳ್ಳವರೂ ಈ ಮಂತ್ರಗಳನ್ನು ಉಪಾಸಿಸುವುದರಲ್ಲಿ (ಜಪಿಸಿ, ಮಂತ್ರಪ್ರತಿಪಾದ್ಯದೇವತೆಯಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇದಾಧ್ಯಾಯರತಾಃ–ವೇದಾಧ್ಯಯನದಲ್ಲಿ ಆದರವುಳ್ಳವರೋ, (ಅವರಿಂದ), ಏತೇ ಮಂತ್ರಾಃ – ಹಿಂದೆ ಹೇಳಿದ ನರಸಿಂಹ, ಹಯಗ್ರೀವಾದಿ ಭಗವದ್ರೂಪಗಳು, ಉಪಾಸ್ಯಾಃ ಇತ್ಯಾದಿಗಳ ಅರ್ಥವನ್ನು ೩೩ನೇ ಶ್ಲೋಕಭಾಗದಲ್ಲಿದ್ದಂತೆ ತಿಳಿಯಬೇಕು ; ಸ್ವಸ್ಥಚಿತ್ತೈಃ–ಶಾಂತಮನಸ್ಕರಾದ, ಧ್ಯಾನಪರೈಃ–ಧ್ಯಾನದಲ್ಲಿ ಆದರವುಳ್ಳವರೂ, ನಿಕ್ರೋಧೈಃ–ಕ್ರೋಧರಹಿತರೂ, ಅತಿಥಿಪ್ರಿಯೈಃ–ಅತಿಥಿಗಳಿಗೆ ಪ್ರಿಯರೂ (ಅತಿಥಿಸೇವೆಯಲ್ಲಿ ಪ್ರೀತಿಯುಳ್ಳವರೂ) ಆದವರಿಂದ, ಯೇ–ಯಾರು, ಹಿಂಸಾಯಾಂ – ಪರಪೀಡೆಯಲ್ಲಿ, ವಿಮುಖಾಃ – ದ್ವೇಷವುಳ್ಳವರೋ, ಜಿತಶ್ವಾಸಾಃ–ಶ್ವಾಸನಿರೋಧವುಳ್ಳವರೋ (ಪ್ರಾಣಾಯಾಮಾದಿನಿಯಮಾನುಷ್ಠಾನವಂತರೋ), ಜಿತೇಂದ್ರಿಯಾಃ ತು–ಇಂದ್ರಿಯಜಯವುಳ್ಳವರೋ (ಅವರಿಂದ ಮಾತ್ರ, ಏತೇ ಮಂತ್ರಾಃ ಉಪಾಸ್ಯಾಃ ಸ್ಯುಃ–ಇತ್ಯಾದಿ ; (ಯೇ—ಯಾರು) ವಿಷ್ಣುಭಕ್ತಿದೃಢಾಃ – (ಶ್ರೀವಿಷ್ಣುವಿನಲ್ಲಿ ದೃಢವಾದ ಭಕ್ತಿಯುಳ್ಳವುಳ್ಳವರೋ, ಯೇಷಾಂ ತು–ಯಾರಿಗಾದರೆ, ಸದಾ ಏವ–ನಿತ್ಯವೂ, ದಾನೇ–(ಸತ್ಪಾತ್ರ) ದಾನದಲ್ಲಿ, ಚಿತ್ತಂ–ಮನಸ್ಸೋ (ಮನಸ್ಸುಳ್ಳವರೋ), ಅವರಿಂದ, ಏತೇ ಮಂತ್ರಾಃ ಇತ್ಯಾದಿ ; ಯೇ–ಯಾರು, ಈಶ್ವರಾರ್ಪಿತಸರ್ವಸ್ವಾಃ–ಶ್ರೀಹರಿಯಲ್ಲಿ ಸರ್ವಸಮರ್ಪಣಬುದ್ಧಿಯುಳ್ಳವರೋ, ಚ–ಮತ್ತು, ನ್ಯಾಯಾಗತಧನಾಃ–ನ್ಯಾಯ (ಧರ್ಮ) ಪ್ರಾಪ್ತವಾದ ಧನವುಳ್ಳವರೋ, ಅವರಿಂದ, ಏತೇ ಮಂತ್ರಾಃ ಇತ್ಯಾದಿ.

ತತ್ರಾಪಿ ಚ ಹಯಗ್ರೀವನರಸಿಂಹವರಾಹಕಾಃ ।
ಭಾರ್ಗವಶ್ಚ ದುರಾಚಾರೈರ್ನೈವ ಸೇವ್ಯಾಃ ಕಥಂಚನ ॥ ೩೯ ॥

ಏತನ್ಮಂತ್ರೋಪಾಸಕಾ ಯೇ ಯದಿ ಸ್ಯುಃ ಪರದಾರಿಣಃ ।
ಪರದ್ರವ್ಯಹರಾವಾಪಿ ವೃಥಾ ಹಿಂಸಾಪರಾಯಣಾಃ ॥ ೪೦ ॥

ಶ್ರೀವಿಷ್ಣುವನ್ನು ಪ್ರಸನ್ನೀಕರಿಸಿಕೊಳ್ಳುವುದಕ್ಕೆ) ಅರ್ಹರು—ಅನ್ಯರಿಗೆ ಈ ಮಂತ್ರಗಳು ಸಿದ್ಧಿಸುವುದಿಲ್ಲ (೩೪–೩೮). ಪೂರ್ವೋಕ್ತ ನರಸಿಂಹಾದಿ ಮಂತ್ರಗಳಲ್ಲಿಯೂ, ಹಯಗ್ರೀವ, ನರಸಿಂಹ, ವರಾಹ ಮತ್ತು ಪರಶುರಾಮ ಮಂತ್ರಗಳನ್ನು ದುರಾಚಾರಗಳುಳ್ಳವರು ಯಾರೂ, ಯಾವ ಪ್ರಕಾರದಿಂದಲೂ ಉಪಾಸಿಸಕೂಡದು ; ಪರಸ್ತ್ರೀ ಪರದ್ರವ್ಯಗಳನ್ನು ಅಪಹರಿಸುವವರೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮದ್ಯಮಾಂಸಸುರಾದೀನಾಂ ಯದಿ ಸ್ಯುಃ ಸೇವಿನೋಽಥವಾ ।
ಮಂತ್ರಕ್ಷೋಭೋ ಭವೇತ್ತೇಷಾಂ ತತ್ಕಾಲೇ ಸ್ಯುಃಪಿ ಶಾಚಕಾಃ ॥

ತತ್ರಾಪಿ ಚ–ಈ ಹಿಂದೆ ಹೇಳಿದ ಮಂತ್ರಗಳಲ್ಲಿ ಸಹ (೩೧–೩೨ನೇ ಶ್ಲೋಕಗಳಲ್ಲಿ ಹೇಳಲಾದ ನರಸಿಂಹಾದಿ ಮಂತ್ರಗಳಲ್ಲಿ ಸಹ), ಹಯಗ್ರೀವ-ನರಸಿಂಹವರಾಹಕಾಃ–ಹಯಗ್ರೀವ, ನರಸಿಂಹ, ವರಾಹಮಂತ್ರಗಳು, ಚ–ಮತ್ತು, ಭಾರ್ಗವಃ–ಭಾರ್ಗವ (ಪರಶುರಾಮ) ಮಂತ್ರವೂ, ದುರಾಚಾರೈಃ–ದುರಾಚಾರಿಗಳಿಂದ, ಕಥಂಚನ–ಹೇಗೂ (ಯಾವ ರೀತಿಯಿಂದಲೂ), ನೈವ ಸೇವ್ಯಾಃ – ಸೇವಿಸಲ್ಪಡತಕ್ಕವುಗಳಲ್ಲ; ಯೇ–ಯಾರು, ಏತನ್ಮಂತ್ರೋಪಾಸಕಾಃ – ಈ ಮಂತ್ರಗಳನ್ನು ಉಪಾಸಿಸುವರೋ (ಅವರು), ಯದಿ–ಒಂದು ವೇಳೆ, ಪರದಾರಿಣಃ–ಪರಸ್ತ್ರೀಯರಲ್ಲಿ ಆಸಕ್ತರೂ, ವಾ–ಅಥವಾ, ಪರದ್ರವ್ಯಹರಾಃ–ಪರದ್ರವ್ಯಾಪಹಾರಿಗಳೂ, ವೃಥಾ–ವ್ಯರ್ಥವಾಗಿ, ಹಿಂಸಾ-ಪರಾಯಣಾಃ – ಪರಪೀಡಾಪರರೂ, ಸ್ಯುಃ – ಆಗುವದಾದರೆ, ಅಥವಾ, ಮದ್ಯಮಾಂಸಸುರಾದೀನಾಂ–ಮದ್ಯ, ಮಾಂಸ, ಸುರಾದಿಗಳ, ಸೇವಿನಃ–ಸೇವಿಸುವವರು, ಯದಿಸ್ಯುಃ–ಆಗುವರಾದರೆ, ತೇಷಾಂ–ಅವರಿಗೆ (ಈ ದುರಾಚಾರವುಳ್ಳವರಾಗಿ ಆ ಮಂತ್ರಗಳನ್ನು ಜಪಾದಿಗಳಿಂದ ಸೇವಿಸಿದರೆ), ಮಂತ್ರ-ಕ್ಷೋಭಃ – ಮಂತ್ರಕ್ಷೋಭೆಯು (ದುಷ್ಪರಿಣಾಮವು) ಭವೇತ್ – (ತಪ್ಪದೇ) ಆಗುತ್ತದೆ; ತತ್ಕಾಲೇ – ತತ್ಕಾಲದಲ್ಲಿ (ಅಲ್ಪಕಾಲದಲ್ಲಿ–ಬೇಗನೇ), ಪಿಶಾಚಕಾಃ–ಪಿಶಾಚರು, ಸ್ಯುಃ–ಆಗುತ್ತಾರೆ.

ವ್ಯರ್ಥವಾದ ಪರಹಿಂಸೆಗಳಲ್ಲಿ ತೊಡಗುವವರೂ, ಅಥವಾ ಮದ್ಯ ಮಾಂಸ ಸುರಾದಿಗಳನ್ನು ಸೇವಿಸುವವರೂ, ಈ ಮಂತ್ರಗಳನ್ನು ಜಪಿಸಿದರೆ, ಮಂತ್ರ ಕ್ಷೋಭೆಯೂ (ದುಃಖಾದಿ ದುಷ್ಟಫಲಗಳೂ) ಉಂಟಾಗಿ,[1] ಅಲ್ಪಕಾಲದಲ್ಲಿ ಪಿಶಾಚ ಜನ್ಮವೂ ಪ್ರಾಪ್ತವಾಗುತ್ತದೆ (೩೯–೪೧). ಹಯಗ್ರೀವಾದಿ ನಾಲ್ಕನ್ನು

---

[1] ಪಿಶಾಚ ಜನ್ಮವು ಮಹಾದುಃಖಕರವಾದುದು; ಸದಾ ಹಸಿವು ನೀರಡಿಕೆಗಳಿಂದ ಪೀಡಿಸಲ್ಪಡುತ್ತವೆ—ಪಿಶಾಚಿಗಳು; ಅನ್ನಪಾನಗಳಿದ್ದರೂ, ಅನ್ಯದೇಹ ಪ್ರವೇಶವಿಲ್ಲದೆ, ಭೋಗಿಸುವಂತಿಲ್ಲ—ಪ್ರವೇಶ ಯೋಗ್ಯ ಅನ್ಯರು ದೊರಕುವುದು ಸುಲಭವಲ್ಲ—ಬಹುವಿರಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನ್ಯವೈಷ್ಣವಮಂತ್ರಾಸ್ತು ಕಾಲೇನೈವಾಪಕಾರಕಾಃ ।
ವಿಲಂಬೇನಾಪಕಾರೋಽಪಿ ಜಾಯತೇ ನಾತ್ರ ಸಂಶಯಃ ॥ ೪೨ ॥

ಅನ್ಯವೈಷ್ಣವಮಂತ್ರಾಃ ತು-(ಹಿಂದಿನ ಶ್ಲೋಕದಲ್ಲಿ ಹೇಳಿದ ಹಯಗ್ರೀವ, ನಾರಸಿಂಹ, ವರಾಹ, ಭಾರ್ಗವಮಂತ್ರಗಳಲ್ಲದೇ) ಇತರ ವೈಷ್ಣವ ಮಂತ್ರಗಳಾದರೋ, ಕಾಲೇನ ಏವ – ದೀರ್ಘಕಾಲದಿಂದಲೇ (ದುರಾಚಾರಿಗಳು ಉಪಾಸಿಸಿದರೆ, ತತ್ಕಾಲದಲ್ಲಿ ಅಲ್ಲದೇ, ಕೆಲವು ಕಾಲದ ನಂತರವೇ), ಅಪಕಾರಕಾಃ – ಕೆಡಕನ್ನುಂಟುಮಾಡುತ್ತವೆ; ಅಪಕಾರಃ – ದುಷ್ಫಲವು, ವಿಲಂಬೇನಾಪಿ–ವಿಳಂಬದಿಂದಾದರೂ, ಜಾಯತೇ–ಉಂಟಾಗಿಯೇ ತೀರುತ್ತದೆ (ತಪ್ಪುವುದಿಲ್ಲ), ಅತ್ರ–ಈ ವಿಷಯದಲ್ಲಿ, ನ ಸಂಶಯಃ–ಸಂಶಯವಿಲ್ಲ.

ಏವಂ ಸಂಕರ್ಷಣೋಮಂತ್ರಸ್ತ್ರಿವಿಕ್ರಮಜನಾರ್ದನೈಃ ।
ನಾರಸಿಂಹಾದಿವತ್ ಜ್ಞೇಯಾ ಉಪಾಸ್ಯಾ ನಿಯತವ್ರತೈಃ ॥೪೩॥

ಸಂಕರ್ಷಣಃ ಮಂತ್ರಃ – ಸಂಕರ್ಷಣಮಂತ್ರವೂ, ಏವಂ – ಹೀಗೆಯೇ (ದುರಾಚಾರಿಗಳಿಂದ ಸೇವ್ಯವಲ್ಲ); ತ್ರಿವಿಕ್ರಮಜನಾರ್ದನೈಃ–ತ್ರಿವಿಕ್ರಮ, ಜನಾರ್ದನ ಮಂತ್ರಗಳಿಂದ (ಅವುಗಳ ಉಪಾಸನೆಯಿಂದ), ನಾರಸಿಂಹಾದಿವತ್–ನರಸಿಂಹ ಮೊದಲಾದ ಮಂತ್ರಗಳಂತೆ, ಜ್ಞೇಯಾಃ–(ದುಷ್ಫಲಗಳು) ತಿಳಿಯಲ್ಪಡತಕ್ಕದು; ನಿಯತವ್ರತೈಃ – ವ್ರತಾದಿ ನಿಯಮಗಳುಳ್ಳವರಿಂದ

ಬಿಟ್ಟು ಅನ್ಯವೈಷ್ಣವ ಮಂತ್ರಗಳು (ಈ ಹಿಂದೆ ಉಕ್ತವಾಗಿರುವವುಗಳು) ಸಹ, ದುರಾಚಾರಿಗಳಿಂದ ಉಪಾಸಿಸಲ್ಪಟ್ಟರೆ, ಕಾಲಾಂತರದಲ್ಲಿ ತಪ್ಪದೇ ದುಷ್ಟಫಲಗಳು, ಉಪಾಸಕರಿಗೆ, ಲಭಿಸುತ್ತವೆ; ವಿಳಂಬದಿಂದಾದರೂ ಆ ಮಂತ್ರಗಳೂ ದುರಾಚಾರಿಗಳಿಗೆ ಅಪಕಾರಕವಾಗುತ್ತವೆಂಬಲ್ಲಿ ಸಂಶಯವಿಲ್ಲ. (ಆದ್ದರಿಂದ ಮದ್ಯ ಮಾಂಸ, ಪರಸ್ತ್ರೀ ಮೊದಲಾದ ಪೂರ್ವೋಕ್ತಗಳಾದ ಮತ್ತು ತತ್ಸದೃಶ ದುರಾಚಾರಗಳುಳ್ಳವರು, ವೈಷ್ಣವ ಮಂತ್ರಗಳನ್ನು ಉಪಾಸಿಸಕೂಡದು) (೪೨). ಸಂಕರ್ಷಣ, ತ್ರಿವಿಕ್ರಮ, ಜನಾರ್ದನ ಮಂತ್ರಗಳೂ ಸಹ, ನರಸಿಂಹಾದಿ ಮಂತ್ರಗಳಂತೆ ಉಗ್ರಗಳೆಂದೂ, ದುರಾಚಾರಿಗಳಿಂದ ಸೇವ್ಯಗಳಲ್ಲವೆಂದೂ ತಿಳಿಯಲ್ಪಡತಕ್ಕದ್ದು; ನಿಯತವಾದ ವ್ರತಾಚಾರಗಳುಳ್ಳವರೇ ಈ ಮಂತ್ರಗಳನ್ನು ಉಪಾಸಿಸಬೇಕು (೪೩).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸದಾಚಾರಿಗಳಿಂದಲೇ), ಉಪಾಸ್ಯಾಃ–ಉಪಾಸಿಸಲ್ಪಡಲು ಯೋಗ್ಯವಾದವುಗಳೆಂದು (ಜ್ಞೇಯಾಃ–ತಿಳಿಯಲ್ಪಡತಕ್ಕವುಗಳು).

ರಾಮಗೋಪಾಲಕೃಷ್ಣಾದ್ಯಾ ಹರಿದಾಮೋದರಾಚ್ಯುತಾಃ ।
ಮತ್ಸ್ಯವಾಮನಕೂರ್ಮಾದ್ಯಾಃ ಸರ್ವೇ ಸ್ಯುಃ ಸೌಮ್ಯಮೂರ್ತಯಃ

ನ ಕುಪ್ಯಂತಿ ದುರಾಚಾರೈಃ ಸದಾಚಾರೈಃ ಫಲಾಧಿಕಾಃ ।
ದ್ವಿಜೈರೇತೇ ತು ಸೋಂಕಾರಾ ಉಪಾಸ್ಯಾ ವಿಷ್ಣುವಲ್ಲಭಾಃ ॥ ೪೫ ॥

ರಾಮಗೋಪಾಲಕೃಷ್ಣಾದ್ಯಾಃ–ರಾಮ, ಗೋಪಾಲ, ಕೃಷ್ಣ ಮೊದಲಾದ ಮಂತ್ರಗಳೂ, ಹರಿದಾಮೋದರಾಚ್ಯುತಾಃ–ಹರಿ, ದಾಮೋದರ, ಅಚ್ಯುತಮಂತ್ರಗಳೂ, ಮತ್ಸ್ಯವಾಮನಕೂರ್ಮಾದ್ಯಾಃ–ಮತ್ಸ್ಯ, ವಾಮನ, ಕೂರ್ಮ ಮೊದಲಾದವುಗಳೂ, ಸರ್ವೇ–ಈ ಎಲ್ಲವೂ, ಸೌಮ್ಯಮೂರ್ತಯಃ–ಸೌಮ್ಯಮೂರ್ತಿಗಳನ್ನು ಪ್ರತಿಪಾದಿಸುವ ಮಂತ್ರಗಳು (ಸೌಮ್ಯಸ್ವರೂಪದ ಮಂತ್ರಗಳು), ಸ್ಯುಃ–ಆಗಿರುತ್ತವೆ; ದುರಾಚಾರೈಃ – ದುರಾಚಾರಿಗಳ ಉಪಾಸನೆಯಿಂದ, ನ ಕುಪ್ಯಂತಿ–ಕೋಪಗೊಳ್ಳುವುದಿಲ್ಲ (ದುಷ್ಟಪರಿಣಾಮಗಳನ್ನುಂಟುಮಾಡುವುದಿಲ್ಲ); ಸದಾಚಾರೈಃ–ಸದಾಚಾರವುಳ್ಳವರ ಉಪಾಸನೆಯಿಂದ, ಫಲಾಧಿಕಾಃ–ಅಧಿಕಫಲಗಳನ್ನು ದೊರಕಿಸುತ್ತವೆ; ಏತೇ ತು–ಈ (ಸೌಮ್ಯ) ಮಂತ್ರಗಳಾದರೂ, ದ್ವಿಜೈಃ–ದ್ವಿಜರಿಂದ, ಸೋಂಕಾರಾಃ–ಓಂಕಾರಸಹಿತವಾಗಿ, ಉಪಾಸ್ಯಾ–ಉಪಾಸಿಸಲ್ಪಡತಕ್ಕವುಗಳು; ವಿಷ್ಣು-ವಲ್ಲಭಾಃ–ಈ ಮಂತ್ರಗಳು ವಿಷ್ಣುಪ್ರಿಯಕರಗಳು, (ಆಗಿರುತ್ತವೆ).

ತತ್ತದ್ಧ್ಯಾನಾನುಸಾರೇಣ ತತ್ತದ್ಬೀಜಾನುಸಾರತಃ ।
ತತ್ತದ್ಭಕ್ತೇಷ್ಟದಾತಾರೋ ಭವಂತ್ಯೇವ ನ ಸಂಶಯಃ ॥ ೪೬ ॥

ರಾಮ, ಗೋಪಾಲ, ಕೃಷ್ಣ, ಹರಿ, ದಾಮೋದರ, ಅಚ್ಯುತ ಮತ್ತು ಮತ್ಸ್ಯ, ವಾಮನ, ಕೂರ್ಮಾದಿ ಮಂತ್ರಗಳು, ಸೌಮ್ಯಸ್ವಭಾವದ ಮಂತ್ರಗಳು; ದುರಾಚಾರಿಗಳು ಇವುಗಳನ್ನು ಉಪಾಸಿಸಿದರೆ, ಕೋಪಗೊಂಡು (ನರಸಿಂಹಾದಿ ಉಗ್ರಮಂತ್ರಗಳಂತೆ) ಅಪಕಾರಮಾಡುವುದಿಲ್ಲ; ಸದಾಚಾರಿಗಳಿಗೆ ಅಧಿಕಫಲವನ್ನು ಕೊಡುತ್ತವೆ (೪೪–೪೫). ಮಂತ್ರಗಳು, ತಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತ್ತದ್ಧ್ಯಾನಾನುಸಾರೇಣ – ಆಯಾ ಮಂತ್ರಗಳ ಧ್ಯಾನಪ್ರಕಾರಾನುಸಾರವಾಗಿ, ತತ್ತದ್ಬೀಜಾನುಸಾರತಃ – ಆಯಾ ಮಂತ್ರಗಳ ಬೀಜಾನುಸಾರವಾಗಿ, ತತ್ತದ್ಭಕ್ತೇಷ್ಟದಾತಾರಃ – ಆಯಾ ಮಂತ್ರೋಪಾಸಕರಾದ ಭಕ್ತರ ಇಷ್ಟಾರ್ಥಗಳನ್ನು ಸಲ್ಲಿಸುವುವು (ದೊರಕಿಸುವವು), ಭವಂತಿ ಏವ–ತಪ್ಪದೇ ಆಗುತ್ತವೆ; ನ ಸಂಶಯಃ–ಸಂದೇಹವಿಲ್ಲ.

ಏತ ಏವ ನಿರೋಂಕಾರಾಃ ಸ ಬೀಜಾಃ ಶುಚಿಭಿಃ ಸದಾ ।
ದ್ವಿಜಸ್ತ್ರೀಭಿರುಪಾಸ್ಯಾ ಸ್ಯುಃ ನಾನ್ಯೈರೇವ ಕಥಂಚನ ॥ ೪೭ ॥

ಏತೇ ಏವ – ಈ ಮಂತ್ರಗಳೇ, ಸಬೀಜಾಃ – ಬೀಜಸಹಿತಗಳಾಗಿ, ನಿರೋಂಕಾರಾಃ – (ಆದರೆ) ಓಂಕಾರರಹಿತಗಳಾಗಿ, ಶುಚಿಭಿಃ – ಶುದ್ಧರಾದ (ಸ್ನಾನಾದಿಗಳಿಂದ ಶುದ್ಧರೂ, ಶುದ್ಧಮನಸ್ಕರೂ ಆದ), ದ್ವಿಜಸ್ತ್ರೀಭಿಃ– ದ್ವಿಜಸ್ತ್ರೀಯರಿಂದ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯವರ್ಣಗಳ ಸ್ತ್ರೀಯರಿಂದ), ಉಪಾಸ್ಯಾಃ ಸ್ಯುಃ–ಉಪಾಸಿಸಲ್ಪಡಲು ಅರ್ಹಗಳಾಗಿವೆ; ಕಥಂಚನ–ಎಂದೂ (ಹೇಗೂ) ಅನ್ಯೈಃ–ಇತರರಿಂದ, ನೈವ–ಅಲ್ಲವೇ ಅಲ್ಲ.

ಪತಿತಾ ಯೇ ದ್ವಿಜಾತೀನಾಂ ಪ್ರಾಯಶ್ಚಿತ್ತವಿವರ್ಜಿತಾಃ ।
ಪಶ್ಚಾತ್ತಾಪೇನ ಸಂತಪ್ತಾ ವೈದಿಕಾತ್ ಕರ್ಮಣೋ ಗತಾಃ ॥ ೪೮ ॥

ಬೀಜಾನುಸಾರ[1]ವಾಗಿಯೂ (ಸಬೀಜವಾಗಿದ್ದರೆ), ಧ್ಯಾನಪ್ರಕಾರವನ್ನನುಸರಿಸಿಯೂ, ತಮ್ಮನ್ನು ಜಪಾದಿಗಳಿಂದ ಸೇವಿಸುವ ಭಕ್ತರಿಗೆ ಅವರ ಅಭೀಷ್ಟಗಳನ್ನು ದೊರಕಿಸುತ್ತವೆ—ಸಂಶಯವಿಲ್ಲ (೪೬). ಇವೇ ಮಂತ್ರಗಳನ್ನು ಓಂಕಾರವಿಲ್ಲದೇ ಬೀಜಸಹಿತವಾಗಿ, ದ್ವಿಜಸ್ತ್ರೀಯರು ಮಾತ್ರ ಉಪಾಸಿಸಬಹುದು—ಅನ್ಯರಿಗೆ ಅಧಿಕಾರವಿಲ್ಲ (೪೭). ದ್ವಿಜಾತಿಗಳವರಲ್ಲಿ, ಪತಿತರೂ, ಪ್ರಾಯಶ್ಚಿತ್ತಮಾಡಿಕೊಳ್ಳದವರೂ (ಪ್ರಾಯಶ್ಚಿತ್ತವೇ ಇಲ್ಲದ ಪಾಪಗಳನ್ನು ಮಾಡಿದವರೂ), ಪಶ್ಚಾತ್ತಾಪವುಳ್ಳವರಾಗಿ, ವೇದೋಕ್ತಕರ್ಮಾಚರಣಶೂನ್ಯರಾದರೂ, ಧರ್ಮಬುದ್ಧಿಯುಳ್ಳವರಾಗಿ, ಪಾಪಕರ್ಮಗಳನ್ನು ಬಿಟ್ಟು,

---

1 ಇದೇ ಅಧ್ಯಾಯ ೬೦–೬೧ನೇ ಶ್ಲೋಕಗಳನ್ನು ನೋಡಿ ಸಬೀಜ ಮಂತ್ರಗಳ ಸ್ವರೂಪವನ್ನು ತಿಳಿಯಿರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮದ್ಯಮಾಂಸಸುರಾಭಕ್ಷ್ಯೈರುಜ್ಝಿತಾ ಧರ್ಮಬುದ್ಧಯಃ ।
ಪಾಪಕರ್ಮಭಿರಪ್ಯನ್ಯೇ ಪರದಾರಧನಾದಿತಃ ॥ ೪೯ ॥

ನಿವೃತ್ತಾಸ್ತೇಽಪಿ ಸಂಸ್ಕಾರ್ಯಾ ದ್ವಿಜಸ್ತ್ರೀವದ್ದಯಾಲುಭಿಃ ।
ತಪ್ತಚಕ್ರಾಂಕನಂ ತದ್ವತ್ತದ್ವನ್ಮಂತ್ರೋಪದೇಶನಂ ॥ ೫೦ ॥

ತಥಾಕೃತೇ ಕ್ರಮೇಣೈವ ಪಾಪಮುಕ್ತಾ ಭವಂತಿ ಹಿ ।

ದ್ವಿಜಾತೀನಾಂ – ದ್ವಿಜರಲ್ಲಿ (ದ್ವಿಜಾತಿಗಳ ಮಧ್ಯದಲ್ಲಿ), ಯೇ–ಯಾರು, ಪತಿತಾಃ – ಭ್ರಷ್ಟರಾದವರೋ, ಪ್ರಾಯಶ್ಚಿತ್ತವಿವರ್ಜಿತಾಃ–ಪ್ರಾಯಶ್ಚಿತ್ತ ಮಾಡಿಕೊಳ್ಳದವರೋ, (ಆದರೆ), ಪಶ್ಚಾತ್ತಾಪೇನ–(ತಮ್ಮ ಪಾಪಗಳ ಬಗ್ಗೆ) ಪಶ್ಚಾತ್ತಾಪದಿಂದ, ಸಂತಪ್ತಾಃ-ನೊಂದಮನಸ್ಸುಳ್ಳವರೋ, ಮತ್ತು ವೈದಿಕಾತ್ ಕರ್ಮಣಃ – ವೇದೋಕ್ತಕರ್ಮಗಳಿಂದ, ಗತಾಃ – ಬಿಡಲ್ಪಟ್ಟವರೋ (ವೈದಿಕಕರ್ಮಾಚರಣೆಯಿಲ್ಲದವರೋ), ಮದ್ಯಮಾಂಸ-ಸುರಾಭಕ್ಷ್ಯೈಃ–ಮದ್ಯ, ಮಾಂಸ, ಸುರಾ ಮೊದಲಾದವುಗಳಿಂದ, ಉಜ್ಝಿತಾಃ–ರಹಿತರಾಗಿರುವರೋ (ಅವುಗಳನ್ನು ತ್ಯಜಿಸಿರುವರೋ), ಧರ್ಮಬುದ್ಧಯಃ–ಧರ್ಮದಲ್ಲಿ ಆಸಕ್ತಿಯುಳ್ಳವರೋ, ಅನ್ಯೇ–ಬೇರೆ ಯಾರು, ಪಾಪಕರ್ಮಭಿಃ–ಪಾಪಕರ್ಮಗಳಿಂದಲೂ, (ಉಜ್ಝಿತಾಃ–ರಹಿತರಾಗಿ), ಪರದಾರಧನಾದಿತಃ–ಪರಸ್ತ್ರೀ ಪರದ್ರವ್ಯಗಳಿಂದ, ನಿವೃತ್ತಾಃ–ರಹಿತರೋ (ಆ ಕರ್ಮಗಳನ್ನೂ ಬಿಟ್ಟವರೋ), ತೇ ಅಪಿ–ಅವರೂ ಸಹ, ದಯಾಲುಭಿಃ–ಕೃಪಾಳುಗಳಾದ (ಗುರುಗಳಿಂದ), ದ್ವಿಜಸ್ತ್ರೀವತ್ – ದ್ವಿಜಸ್ತ್ರೀಯರಂತೆ, ಸಂಸ್ಕಾರ್ಯಾಃ–

ಪರಸ್ತ್ರೀ ಪರದ್ರವ್ಯಗಳಿಂದ ನಿವೃತ್ತರಾಗಿ, ಮದ್ಯಮಾಂಸಸುರಾದಿ ನಿಷಿದ್ಧ ಆಹಾರಪಾನಗಳನ್ನು ದೂರ ತೊರೆದು ತತ್ಕಾಲದಲ್ಲಿ ಶುದ್ಧರಾಗಿರುವವರಿಗೆ, ದ್ವಿಜಸ್ತ್ರೀಯರಂತೆ, ದಯಾಳುಗಳಾದ ಗುರುಗಳು, ತಪ್ತಚಕ್ರಧಾರಣ ಮಾಡಿಸಿ, ಮಂತ್ರೋಪದೇಶವನ್ನಿತ್ತು ಅನುಗ್ರಹಿಸುತ್ತಾರೆ (ಅನುಗ್ರಹಿಸಬೇಕು—ಅನುಗ್ರಹಿಸಲ್ಪಡಲು ಇಂಥವರು ಅರ್ಹರಾಗಿರುವರು); ಹೀಗೆ ದೀಕ್ಷಿತರಾಗಿ, ಸ್ವಯೋಗ್ಯಮಂತ್ರವನ್ನು ಜಪಾದಿಗಳಿಂದ ಸೇವಿಸಿದವರು, ಕ್ರಮವಾಗಿ ಪಾಪಗಳಿಂದ ಮುಕ್ತರಾಗುತ್ತಾರೆ—ಸಂಶಯವಿಲ್ಲ (೪೮–೫೦). ಅನುಲೋಮಜಾತಿಗಳಲ್ಲಿ ಕೆಲವರು ವೇದವಿದ್ಯಾಧಿಕಾರಿಗಳಿದ್ದಾರೆ; ಅವರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರಮಾಡಲ್ಪಡಲರ್ಹರೇ (ಆಗಿರುತ್ತಾರೆ); ತದ್ವತ್–ಅವರಂತೆ (ದ್ವಿಜ ಸ್ತ್ರೀಯರಂತೆ), ತಪ್ತಚಕ್ರಾಂಕನಂ – ತಪ್ತಚಕ್ರದ ಚಿಹ್ನೆಯನ್ನು ದೇಹದಲ್ಲಿ ಧರಿಸುವುದು, ಮಂತ್ರೋಪದೇಶನಂ–ಮಂತ್ರೋಪದೇಶವೂ (ಆದರೆ), ತಥಾ-ಕೃತೇ – ಹಾಗೆ ಗುರುಗಳು ಮಾಡಿದರೆ (ಅನುಗ್ರಹಿಸಿದರೆ), ಕ್ರಮೇಣ – ಕ್ರಮವಾಗಿ, ಪಾಪಮುಕ್ತಾಃ–ಪಾಪನಿರ್ಮುಕ್ತರು, ಭವಂತಿ ಏವ–ನಿಶ್ಚಯ ವಾಗಿಯೂ ಆಗುತ್ತಾರೆ; ಹಿ–ಹೀಗೆಂಬುದೇ ಶಾಸ್ತ್ರಸಿದ್ಧವು.

ಅನುಲೋಮೇಷು ಯೇ ಕೇಚಿತ್ ತ್ರಯೀ ವಿದ್ಯಾಧಿಕಾರಿಣಃ ||೫೧||
ತೇಽಪಿ ದ್ವಿಜಾತಿವತ್ ಜ್ಞೇಯಾಸ್ತೇಷಾಂ ದೀಕ್ಷಾದಿಕಂ ತಥಾ |
ಸಚ್ಛೂದ್ರಾ ಅಪಿ ಯೇ ಕೇಚಿತ್ ಸೂತಾದ್ಯಾಃ ಪ್ರತಿಲೋಮಿನಃ ||
ದ್ವಿಜಸ್ತ್ರೀವತ್ ಸಂಸ್ಕಾರ್ಯಾಸ್ತಥಾ ಮಂತ್ರೋಪದೇಶನಂ |
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ತ್ರಯೋ ವರ್ಣಾ ದ್ವಿಜಾತಯಃ ||

ಅನುಲೋಮಿಷು–ಅನುಲೋಮಜಾತಿಗಳಲ್ಲಿ, ಯೇ ಕೇಚಿತ್–ಯಾವ ಕೆಲವರು, ತ್ರಯೀವಿದ್ಯಾಧಿಕಾರಿಣಃ–ವೇದವಿದ್ಯೆಯಲ್ಲಿ ಅಧಿಕಾರವುಳ್ಳವರೋ, ತೇಽಪಿ–ಅವರೂ ಸಹ, ದ್ವಿಜಾತಿವತ್–ದ್ವಿಜರಂತೆ, ಜ್ಞೇಯಾಃ–ತಿಳಿಯಲ್ಪಡ ಲರ್ಹರು; ತೇಷಾಂ–ಅವರಿಗೆ, ದೀಕ್ಷಾದಿಕಂ – ದೀಕ್ಷೆ, ಮಂತ್ರೋಪದೇಶ ಗಳು, ತಥಾ–ಹಾಗೆಯೇ (ದ್ವಿಜರಂತೆಯೇ ನಡೆಯತಕ್ಕದ್ದು); ಯೇ ಕೇಚಿತ್–ಯಾವ ಕೆಲವರು, ಸಚ್ಛೂದ್ರಾಃ – ಶುದ್ಧಸ್ವಭಾವದ ಶೂದ್ರರೋ, ಮತ್ತು, ಸೂತಾದ್ಯಾಃ – ಸೂತರೇ ಮೊದಲಾದ, ಪ್ರತಿಲೋಮಿನಃ – ಪ್ರತಿ ಲೋಮಜಾತಿಯವರೋ, (ಅವರು), ದ್ವಿಜಸ್ತ್ರೀವತ್–ದ್ವಿಜಸ್ತ್ರೀಯರಂತೆ,

---

ದೀಕ್ಷಾಮಂತ್ರೋಪದೇಶಗಳು ದ್ವಿಜರಂತೆ ನಡೆಯಬೇಕು—ಅವರನ್ನು ದ್ವಿಜ ರಂತೆಯೇ ತಿಳಿಯಬೇಕು; ಸಚ್ಛೂದ್ರರೂ ಮತ್ತು ಸೂತ ಮೊದಲಾದ ಪ್ರತಿಲೋಮಜಾತಿಯವರು, ದ್ವಿಜಸ್ತ್ರೀಯರಂತೆ ಸಂಸ್ಕಾರಗಳಿಗೆ ಅರ್ಹ ರಾಗಿರುತ್ತಾರೆ—ಅವರಂತೆ (ದ್ವಿಜಸ್ತ್ರೀಯರಂತೆ) ದೀಕ್ಷಾಪ್ರದಾನ ಮತ್ತು ಮಂತ್ರೋಪದೇಶಗಳು, ಅವರಿಗೆ, ನಡೆಯಬೇಕು; ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು, ಎಂಬ ಮೂರು ವರ್ಣದವರು ಮಾತ್ರ ದ್ವಿಜರೆನಿಸುತ್ತಾರೆ (೫೧–೫೩).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರ್ಯಾಃ–ಸಂಸ್ಕಾರ(ವಿಷ್ಣುದೀಕ್ಷಾಸಂಸ್ಕಾರ)ಮಾಡಲ್ಪಡಲು ಅರ್ಹರು; ತಥಾ–ಹಾಗೆಯೇ (ದ್ವಿಜಸ್ತ್ರೀಯರಂತೆ), ಮಂತ್ರೋಪದೇಶನಂ–ಮಂತ್ರೋಪದೇಶವೂ (ನಡೆಯತಕ್ಕದ್ದು); ಬ್ರಾಹ್ಮಣಾಃ–ಬ್ರಾಹ್ಮಣರು, ಕ್ಷತ್ರಿಯಾಃ–ಕ್ಷತ್ರಿಯರೂ, ವೈಶ್ಯಾಃ–ವೈಶ್ಯರೂ, ತ್ರಯೋವರ್ಣಾಃ–ಈ ಮೂರು ವರ್ಣದವರೂ, ದ್ವಿಜಾತಯಃ–ದ್ವಿಜರೆಂಬ ಜಾತಿಗೆ ಸೇರಿದವರು.

ತೈರಾದೌ ವೈದಿಕಂ ಕರ್ಮ ಸಂಧ್ಯಾಹೋಮಜಪಾದಿಕಂ ।
ಕೃತ್ವೈವ ತಾಂತ್ರಿಕೀ ಪೂಜಾ ತಂತ್ರಮಂತ್ರಜಪಾದಿಕಂ ॥ ೫೪ ॥
ಕರ್ತವ್ಯಂ ನಾನ್ಯಥಾ ಕುರ್ಯಾತ್ ಕೃತಂ ಚೇನ್ನಿಷ್ಫಲಂ ಭವೇತ್ ।
ವಿನೋಪನಯನಂ ಯದ್ವತ್ ನಾಧಿಕಾರೀ ಶ್ರುತಿ ಶ್ರುತೌ ॥ ೫೫ ॥
ತಥಾ ವಿನಾ ನಿತ್ಯಕರ್ಮ ನಾಧಿಕಾರೀ ತು ತಾಂತ್ರಿಕೇ ।

ತೈಃ – ಅವರಿಂದ (ಆ ದ್ವಿಜರಿಂದ), ಆದೌ – ಮೊದಲಿಗೆ, ಸಂಧ್ಯಾ-ಹೋಮಜಪಾದಿಕಂ–ಸಂಧ್ಯಾವಂದನೆ, ಅಗ್ನಿಕಾರ್ಯ, ಜಪ ಮೊದಲಾದ, ವೈದಿಕಂ ಕರ್ಮ–ವೇದೋಕ್ತಕರ್ಮಗಳೆಲ್ಲವನ್ನೂ, ಕೃತ್ವಾ ಏವ–ಮಾಡಿಯೇ (ಮಾಡಿದ ನಂತರವೇ), ತಂತ್ರಮಂತ್ರಜಪಾದಿಕಂ–ಸ್ಮೃತ್ಯುಕ್ತಮಂತ್ರಗಳಿಂದ ಪೂಜೆ, ವಿಶೇಷ ಜಪಾದಿಗಳು, ಕರ್ತವ್ಯಂ–ಮಾಡಲ್ಪಡತಕ್ಕದ್ದು; ಅನ್ಯಥಾ–ಬೇರೆ ಪ್ರಕಾರದಿಂದ (ಸಂಧ್ಯಾದಿಗಳನ್ನು ಮಾಡದೇ), ನ ಕುರ್ಯಾತ್–ಮಾಡತಕ್ಕದ್ದಲ್ಲ; ಕೃತಂ ಚೇತ್ – ಮಾಡಿದ್ದಾದರೆ, ನಿಷ್ಫಲಂ ಭವೇತ್ – ವ್ಯರ್ಥವಾಗುತ್ತದೆ; ಯದ್ವತ್–ಹೇಗೆ, ಉಪನಯನಂ ವಿನಾ–ಉಪನಯನ

ದ್ವಿಜರು, ಮೊದಲು, ವೇದೋಕ್ತವಾದ ಸಂಧ್ಯಾವಂದನೆ, ಅಗ್ನಿಕಾರ್ಯ ಮೊದಲಾದ ಕರ್ಮಗಳನ್ನು ಮಾಡಿಕೊಂಡು, ನಂತರ ತಂತ್ರಸಾರೋಕ್ತವಾದ ಶ್ರೀಹರಿ ಪೂಜಾದಿಕರ್ಮಗಳನ್ನು ಆಚರಿಸಬೇಕು; ಹಾಗಲ್ಲದಿದ್ದರೆ, ತಂತ್ರೋಕ್ತಪೂಜಾದಿಗಳು ವ್ಯರ್ಥವಾಗುತ್ತವೆ—ಫಲಪ್ರದಗಳಾಗುವುದಿಲ್ಲ; ಉಪನಯನ ಸಂಸ್ಕಾರವಿಲ್ಲದೇ, ವೇದೋಕ್ತಕರ್ಮಗಳಲ್ಲಿ ಅಧಿಕಾರವಿಲ್ಲದಿರುವಂತೆ, ಮೊದಲು ನಿತ್ಯಕರ್ಮಗಳನ್ನು ಅನುಷ್ಠಾನ ಮಾಡದೇ ತಾಂತ್ರಿಕಪೂಜಾದಿಗಳಲ್ಲಿ ಅಧಿಕಾರವೇ ಉಂಟಾಗುವುದಿಲ್ಲ (೫೪–೫೫). ವೇದೋಕ್ತಕರ್ಮಾನುಷ್ಠಾನದಲ್ಲಿ ಅಧಿಕಾರವೇ ಇಲ್ಲದ ಸ್ತ್ರೀಶೂದ್ರಪತಿತರಿಗೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರವಿಲ್ಲದೇ, ಶ್ರುತಿ ಶ್ರುತೌ–ಶ್ರುತ್ಯುಕ್ತಕರ್ಮಾಚರಣೆಯಲ್ಲಿ, ಅಧಿಕಾರೀ ನ–ಅಧಿಕಾರಿಯಲ್ಲವೋ, ತಥಾ–ಹಾಗೆ, ನಿತ್ಯಕರ್ಮ ವಿನಾ–(ಸಂಧ್ಯಾದಿ ವೇದೋಕ್ತ) ನಿತ್ಯಕರ್ಮವನ್ನಾಚರಿಸದೇ, ತಾಂತ್ರಿಕೇ–ತಂತ್ರೋಕ್ತವಾದ (ಸ್ಮೃತ್ಯುಕ್ತ) ಹರಿಪೂಜಾದಿಗಳಲ್ಲಿ, ಅಧಿಕಾರೀ ನ ತು–ಅಧಿಕಾರಿಯಾಗುವುದೇ ಇಲ್ಲ.

ವೈದಿಕಾನಾಧಿಕಾರಾ ಯೇ ಸ್ತ್ರೀಶೂದ್ರಪತಿತಾದಯಃ ॥ ೫೬ ॥
ತೇಷಾಂ ತಾಂತ್ರಿಕಮೇವ ಸ್ಯಾತ್ ಪೂಜಾಮಂತ್ರಜಪಾದಿಕಂ ।
ನಿರೋಂಕಾರಾಶ್ಚ ನಿರ್ಬೀಜಾ ನಮಃ ಪೂರ್ವಾ ನಮೋಂತಕಾಃ ॥

ವೈದಿಕಾನಾಧಿಕಾರಾಃ – ವೇದೋಕ್ತಕರ್ಮಗಳಲ್ಲಿ ಅಧಿಕಾರವಿಲ್ಲದ, ಯೇ–ಯಾವ, ಸ್ತ್ರೀಶೂದ್ರಪತಿತಾದಯಃ–ಸ್ತ್ರೀಯರು, ಶೂದ್ರರು, ಪತಿತರೇ ಮೊದಲಾದವರೋ (ಕರ್ಮಭ್ರಷ್ಟರೋ), ತೇಷಾಂ–ಅವರಿಗೆ, ತಾಂತ್ರಿಕಂ–ತಂತ್ರೋಕ್ತವಾದ (ಸ್ಮೃತ್ಯುಕ್ತ), ಪೂಜಾಮಂತ್ರಜಪಾದಿಕಂ – ಪೂಜೆ, ಮಂತ್ರ ಜಪ ಮೊದಲಾದುದೇ, ಸ್ಯಾತ್–(ವಿಹಿತ) ಆಗುತ್ತದೆ; (ಆದರೆ, ಮಂತ್ರಗಳಾದರೋ), ನಿರೋಂಕಾರಾಃ–(ಅವರಿಗೆ) ಓಂಕಾರರಹಿತಗಳೂ, ನಿರ್ಬೀಜಾಃ–ಬೀಜರಹಿತಗಳೂ, ನಮಃ ಪೂರ್ವಾಃ–ಮೊದಲಿಗೇ 'ನಮಃ' ಶಬ್ದವುಳ್ಳವುಗಳೂ, (ವಾ–ಅಥವಾ), ನಮೋಂತಕಾಃ–'ನಮಃ' ಶಬ್ದವು ಕೊನೆಯಲ್ಲಿರತಕ್ಕವುಗಳೂ (ಆಗಿರಬೇಕೆಂದು ಹೇಳಲ್ಪಡುತ್ತವೆ).

ಶ್ರೀಶಬ್ದಪೂರ್ವಕಾ ವಾಪಿ ಸಂಬುದ್ಧ್ಯಂತಾಶ್ಚ ಯೇ ಸ್ಮೃತಾಃ ।
ಸೌಮ್ಯರೂಪಾಶ್ಚ ರಾಮಾದ್ಯಾ ಮನವಸ್ತೇ ಯಥಾ ರುಚಿ ॥ ೫೮ ॥

ಕೇವಲ ತಂತ್ರೋಕ್ತಪೂಜೆ, ಮಂತ್ರ ಜಪಾದಿಗಳು ಮಾತ್ರ ಅನುಷ್ಠೇಯವಾಗುತ್ತವೆ; ಅವರು ಉಪಾಸಿಸುವ (ಜಪಿಸುವ ಪೂಜೆಯಲ್ಲಿ ಪ್ರಯೋಗಿಸುವ) ಮಂತ್ರಗಳು ಓಂಕಾರವಿಲ್ಲದವೂ, ಬೀಜರಹಿತಗಳೂ ಆಗಿರಬೇಕು; ಆದಿಯಲ್ಲಿ ಅಥವಾ ಅಂತ್ಯದಲ್ಲಿ 'ನಮಃ' ಶಬ್ದವಿರಬೇಕು (೫೬–೫೭). ಸ್ತ್ರೀಶೂದ್ರಪತಿತರಿಗೆ ಉಪದೇಶಿಸಲ್ಪಡಬಹುದಾದ ನಿರೋಂಕಾರಾದಿ ಮಂತ್ರಗಳು, ಪ್ರಾರಂಭದಲ್ಲಿ 'ಶ್ರೀ' ಶಬ್ದವುಳ್ಳವುಗಳಾಗಿ, ಸಂಬುದ್ಧ್ಯಂತವಾಗಿಯೂ ಇರಬಹುದು (ಉದಾ:—ಶ್ರೀಕೃಷ್ಣ! ಶ್ರೀರಾಮ! ಇತ್ಯಾದಿ; ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ೂದ್ರಾದಿಶ್ವಪಚಾಂತೇಭ್ಯ ಉಪದೇಶ್ಯಾ ವಿಶುದ್ಧಯೇ ।

ವಾ–ಅಥವಾ, ಶ್ರೀಶಬ್ದಪೂರ್ವಕಾಃ–(ಹಿಂದೆ ಹೇಳಿದ ನಿರೋಂಕಾರ ರ್ಬೀಜಮಂತ್ರಗಳು) ಶ್ರೀಶಬ್ದದಿಂದ ಆರಂಭವಾಗಿ, ಯೇ–ಯಾವುವು, ಂಬುದ್ಧ್ಯಂತಾಃ – ಸಂಬೋಧನ ವಿಭಕ್ತ್ಯಂತವಾಗಿಯೂ ಇರಬಹುದೆಂದು, ಕ್ತಾಃ – ಹೇಳಲಾಗುತ್ತವೆಯೋ, ಸೌಮ್ಯರೂಪಾಃ – ಸೌಮ್ಯಸ್ವಭಾವದ, ಾಮಾದ್ಯಾಃ ಚ – ರಾಮಕೃಷ್ಣಾದಿಗಳು, ಯಥಾರುಚಿ – (ಉಪಾಸಿಸುವ ಧಿಕಾರಿಗಳ) ಇಚ್ಛಾನುಸಾರವಾಗಿ, ತೇ ಮನವಃ – ಆ ಮಂತ್ರಗಳು, ಶುದ್ಧಯೇ–ಶುದ್ಧ್ಯರ್ಥವಾಗಿ (ಅಧಿಕಾರಿಗಳ ಪವಿತ್ರತೆಗಾಗಿ), ಶೂದ್ರಾದಿ-ಶ್ವಪಚಾಂತೇಭ್ಯಃ – ಶೂದ್ರಾದಿ ಚಂಡಾಲರವರೆಗಿನ ಹೀನವರ್ಣದವರಿಗೆ, ಉಪದೇಶ್ಯಾಃ–ಉಪದೇಶಿಸಲ್ಪಡಬೇಕು.

ತತ್ರಾಪಿ ಯೇ ವಿಶಿಷ್ಟಾಃ ಸ್ಯುಃ ನಿಯಮವ್ರತಚಾರಿಣಃ ॥ ೫೯ ॥

ತೇಷಾಂ ಸಾಮಾನ್ಯತೋ ಬೀಜಯುಕ್ತಾನ್ಮಂತ್ರಾನುಪಾದಿಶೇತ್ ।

ತತ್ರಾಪಿ – ಅವರಲ್ಲಿಯೂ (ಶೂದ್ರಾದಿ ಚಂಡಾಲಾಂತರಾದವರಲ್ಲಿ), ಯೇ–ಯಾರು, ನಿಯಮವ್ರತಚಾರಿಣಃ–ನಿಯಮಗಳನ್ನೂ (ಏಕಾದಶ್ಯಾದಿ) ವ್ರತಗಳನ್ನೂ ಆಚರಿಸುತ್ತ, ವಿಶಿಷ್ಟಾಃ ಸ್ಯುಃ – ಉತ್ತಮರಾಗಿರುವರೋ, ತೇಷಾಂ–ಅವರಿಗೆ, ಸಾಮಾನ್ಯತಃ–ಸಾಮಾನ್ಯವಾಗಿ, ಬೀಜಯುಕ್ತಾನ್–ಬೀಜಸಹಿತವಾದ, ಮಂತ್ರಾನ್ – ಮಂತ್ರಗಳನ್ನು, ಉಪಾದಿಶೇತ್–ಉಪದೇಶಿಸಬೇಕು.

ಕೇವಲ ಸಂಬುದ್ಧ್ಯಂತವೂ ಆಗಿರಬಹುದು; ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ಇತ್ಯಾದಿ); ಸೌಮ್ಯರೂಪದ ರಾಮಕೃಷ್ಣಾದಿ ಮಂತ್ರಗಳನ್ನು, ಈ ವಿಧದಿಂದ, ಉಪಾಸಕರು ಪುನೀತರಾಗಲು, ಶೂದ್ರಾದಿ ಚಂಡಾಲಪರ್ಯಂತದ ಹೀನವರ್ಣದವರಿಗೆ, ಅವರವರ ಇಚ್ಛಾನುಸಾರ (ರಾಮ, ಕೃಷ್ಣ, ಮತ್ಸ್ಯ ಮೊದಲಾದ ಸೌಮ್ಯಮಂತ್ರಗಳನ್ನು) ಉಪದೇಶಿಸಬಹುದು (೫೮). ಶೂದ್ರಚಂಡಾಲಾದಿಗಳಲ್ಲಿ ಸಹ ನಿಯಮ ವ್ರತಾದಿಗಳನ್ನು ಆಚರಿಸುವ ಉತ್ತಮರಿಗೆ, ಸಾಮಾನ್ಯವಾಗಿ ಬೀಜಸಹಿತವಾದ ಮಂತ್ರಗಳನ್ನು ಉಪದೇಶಿಸತಕ್ಕದ್ದು (೫೯). ಮಂತ್ರದ ಮೊದಲನೆ ಅಕ್ಷರವು ಅನುಸ್ವಾರದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಸ್ತು ನಾಮಾದಿಮೋ ವರ್ಣಃ ಸೋಽನುಸ್ವಾರಸಮನ್ವಿತಃ ॥ ೬೦ ॥
ಭವೇತ್ ಸಾಮಾನ್ಯತೋ ಬೀಜಂ ನಾಮಮಂತ್ರೇಷು ಸರ್ವಶಃ ॥
ಇತಿ ಮಂತ್ರವಿವೇಕಸ್ತೇ ತಥಾ ತದಧಿಕಾರಿಣಃ ।
ವಿಸ್ತರೇಣ ಮಯಾ ಪ್ರೋಕ್ತಾಃ ಶೇಷಂ ವಿದ್ಧಿ ತದಾಗಮಾತ್ ॥೬೧॥

ನಾಮಾದಿಮಃ – ನಾಮದ ಮೊದಲಿನ (ಪ್ರಾರಂಭದ), ವರ್ಣಃ–ಅಕ್ಷರವು, ಯಸ್ತು–ಯಾವುದೋ, ಸಃ–ಅದು, ಅನುಸ್ವಾರಸಮನ್ವಿತಃ–ಅನುಸ್ವಾರದಿಂದ ಯುಕ್ತವಾದರೆ (ಅ–ಅಂ, ರ–ರಂ, ಇತ್ಯಾದಿ), ಸಾಮಾನ್ಯತಃ–ಸಾಮಾನ್ಯವಾಗಿ, ಸರ್ವಶಃ–ಸರ್ವತ್ರ, ನಾಮಮಂತ್ರೇಷು–ನಾಮಮಂತ್ರಗಳಲ್ಲಿ, ಬೀಜಂ–ಬೀಜವು, ಭವೇತ್–ಆಗುತ್ತದೆ; (ಅಂ ಅಜಾಯನಮಃ ; ರಂ ರಾಮಾಯನಮಃ ಇತ್ಯಾದಿ); ಇತಿ–ಹೀಗೆ, ತೇ–ನಿನಗೋಸ್ಕರವಾಗಿ, ಮಂತ್ರವಿವೇಕಃ – ಮಂತ್ರವ್ಯತ್ಯಾಸಗಳು (ವಿವಿಧ ಮಂತ್ರಸ್ವರೂಪಗಳು), ತಥಾ–ಹಾಗೂ, ತದಧಿಕಾರಿಣಃ–ಆ ಮಂತ್ರಗಳ ಅಧಿಕಾರಿಗಳೂ, ಮಯಾ–ನನ್ನಿಂದ, ವಿಸ್ತರೇಣ–ವಿಸ್ತಾರವಾಗಿ, ಪ್ರೋಕ್ತಾಃ–ಹೇಳಲ್ಪಟ್ಟವು ; ಶೇಷಂ–ಅವಶಿಷ್ಟ (ಹೆಚ್ಚಿನ) ವಿಶೇಷಗಳನ್ನು, ತದಾಗಮಾತ್–ಆಯಾ ಆಗಮದಿಂದ (ಮಂತ್ರಶಾಸ್ತ್ರಾದಿಗಳಿಂದ), ವಿದ್ಧಿ–ತಿಳಿ.

ಕೂಡಿದರೆ, ಸಾಮಾನ್ಯವಾಗಿ ಅದು, ಎಲ್ಲ ಮಂತ್ರಗಳಲ್ಲಿ ಬೀಜವೆನಿಸುತ್ತದೆ; ಹೀಗೆ ವಿವಿಧ ಮಂತ್ರಗಳೂ ಅವುಗಳ ಅಧಿಕಾರಿಗಳೂ, ನಿನಗೋಸ್ಕರ ನನ್ನಿಂದ ವಿಸ್ತಾರವಾಗಿಯೇ ಹೇಳಲ್ಪಟ್ಟವೆ; ಈ ಸಂಬಂಧದ ಹೆಚ್ಚಿನ ವಿಷಯಗಳನ್ನು ಮಂತ್ರಶಾಸ್ತ್ರಗಳಿಂದ[1] (ಆಗಮಗಳಿಂದ) ತಿಳಿಯಬೇಕು (೬೦–೬೧).

[1] ಬೃಹತ್ಸಂಹಿತೆಯಲ್ಲಿ ಧ್ವನ್ಯಾತ್ಮಕಶಬ್ದಗಳಿಂದ ಪ್ರತಿಪಾದ್ಯಗಳಾದ ಶ್ರೀಹರಿ ಮಹಿಮೆಗಳನ್ನು ತಿಳಿಯಲು, ಆ ಶಬ್ದಗಳನ್ನು ಶ್ರೀವಿಷ್ಣುವಿನಲ್ಲಿ ಸಮನ್ವಯಗೊಳಿಸುವ ಪ್ರಕಾರವು ವರ್ಣಿತವಾಗಿದೆ. ಸಮುದ್ರಘೋಷದಿಂದ ವ್ಯಂಗ್ಯವಾದ ಹುಂಕಾರವು, ಶ್ರೀಹರಿಯ ಸರ್ವಪರಾಭವ ಅದ್ಭುತಶಕ್ತಿಯನ್ನು ಹೇಳುತ್ತದೆ. ಮೇಘಗಳಲ್ಲಿರುವ ವಾಯುವು ಸದಾ 'ಓಂ' ಎಂದು ಧ್ವನಿಮಾಡುತ್ತದೆ—ಇದರಿಂದ ಶ್ರೀವಿಷ್ಣುವಿನ ಸರ್ವಾಧಿಕ ಉತ್ಕೃಷ್ಟತೆಯು ಪ್ರತಿಪಾದ್ಯವಾಗಿದೆ, ಇತ್ಯಾದಿ ; ಗರ್ಗರ, ಗೋಧಾದಿಗಳ (ಜಿಟ್ಟೆ—ಹಲ್ಲಿ ಮೊದಲಾದ ಜಂತುಗಳ) ನಾದಗಳೂ ವರ್ಣಗಳೆಂದೂ ಮಂತ್ರಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ಮಂತ್ರಗಳಿಂದ ತಿಳಿಯಬೇಕಾದ ಶ್ರೀಹರಿ ಮಹಿಮೆಗಳ ವಿಶೇಷಗಳನ್ನು ಮಂತ್ರಶಾಸ್ತ್ರದಿಂದಲೂ, ಇತರ ಆಗಮ ಭಾಗಗಳಿಂದಲೂ ತಿಳಿಯಬಹುದು.

ಮಂತ್ರಾಧಿಕಾರಿ ವಿವೇಕವೆಂಬ ೯ನೇ ಅಧ್ಯಾಯವು ಮುಗಿದುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gurukul Kangri Library
Accession
Class
Cat.
Tag etc.
Checked
Any Other

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಘದಲ್ಲಿ ದೊರೆಯುವ ಗ್ರಂಥಗಳು

		ಬೆಲೆ ರೂ.
೧.	ಶ್ರೀಮದ್ಭಾಗವತಪ್ರದೀಪಿತಸೂತ್ರಾರ್ಥಸಾರ-ಸಂಚಿಕೆ೧ಕ್ಕೆ (೧, ೨, ೧೧, ೧೨, ೧೩ನೇ ಸಂಚಿಕೆಗಳು ಮಾತ್ರ ದೊರೆಯುತ್ತವೆ. ಬ್ರಹ್ಮಸೂತ್ರಗಳ ಪ್ರತಿ ಅಧ್ಯಾಯದ ಒಂದೊಂದು ಪಾದವೂ ಒಂದೊಂದು ಸಂಚಿಕೆಯಲ್ಲಿ ಒಳಗೊಂಡಿದೆ.)	0–50
೨.	ಸಂಗ್ರಹ ರಾಮಾಯಣ–ಬಾಲಕಾಂಡ (ಕನ್ನಡಾನುವಾದ ಮೂಲ ಶ್ಲೋಕಗಳ ಸಹಿತ)	0–60
೩.	ನಾಸ್ತಿಕ್ಯ ನಿರಾಸ	1–50
೪.	ಆಗಮಸಾರ	2–50
೫.	ಮೋಕ್ಷಮಾರ್ಗ ; ಮುಕ್ತಿ	2–50
೬.	ಸತ್ತತ್ವರತ್ನಮಾಲಾ–ಸಂಪುಟ ೧	3–00
೭.	ಸತ್ತತ್ವರತ್ನಮಾಲಾ–ಸಂಪುಟ ೨	3 50
೮.	ಸತ್ತತ್ವರತ್ನಮಾಲಾ–ಸಂಪುಟ ೩	4–00
೯.	ಸತ್ತತ್ವರತ್ನಮಾಲಾ–ಸಂಪುಟ ೪	5–00

ಸೂಚನೆ :—ಅಂಚೆ ವೆಚ್ಚ ಬೇರೆ. ಯಾವ ಪುಸ್ತಕಗಳನ್ನೇ ಆಗಲಿ ೫ ಪ್ರತಿಗಳಿಗಿಂತ ಹೆಚ್ಚು ಕೊಳ್ಳುವವರಿಗೆ ಯೋಗ್ಯ ರಿಯಾಯಿತಿ ದೊರೆಯುತ್ತದೆ. ಪುಸ್ತಕ ವ್ಯಾಪಾರಿಗಳು ತಮಗೆ ದೊರೆಯುವ ಕಮಿಷನ್ ಪತ್ರ ವ್ಯವಹಾರದಿಂದ ತಿಳಿದುಕೊಳ್ಳಬೇಕು.

ಗೌ|| ಕಾರ್ಯದರ್ಶಿ
ಶ್ರೀ ಸರ್ವಜ್ಞಾಚಾರ್ಯ ಸೇವಾ ಸಂಘ,
ಶಿವಾಜಿರಸ್ತೆ, ದಾವಣಗೆರೆ

CC-0. In Public Domain. Gurukul Kangri Collection, Haridwar